ಬುಧವಾರ, ಜನವರಿ 10, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪಕ್ಷಿ ಪ್ರೇಮ
ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಹಮ್ಮಿಕೊಂಡಿದ್ದ ಪಕ್ಷಿಗಳ ಪ್ರದರ್ಶನದಲ್ಲಿ ಮಹಿಳೆಯೊಬ್ಬರ ಹೆಗಲೇರಿ ಕುಳಿತಿದ್ದ ಗಿಳಿಗಳು

CELEBRATING 20 Years of VIBRANT GUJARAT

सत्यमेव जयते
Government of Gujarat

Vibrant GUJARAT 2024
10-12 Jan
Gateway to the Future | 10th Global Summit

"Vibrant Gujarat Global Summit will continue to achieve new heights with the vision of a prosperous Gujarat for a self-reliant India."

Shri Narendra Modi, Prime Minister

INAUGURATION TODAY
VIBRANT GUJARAT GLOBAL SUMMIT

by
Shri Narendra Modi
Prime Minister

Wednesday, January 10, 2024
09:45 hrs.
Mahatma Mandir, Gandhinagar, Gujarat

In the august presence of
Acharya Devvrat
Governorshri, Gujarat
Shri Bhupendra Patel
Chief Minister, Gujarat

FIRST VIBRANT GUJARAT IN AMRIT KAAL

"Vibrant Gujarat Global Summit 2024 epitomises our commitment to development and socio-economic growth as envisioned by our Hon'ble Prime Minister, Shri Narendra Modi."

Shri Bhupendra Patel
Chief Minister, Gujarat



CELEBRATING 20 Years of VIBRANT GUJARAT

20 IMPACTFUL YEARS THAT TRANSFORMED GUJARAT

Vibrant GUJARAT 2024
10-12 Jan
Gateway to the Future | 10th Global Summit

GUJARAT: THE GROWTH ENGINE OF INDIA

State's GDP grew at a **CAGR of 15%** from 2002-03 to 2022-23

Over 15 lakh MSMEs (Udyam Registered) across the value chain

Home to 100+ Fortune 500 Global companies

33% share in India's total exports

16.5% share in India's total Renewable Energy capacity

Received cumulative FDI worth **USD 51 Bn** (2003-2022)



TOWARDS VIKSIT BHARAT @2047

World's largest Hybrid Renewable Energy Park at Kachchh, with a capacity of 30,000 MW | World-class Fintech Hub | Leading India's Green Hydrogen endeavours | First State to manufacture Semiconductor chips

DAY-WISE PROGRAMME

DAY 01 — Wednesday, January 10, 2024

INAUGURAL PROGRAMME

Seminars

- Aircraft / Ancillary Manufacturing & MRO Opportunities
- GATI SHAKTI: Informed Decision Making for Holistic Development
- DHOLERA: A Greenfield Smart City for Smart Businesses
- Gujarat's Roadmap for Viksit Bharat @2047
- Global FinTech Leadership Forum

Country / State Seminars

B2B / B2G / G2G Meetings

DAY 02 — Thursday, January 11, 2024

Seminars

- START UPS: Unlocking Infinite Potential
- E-COMMERCE: Businesses at Fingertips
- Port-led City Development
- Building Workforces for Future: Development of Skills for Industry 4.0
- Electric Vehicle Manufacturing: Charging Ahead to 2047
- International Space Conference
- Developing Global Networks for Skill Development
- TECHADE: Heralding India's Technology Decade
- GIFT City: An Aspiration of Modern India
- RENEWABLE ENERGY: Pathway to a Sustainable Future
- Semiconductors & Electronics

Country / State Seminars

B2B / B2G / G2G Meetings

DAY 03 — Friday, January 12, 2024

Seminars

- Towards Net Zero
- Opportunities through Circular Economy: Recycling Waste-Water & Waste to Energy
- From Watts to Gigawatts: To meet Round the clock Clean Energy
- Gujarat - The Green Hydrogen Destination of India
- MSME Conclave

Country / State Seminars

B2B / B2G / G2G Meetings

VALEDICTORY SESSION

More than 50 events being organised in India's biggest Business Summit

PARTNER COUNTRIES

Australia, Bangladesh, Botswana, Czech Republic, Democratic Republic of the Congo, Egypt, Estonia, Finland, Germany, Ghana, Indonesia, Japan, Kenya, Kingdom of Saudi Arabia, Malaysia, Malta, Morocco

Mozambique, Nepal, Netherlands, Norway, Poland, Republic of Korea, Russia, Rwanda, Singapore, Tanzania, Thailand, Timor-Leste, UAE, UK, Uganda, Ukraine, Uruguay, Vietnam

Follow us on: VibrantGujarat | www.vibrantgujarat.com

Helpline (+91 79 23240000): Operating days of helpline: Monday to Friday between 11:00 hrs. and 18:00 hrs.

Scan to access Website | Scan to access Location

Industrial Extension Bureau (iNDEXTb)
Block No. 18, 2nd Floor, Udyog Bhavan, GH-4, Sector 11, Gandhinagar 382 010, Gujarat, India
Phone: +91-79-23256009, 23250492/93 Fax: +91-79-23250490 E-mail: support@indextb.com Web: www.indextb.com

ಬುಧವಾರ, ಜನವರಿ 10, 2024 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಚ್ಚನೆಯ ಅಪ್ಪುಗೆ
ಚಳಿ ಹೆಚ್ಚಾಗಿರುವ ಪರಿಣಾಮ ಪಶ್ಚಿಮ ಬಂಗಾಳದಲ್ಲಿ ಮಹಿಳೆಯೊಬ್ಬರು ತಮ್ಮ ಮಗುವಿನೊಂದಿಗೆ ಕಾಣಿಸಿಕೊಂಡಿದ್ದು ಹೀಗೆ...

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಪ್ರಕಟಣೆ : ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ

ದೇವರ ಮುಂದೂ ತಾರತಮ್ಯವೇ ಮಿಗಿಲು

ಜಾತಿ ತಾರತಮ್ಯದ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಅಂಗಡಿ ಪ್ರವೇಶಕ್ಕೆ ಅಡ್ಡಿ, ಕ್ಷೌರ ನಿರಾಕರಣೆಯಂತಹ ಘಟನೆಗಳು ನಡೆಯುತ್ತಿರುತ್ತವೆ. ದೇವಾಲಯ ಪ್ರವೇಶಕ್ಕೆ ಪರಿಶಿಷ್ಟ ಜಾತಿಯವರಿಗೆ ಹಲವೆಡೆ ಅಘೋಷಿತ ನಿರ್ಬಂಧ ಇದೆ. ಕೆಂಚಲಗೂಡು ಎಂಬಲ್ಲಿ ದೇವಾಲಯಕ್ಕೆ ಪರಿಶಿಷ್ಟ ಜಾತಿಯವರು ಪ್ರವೇಶಿಸಿದರು ಎಂಬ ಕಾರಣಕ್ಕೆ ನಾಯಕ ಸಮುದಾಯದವರು ಬೇರೆಯೇ ದೇವಾಲಯ ಕಟ್ಟಿಕೊಂಡಿದ್ದಾರೆ. ಗೊಲ್ಲರಹಟ್ಟಿಗೆ ದಲಿತ ಯುವಕ ಪ್ರವೇಶ ಮಾಡಿದ ಕಾರಣಕ್ಕೆ ಮೈಲಿಗೆಯಾಗಿದೆ ಎಂದು ದೇವಾಲಯಕ್ಕೆ ಬೀಗ ಹಾಕಲಾಗಿತ್ತು. ಅಧಿಕಾರಿಗಳು ಬೀಗ ಒಡೆದು ಪರಿಶಿಷ್ಟ ಜಾತಿಯವರಿಗೆ ಪ್ರವೇಶ ಅವಕಾಶ ಕಲ್ಪಿಸಿದ್ದಾರೆ. ಎರಡು ಭಿನ್ನ ವರದಿಗಳು ಇಲ್ಲಿವೆ:

ಬೀಗ ಒಡೆದು ದಲಿತರಿಗೆ ಪ್ರವೇಶ

ಗೇರುಮರಡಿ ಗೊಲ್ಲರಹಟ್ಟಿಯಲ್ಲಿನ ರಂಗನಾಥಸ್ವಾಮಿ ದೇಗುಲ ಪ್ರವೇಶ ಬಳಿಕ ಹೊರ ಬಂದು ದಲಿತ ಮುಖಂಡರು ಮಾತನಾಡಿದರು. ಉಪವಿಭಾಗಾಧಿಕಾರಿ ಕೆ.ಜಿ.ಕಾಂತರಾಜ್, ಹೆಚ್ಚುವರಿ ಎಸ್‌ಪಿ ಜಿ.ಕೃಷ್ಣಮೂರ್ತಿ ಇದ್ದರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಗೊಲ್ಲರಹಟ್ಟಿಗೆ ದಲಿತ ಯುವಕ ಪ್ರವೇಶ ಮಾಡಿದ ಕಾರಣಕ್ಕೆ ಮೈಲಿಗೆಯಾಗಿದೆ ಎಂದು ಪೂಜೆ ನಿಲ್ಲಿಸಿ ಹಾಕಿದ್ದ ಬೀಗವನ್ನು ತಾಲ್ಲೂಕು ಆಡಳಿತದ ಅಧಿಕಾರಿಗಳೇ ಒಡೆಸಿ ದಲಿತರಿಗೆ ಪ್ರವೇಶ ಕೊಡಿಸಿದರು.

ರಾಜ್ಯದ ಹಲವೆಡೆಯಿಂದ ಮಂಗಳವಾರ ತರೀಕೆರೆಗೆ ಬಂದಿದ್ದ ದಲಿತ ಸಂಘಟನೆಗಳ ಮುಖಂಡರು, ಭಾರತೀಯ ಪರಿವರ್ತನಾ ಸಂಘದ ಅಧ್ಯಕ್ಷ ಹರಿರಾಮ್, ಮುಖಂಡರಾದ ಬಿ.ಆರ್.ಭಾಸ್ಕರ ಪ್ರಸಾದ್ ಸುದ್ದಿಗೋಷ್ಠಿ ನಡೆಸಿದರು. ಬಳಿಕ ದಲಿತ ಸಂಘಟನೆಗಳ ಸ್ವಾಭಿಮಾನ ಒಕ್ಕೂಟದ ನೇತೃತ್ವದಲ್ಲಿ ತಾಲ್ಲೂಕು ಕಚೇರಿ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿದರು.

ದಲಿತ ಯುವಕ ಮಾರುತಿ ಮೇಲೆ ಹಲ್ಲೆ ನಡೆಸಿದ ಎಲ್ಲಾ ಆರೋಪಿಗಳನ್ನು ಬಂಧಿಸಬೇಕು, ಗೊಲ್ಲರಹಟ್ಟಿಯಲ್ಲಿರುವ ಕಂಬದ ರಂಗನಾಥಸ್ವಾಮಿ ದೇಗುಲಕ್ಕೆ ದಲಿತರಿಗೆ ಪ್ರವೇಶ ಕೊಡಿಸಬೇಕು ಎಂದು ಆಗ್ರಹಿಸಿದರು.

ಉಪವಿಭಾಗಾಧಿಕಾರಿ ಕೆ.ಜಿ. ಕಾಂತರಾಜ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೃಷ್ಣಮೂರ್ತಿ, ಡಿವೈಎಸ್‌ಪಿ ಹಾಲಮೂರ್ತಿ ರಾವ್, ತಹಶೀಲ್ದಾರ್ ವಿ.ಎಸ್. ರಾಜೀವ್ ಅವರು ಪ್ರತಿಭಟನೆನಿರತರ ಮನವೊಲಿಸಲು ಪ್ರಯತ್ನಿಸಿದರು. ದೇಗುಲಕ್ಕೆ ಹಾಕಿರುವ ಬೀಗ ತೆಗೆಸಿ ಪ್ರವೇಶ ಕೊಡಿಸಬೇಕು ಎಂದು ದಲಿತ ಸಂಘಟನೆಗಳ ಮುಖಂಡರು ಪಟ್ಟು ಹಿಡಿದರು. ಪೊಲೀಸ್ ಬಂದೋಬಸ್ತ್ ಕಲ್ಪಿಸಿ ಹೋರಾಟಗಾರರೊಂದಿಗೆ ಗೊಲ್ಲರಹಟ್ಟಿಗೆ ತೆರಳಿದ ಅಧಿಕಾರಿಗಳು, ದೇಗುಲದ ಬೀಗದ ಕೀ ನೀಡುವಂತೆ ಗೊಲ್ಲರಹಟ್ಟಿ ನಿವಾಸಿಗಳನ್ನು ಕೇಳಿದರು. ಯಾರೂ ಕೊಡಲು ಮುಂದೆ ಬಾರದಿದ್ದಾಗ ಉಪವಿಭಾಗಾಧಿಕಾರಿ ಸಮ್ಮುಖದಲ್ಲಿ ತಾಲ್ಲೂಕು ಆಡಳಿತದ ಸಿಬ್ಬಂದಿ ಗೇಟ್ ಮತ್ತು ಬಾಗಿಲ ಬೀಗಗಳನ್ನು ಒಡೆದರು.

ಹಲ್ಲೆಗೆ ಒಳಗಾಗಿದ್ದ ದಲಿತ ಯುವಕ ಮಾರುತಿ ಮೂಲಕವೇ ಗರ್ಭಗುಡಿಯಲ್ಲಿದ್ದ ದೇವರ ಮೂರ್ತಿಗಳಿಗೆ ಪೂಜೆ ಮಾಡಿಸಲಾಯಿತು. ಬಳಿಕ ಹೊರ ಬಂದು ದೇವಸ್ಥಾನದ ಎದುರು ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಗೊಲ್ಲರಹಟ್ಟಿಯ ಜನರಿಗೆ ಸಂವಿಧಾನದ ಅರಿವಿಲ್ಲದಿದ್ದರೆ ಜಾಗೃತಿ ಮೂಡಿಸುವ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆ ಮಾಡಬೇಕು. ಈ ರೀತಿಯ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ದಲಿತ ಸಂಘಟನೆಗಳ ಮುಖಂಡರು ಒತ್ತಾಯಿಸಿದರು.

ಗೊಲ್ಲರಹಟ್ಟಿಗೆ ದಲಿತ ಯುವಕ ಪ್ರವೇಶ ಮಾಡಿದ ಬಳಿಕ ದೇಗುಲಕ್ಕೆ ಬೀಗ ಹಾಕಿರುವ ಬಗ್ಗೆ ಜ.5ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ದೇವಾಲಯ ಪ್ರವೇಶಕ್ಕೆ ಸಿಟ್ಟು: ಹೊಸ ದೇವಾಲಯ ನಿರ್ಮಾಣ

• ಆರ್. ಜಿತೇಂದ್ರ

ಕೆಂಚಲಗೂಡು ಗ್ರಾಮದಲ್ಲಿ ಹೊಸತಾಗಿ ನಿರ್ಮಾಣವಾಗಿರುವ ದೇಗುಲ —ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೈಸೂರು: ದಲಿತ ಸಮುದಾಯದಲ್ಲಿ 'ಅಸ್ಪೃಶ್ಯತೆ' ಆಚರಣೆಯಲ್ಲಿದ್ದು, 'ಆದಿ ಕರ್ನಾಟಕ ಸಮುದಾಯದವರು ದೇವಾಲಯ ಪ್ರವೇಶಿಸಿದರು' ಎಂಬ ಕಾರಣಕ್ಕೆ ವಾಲ್ಮೀಕಿ ನಾಯಕ ಸಮುದಾಯದ ಜನ ಪ್ರಾಚೀನ ದೇಗುಲ ತ್ಯಜಿಸಿ, ಪ್ರತ್ಯೇಕ ದೇವಾಲಯ ನಿರ್ಮಿಸಿಕೊಂಡಿದ್ದಾರೆ.

ಈ ಘಟನೆಗೆ ಸಾಕ್ಷಿಯಾಗಿರುವುದು ಮೈಸೂರು ತಾಲ್ಲೂಕಿನ ಕೆಂಚಲಗೂಡು ಗ್ರಾಮ. ನಗರಕ್ಕೆ ಹೊಂದಿಕೊಂಡಂತೆಯೇ ಇರುವ, 120 ಕುಟುಂಬಗಳನ್ನು ಒಳಗೊಂಡ ಪುಟ್ಟ ಗ್ರಾಮವಿದು. ಇಲ್ಲಿ ಪರಿಶಿಷ್ಟ ಜಾತಿಯ 45 ಕುಟುಂಬಗಳು (ಆದಿಕರ್ನಾಟಕ), ಪರಿಶಿಷ್ಟ ಪಂಗಡದ 50 ಕುಟುಂಬಗಳು (ನಾಯಕ) ಹಾಗೂ ಅರಸು ಸಮುದಾಯದ 4–5 ಕುಟುಂಬಗಳಿವೆ. ಗ್ರಾಮದ ಪರಿಮಿತಿಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಮೂರು ದೇವಾಲಯಗಳಿವೆ. ಇಲ್ಲಿ ನಾಯಕ ಹಾಗೂ ಅರಸು ಸಮುದಾಯಕ್ಕೆ ಸೇರಿದವರು ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ.

ಗ್ರಾಮದಲ್ಲಿನ ಲಕ್ಷ್ಮೀನಾರಾಯಣ ಸ್ವಾಮಿ ದೇಗುಲ ಮುಜರಾಯಿ ಇಲಾಖೆಯ ಸುಪರ್ದಿಯಲ್ಲಿದ್ದರೂ ತೀರಾ ಇತ್ತೀಚಿನವರೆಗೆ ಪರಿಶಿಷ್ಟ ಜಾತಿಯವರಿಗೆ ಪ್ರವೇಶವಿರಲಿಲ್ಲ. ಸಮುದಾಯದ ಕೆಲವರು ಅದಕ್ಕೆ ವಿರೋಧ ವ್ಯಕ್ತಪಡಿಸಿ, ಮುಜರಾಯಿ ಇಲಾಖೆಗೆ ದೂರು ನೀಡಿದ್ದರು. ಬಳಿಕ ಡಿ. 2ರಂದು ಲಕ್ಷ್ಮೀನಾರಾಯಣಸ್ವಾಮಿ ದೇಗುಲಕ್ಕೆ ಪರಿಶಿಷ್ಟ ಜಾತಿಯವರಿಗೂ ಪ್ರವೇಶ ಕಲ್ಪಿಸಲಾಯಿತು. ಆದರೆ, 'ಹೀಗೆ ದೇಗುಲವನ್ನು ಪ್ರವೇಶಿಸಿದವರಿಗೆ ಗ್ರಾಮದ ಇತರರು ಬಹಿಷ್ಕಾರ ಹಾಕಿದ್ದಾರೆ' ಎನ್ನುವುದು ಬಹಿಷ್ಕಾರಕ್ಕೆ ಒಳಗಾದವರ ಆರೋಪ.

ದೇಗುಲ ನಿರ್ಮಾಣ: ಆದಿಕರ್ನಾಟಕ ಸಮುದಾಯದ ಕೆಲವರು ದೇಗುಲದ ಒಳಗೆ ಕಾಲಿಟ್ಟದ್ದು ನಾಯಕ ಸಮುದಾಯದ ಮುಖಂಡರನ್ನು ಕೆರಳಿಸಿತ್ತು. ಹೀಗಾಗಿ ಉಳಿದ ಗ್ರಾಮಸ್ಥರೆಲ್ಲ ಒಟ್ಟುಗೂಡಿ ಲಕ್ಷ್ಮೀನಾರಾಯಣ ದೇಗುಲಕ್ಕೆ ಪರ್ಯಾಯವಾಗಿ, ಆ ದೇಗುಲದ ಪಕ್ಕದಲ್ಲೇ ಹೊಸತಾಗಿ ಇನ್ನೊಂದು ದೇಗುಲ ಕಟ್ಟಿದ್ದಾರೆ. ಕೇವಲ ಒಂದು ತಿಂಗಳಲ್ಲಿಯೇ ಹೊಸ ದೇವಾಲಯ ತಲೆ ಎತ್ತಿದೆ. ಅದಕ್ಕಾಗಿ ಗ್ರಾಮಸ್ಥರಿಂದ ಪ್ರತಿ ಮನೆಗೆ ₹5 ಸಾವಿರದಿಂದ ₹15 ಸಾವಿರದವರೆಗೆ ಹಣ ಸಂಗ್ರಹಿಸಲಾಗಿದೆ. ವಿಪರ್ಯಾಸವೆಂದರೆ, ಆದಿ ಕರ್ನಾಟಕ ಸಮುದಾಯದ ಜನರೂ ಹೊಸ ದೇಗುಲಕ್ಕೆ ದೇಣಿಗೆ ನೀಡಿದ್ದಾರೆ. ಇದು 'ಪ್ರಜಾವಾಣಿ' ಪ್ರತಿನಿಧಿ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದಾಗ ತಿಳಿದುಬಂತು.

ಪ್ರಾಚೀನ ಲಕ್ಷ್ಮೀನಾರಾಯಣಸ್ವಾಮಿ ದೇಗುಲದಲ್ಲಿ ಪ್ರತಿ ವರ್ಷ ಸಂಕ್ರಾಂತಿ ಸಮಯದಲ್ಲಿ ಉತ್ಸವ ನಡೆಯುವುದು ವಾಡಿಕೆ. ಆದರೆ, ಈ ವರ್ಷ ಉತ್ಸವವನ್ನು ಹೊಸ ದೇಗುಲದಲ್ಲೇ ನಡೆಸಲು ಅನುಮತಿ ಕೋರಿ ಗ್ರಾಮಸ್ಥರ ಗುಂಪೊಂದು ತಾಲ್ಲೂಕು ಆಡಳಿತಕ್ಕೆ ಅರ್ಜಿ ಸಲ್ಲಿಸಿದೆ. ಇದು ವಿವಾದಕ್ಕೆ ಕಾರಣವಾಗಿದೆ.

ಖಾಸಗಿ ದೇಗುಲ: 'ಹಳೆ ದೇಗುಲದ ಪ್ರವೇಶದ ವಿಚಾರದಲ್ಲಿ ಕೆಲವರ ವರ್ತನೆ ನಮಗೆ ಹಿಡಿಸಲಿಲ್ಲ. ಹೀಗಾಗಿ ಅವರ ಸಹವಾಸವೇ ಬೇಡ ಎಂದು ಹೊಸತಾಗಿ ದೇವಾಲಯ ಕಟ್ಟಿದ್ದೇವೆ. ಪರಿಶಿಷ್ಟ ಜಾತಿಯವರೂ ಸಹಕರಿಸಿದ್ದಾರೆ. ಖಾಸಗಿ ಜಾಗದಲ್ಲಿ ಹೊಸ ದೇವಾಲಯ ನಿರ್ಮಾಣವಾಗಿದ್ದು, ಅಲ್ಲಿನ ರೀತಿ–ರಿವಾಜು ಗ್ರಾಮಸ್ಥರಿಗೆ ಬಿಟ್ಟಿದ್ದು' ಎನ್ನುತ್ತಾರೆ ಗ್ರಾಮದ ನಾಯಕ ಸಮುದಾಯದ ಮುಖಂಡ ಮಂಚನಾಯಕ.

'ಹೊಸ ದೇಗುಲವನ್ನೂ ಸರ್ಕಾರಿ ಜಾಗದಲ್ಲೇ ಕಟ್ಟಿದ್ದಾರೆ. ತಾಲ್ಲೂಕು ಆಡಳಿತ ದಾಖಲೆ ಪರಿಶೀಲಿಸಬೇಕು. ಅಲ್ಲಿಗೂ ಮುಕ್ತ ಪ್ರವೇಶ ಸಿಗಬೇಕು. ಉತ್ಸವ ಮೂರ್ತಿ ನಮ್ಮ ಕೇರಿಗೂ ಬರಬೇಕು' ಎಂದು ಆದಿಕರ್ನಾಟಕ ಸಮುದಾಯದ ಮುಖಂಡ ಮರಂಕಯ್ಯ ಒತ್ತಾಯಿಸಿದರು.

'ಸಂಪ್ರದಾಯ ಪಾಲಿಸುತ್ತೇವೆ'

ಅಸ್ಪೃಶ್ಯತೆ ಆಚರಣೆ ಆರೋಪದಿಂದಾಗಿ ಕೆಂಚಲಗೂಡಿನಲ್ಲಿ ಮಂಗಳವಾರ ಮೈಸೂರು ತಹಶೀಲ್ದಾರ್ ಕೆ.ಎಂ. ಮೋಹನ್ ಕುಮಾರ್, ದಲಿತ ಮುಖಂಡ ಪುರುಷೋತ್ತಮ್ ನೇತೃತ್ವದಲ್ಲಿ ಶಾಂತಿ ಸಭೆ ನಡೆಯಿತು.

ಆದಿಕರ್ನಾಟಕ ಸಮುದಾಯದ ಮುಖಂಡ ಮಹೇಶ್ ಎನ್ನುವವರು, 'ಹಿಂದಿನಿಂದಲೂ ನಮ್ಮ ಸಮುದಾಯದ ಜನ ಆ ದೇವಾಲಯಕ್ಕೆ ಹೋಗಿಲ್ಲ. ಅದೊಂದು ಸಂಪ್ರದಾಯದ ರೀತಿ ಬೆಳೆದಿದೆ. ಕೆಲವರು ರಾಜಕೀಯ ಕಾರಣಕ್ಕೆ ವಿವಾದ ಮಾಡುತ್ತಿದ್ದಾರೆ. ಸಂಪ್ರದಾಯ ಪಾಲನೆಗೆ ನಮಗೆ ಅವಕಾಶ ಕೊಡಿ' ಎನ್ನುವ ಮೂಲಕ ಅಚ್ಚರಿ ಮೂಡಿಸಿದರು.

> ಮುಜರಾಯಿ ದೇವಾಲಯಗಳಲ್ಲಿ ಎಲ್ಲರಿಗೂ ಮುಕ್ತ ಪ್ರವೇಶ ಕೊಡಬೇಕು. ಹೊಸ ದೇವಾಲಯ ಖಾಸಗಿ ಜಾಗದಲ್ಲಿ ನಿರ್ಮಾಣವಾಗಿದ್ದರೆ ಅದು ಅವರ ಆಸ್ತಿ
> **ಕೆ.ಎಂ. ಮೋಹನ್‌ಕುಮಾರ್**
> ತಹಶೀಲ್ದಾರ್, ಮೈಸೂರು ತಾಲ್ಲೂಕು

ವಿಡಿಯೊ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸುದ್ದಿ 2 ನಿಮಿಷ

ಕೋವಿಡ್ ಹಗರಣ: ಹಣ ತಿಂದವರು ಸರ್ವನಾಶ– ಯತ್ನಾಳ

ವಿಜಯಪುರ: 'ಕೋವಿಡ್ ಹಗರಣವನ್ನು ಒಂದೊಂದಾಗಿ ಬಿಚ್ಚಿಟ್ಟರೆ ಹುಚ್ಚು ಹುಡಿಯತ್ತೆ, ಕೊರೊನಾದಂತ ಕೆಟ್ಟ ಪರಿಸ್ಥಿತಿಯಲ್ಲೂ ಹಣ ತಿಂದವರು ಸರ್ವನಾಶ ಆಗುತ್ತಾರೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಮತ್ತೆ ಪ್ರಸ್ತಾಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೋವಿಡ್ ಕಿಟ್ ಅನ್ನು ಹಿಮಾಚಲ ಪ್ರದೇಶ ಸರ್ಕಾರ ₹1.30 ಲಕ್ಷಕ್ಕೆ ಖರೀದಿಸಿದ್ದರೆ, ಅದೇ ಕಿಟ್ ಅನ್ನು ಕರ್ನಾಟಕ ಸರ್ಕಾರ ₹2.90 ಲಕ್ಷಕ್ಕೆ ಖರೀದಿಸಿದೆ. ₹900 ದರದ ಒಂದು ಬಾಟಲಿ ರೆಮಿಡಿಸಿವರ್ ಔಷಧವನ್ನು ₹1,380ಕ್ಕೆ ನಮ್ಮವರು ಖರೀದಿಸಿದ್ದಾರೆ' ಎಂದು ಆರೋಪಿಸಿದರು.

'ಕೋವಿಡ್ ಹಗರಣದ ತನಿಖೆ ವೇಳೆ ಇನ್ನಷ್ಟು ಮಾಹಿತಿಯನ್ನು ನೀಡುತ್ತೇನೆ' ಎಂದು ಯತ್ನಾಳ ಹೇಳಿದರು.

'ರಾಮ ಮಂದಿರ ಯಶಸ್ಸಿನ ಪಾಲು ಪಡೆಯಲು ಕಾಂಗ್ರೆಸ್ ಯತ್ನ'

ಹುಬ್ಬಳ್ಳಿ: 'ರಾಮನ ಅಸ್ತಿತ್ವದ ಬಗ್ಗೆ ಪ್ರಶ್ನೆ ಮಾಡಿದ್ದ ಕಾಂಗ್ರೆಸ್‌ನವರು ಈಗ ರಾಮ ಮಂದಿರದ ಯಶಸ್ಸಿನ ಪಾಲು ಪಡೆಯಲು ಪ್ರಯತ್ನ ನಡೆಸಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

'ರಾಮ ಮಂದಿರ ಉದ್ಘಾಟನೆ ಪ್ರಯುಕ್ತ ಜನರಿಗೆ ನೀಡುತ್ತಿರುವ ಮಂತ್ರಾಕ್ಷತೆಗೆ ರಾಜ್ಯ ಸರ್ಕಾರದ 'ಅನ್ನಭಾಗ್ಯ' ಯೋಜನೆಯ ಅಕ್ಕಿ ಬಳಸುತ್ತಿದ್ದಾರೆ' ಎಂದು ಕಾಂಗ್ರೆಸ್ ಮುಖಂಡರು ನೀಡಿದ ಹೇಳಿಕೆಗೆ ನಗರದಲ್ಲಿ ಮಂಗಳವಾರ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

'ರಾಮ ಕಾಲ್ಪನಿಕ, ರಾಮಾಯಣ ನಡೆದಿದೆ ಎಂಬುದಕ್ಕೆ ಪುರಾವೆಗಳಿಲ್ಲ, ಶ್ರೀರಾಮ ಜನ್ಮ ಭೂಮಿ ಕುರಿತು ನಿರ್ಣಯ ಕೈಗೊಳ್ಳಬಾರದೆಂದು ಕಾಂಗ್ರೆಸ್‌ನವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಎಲ್ಲವೂ ಬಗೆಹರಿದು, ಈಗ ರಾಮಮಂದಿರ ನಿರ್ಮಾಣವಾಗಿದೆ. ಇದರ ಲಾಭ ಪಡೆಯಲು ಕಾಂಗ್ರೆಸ್‌ನವರು ಹೊರಟಿದ್ದಾರೆ. ಜನರು ಬುದ್ಧಿವಂತರಿದ್ದು, ಎಲ್ಲವೂ ಗೊತ್ತಾಗುತ್ತದೆ' ಎಂದು ಹೇಳಿದರು.

'ಅನ್ನಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರ ನೀಡುತ್ತಿರುವ ಅಕ್ಕಿ ಸಂಪೂರ್ಣವಾಗಿ ಕೇಂದ್ರ ಸರ್ಕಾರದ್ದು. ರಾಜ್ಯದ ಕಾಂಗ್ರೆಸ್ ಸರ್ಕಾರ ಈವರೆಗೆ ಒಂದು ಕಾಳು ಅಕ್ಕಿ ಜನರಿಗೆ ಕೊಟ್ಟಿಲ್ಲ. ಚುನಾವಣೆ ವೇಳೆ 10 ಕೆ.ಜಿ ಅಕ್ಕಿ ಕೊಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದರು. ಆದರೆ, ಇದುವರೆಗೆ ಕೊಟ್ಟಿಲ್ಲ' ಎಂದು ದೂರಿದರು.

'ಡಿಎಫ್‌ಒ ನಿಯೋಜನೆಗೆ ₹1 ಕೋಟಿವರೆಗೆ ಡಿಮ್ಯಾಂಡ್'

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಹಾಸನ: 'ಜಿಲ್ಲೆಯ ಬೇಲೂರು ತಾಲ್ಲೂಕಿನ ನಂದಗೋಡನಹಳ್ಳಿಯಲ್ಲಿ ಮರ ಕಡಿದ ಪ್ರಕರಣದಲ್ಲಿ ಡಿಎಫ್‌ಒ ಮೋಹನ್ ಕುಮಾರ್ ಅವರನ್ನು ಅಮಾನತು ಮಾಡಲಾಗಿದ್ದು, ಅವರ ಜಾಗಕ್ಕೆ ಇನ್ನೊಬ್ಬರನ್ನು ಹಾಕಲು ₹50 ಲಕ್ಷದಿಂದ ₹1 ಕೋಟಿ ಡಿಮ್ಯಾಂಡ್ ಮಾಡಲಾಗುತ್ತಿದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಇಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರಕ್ಕೆ ಕನಿಷ್ಠ ಪ್ರಜ್ಞೆಯೂ ಇಲ್ಲ. ಕೆಲವು ದಿನಗಳ ಹಿಂದೆ ಆನೆ ತುಳಿತ ಘಟನೆ ನಡೆದಿದೆ. ಸ್ಥಳಕ್ಕೆ ಸಚಿವರು ಬರಲೆಂದು ಜನರು ಹೋರಾಡುತ್ತಿದ್ದಾರೆ. ಇಲ್ಲಿ ಜನರಿಗೆ ಸ್ಪಂದಿಸಲು ಅರಣ್ಯ ಅಧಿಕಾರಿಗಳು ಇಲ್ಲ. ಅದ್ಯಾರೋ ಮೈಸೂರಿನವರಿಗೆ ಪ್ರಭಾರ ವಹಿಸಿದ್ದಾರೆ' ಎಂದು ದೂರಿದರು.

'ಮೋಹನ್ ಕುಮಾರ್ ಬಳಿಯೂ ₹50 ಲಕ್ಷ ತೆಗೆದುಕೊಂಡು, ಅವರನ್ನು ಮೂರು ತಿಂಗಳಿಗೆ ಮನೆಗೆ ಕಳುಹಿಸಲಾಗಿದೆ. ಇಂತಹ ಪ್ರಕರಣದಲ್ಲಿ ಡಿಎಫ್‌ಒ ಅಮಾನತು ಮಾಡಿದ್ದು ಎಲ್ಲಿಯಾದರೂ ಇದೆಯೇ' ಎಂದು ಪ್ರಶ್ನಿಸಿದರು.

'ಆ ಅಧಿಕಾರಿ ಇಲ್ಲಿಗೆ ಬರಲು ಜಿಲ್ಲೆಯ ಕಾಂಗ್ರೆಸ್ ಶಾಸಕರೇ ಕಾರಣ' ಎಂದು ಪರೋಕ್ಷವಾಗಿ ಕೆ.ಎಂ. ಶಿವಲಿಂಗೇಗೌಡ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, 'ಹೇಳಿದಂತೆ ಕೇಳಲಿಲ್ಲ ಎಂಬ ಕಾರಣಕ್ಕೆ ಡಿಎಫ್‌ಒ ಅಮಾನತು ಮಾಡಿಸಿದ್ದಾರೆ' ಎಂದು ಆರೋಪಿಸಿದರು.

ಎಚ್‌ಡಿಡಿ ಸ್ಪರ್ಧೆ: ರೆಸಾರ್ಟ್‌ಗೆ ನಾಯಕರು?

ಮಂಡ್ಯ: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧೆಗೆ ಕರೆತರುವ ವಿಷಯ ಚರ್ಚಿಸಲು ಇಲ್ಲಿನ ಜೆಡಿಎಸ್ ನಾಯಕರು ಚಿಕ್ಕಮಗಳೂರು ಜಿಲ್ಲೆಯ ರೆಸಾರ್ಟ್‌ವೊಂದರಲ್ಲಿ ಬೀಡುಬಿಟ್ಟಿದ್ದಾರೆ.

ಜೆಡಿಎಸ್–ಬಿಜೆಪಿ ಮೈತ್ರಿಯಲ್ಲಿ ಕ್ಷೇತ್ರವನ್ನು ಜೆಡಿಎಸ್ ಅಭ್ಯರ್ಥಿಗೆ ಬಿಟ್ಟುಕೊಡುವುದು ಬಹುತೇಕ ಖಚಿತವಾಗಿದೆ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಮೂವರಲ್ಲಿ ಒಬ್ಬರು ಸ್ಪರ್ಧಿಸುತ್ತಾರೆ ಎಂಬ ಸುದ್ದಿಗಳು ಕ್ಷೇತ್ರದಲ್ಲಿ ಹರಡಿವೆ. ಎಚ್.ಡಿ.ದೇವೇಗೌಡ ಅವರನ್ನು ಮನವೊಲಿಸಿ ಕ್ಷೇತ್ರಕ್ಕೆ ಕರೆತಂದರೆ ಜೆಡಿಎಸ್ ಮತ್ತೆ ಕ್ಷೇತ್ರವನ್ನು ಪಡೆದುಕೊಳ್ಳಲು ಸುಲಭವಾಗುತ್ತದೆ. ಇದೇ ವಿಚಾರ ಚರ್ಚಿಸಲು ರೆಸಾರ್ಟ್‌ನಲ್ಲಿ ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕುಮಾರಸ್ವಾಮಿ, ಕೆ.ಆರ್.ಪೇಟೆ ಶಾಸಕ ಎಚ್.ಟಿ.ಮಂಜು, ಮುಖಂಡರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಕೆ.ಅನ್ನದಾನಿ ಸೇರಿದಂತೆ 15ಕ್ಕೂ ಹೆಚ್ಚು ಮುಖಂಡರು ರೆಸಾರ್ಟ್‌ಗೆ ತೆರಳಿದ್ದಾರೆ. ಈ ಕುರಿತು ಗುಟ್ಟು ಬಿಟ್ಟುಕೊಡದ ನಾಯಕರು ದೂರವಾಣಿ ಕರೆ ಸ್ವೀಕರಿಸಲಿಲ್ಲ, ಸ್ಥಳೀಯ ನಾಯಕರೂ ಈ ಕುರಿತು ಪ್ರತಿಕ್ರಿಯಿಸಲಿಲ್ಲ.

ಏಪ್ರಿಲ್ 18, 19ರಂದು ಸಿಇಟಿ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ದಿನಾಂಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಎರಡು ದಿನಗಳ ಮಟ್ಟಿಗೆ ಹಿಂದೂಡಿದ್ದು, ಏಪ್ರಿಲ್ 18 ಮತ್ತು 19ರಂದು ಪರೀಕ್ಷೆಗಳು ನಡೆಯಲಿವೆ. ಈ ಮೊದಲು ಏಪ್ರಿಲ್ 20 ಮತ್ತು 21ರಂದು ಪರೀಕ್ಷೆ ನಿಗದಿಯಾಗಿತ್ತು.

'ಏಪ್ರಿಲ್ 21ರಂದು ಎನ್‌ಡಿಎ ಪರೀಕ್ಷೆ ನಡೆಯುತ್ತಿರುವುದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕನ್ನಡ ಪರೀಕ್ಷೆ ಏಪ್ರಿಲ್ 20ರಂದು ನಡೆಯಲಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ವೃತ್ತಿಪರ ಕೋರ್ಸ್‌ಗಳಿಗೆ ಸೇರಲು ಬಯಸುವ ಅಭ್ಯರ್ಥಿಗಳು ಸಿಇಟಿ ಪರೀಕ್ಷೆಗೆ ಬುಧವಾರದಿಂದ (ಜ.10) ಫೆ. 10ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಬಿಪಿಟಿ, ಬಿಪಿಒ, ಬಿಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳಿಗೆ ಸೇರಲು ಬಯಸುವ ಅಭ್ಯರ್ಥಿಗಳೂ ಈಗಲೇ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ.

ನೀಟ್ ಫಲಿತಾಂಶ ಪ್ರಕಟವಾದ ನಂತರ ಕೆಇಎಯಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳಿಗೆ ನೀಟ್ ಅಂಕ ಮತ್ತು ರೋಲ್ ನಂಬರ್ ದಾಖಲಿಸಲು ಇಂಟರ್‌ಫೇಸ್ ನೀಡಲಾಗುವುದು. ಸಿಇಟಿ ಪ್ರಕ್ರಿಯೆಯಲ್ಲಿ ಸುಧಾರಣೆ ತರುವ ಭಾಗವಾಗಿ ಈ ಬಾರಿ ಅರ್ಜಿಯನ್ನು 'ಅರ್ಜಿ ಹಾಗೂ ಪರಿಶೀಲನೆ' ನಮೂನೆಯಲ್ಲಿ ಹೊರತರಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಎಚ್.ಎಸ್. ಸುರೇಶ್ ಅವರ ಭವ್ಯ ಬಂಗಲೆ (ಎಡಚಿತ್ರ) ಲೋಕೋಪಯೋಗಿ ಇಲಾಖೆಯ ಸೂಪರಿಂಟೆಂಡಿಂಗ್ ಎಂಜಿನಿಯರ್ ಎನ್. ಸತೀಶ್ ಬಾಬು ಅವರ ಚಿತ್ರದುರ್ಗದ ಮನೆಯಲ್ಲಿ ಪತ್ತೆಯಾಗಿರುವ ಚಿನ್ನಾಭರಣಗಳು

ಗ್ರಾ.ಪಂ. ಸದಸ್ಯನ ಬಳಿ ₹25 ಕೋಟಿ ಸಂಪತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಚನ್ನೇನಹಳ್ಳಿಯ ಗ್ರಾಮ ಪಂಚಾಯಿತಿ ಸದಸ್ಯ ಸುರೇಶ್ ಬಳಿ ಬರೋಬ್ಬರಿ ₹ 25.58 ಕೋಟಿ ಆಸ್ತಿ ಪತ್ತೆಯಾಗಿದೆ.

16 ನಿವೇಶನ, ವಾಸದ ಮನೆ, ಫಾರ್ಮ್ ಹೌಸ್, ₹ 2.11 ಕೋಟಿ ಮೌಲ್ಯದ ಚಿನ್ನಾಭರಣ, ₹ 2.07 ಕೋಟಿ ಮೌಲ್ಯದ ವಾಹನಗಳು ಇವರ ಬಳಿ ಸಿಕ್ಕಿವೆ ಎಂದು ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಾಗರಾಜ್ ಬಳಿ 13 ನಿವೇಶನ, 2 ಪೆಟ್ರೋಲ್ ಬಂಕ್: ಬೆಸ್ಕಾಂ ಸಿಜಿಎಂ ನಾಗರಾಜ್ ಅವರು ಬೆಂಗಳೂರು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಆಸ್ತಿ ಹೊಂದಿರುವುದನ್ನು ತನಿಖಾ ತಂಡಗಳು ಪತ್ತೆಮಾಡಿವೆ. 13 ನಿವೇಶನ, ಎರಡು ಮನೆ, ಕೃಷಿ ಜಮೀನು, ಎರಡು ಪೆಟ್ರೋಲ್ ಬಂಕ್‌ಗಳನ್ನು ಇವರು ಹೊಂದಿದ್ದಾರೆ.

ಯಾರ ಬಳಿ ಎಷ್ಟು ಆಸ್ತಿ?

ಆರೋಪಿತರು	ಸ್ಥಿರಾಸ್ತಿ	ಚರಾಸ್ತಿ	ಒಟ್ಟು ಆಸ್ತಿ
	(₹ ಕೋಟಿಗಳಲ್ಲಿ)		
ಎಚ್.ಎಸ್. ಸುರೇಶ್, ಚನ್ನೇನಹಳ್ಳಿ ಗ್ರಾ.ಪಂ. ಸದಸ್ಯ	21.27	4.30	25.58
ಎಂ.ಎಲ್. ನಾಗರಾಜ್, ಸಿಜಿಎಂ, ಬೆಸ್ಕಾಂ	5.35	1.02	6.37
ಡಿ.ಎಂ. ಪದ್ಮನಾಭ, ಪಿಡಿಒ, ಕುಂದಾಣ	5.35	0.63	5.98
ಎನ್. ಸತೀಶ್ ಬಾಬು, ಎಸ್‌ಇ, ಪಿಡಬ್ಲ್ಯುಡಿ	3.70	0.82	4.52
ಸೈಯದ್ ಮುನೀರ್ ಅಹಮದ್, ಇಇ, ಕೆಆರ್‌ಐಡಿಎಲ್	4.10	1.38	5.48
ಮಂಜೇಶ್ ಬಿ, ಜೆಡಿ, ನಗರ ಯೋಜನೆ	1.20	1.98	3.18

ಪಿಡಿಒ ಪದ್ಮನಾಭ ಕೋಟ್ಯಾಧಿಪತಿ: ಕುಂದಾಣ ಪಿಡಿಒ ಪದ್ಮನಾಭ ಕೂಡ ಬಹುಕೋಟಿ ಮೌಲ್ಯದ ಆಸ್ತಿಯ ಒಡೆಯ. ಎರಡು ಮನೆ, ಕೈಗಾರಿಕಾ ನಿವೇಶನ, 8 ಎಕರೆ 18 ಗುಂಟೆ ಕೃಷಿ ಜಮೀನು, ಫಾರ್ಮ್ ಹೌಸ್ ಹೊಂದಿರುವುದು ಪತ್ತೆಯಾಗಿದೆ.

ಎಸ್‌ಇ ಸತೀಶ್ ಬಾಬು ಬಳಿ 15 ಎಕರೆ ಜಮೀನು,2 ನಿವೇಶನ: ಸತೀಶ್ ಬಾಬು ಬಳಿಕ ಎರಡು ಮನೆ, ಒಂದು ನಿವೇಶನ ಮತ್ತು 15 ಎಕರೆ ಕೃಷಿ ಜಮೀನು ಇರುವುದನ್ನು ತನಿಖಾ ತಂಡ ಪತ್ತೆಹಚ್ಚಿದೆ.

ಎಂಜಿನಿಯರ್ ಮುನೀರ್ ಬಳಿ 7 ಮನೆ: ಮುನೀರ್ ಅಹಮದ್ ಬಳಿ ಏಳು ಮನೆಗಳು, ಎರಡು ನಿವೇಶನ ಮತ್ತು ಕೃಷಿ ಜಮೀನು ಕೂಡ ಇವೆ. ಇವರ ಬೇನಾಮಿಯಾಗಿರುವ ಆರೋಪದ ಮೇಲೆ ಚಿಕ್ಕಬಳ್ಳಾಪುರದ ಮೊಹಿದ್ದೀನ್ ಖಾನ್ ಎಂಬ ಗುತ್ತಿಗೆದಾರನ ಮನೆಯಲ್ಲೂ ಶೋಧ ನಡೆಸಲಾಗಿದೆ.

ಜಂಟಿ ನಿರ್ದೇಶಕ ಮಂಜೇಶ್ ಬಳಿ 11 ನಿವೇಶನ: ಹಿಂದೆ ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸಿದ್ದ ನಗರ ಯೋಜನೆಯ ಜಂಟಿ ನಿರ್ದೇಶಕ ಮಂಜೇಶ್, 11 ನಿವೇಶನ, ಒಂದು ಮನೆ ಹೊಂದಿರುವ ದಾಖಲೆಗಳನ್ನು ತನಿಖಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

3 ಡಿಸಿಎಂ: ಸಚಿವರ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೂ ಮೊದಲು ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಬೇಕೆಂದು ಹೈಕಮಾಂಡ್ ಮೇಲೆ ಒತ್ತಡ ಹೇರಲು ಕೆಲವು ಸಚಿವರು ತಂತ್ರಗಾರಿಕೆ ಹೆಣೆಯುತ್ತಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿರುವ ಗೃಹ ಸಚಿವ ಜಿ. ಪರಮೇಶ್ವರ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತಿತರರು ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಯ ಅನಿವಾರ್ಯದ ಬಗ್ಗೆ ಮನವರಿಕೆ ಮಾಡಿದ್ದಾರೆ.

ಲಿಂಗಾಯತ, ದಲಿತ ಹಾಗೂ ಅಲ್ಪಸಂಖ್ಯಾತ ಈ ಮೂರು ಸಮುದಾಯಗಳನ್ನು ಪ್ರತಿನಿಧಿಸುವ ಹಿರಿಯ ಸಚಿವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವುದರಿಂದ ಈ ಸಮುದಾಯಗಳ ಓಲೈಕೆ ಸಾಧ್ಯವಾಗಲಿದೆ. ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲುವ ಪಕ್ಷದ ಗುರಿಗೆ ಈ ನಡೆ ಪೂರಕವಾಗಲಿದೆ ಎಂಬ ವಾದವನ್ನು ಸುರ್ಜೇವಾಲಾ ಎದುರು ಈ ಸಚಿವರು ಪ್ರತಿಪಾದಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, 'ಸುರ್ಜೇವಾಲಾ ಅವರನ್ನು ಭೇಟಿಯಾದಾಗ, ನಿರ್ಣಾಯಕ ಸಮುದಾಯಗಳಿಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡಬೇಕೆಂದು ಕೇಳಿದ್ದೇವೆ. ಇದರಿಂದ ಚುನಾವಣೆಯಲ್ಲಿ ಅನುಕೂಲ ಆಗಲಿದೆ ಎಂದಿದ್ದೇವೆ' ಎಂದರು.

'ಡಿಸಿಎಂ ಹುದ್ದೆ ನೀಡಿದರೆ ಸಮುದಾಯಗಳು ಪಕ್ಷದ ಬೆನ್ನಿಗೆ ನಿಲ್ಲಲು ಅನುಕೂಲ ಆಗುತ್ತದೆ. ಎಷ್ಟು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕು ಎನ್ನುವುದು ಹೈಕಮಾಂಡ್‌ಗೆ ಬಿಟ್ಟಿದ್ದು. ಲೋಕಸಭೆ ಚುನಾವಣೆಗೆ ಮೊದಲೇ ಮಾಡಬೇಕು. ಈ ಬಗ್ಗೆ ಸುರ್ಜೇವಾಲ ಅವರು ಹೈಕಮಾಂಡ್ ಗಮನಕ್ಕೆ ತರಲಿದ್ದಾರೆ' ಎಂದರು.

'ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಅವರ ಅಭಿಪ್ರಾಯ ಬೇರೆ. ನಮ್ಮ ಅಭಿಪ್ರಾಯ ಬೇರೆ. ಅವರು ಉಪ ಮುಖ್ಯಮಂತ್ರಿಯಾಗಿಯೇ ಇರುತ್ತಾರೆ. ಒಂದೇ ಉಪ ಮುಖ್ಯಮಂತ್ರಿ ಹುದ್ದೆ ಎಂಬುದು ಡಿ.ಕೆ. ಶಿವಕುಮಾರ್ ಅಭಿಪ್ರಾಯ. ಆದರೆ, ಈಗ ನಾವು ಹೆಚ್ಚುವರಿ ಉಪ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ. ಹೈಕಮಾಂಡ್ ನಾಯಕರು ನಿರ್ಧಾರ ತೆಗೆದುಕೊಳ್ಳಬೇಕು. ಹಾಗೆಂದು, ಉಪ ಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ ಯಾರೂ ಪಕ್ಷ ಬಿಟ್ಟು ಹೋಗುವುದಿಲ್ಲ. ನಾವು ಬ್ಲ್ಯಾಕ್ ಮೇಲ್ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸ್ಪರ್ಧೆಗೆ ಸನ್ನದ್ಧ: ಸಚಿವರಿಗೆ ಸೂಚನೆ'

'ಲೋಕಸಭೆ ಚುನಾವಣೆಯಲ್ಲಿ ಸಚಿವರ ಸ್ಪರ್ಧೆ ಅನಿವಾರ್ಯವಾದರೆ ಸಿದ್ಧರಿರುವಂತೆ ಸುರ್ಜೇವಾಲ ಸೂಚಿಸಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುರ್ಜೇವಾಲ ಭೇಟಿಯ ಕುರಿತು ಪ್ರತಿಕ್ರಿಯಿಸಿದ ಅವರು, ಚರ್ಚೆ ವೇಳೆ ಕಳೆದ ಬಾರಿಯ ಉದಾಹರಣೆ (ಬೆಂಗಳೂರು ಉತ್ತರದಿಂದ ಸ್ಪರ್ಧಿಸಿದ್ದ ಕೃಷ್ಣ ಬೈರೇಗೌಡ) ನೀಡಿದರು. ಕ್ಷೇತ್ರದ ಉಸ್ತುವಾರಿ ವಹಿಸಿರುವ ಸಚಿವರನ್ನು ಇದೇ 11ರಂದು ದೆಹಲಿಗೆ ಆಹ್ವಾನಿಸಿದ್ದಾರೆ. ಈ ವೇಳೆ ಕ್ಷೇತ್ರಕ್ಕೆ ಸಂಬಂಧಪಟ್ಟ ಅಭ್ಯರ್ಥಿಗಳ ಆಯ್ಕೆ ವಿಚಾರವನ್ನು ಚರ್ಚಿಸುತ್ತೇವೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನಿಸುತ್ತದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಬೇಗ ಪಟ್ಟಿ ಬಿಡುಗಡೆ ಮಾಡಿದರೆ ಸಿದ್ಧತೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂಬುದನ್ನು ನಾಯಕರ ಮುಂದೆ ಪ್ರಸ್ತಾಪಿಸುತ್ತೇವೆ' ಎಂದೂ ಹೇಳಿದರು.

₹ 2 ಸಾವಿರ ಕೋಟಿ ಬಾಕಿ ವಸೂಲಿಗೆ ವಿಶೇಷ ತಂಡ– ಈಶ್ವರ ಖಂಡ್ರೆ

ಅರಣ್ಯ ಜಮೀನು ಅಡ ಇಟ್ಟು ಸಾಲ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಣ್ಯ ಜಮೀನು ಭೋಗ್ಯಕ್ಕೆ ಪಡೆದಿದ್ದ ಥಾಮ್ಸನ್ ರಬ್ಬರ್ ಇಂಡಿಯಾ ಲಿಮಿಟೆಡ್, ಅದನ್ನೇ ತನ್ನ ಸಾಗುವಳಿ ಜಮೀನು ಎಂದು ಬ್ಯಾಂಕಿನಲ್ಲಿ ಅಡಮಾನ ಇಟ್ಟು ಸಾಲ ಪಡೆದಿದೆ. ಸಾಲ ಕಟ್ಟದ ಕಾರಣ ಬ್ಯಾಂಕಿನವರು ಆ ಭೂಮಿಯನ್ನು ಹರಾಜು ಹಾಕಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

'ಕೊಡಗು, ಚಾಮರಾಜನಗರ ಮತ್ತಿತರ ಜಿಲ್ಲೆಗಳಲ್ಲಿ ಅರಣ್ಯ ಭೂಮಿಯನ್ನು ಸ್ವಾತಂತ್ರ್ಯ ಪೂರ್ವದಿಂದಲೂ ಭೋಗ್ಯಕ್ಕೆ ಪಡೆದು ಕಾಫಿ, ಟೀ, ರಬ್ಬರ್ ಬೆಳೆಯುತ್ತಿರುವ ಕಂಪನಿಗಳಿಂದ ಬಾಕಿ ಬರಬೇಕಿದ್ದ ಹಣ ಮತ್ತು ಬಡ್ಡಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿದಾಗ ಈ ವಿಚಾರ ಗೊತ್ತಾಗಿದೆ. ಹೀಗೆ ಅರಣ್ಯ ಜಮೀನು ಪಡೆದ ಕಂಪನಿಗಳಿಂದ ಸುಮಾರು ₹ 2 ಸಾವಿರ ಕೋಟಿಯಷ್ಟು ಭೋಗ್ಯದ ಮೊತ್ತ ಮತ್ತು ಬಡ್ಡಿ ಬಾಕಿ ಬರಬೇಕಿದೆ' ಎಂದರು.

ಯಾವ ಕಂಪನಿಯಿಂದ ಎಷ್ಟು ಬಾಕಿ

ಕಂಪನಿ	ಭೋಗ್ಯಕ್ಕೆ ಪಡೆದ ಜಾಗ (ಎಕರೆಗಳಲ್ಲಿ)	ಬಾಕಿ ಮೊತ್ತ (₹ ಕೋಟಿಗಳಲ್ಲಿ)
ವಿರಾಜಪೇಟೆಯ ಮರ್ಕೆರಾ ರಬ್ಬರ್ ಕಂಪನಿ	1,074	₹454 (2015ರ ಮಾರ್ಚ್‌ವರೆಗೆ)
ಥಾಮ್ಸನ್ ರಬ್ಬರ್ ಇಂಡಿಯಾ ಲಿಮಿಟೆಡ್	625	₹91.29
ನಿಲಂಬೂರು ರಬ್ಬರ್ ಕಂಪನಿ ಲಿಮಿಟೆಡ್	713	₹130.22
ಪೋರ್ಟ್ ಲ್ಯಾಂಡ್ ರಬ್ಬರ್ ಎಸ್ಟೇಟ್ ಲಿಮಿಟೆಡ್	1,288	₹536.66 (2022ರವರೆಗೆ)
ಗ್ಲೆನ್ ಲಾರೆನ್ ಪ್ಲಾಂಟೇಷನ್ ಕಂಪನಿ ಮತ್ತು ಟಾಟಾ ಕಾಫಿ ಸಂಸ್ಥೆ	943	₹524
ಚಾಮರಾಜನಗರದ ಹೊನ್ನಮಟ್ಟಿ ನೀಲಗಿರಿ ಪ್ಲಾಂಟೇಷನ್ ಲಿಮಿಟೆಡ್	25.36 ಕೋಟಿ (2015ರವರೆಗೆ)	

'ಭೋಗ್ಯದ ಅವಧಿ ಮುಗಿದ ಅರಣ್ಯ ಜಮೀನು ಹಿಂಪಡೆಯಲು ಮತ್ತು ಕಂಪನಿಗಳಿಂದ ಬರಬೇಕಾದ ಬಾಕಿ ವಸೂಲಿಗೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದರು.

ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಖಂಡ್ರೆ, 'ಬಾಕಿ ವಸೂಲಿಗೆ ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಬಿ.ಪಿ. ರವಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಲು ಕಾನೂನು ಹೋರಾಟ ನಡೆಸಲು ವಿಶೇಷ ಕಾನೂನು ಕೋಶ ರಚಿಸಲಾಗುವುದು' ಎಂದರು.

'5,500 ಎಕರೆಗೂ ಹೆಚ್ಚು ಅರಣ್ಯ ಭೂಮಿಯನ್ನು ಬ್ರಿಟಿಷರ ಆಡಳಿತ ಕಾಲದಲ್ಲಿ ವಿವಿಧ ಕಂಪನಿಗಳಿಗೆ ಮತ್ತು ವ್ಯಕ್ತಿಗಳಿಗೆ 99 ವರ್ಷ ದೀರ್ಘಾವಧಿಗೆ ಎಕರೆಗೆ ₹ 2ರಿಂದ ₹ 7ರಂತೆ ಭೋಗ್ಯಕ್ಕೆ ನೀಡಲಾಗಿತ್ತು. ಕೆಲವು ಕಂಪನಿಗಳ ಭೋಗ್ಯದ ಒಪ್ಪಂದವನ್ನು ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೂ ಮೊದಲು ನವೀಕರಿಸಲಾಗಿದೆ. 1997ರಲ್ಲಿ ಭೋಗ್ಯದ ದರವನ್ನು ಪ್ರತಿ ಹೆಕ್ಟೇರ್‌ಗೆ ₹ 5 ಸಾವಿರದಂತೆ ಹೆಚ್ಚಿಸಲಾಗಿದೆ. ಇದನ್ನು ಪ್ರಶ್ನಿಸಿ ಮತ್ತು ಬಡ್ಡಿ ಹಣ ನೀಡುವ ವಿಚಾರದಲ್ಲಿ ಕೆಲವು ಕಂಪನಿಗಳು ನ್ಯಾಯಾಲಯದ ಮೊರೆ ಹೋಗಿವೆ' ಎಂದು ಅವರು ವಿವರಿಸಿದರು.

'ಈ ಎಲ್ಲ ಕಂಪನಿಗಳು ಪಾವತಿಸಬೇಕಿರುವ ಹಣ, ಬಡ್ಡಿ, ಚಕ್ರಬಡ್ಡಿ, ದಂಡ ಮೊತ್ತ ಸೇರಿದರೆ ₹ 2,000 ಕೋಟಿಗೂ ಹೆಚ್ಚು ಅರಣ್ಯ ಇಲಾಖೆಗೆ ಬರಬೇಕಿದೆ. ಕೊಡಗು ಜಿಲ್ಲೆಯೊಂದರಲ್ಲೇ ಇಲಾಖೆಗೆ ಗುತ್ತಿಗೆ ಮೊತ್ತ ₹ 1,601 ಕೋಟಿ ಬರಬೇಕು ಎಂದು ಲೆಕ್ಕ ಪರಿಶೋಧನಾ ವರದಿ ತಿಳಿಸಿದೆ' ಎಂದೂ ಸಚಿವರು ಅಂಕಿಅಂಶ ನೀಡಿದರು.

'ವನ್ಯಜೀವಿ ಅಂಗಾಂಗ ವಾಪಸ್‌ಗೆ ಗಡುವು'

'ಅಕ್ರಮವಾಗಿ ಸಂಗ್ರಹಿಸಿಕೊಂಡಿರುವ ಹುಲಿ, ಚಿರತೆ ಉಗುರು, ಜಿಂಕೆ ಕೊಂಬು, ಆನೆ ದಂತ, ಕೂದಲು ಮತ್ತಿತರ ವನ್ಯಜೀವಿ ಅಂಗಾಂಗಗಳನ್ನು ಅರಣ ಇಲಾಖೆಗೆ ಮರಳಿಸಲು ಇದೇ 16ರಿಂದ 3 ತಿಂಗಳ ಅವಕಾಶ ನೀಡಲಾಗಿದೆ' ಎಂದು ಖಂಡ್ರೆ ತಿಳಿಸಿದರು.

ಈ ಗಡುವಿನ ನಂತರವೂ ವನ್ಯಜೀವಿಗಳ ಅಂಗಾಂಗದ ಆಭರಣ ಧರಿಸಿದರೆ, ಅಘೋಷಿತ ಟ್ರೋಫಿ ಇತ್ಯಾದಿ ಹೊಂದಿದ್ದರೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಎಚ್ಚರಿಕೆ ನೀಡಿದರು.

ಬುಧವಾರ, ಜನವರಿ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 10 | ಪುಟ 20
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಬಾಟಲಿ ನೀರಿನಲ್ಲಿ ಪ್ಲಾಸ್ಟಿಕ್ ಕಣಗಳಿರುತ್ತವೆ ಎಂಬುದು ಹೊಸ ವಿಷಯವಲ್ಲ. ಆದರೆ ಈ ಮೊದಲು ಅಂದಾಜಿಸಿದ ಪ್ರಮಾಣಕ್ಕಿಂತಲೂ ನೂರು ಪಟ್ಟು ಹೆಚ್ಚಿರುತ್ತವೆ ಎಂದು ಹೊಸ ಅಧ್ಯಯನ ತಿಳಿಸಿದೆ

ಆಳ-ಅಗಲ ಲಕ್ಷದ್ವೀಪ ಪ್ರವಾಸಕ್ಕೆ ಹೊರಟಿರಾ ಅಲ್ಲಿರುವುದು 176 ಬೆಡ್‌ಗಳು ಮಾತ್ರ

ಸ್ಯಾಂಟ್ರೊ ರವಿಗೆ ಜಾಮೀನು ನಿರಾಕರಣೆ 7

ಶಾಸಕರ ಅನರ್ಹತೆ ಆದೇಶ ಇಂದು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,386 ▲	21,544 ▲	₹64,320 (ಬೆಂಗಳೂರು) ▼	₹73,800 (ಬೆಂಗಳೂರು) ▲	83.13 ▲

ವದಂತಿ ಅಲ್ಲಗಳೆದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ • ಉತ್ತಮ ಆಡಳಿತ ನೀಡಲು ಸೂಚನೆ

ಮೂವರು ಡಿಸಿಎಂ ಪ್ರಸ್ತಾವ ಇಲ್ಲ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯದಲ್ಲಿ ಇನ್ನೂ ಮೂರು ಉಪಮುಖ್ಯಮಂತ್ರಿ (ಡಿಸಿಎಂ) ಹುದ್ದೆ ಸೃಷ್ಟಿಸಬೇಕು ಎಂಬುದರ ಕುರಿತು ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ತಿಕ್ಕಾಟಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೆರೆ ಎಳೆದಿದ್ದಾರೆ. ಅಂತಹ ಪ್ರಸ್ತಾವವೇ ತಮ್ಮ ಮುಂದೆ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರು ಡಿಸಿಎಂ ಹುದ್ದೆ ಸೃಷ್ಟಿಸುತ್ತಾರೆ ಎಂಬ ವದಂತಿಯನ್ನು ಅಲ್ಲಗಳೆದರು. ಲೋಕಸಭಾ ಚುನಾವಣೆ ಬರುತ್ತಿರುವುದರಿಂದ ಸದ್ಯ ರಾಜ್ಯದಲ್ಲಿ ಉತ್ತಮ ಆಡಳಿತ ನೀಡುವುದಕ್ಕೇ ಪಕ್ಷ ಆದ್ಯತೆ ನೀಡಲಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ ಸೋಮವಾರ ರಾತ್ರಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಸಚಿವರಾದ ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ, ಕೆ.ಎನ್. ರಾಜಣ್ಣ ಭೇಟಿ ಮಾಡಿ ಸಮುದಾಯವಾರು ಡಿಸಿಎಂ ಹುದ್ದೆ ಸೃಷ್ಟಿಸುವಂತೆ ಮಾತುಕತೆ ನಡೆಸಿದ್ದರು.

ಇದರ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷರು, 'ಮೂರು ಡಿಸಿಎಂ ಹುದ್ದೆ ಸೃಷ್ಟಿಸುತ್ತಾರೆ ಎಂಬುದು ಊಹಾಪೋಹ. ಈ ಬಗ್ಗೆ ನೀವು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನೇ ಕೇಳಬೇಕು' ಎಂದು ಪ್ರತಿಕ್ರಿಯಿಸಿದ್ದಾರೆ. ಖರ್ಗೆ ಅವರ ಈ ಹೇಳಿಕೆಯು ಡಿಸಿಎಂ ಹುದ್ದೆ ಆಕಾಂಕ್ಷಿಗಳಲ್ಲಿ ತಳಮಳ ಹುಟ್ಟುಹಾಕಿದೆ.

'ಚುನಾವಣೆ ಸಂದರ್ಭದಲ್ಲಿ ಇಂತಹ ವಿಚಾರ ಬರಬಾರದು. ಸದ್ಯಕ್ಕೆ ಸರ್ಕಾರ ನಡೆಸುವ ಕಡೆಗೆ, ಸಮಸ್ಯೆಗಳ ಕಡೆಗೆ ನಾವು ಗಮನ ಕೊಡಬೇಕು. ರಾಜ್ಯದ ಜನರಿಗೆ ನೀಡಿದ ಐದು ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವ ಕಡೆಗೆ ಒತ್ತು ನೀಡಬೇಕು. ನಮ್ಮ ಗುರಿ ಮುಟ್ಟುವವರೆಗೂ ಇಂತಹದಕ್ಕೆ ಅವಕಾಶ ಕೊಡಬಾರದು' ಎಂದು ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದ್ದಾರೆ.

'ಡಿಸಿಎಂ ಸ್ಥಾನಕ್ಕೆ ಒತ್ತಾಯ ನಿರಂತರ'

ದಾವಣಗೆರೆ: ಮತ್ತಷ್ಟು ಉಪಮುಖ್ಯಮಂತ್ರಿ (ಡಿಸಿಎಂ) ಹುದ್ದೆ ಸೃಷ್ಟಿಸುವಂತೆ ಬಹುತೇಕ ಶಾಸಕರು ಹಾಗೂ ಸಚಿವರ ಬೇಡಿಕೆ ಇದೆ. ಇನ್ನಷ್ಟು ಮುಖಂಡರಿಗೆ ಡಿಸಿಎಂ ಸ್ಥಾನ ನೀಡಿದರೆ ಆಯಾ ಸಮುದಾಯದ ಮತಗಳನ್ನು ಪಡೆಯಲು ಅನುಕೂಲವಾಗುತ್ತದೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಹರಿಹರದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಡಿಸಿಎಂ ಹುದ್ದೆ ನೀಡುವಂತೆ ನಮ್ಮ ಬೇಡಿಕೆ ನಿರಂತರವಾಗಿರಲಿದೆ. ಈಗಾಗಲೇ ಈ ಕುರಿತ ಪ್ರಸ್ತಾವವನ್ನು ಪಕ್ಷದ ಹೈಕಮಾಂಡ್ ಎದುರು ಮಂಡಿಸಲಾಗಿದೆ. ಎಲ್ಲರಿಗೂ ಅಧಿಕಾರ ಹಂಚಲು ಡಿಸಿಎಂ ಹುದ್ದೆ ನೀಡುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

'ಜ.11ರಂದು ಎಲ್ಲಾ ಸಚಿವರು ನವದೆಹಲಿಗೆ ಹೋಗಲಿದ್ದೇವೆ. ಈಗಾಗಲೇ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರ ಎದುರು ಈ ಬೇಡಿಕೆಯ ಬಗ್ಗೆ ಚರ್ಚಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಒಳ ಪುಟಗಳು

ಪೀಣ್ಯ ಮೇಲ್ಸೇತುವೆ: 16ರಿಂದ ಸಂಚಾರ ನಿರ್ಬಂಧ 7

'ಆಯುರ್ವೇದ, ಅಲೋಪಥಿ ವಿದ್ಯಾರ್ಥಿಗಳಿಗೆ ಸಮಾನ ಭತ್ಯೆ ಇಲ್ಲ' 10

ಆರೋಗ್ಯ ವಿಮೆಗೆ ₹34 ಕೋಟಿ ಅನುದಾನ 5

ಅಧಿಕಾರಿಗಳ ಮನೆ, ಕಚೇರಿ ಮೇಲೆ ದಾಳಿ: ₹ 51 ಕೋಟಿ ಮೌಲ್ಯದ ಆಸ್ತಿ ಪತ್ತೆ

6 ಮಂದಿ ಮೇಲೆ 'ಲೋಕಾ' ಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಐವರು ಸರ್ಕಾರಿ ಅಧಿಕಾರಿಗಳು ಹಾಗೂ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯನ ಮನೆ, ಕಚೇರಿ, ಬೇನಾಮಿದಾರರ ಮನೆಗಳ ಮೇಲೆ ಮಂಗಳವಾರ ದಾಳಿ ಮಾಡಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ₹ 51.11 ಕೋಟಿ ಮೌಲ್ಯದ ಆಸ್ತಿಗಳನ್ನು ಪತ್ತೆಮಾಡಿದ್ದಾರೆ.

ಬೆಸ್ಕಾಂ ಮುಖ್ಯ ಪ್ರಧಾನ ವ್ಯವಸ್ಥಾಪಕ ಎಂ.ಎಲ್. ನಾಗರಾಜ್, ಲೋಕೋಪಯೋಗಿ ಇಲಾಖೆಯ ಬೆಂಗಳೂರು ಕಟ್ಟಡಗಳ ವೃತ್ತದ ಸೂಪರಿಂಟೆಂಡಿಂಗ್ ಎಂಜಿನಿಯರ್ ಎನ್. ಸತೀಶ್ ಬಾಬು, ಆನೇಕಲ್ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಂಜೇಶ್ ಬಿ., ದೇವನಹಳ್ಳಿ ತಾಲ್ಲೂಕಿನ ಕುಂದಾಣ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಡಿ.ಎಂ. ಪದ್ಮನಾಭ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ರಾಮನಗರ ವಿಭಾಗದ ಕಾರ್ಯ-ನಿರ್ವಾಹಕ ಎಂಜಿನಿಯರ್ ಸೈಯದ್ ಮುನೀರ್ ಅಹಮದ್ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕಿನ ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಎಚ್.ಎಸ್. ಸುರೇಶ್ ದಾಳಿಗೊಳಗಾದವರು.

ಆರೋಪಿಗಳು, ಅವರ ಸಂಬಂಧಿಗಳು, ಬೇನಾಮಿಯಾಗಿ ಆಸ್ತಿ ಹೊಂದಿರುವವರಿಗೆ ಸೇರಿದ 35 ಸ್ಥಳಗಳ ಮೇಲೆ ಮಂಗಳವಾರ ಬೆಳಿಗ್ಗೆ ಏಕಕಾಲಕ್ಕೆ ದಾಳಿಮಾಡಿದ್ದು, ಇಡೀ ದಿನ ಶೋಧ ನಡೆಸಲಾಗಿದೆ.

ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿವಿಧ ಜಿಲ್ಲೆಗಳ ಲೋಕಾಯುಕ್ತ ಪೊಲೀಸರು ಪಾಲ್ಗೊಂಡಿದ್ದರು. 35 ತಂಡಗಳನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು.

₹ 43 ಲಕ್ಷ ನಗದು ವಶ

ಆರು ಮಂದಿಯ ಮನೆಗಳಲ್ಲಿ ಒಟ್ಟು ₹ 43.97 ಲಕ್ಷ ನಗದನ್ನು ತನಿಖಾ ತಂಡಗಳು ವಶಕ್ಕೆ ಪಡೆದಿವೆ. ಸುರೇಶ್ ಮನೆಯಲ್ಲಿ ಅತ್ಯಧಿಕ ₹ 11.97 ಲಕ್ಷ ನಗದು ಪತ್ತೆಯಾಗಿದೆ. ಸತೀಶ್ ಬಾಬು ಮನೆಯಲ್ಲಿ ₹ 9 ಲಕ್ಷ, ಮುನೀರ್ ಅಹಮದ್ ಮನೆಯಲ್ಲಿ ₹ 8.54 ಲಕ್ಷ ನಗದು ಪತ್ತೆಯಾಗಿದೆ ಎಂದು ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹುಲಿ ಉಗುರು ಎಫ್‌ಎಸ್‌ಎಲ್‌ಗೆ ರವಾನೆ

ಬೆಸ್ಕಾಂನ ಸಿಜಿಎಂ ಎಂ.ಎಲ್. ನಾಗರಾಜ್ ಅವರ ಮನೆಯಲ್ಲಿ ಹುಲಿಯ ಎರಡು ಉಗುರುಗಳು ಪತ್ತೆಯಾಗಿವೆ. ಅವು 'ಸಿಂಥೆಟಿಕ್' ಉಗುರುಗಳು ಎಂದು ಅಧಿಕಾರಿಯ ಕುಟುಂಬದ ಸದಸ್ಯರು ವಾದಿಸಿದ್ದಾರೆ. ಅವುಗಳನ್ನು ವಶಕ್ಕೆ ಪಡೆದಿರುವ ತನಿಖಾ ತಂಡ, ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿದೆ.

ಪುತ್ರನ ಕೊಲೆ: ಶವ ಸಾಗಿಸುವಾಗ ಸಿಕ್ಕಿಬಿದ್ದ ತಾಯಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಾಲ್ಕು ವರ್ಷದ ಪುತ್ರನನ್ನು ಕೊಲೆ ಮಾಡಿ ಮೃತದೇಹವನ್ನು ಸೂಟ್‌ಕೇಸ್‌ಗೆ ತುಂಬಿ ಕಾರಿನಲ್ಲಿ ಗೋವಾದಿಂದ ಬೆಂಗಳೂರಿನತ್ತ ಸಾಗಿಸುತ್ತಿದ್ದ 'ಮೈಂಡ್‌ಫುಲ್ ಎ.ಐ ಲ್ಯಾಬ್' ಹೆಸರಿನ ನವೋದ್ಯಮ ಕಂಪನಿಯ ಮಹಿಳಾ ಮುಖ್ಯ ಕಾರ್ಯ-ನಿರ್ವಹಣಾಧಿಕಾರಿ (ಸಿಇಒ) ಸುಚನಾ ಸೇಠ್ (39) ಎಂಬವರನ್ನು ಐಮಂಗಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸುಚನಾ ಸೇಠ್

ಗೋವಾ ಪೊಲೀಸರ ಸೂಚನೆಯ ಮೇರೆಗೆ ಕಾರಿನ ಚಾಲಕ ಆರೋಪಿಯನ್ನು ಕರ್ನಾಟಕ ಪೊಲೀಸರಿಗೆ ಹಿಡಿದುಕೊಟ್ಟಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದ ಪೊಲೀಸರು ಹೆಚ್ಚಿನ ವಿಚಾರಣೆಗೆ ಗೋವಾಕ್ಕೆ ಕರೆದೊಯ್ದಿದ್ದಾರೆ. ಆರೋಪಿಯ ಮಗ ಚಿನ್ಮಯ್ (4) ಮೃತದೇಹವನ್ನು ಹಿರಿಯೂರು ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ. ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿರುವ 'ಮೈಂಡ್‌ಫುಲ್ ಎ.ಐ ಲ್ಯಾಬ್'ನ ಸಹಸಂಸ್ಥಾಪಕಿ ಸುಚನಾ ಸೇಠ್ ವಾರಾಂತ್ಯದಲ್ಲಿ ಗೋವಾಕ್ಕೆ ತೆರಳಿದ್ದರು.

7ನೇ ಪುಟ ನೋಡಿ

ಸಂಗೀತ ಮಾಂತ್ರಿಕ ಉಸ್ತಾದ್ ರಾಶಿದ್ ಖಾನ್ ನಿಧನ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಖ್ಯಾತ ಹಿಂದೂಸ್ತಾನಿ ಗಾಯಕ ಉಸ್ತಾದ್ ರಾಶಿದ್ ಖಾನ್ (55) ಅವರು ಮಂಗಳವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.

ಅವರು ಪ್ರಾಸ್ಟೇಟ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಎರಡು ತಿಂಗಳ ಹಿಂದೆ ಮಿದುಳಿನ ಪಾರ್ಶ್ವವಾಯುವಿನಿಂದಾಗಿ ಆರೋಗ್ಯ ಮತ್ತಷ್ಟು ಹದಗೆಟ್ಟಿತ್ತು. ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆರೋಗ್ಯದಲ್ಲಿ ಏರುಪೇರಾಗಿತ್ತು. ರಕ್ತದೊತ್ತಡವೂ ಕುಸಿಯಿತು. ಹೀಗಾಗಿ ಅವರಿಗೆ ವೆಂಟಿಲೇಟರ್ ಅಳವಡಿಸಲಾಗಿತ್ತು. ಮಧ್ಯಾಹ್ನ 3.45ರ ವೇಳೆಗೆ ಮೃತಪಟ್ಟರು.

10ನೇ ಪುಟ ನೋಡಿ

ಎದೆ ಹಾಲು ಗಂಟಲಲ್ಲಿ ಸಿಲುಕಿ ಮಗು ಸಾವು 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶಾಲಾ ಅಮೃತ ಮಹೋತ್ಸವ

ಯಲಹಂಕ: 'ಸರ್ಕಾರಿ ಶಾಲೆಯಲ್ಲಿ ಓದಿರುವ ನನಗೆ ಶಾಲೆಯ ಮಹತ್ವ ಗೊತ್ತು. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಅಂಗನವಾಡಿ, ಸರ್ಕಾರಿ ಶಾಲೆ ಮತ್ತು ಕಾಲೇಜುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ಅಳ್ಳಾಳಸಂದ್ರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು,

ಸರ್ಕಾರಿ ಶಾಲೆಗಳನ್ನು ಮುಚ್ಚುವ ಮತ್ತು ಮರೆಯುತ್ತಿರುವ ಇಂದಿನ ಪರಿಸ್ಥಿತಿಯಲ್ಲಿವೆ. ವಿದ್ಯೆ ನೀಡಿ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದ ಶಾಲೆಯ ಬಗ್ಗೆ ಕೃತಜ್ಞರಾಗಿರಬೇಕು ಎಂದು ತಿಳಿಸಿದರು.

ನಿವೃತ್ತ ಶಿಕ್ಷಕರು, ಕಾರ್ಯನಿರ್ವಹಿಸುತ್ತಿರುವ, ವರ್ಗಾವಣೆಗೊಂಡಿರುವ ಶಿಕ್ಷಕರು ಹಾಗೂ ಸಾಧಕ ಹಳೇ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅಮೃತಮಹೋತ್ಸದ ಪ್ರಯುಕ್ತ ಮಕ್ಕಳು ಹಾಗೂ ಹಳೆಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. Y/E.29/2023-24/65
ದಿನಾಂಕ: 03-01-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಮೈಸೂರು ವಿಭಾಗದ ಮೈಸೂರು-ಎಲಿಯೂರು ವಿಭಾಗದಲ್ಲಿ ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್‌ನಲ್ಲಿ 66KV/25KV ಟ್ರಾಕ್ಷನ್ ಸಬ್ ಸ್ಟೇಷನ್, ಫೀಡಿಂಗ್ ಪೋಸ್ಟ್ ಮತ್ತು ಷಂಟ್ ಕೆಪಾಸಿಟರ್ ಬ್ಯಾಂಕ್‌ನ ವಿನ್ಯಾಸ, ಸರಬರಾಜು, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ.	ರೂ. 6,79,98,550.92

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25-01-2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನೀಯರ್ ಮೈಸೂರು

PUB/612/AAV/PRB/SWR/2023-24

South Western Railway-SWR | SWRRLY | SWRRLY

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ • ಮಂಗಳವಾದ್ಯ ಪುಸ್ತಕ ಬಿಡುಗಡೆ

'ದೇವರು ಗುಡಿಗಷ್ಟೇ ಸೀಮಿತವಾಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವಸ್ಥಾನದಲ್ಲಿ ಮಾತ್ರ ದೇವರು ಇದ್ದಾನೆ ಎನ್ನುವುದು ಸರಿಯಲ್ಲ. ಎಲ್ಲಾ ಕಡೆಯೂ ದೇವರಿದ್ದಾನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ರಾಜ್ಯ ಸವಿತಾ ಸಮಾಜ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎಂ.ಎಸ್. ಮುತ್ತುರಾಜ್ ಅವರ 'ಮಂಗಳವಾದ್ಯ' ಪುಸ್ತಕ ಬಿಡುಗಡೆಮಾಡಿ, ಮಾತನಾಡಿದರು.

'ದೇವರು ಇದ್ದಾನೆ. ದುಡ್ಡು ಇರುವವರು ಆತನಿಗೆ ದೇವಸ್ಥಾನ ಮಾಡುತ್ತಾರೆ. ಆದ್ದರಿಂದಲೇ ಬಸವಾದಿ ಶರಣರು 'ಉಳ್ಳವರು ಶಿವಾಲಯ ಮಾಡುವರಯ್ಯ ನಾನೇನು ಮಾಡಲಿ ಬಡವನಯ್ಯ...' ಎಂದು ಹೇಳಿದ್ದಾರೆ. ನಾರಾಯಣ ಗುರುಗಳು 'ಒಂದೇ ಜಾತಿ-ಒಂದೇ ಮತ-ಒಂದೇ ದೇವರು' ಎಂದಿದ್ದರು. ಧರ್ಮದ ಹೆಸರಲ್ಲಿ, ಜಾತಿಯ ಹೆಸರಲ್ಲಿ ಮುಸ್ಲಿಂರು, ದಲಿತರು, ಶೂದ್ರರು ಹಾಗೂ ಶ್ರಮಿಕ ವರ್ಗದವರನ್ನು ದ್ವೇಷಿಸುವುದು ಅತ್ಯಂತ ಅಮಾನವೀಯವಾದ ಕೆಟ್ಟ ನಡವಳಿಕೆ' ಎಂದರು.

'ಮುತ್ತುರಾಜ್ ಅವರು ನನಗೂ ಒಮ್ಮೆ ಕ್ಷೌರ ಮಾಡಿದ್ದಾರೆ. ಅವರು ತಾನು ಕ್ಷೌರಿಕ ಎಂದು ಹೆಮ್ಮೆಯಿಂದ ಹೇಳುತ್ತಾರೆ. ವೃತ್ತಿ ಗೌರವವನ್ನು ಎತ್ತಿ ಹಿಡಿಯುತ್ತಿದ್ದಾರೆ. ಸಮಾಜದಲ್ಲಿ ನಾವು ಯಾವುದೇ ವೃತ್ತಿ ಮಾಡಿದರೂ ಅದು ಕಾಯಕ. ಯಾವುದೇ ಕಾಯಕಕ್ಕೆ ಮೇಲು-ಕೀಳೆಂಬ ಭೇದ ಭಾವವಿಲ್ಲ.

ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಸಿದ್ದರಾಮಯ್ಯ ಅವರು ಡೋಲು ಬಾರಿಸಿ ಉದ್ಘಾಟಿಸಿದರು.₹ಕರ್ನಾಟಕ ರಾಜ್ಯ ಸವಿತಾ ಸಮಾಜದ ಅಧ್ಯಕ್ಷ ಕಿರಣ್ ಕುಮಾರ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮಾಜಿ ಸಚಿವ ಎಚ್.ಎಂ.ರೇವಣ್ಣ ಹಾಗೂ₹ಎಂ.ಎಸ್. ಮುತ್ತುರಾಜ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರತಿಯೊಬ್ಬರೂ ಕಾಯಕ ಮಾಡಬೇಕು' ಎಂದು ಹೇಳಿದರು.

ರಾಷ್ಟ್ರಪತಿಗೆ ಅವಕಾಶ ನಿರಾಕರಣೆ: ಕವಿ ಎಲ್.ಎನ್. ಮುಕುಂದರಾಜ್, 'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆದಿವಾಸಿ ಜನಾಂಗಕ್ಕೆ ಸೇರಿದ್ದಾರೆ, ವಿಧವೆ ಎಂಬ ಕಾರಣಕ್ಕೆ ನೂತನ ಸಂಸತ್ ಭವನವನ್ನು ಅವರಿಂದ ಉದ್ಘಾಟಿಸಲಿಲ್ಲ. ಈಗ ರಾಮ ಮಂದಿರವನ್ನು ಅವರಿಂದ ಉದ್ಘಾಟಿಸುವುದಿಲ್ಲ. ನಮ್ಮ ಮನಸ್ಸಿನ ಒಳಗೆ ಜಾತಿಯತೆ ಇದೆ. ನಾವು ಅಕ್ಷತೆಯನ್ನು ತಲೆಯ ಮೇಲೆ ಹಾಕಿಕೊಂಡು 'ಜೈ ಶ್ರೀರಾಮ್' ಎಂದು ಕುಣಿತುಕೊಂಡಿದ್ದೇವೆ. ನಮ್ಮ ಬುಡಕ್ಕೆ ಬೆಂಕಿ ಬಿದ್ದಾಗ ಮಾತ್ರ ಧಿಕ್ಕರಿಸುತ್ತೇವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಈ ದೇಶವನ್ನು ಸರಿಯಾಗಿ ಕಟ್ಟಿದವರು ಕೆಳಜಾತಿಯವರು. ರಾಮಾಯಣ ಬರೆದ ವಾಲ್ಮೀಕಿ ಬೇಡರ ಜಾತಿಯವರಾಗಿದ್ದಾರೆ. ಆದರೆ, ಆ ಜಾತಿಯವರಿಗೆ ರಾಮಾಯಣ ಓದಲು ಅವಕಾಶ ಇರಲಿಲ್ಲ. ವ್ಯಸ್ತ ಜನಾಂಗಕ್ಕೆ ಸೇರಿದ ವ್ಯಾಸ ಅವರು ಮಹಾಭಾರತ ಬರೆದರು. ಕುರುಬ ಜನಾಂಗಕ್ಕೆ ಸೇರಿದ ಕಾಳಿದಾಸ ಶ್ರೇಷ್ಠ ಕವಿಯಾದರು. ದಲಿತ ಜನಾಂಗದಲ್ಲಿ ಹುಟ್ಟಿದ ಅಂಬೇಡ್ಕರ್ ಅವರು ಸಂವಿಧಾನ ಬರೆದರು. ಮೇಲ್ಜಾತಿಗೆ ಸೇರಿದವರು ಸಂವಿಧಾನ ರಚಿಸಿದ್ದರೆ ಅದು ಮನುಧರ್ಮ ಶಾಸ್ತ್ರದಂತೆ ಇರುತ್ತಿತ್ತು' ಎಂದು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕ: 'ಮಂಗಳವಾದ್ಯ'
ಪುಟಗಳು: 232
ಬೆಲೆ: ₹ 250
ಲೇಖಕ ಹಾಗೂ ಪ್ರಕಾಶಕರು: ಎಂ.ಎಸ್. ಮುತ್ತುರಾಜ್

'ಜಾತಿ ಗಣತಿ ವರದಿಗೆ ಕಾಲಾವಕಾಶ'

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಮಾತನಾಡುತ್ತಿರುವ ವೇಳೆ ಸಭಿಕರೊಬ್ಬರು ಹಿಂದುಳಿದ ವರ್ಗಗಳ ಆಯೋಗ ಸಿದ್ಧ ಪಡಿಸಿದ್ದ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿ ಬಿಡುಗಡೆಗೆ ಆಗ್ರಹಿಸಿದರು. ಇದಕ್ಕೆ ಸ್ಪಂದಿಸಿದ ಸಿದ್ದರಾಮಯ್ಯ, 'ಜಾತಿ ಗಣತಿ ವರದಿ ಸಲ್ಲಿಕೆಗೆ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಎರಡು ತಿಂಗಳು ಕಾಲಾವಕಾಶ ಕೇಳಿದ್ದಾರೆ. ಅವರು ವರದಿ ಸಲ್ಲಿಸಿದ ಬಳಿಕ ಸ್ವೀಕಾರ ಮಾಡುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ತಂತ್ರಜ್ಞಾನ ಓದಿ

ಸುದ್ದಿ 2 ನಿಮಿಷ

ಬಿಎಂಟಿಸಿ ನೌಕರರಿಂದ ದೂರು: ಸತ್ಯವತಿ ವರ್ಗ

ಬೆಂಗಳೂರು: ಬಿಎಂಟಿಸಿ ಸಿಬ್ಬಂದಿಯ ಅಹವಾಲುಗಳಿಗೆ ಸ್ಪಂದಿಸಿಲ್ಲ ಎಂಬ ಕಾರಣಕ್ಕೆ ವ್ಯವಸ್ಥಾಪಕ ನಿರ್ದೇಶಕಿ ಯಾಗಿದ್ದ ಜಿ. ಸತ್ಯವತಿ ಅವರನ್ನು ಹುದ್ದೆ ತೋರಿಸದೇ ವರ್ಗಾವಣೆ ಮಾಡಲಾಗಿದೆ. ಈ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಬಿಬಿಎಂಪಿ ವಿಶೇಷ ಆಯುಕ್ತ (ಚುನಾವಣೆ) ಆರ್. ರಾಮಚಂದ್ರನ್ ಅವರಿಗೆ ನೀಡಲಾಗಿದೆ.

'ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಜೊತೆಗೆ ಸತ್ಯವತಿ ಅವರು ಉತ್ತಮ ಸಂಬಂಧ ಹೊಂದಿರಲಿಲ್ಲ. ಈ ಕಾರಣಕ್ಕೆ ಅವರನ್ನು ವರ್ಗಾವಣೆ ಮಾಡಲಾಗಿದೆ' ಎಂದು ಫೆಡರೇಷನ್‌ನ ಪ್ರಮುಖರೊಬ್ಬರು ಹೇಳಿದರು.

2023ರ ಡಿ. 24ರಂದು ಸತ್ಯವತಿ ಅವರಿಗೆ ಪತ್ರವೊಂದನ್ನು ಬರೆದಿದ್ದ ಫೆಡರೇಷನ್, ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತು. ಅದೇ ಕಾರಣಕ್ಕೆ 100 ಎಲೆಕ್ಟ್ರಿಕ್ ಹವಾ ನಿಯಂತ್ರಿತವಲ್ಲದ ಬಸ್‌ಗಳಿಗೆ ಚಾಲನೆ ನೀಡುವ ಕಾರ್ಯಕ್ರಮವನ್ನೂ ಬಹಿಷ್ಕರಿಸಿತ್ತು. ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತ್ ಸುಬ್ಬರಾವ್ ಮಾತನಾಡಿ, 'ಸತ್ಯವತಿ ಅವರು ಒಂದು ಬಾರಿಯೂ ಸಂಘದ ಪ್ರತಿನಿಧಿಗಳನ್ನು ಭೇಟಿ ಮಾಡಿಲ್ಲ. ಬಿಎಂಟಿಸಿ ನೌಕರರ ಜೊತೆ ಸಂವಾದ ನಡೆಸಿಲ್ಲ. ಅವರನ್ನು ಬದಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ಸಲ್ಲಿಸಲಾಗಿತ್ತು.

ಶಕ್ತಿ ಇವಾಹ್: ಅಂತರರಾಷ್ಟ್ರೀಯ ತಂತ್ರಜ್ಞಾನ ಕಾರ್ಯಾಗಾರ

ಯಲಹಂಕ: ವಿದ್ಯುತ್‌ಚಾಲಿತ ವಾಹನಗಳ ಬಳಕೆಯಿಂದ ಪರಿಸರದ ಸಂರಕ್ಷಣೆಗೆ ಹಾಗೂ ಇತರೆ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಸಿ. ನಾಗರಾಜ್ ಹೇಳಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಹಾಗೂ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗಗಳ ವತಿಯಿಂದ ಆಯೋಜಿಸಿದ್ದ 'ಶಕ್ತಿ ಇವಾಹ್-2.0' ಅಂತರರಾಷ್ಟ್ರೀಯ ವಿದ್ಯುತ್ ವಾಹನ ತಂತ್ರಜ್ಞಾನ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

ಟಾಟಾ ಎಲೆಕ್ಸಿ ಸಂಸ್ಥೆಯ ಹಿರಿಯ ತಾಂತ್ರಿಕ ನಿರ್ವಾಹಕ ಗೋಪಿನಾಥ್ ಸೆಲ್ವರಾಜ್, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಎಸ್. ದಾಸಪ್ಪ, ಸಂಸ್ಥೆಯ ಅಕಾಡೆಮಿಕ್ ಡೀನ್ ವಿ. ಶ್ರೀಧರ್, ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಪ್ರಮೀಳಾ ಮನೋಹರ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಕಪಿಲನ್ ಉಪಸ್ಥಿತರಿದ್ದರು.

ಘನ ತ್ಯಾಜ್ಯ ವಿಲೇವಾರಿ: ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಿಲೇವಾರಿಯಲ್ಲಿನ ಲೋಪಗಳ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿರುವ ಲೋಕಾಯುಕ್ತರು, ನಗರದ ವಿವಿಧ ಸ್ಥಳಗಳಿಗೆ ಮಂಗಳವಾರ ದಿಢೀರ್ ಭೇಟಿನೀಡಿ ಪರಿಶೀಲನೆ ನಡೆಸಿದರು.

'ನಗರದ ವಿವಿಧೆಡೆ ರಸ್ತೆ ಬದಿಯಲ್ಲಿ, ಖಾಲಿ ನಿವೇಶನಗಳಲ್ಲಿ ಘನ ತ್ಯಾಜ್ಯವನ್ನು ತಂದು ಸುರಿದು ಹೋಗುತ್ತಿರುವುದು ಹೆಚ್ಚುತ್ತಿರುವ ಬಗ್ಗೆ ಸಾರ್ವಜನಿಕರಿಂದ ಲೋಕಾಯುಕ್ತಕ್ಕೆ ವ್ಯಾಪಕ ದೂರುಗಳು ಬರುತ್ತಿವೆ. ನಗರದಲ್ಲಿ ತ್ಯಾಜ್ಯ ವಿಲೇವಾರಿಯಲ್ಲಿನ ಲೋಪಗಳ ಬಗ್ಗೆಯೂ ದೂರುಗಳು ಬಂದಿವೆ. ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಲಾಗಿದೆ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತಿಳಿಸಿದರು.

ನಗರದ ಉತ್ತರ ಭಾಗದ ಹೆಬ್ಬಾಳ, ಎಂ.ಎಸ್. ಪಾಳ್ಯ, ಯಲಹಂಕ ಮತ್ತು ಸುತ್ತಮುತ್ತಲಿನ ಹತ್ತಕ್ಕೂ ಹೆಚ್ಚು ಸ್ಥಳಗಳಿಗೆ ಮಂಗಳವಾರ ಮಧ್ಯಾಹ್ನ ದಿಢೀರ್ ಭೇಟಿನೀಡಿದ ಲೋಕಾಯುಕ್ತರು, ಘನ ತ್ಯಾಜ್ಯ ವಿಲೇವಾರಿ ಕುರಿತು ಪರಿಶೀಲಿಸಿದರು. ಬಹುತೇಕ ಸ್ಥಳಗಳಲ್ಲಿ ರಸ್ತೆ ಬದಿ ಬಿದ್ದಿದ್ದ ಘನ ತ್ಯಾಜ್ಯದ ರಾಶಿಗಳನ್ನು ತಕ್ಷಣ ತೆರವುಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

'ಪಾಲಿಕೆಯ ಜಂಟಿ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ಘನ ತ್ಯಾಜ್ಯ ವಿಲೇವಾರಿ ವಿಭಾಗದ ಅಧಿಕಾರಿ, ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿಕೊಂಡು ಪರಿಶೀಲಿಸಲಾಗಿದೆ. ಇಂದೋರ್ ಮಾದರಿಯಲ್ಲಿ ಹಸಿ ಮತ್ತು ಒಣ ಕಸ ಸಂಗ್ರಹ ಡಬ್ಬಿಗಳನ್ನು ರಸ್ತೆಯ ಬದಿಗಳಲ್ಲಿ ಇರಿಸುವ ಕುರಿತು ಅಧ್ಯಯನ ನಡೆಸುವಂತೆ ಸೂಚಿಸಲಾಗಿದೆ' ಎಂದು ಲೋಕಾಯುಕ್ತರು ತಿಳಿಸಿದರು.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ಬೆಂಗಳೂರು ದಕ್ಷಿಣ ಭಾಗದ ಆಸ್ಟಿನ್ ಟೌನ್, ಆನೆಪಾಳ್ಯ, ನಿಮ್ಹಾನ್ಸ್ ಆಸ್ಪತ್ರೆ, ಸಂಜಯ ಗಾಂಧಿ ಆಸ್ಪತ್ರೆ ಆವರಣಕ್ಕೆ ಭೇಟಿನೀಡಿ ಪರಿಶೀಲಿಸಿದರು. ಬನಶಂಕರಿ ಆರನೇ ಹಂತದಲ್ಲಿರುವ ಲಿಂಗಧೀರನಹಳ್ಳಿಯ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿನೀಡಿ, ಅಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸ್ಥಳೀಯರ ಅಹವಾಲು ಆಲಿಸಿದರು.

ಬೆಂಗಳೂರಿನ ಹೆಬ್ಬಾಳದ ಬಳಿ ರಸ್ತೆ ಬದಿ ಘನ ತ್ಯಾಜ್ಯ ಸುರಿದಿರುವ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು.

ಹೋಟೆಲ್ ರೇಟಿಂಗ್: 7.76 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಆ್ಯಪ್‌ನಲ್ಲಿ ಹೋಟೆಲ್‌ಗಳಿಗೆ ರೇಟಿಂಗ್ ಕೊಡುವ ಮೂಲಕ ಆದಾಯ ಗಳಿಸಬಹುದು ಎನ್ನುವ ಟೆಲಿಗ್ರಾಂ ಜಾಹೀರಾತು ನಂಬಿ ನಗರದ ಸೈಯದ್ ಅಮೀನುಲ್ಲಾ ಉಸ್ಸೈನಿ ಎನ್ನುವವರು ₹ 7.76 ಲಕ್ಷ ಕಳೆದುಕೊಂಡಿದ್ದಾರೆ. ಈ ಬಗ್ಗೆ ಅವರು ನಗರದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನೋಂದಣಿ ಬಳಿಕ ನನ್ನನ್ನು ಟೆಲಿಗ್ರಾಂ ಗುಂಪಿಗೆ ಸೇರಿಸಿದರು. ಆರಂಭದಲ್ಲಿ ನಾವು ಹೂಡಿಕೆ ಮಾಡಿದ ಹಣಕ್ಕೆ ಆದಾಯ ಸಹ ನೀಡಿದರು.

ನಂತರ ಮೂರು ಟಾಸ್ಕ್ ಪೂರ್ಣಗೊಳಿಸಿದರೆ ಒಮ್ಮೆಯೇ ಹಣ ಡ್ರಾ ಮಾಡಲು ಅವಕಾಶ ನೀಡಲಾಗುವುದು ಎಂದು ಹೇಳಿದದರು. ಅವರ ಮಾತು ನಂಬಿ ಹಂತ ಹಂತವಾಗಿ ಒಟ್ಟು ₹ 7.76 ಲಕ್ಷವನ್ನು ಅವರು ಹೇಳಿದ ಖಾತೆಗಳಿಗೆ ಜಮೆ ಮಾಡಿದೆವು. ನಮ್ಮ ಖಾತೆಯಲ್ಲಿ ಈ ಹಣಕ್ಕೆ ಉತ್ತಮ ಆದಾಯ ಬಂದಂತೆ ತೋರಿಸುತ್ತಿತ್ತು. ಆದರೆ ಡ್ರಾ ಮಾಡಲು ಅವಕಾಶ ಇರಲಿಲ್ಲ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ ಕಾಂಪ್ಲೆಕ್ಸ್, ಉಪ್ಪಾರಪೇಟೆ ಪೊಲೀಸ್ ಠಾಣೆ ಹಿಂಭಾಗ, ಬೆಂಗಳೂರು-560 009.

ಸಂಖ್ಯೆ:ಕಾಪಾಅ/ಗಾಂಧಿನಗರ/ಟೆಂಡರ್/ಇ-ಪ್ರೊಕ್/05/2023-24 ದಿನಾಂಕ:09.01.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಬಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ದರ್ಜೆ-1 ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ-4)

ಕಾಮಗಾರಿಯ ಹೆಸರು	ಇಎಂಡಿ (₹. ಲಕ್ಷಗಳಲ್ಲಿ)
ಗಾಂಧಿನಗರ ಕ್ಷೇತ್ರದಲ್ಲಿ ಸಿಸಿ ರಸ್ತೆ, ಚರಂಡಿ, ಕಲ್ವರ್ಟ್, ಡಾಂಬರೀಕರಣ, ಪಾದಚಾರಿಮಾರ್ಗಗಳಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಒದಗಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (122, 123, 124, 125, 126, 127, 128) ಪ್ಯಾಕೇಜ್-01	36.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 12.01.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 31.01.2024ರ ಸಂಜೆ 4:00 ಗಂಟೆವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ಪಶ್ಚಿಮ) ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ದಿನಾಂಕ 18.01.2024ರ ಬೆಳಿಗ್ಗೆ 11:00 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗದಲ್ಲಿ ದಿನಾಂಕ 02.02.2024ರ ಮಧ್ಯಾಹ್ನ 12:30 ಗಂಟೆಗೆ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

12ಕ್ಕೆ ಅಶ್ವಿನಿ ಗುರೂಜಿ ಪ್ರವಚನ

ಪ್ರಜಾವಾಣಿ ವಾರ್ತೆ

ಅಶ್ವಿನಿ ಗುರೂಜಿ

ಬೆಂಗಳೂರು: ಗೋವುಗಳ ಸಂರಕ್ಷಣೆ, ಪಾಲನೆ ಪೋಷಣೆ ಸೇರಿದಂತೆ ಹಲವು ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿರುವ ಧ್ಯಾನ್ ಆಶ್ರಮದ ಅಶ್ವಿನಿ ಗುರೂಜಿ ಅವರು ಇದೇ 12ರಂದು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ.

12ರಂದು ಸಂಜೆ 5.30ರಿಂದ ರಾತ್ರಿ 8ರವರೆಗೆ ಗಾಂಧಿನಗರದ 2ನೇ ಮುಖ್ಯರಸ್ತೆಯಲ್ಲಿರುವ ತೇರಾಪಂಥ್ ಭವನದಲ್ಲಿ ಪ್ರವಚನ ನೀಡಲಿದ್ದಾರೆ. ಅಲ್ಲಿಯೇ ಸಾರ್ವಜನಿಕರು ಅವರನ್ನು ಭೇಟಿಯಾಗಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ, ಮೊ: 9448335830, 08722555573 ಮತ್ತು www.dhyanfoundation.com ಜಾಲತಾಣಕ್ಕೆ ಭೇಟಿ ನೀಡಬಹುದು.

ಅಶ್ವಿನಿ ಗುರೂಜಿಯವರ ಮಾರ್ಗದರ್ಶನದಲ್ಲಿ ಧ್ಯಾನ್ (ಆಶ್ರಮ) ಪ್ರತಿಷ್ಠಾನ ದೇಶದಾದ್ಯಂತ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಪತಂಜಲಿ ಮಹರ್ಷಿಗಳ ಸನಾತನ ಅಷ್ಟಾಂಗ ಯೋಗದ ಕಲಿಕೆ, ಗೋವುಗಳ ಸಂರಕ್ಷಣೆ ಕೆಲಸ ಮಾಡುತ್ತಿದೆ. ಪ್ರತಿಷ್ಠಾನ ದೇಶದಾದ್ಯಂತ ಶಾಖೆಗಳನ್ನು ಹೊಂದಿದೆ.

ರಾಜ್ಯದ ಮಂಡ್ಯ, ತುಮಕೂರು ಜಿಲ್ಲೆ ಹಾಗೂ ಹುಬ್ಬಳ್ಳಿಯಲ್ಲಿ ಸುಮಾರು 1800 ಗೋವುಗಳನ್ನು ಪೋಷಿಸಲಾಗುತ್ತಿದೆ. ರಾಷ್ಟ್ರಾದ್ಯಂತ 50,000ಕ್ಕೂ ಹೆಚ್ಚು ಪರಿತ್ಯಕ್ತ ಗೋವಿನ ಸಂರಕ್ಷಣೆ ನಡೆದಿದೆ.

34 ಜಯಂತಿ: ಆಚರಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷ 34 ಜಯಂತಿಗಳನ್ನು ನಿಗದಿತ ದಿನಾಂಕಗಳಂದು ಆಚರಣೆ ಮಾಡಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ದಿನಾಂಕ ಸಹಿತ ಜಯಂತಿಗಳ ಪಟ್ಟಿಯನ್ನೂ ಬಿಡುಗಡೆ ಮಾಡಿದ್ದಾರೆ. ಜನವರಿ ತಿಂಗಳಲ್ಲಿ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ, ಶಿವಯೋಗಿ ಸಿದ್ದರಾಮ ಜಯಂತಿ, ಮಹಾಯೋಗಿ ವೇಮನ ಜಯಂತಿ, ಅಂಬಿಗರ ಚೌಡಯ್ಯ ಜಯಂತಿ ನಡೆಯಲಿದೆ. ಫೆಬ್ರವರಿ ತಿಂಗಳಲ್ಲಿ ಮಡಿವಾಳ ಮಾಚಿದೇವ ಜಯಂತಿ, ಕಾಯಕ ಶರಣರ ಜಯಂತಿ, ಸಂತ ಸೇವಾಲಾಲ್ ಜಯಂತಿ, ಸವಿತಾ ಮಹರ್ಷಿ ಜಯಂತಿ, ಛತ್ರಪತಿ ಶಿವಾಜಿ ಜಯಂತಿ, ಸಂತ ಕವಿ ಸರ್ವಜ್ಞ ಜಯಂತಿ ಆಚರಿಸಲಾಗುತ್ತದೆ.

ಮಾರ್ಚ್ ತಿಂಗಳಲ್ಲಿ ರೇಣುಕಾಚಾರ್ಯ ಜಯಂತಿ, ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ), ಅಗ್ನಿಬನ್ನಿರಾಯ ಜಯಂತಿ, ಏಪ್ರಿಲ್ ತಿಂಗಳಲ್ಲಿ ದೇವರ ದಾಸಿಮಯ್ಯ ಜಯಂತಿ, ಭಗವಾನ್ ಮಹಾವೀರ ಜಯಂತಿ, ಅಕ್ಕಮಹಾದೇವಿ ಜಯಂತಿ, ಮೇ ತಿಂಗಳಲ್ಲಿ ಬಸವ ಜಯಂತಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ, ಶಂಕರಾಚಾರ್ಯ ಜಯಂತಿ, ಭಗೀರಥ ಜಯಂತಿ, ಜೂನ್ ತಿಂಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ, ಕೆಂಪೇಗೌಡ ಜಯಂತಿ, ಜುಲೈ ತಿಂಗಳಲ್ಲಿ ಫ.ಗು. ಹಳಕಟ್ಟಿಯವರ ಜನ್ಮದಿನ ಪ್ರಯುಕ್ತ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ, ಹಡಪದ ಅಪ್ಪಣ್ಣ ಜಯಂತಿ ಆಚರಿಸಲಾಗುತ್ತದೆ.

ಆಗಸ್ಟ್ ತಿಂಗಳಲ್ಲಿ ನುಲಿಯ ಚಂದಯ್ಯ ಜಯಂತಿ, ಬ್ರಹ್ಮಶ್ರೀ ನಾರಾಯಣಗುರು ಜಯಂತಿ, ಕೃಷ್ಣ ಜಯಂತಿ, ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವಕರ್ಮ ಜಯಂತಿ, ಅಕ್ಟೋಬರ್ ತಿಂಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ನವೆಂಬರ್ ತಿಂಗಳಲ್ಲಿ ಒನಕೆ ಓಬವ್ವ ಜಯಂತಿ, ಕನಕ ಜಯಂತಿ ಹಾಗೂ ಡಿಸೆಂಬರ್ ತಿಂಗಳಲ್ಲಿ ವಿಶ್ವಮಾನವ ದಿನಾಚರಣೆ ಆಚರಿಸಲಾಗುತ್ತದೆ.

ರಾಜ್ಯಮಟ್ಟದ ಚೆಸ್ ಪಂದ್ಯಾವಳಿ

ಬೆಂಗಳೂರು: ಯುನಿವರ್ಸಲ್ ಫಸ್ಟ್ ಏಜ್ ರಾಜ್ಯಮಟ್ಟದ ಮಕ್ಕಳ ಚೆಸ್ ಪಂದ್ಯಾವಳಿ ನಡೆಯಿತು.

ರಾಮೋಹಳ್ಳಿಯ ಗುರುರಾಯನಪುರದ ಬಳಿ ಇರುವ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಕಾಲೇಜಿನಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿ ನಿಸ್ಟ್ರೇಷನ್ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಮತ್ತು ಪತ್ರಕರ್ತ ಸುದರ್ಶನ ಚನ್ನಂಗಿಹಳ್ಳಿ ಭಾಗವಹಿಸಿ, ಮಾತನಾಡಿದರು.

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ ಅರವಿಂದ ಶಾಸ್ತ್ರಿ, ಕೆಡಿಸಿಎ ಸಂಸ್ಥಾಪಕ ಅಧ್ಯಕ್ಷ ಜಯಪಾಲ ಚಂದಾಡಿ, ಬೆಂಗಳೂರು ನಗರ ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷೆ ಸೌಮ್ಯ ಎಂ.ವಿ., ಭಾಗವಹಿಸಿದ್ದರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/06/2023-24 ದಿನಾಂಕ: 05-01-2024

ಸಾರ್ವಜನಿಕ ಪ್ರಕಟಣೆ

ವಿಷಯ: **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.**

ಅರ್ಜಿದಾರರು ಹಾಗೂ ಜಮೀನಿನ ಮಾಲೀಕರಾದ **ಶ್ರೀ ಎಸ್. ಮುರಳಿ ಬಿನ್ ಶಾಮಣ್ಣ ರೆಡ್ಡಿ** ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಸ.ನಂ. 157/1 ರಲ್ಲಿನ 01 ಎಕರೆ ವಿಸ್ತೀರ್ಣದ ಜಮೀನನ್ನು **ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಕೃಷಿ ವಲಯಕ್ಕೆ ಕಾಯ್ದಿರಿಸಲಾಗಿರುವ** ಪ್ರಸ್ತಾಪಿತ ಜಮೀನು ಮಹಾನಗರ ಪಾಲಿಕೆಯಿಂದ 05 ಕಿ.ಮೀ. ದೂರದಲ್ಲಿದ್ದು, ಅನುಮೋದಿತ ಬಡಾವಣೆಗೆ ಹೊಂದಿಕೊಂಡಿರುತ್ತದೆ ಹಾಗೂ ಇಲ್ಲಿ ಬಡಾವಣೆ ನಿರ್ಮಾಣ ಮಾಡುವುದರಿಂದ ಮಧ್ಯಮ ವರ್ಗದವರಿಗೆ ಅನುಕೂಲಕರವಾಗಿರುತ್ತದೆ ಹಾಗೂ ಸ್ಥಳೀಯರಿಗೆ ಸ್ಥಳೀಯವಾಗಿ, ಸಣ್ಣ-ಪುಟ್ಟ ವ್ಯಾಪಾರಸ್ಥರಿಗೂ, ರೈತರಿಗೂ ಉದ್ಯೋಗ ಕಲ್ಪಿಸಿದಂತಾಗುತ್ತದೆ. ಈ ರೀತಿ ಅಂಶಗಳು ಈ ಬಡಾವಣೆಯನ್ನು ಅಭಿವೃದ್ಧಿ ಪಡಿಸುವುದರಿಂದ ಅನುಕೂಲಕರವಾಗಿರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2965/ಅಡ್ವರ್ಟೋರ್/2023-24

ನಗರದಲ್ಲಿ ಇಂದು

ಕನ್ನಡ ಭಾಷಾ ಕಾರ್ಯಾಗಾರ: **ಉದ್ಘಾಟನೆ:** ಆನಂದರಾಜ್ ಎ., 'ಕನ್ನಡ ಭಾಷಾ ಬೋಧನೆಯ ಸವಾಲುಗಳು' ಕುರಿತು ಉಪನ್ಯಾಸ: ರಹಮತ್ ತರೀಕೆರೆ, ಅತಿಥಿ: ಆರ್. ರಾಜಗೋಪಾಲ್, 'ನೂತನ ಮಾದರಿ ಪ್ರಶ್ನೆ ಪತ್ರಿಕೆ ನೀಲನಕ್ಷೆ ಅನ್ವಯಿಕತೆ' ಕುರಿತು ಉಪನ್ಯಾಸ: ನೀರಜ ಸಿ.ಬಿ., ಕೆಂಪೇಗೌಡ, ಅಧ್ಯಕ್ಷತೆ: ರೂಪಶ್ರೀ ಆರ್., ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ಬಿ.ವಿ. ರತ್ನಯ್ಯಶೆಟ್ಟಿ ಸಭಾಂಗಣ, ವಿ.ಇ.ಟಿ ಸಂಸ್ಥೆ, ಜೆ.ಪಿ. ನಗರ, ಬೆಳಿಗ್ಗೆ 9.30



ರಹಮತ್ ತರೀಕೆರೆ

ರಾಜ್ಯಮಟ್ಟದ ಶೈಕ್ಷಣಿಕ ಸಮಾವೇಶ: **ಭಾಷಣಕಾರರು:** ಎ. ಮುರಿಗೆಪ್ಪ, ತರುಣಕಾಂತಿ ನಸ್ಕರ್, ಆರ್.ಎಲ್. ಮೌರ್ಯನ್, ವಿಕ್ಟರ್ ಲೋಬೊ, ಫ್ರಾನ್ಸಿಸ್ ಅಸ್ಸಿಸಿ ಅಲ್ಮೇಡಾ, ಅಬ್ದುಲ್ ಸುಬಾನ್, ಸವಿತಾ ಬನ್ನಾಡಿ, ಟಿ.ಎಂ. ಮಂಜುನಾಥ್, ತಮ್ಮಯ್ಯ, ಮಹೇಶ ಎಸ್.ಬಿ., ಅಧ್ಯಕ್ಷತೆ: ಅಲ್ಲಪ್ರಭು ಬೆಟ್ಟದೂರು, ಆಯೋಜನೆ: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸ್ಥಳ: ಗಾಂಧಿಭವನ, ಶಿವಾನಂದ ವೃತ್ತದ ಹತ್ತಿರ, ಬೆಳಿಗ್ಗೆ 10

'ಪಾಲಿಥೀನ್ ಮುಕ್ತ ಅಯೋಧ್ಯೆಯತ್ತ ನಮ್ಮ ಚಿತ್ರ'ದ ಕುರಿತು ಸಂವಾದ: ಅತಿಥಿಗಳು: ಆನಂದ ಗುರೂಜಿ, ಶ್ರೀಲಕ್ಷ್ಮಿ ರಾಜಕುಮಾರ, ರಾಮಪ್ರಸಾದ, ಜಗನ್ನಾಥ ಶಾಸ್ತ್ರಿ, ಆಯೋಜನೆ: ಪರ್ಯಾವರಣ ಸಂರಕ್ಷಣ ಗತಿವಿಧಿ ಕರ್ನಾಟಕ ದಕ್ಷಿಣ ಪ್ರಾಂತ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30ರಿಂದ

'ಕುವೆಂಪು ವಿಚಾರಗೋಷ್ಠಿ', ಜಿ.ಎನ್. ಉಪಾಧ್ಯ ಅವರ 'ಕುವೆಂಪು ವಿಚಾರ ಸಾಹಿತ್ಯ ನಿರ್ಮಾಪಕರು' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, 'ಕುವೆಂಪು ಅವರ ವೈಚಾರಿಕ ಪ್ರಜ್ಞೆ' ಕುರಿತು: ಬೈರಮಂಗಲ ರಾಮೇಗೌಡ, 'ಕುವೆಂಪು ಅವರ ಕಾವ್ಯದಲ್ಲಿ ಮಹಿಳೆ' ಕುರಿತು: ಎಲ್.ಜಿ. ಮೀರಾ, ಉಪಸ್ಥಿತಿ: ಪಾಪಣ್ಣ, ಶ್ರೀನಿವಾಸ ನಾಯಕ್, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ ಬೆಂಗಳೂರು ಜಿಲ್ಲಾ ಘಟಕ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಅರಮನೆ ರಸ್ತೆ, ಮಧ್ಯಾಹ್ನ 3

ನೃತ್ಯ ನಿರಂತರಂ: ಆಯೋಜನೆ: ಅನುಶೀಲನ್, ಸ್ಥಳ: ಸೇವಾಸದನ್, ಮಲ್ಲೇಶ್ವರ, ಸಂಜೆ 5.30

ಪ್ರವಚನ ವಾಹಿನಿ: 'ಭಗವದ್ಗೀತೆ' ಕುರಿತು ಉಪನ್ಯಾಸ: ಎಲ್.ಎಸ್. ವಾದಿರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯ ಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬೆಂಗಳೂರಿನಲ್ಲಿ ಅಡಿಗಾಸ್ ಯಾತ್ರಾ ಸಂಸ್ಥೆಯ ಪ್ರವಾಸಿ ಕೈಪಿಡಿಯನ್ನು ಬಿಡುಗಡೆಗೊಳಿಸಲಾಯಿತು

ಅಡಿಗಾಸ್ ಸಂಸ್ಥೆಯ ಪ್ರವಾಸಿ ಕೈಪಿಡಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತನ್ನ ಆದ ಛಾಪು ಮೂಡಿಸಿರುವ ಅಡಿಗಾಸ್ ಯಾತ್ರಾ ಸಂಸ್ಥೆಗೆ 30 ವಸಂತಗಳು ತುಂಬಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ಸಂಸ್ಥೆಯು ಪ್ರವಾಸಿ ಕೈಪಿಡಿಯನ್ನು ಬಿಡುಗಡೆಗೊಳಿಸಿದೆ.

ಕೇಂದ್ರ ಸರ್ಕಾರದ 'ಅನುಭವಿ ಪ್ರವಾಸಿ ಆಯೋಜಕ' ಹಾಗೂ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದ ಪ್ರತಿಷ್ಠಿತ ಸಂಸ್ಥೆಯಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ನಾಗರಾಜ ಅಡಿಗ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ www.adigasyatra.com ಅಥವಾ ಬಸವನಗುಡಿ ಶಾಖೆ 080-26616678/ 70222 59008, ರಾಜರಾಜೇಶ್ವರಿ ನಗರ: 080-26696678/74833 66378 ಸಂಪರ್ಕಿಸಬಹುದು.

ಬಿಬಿಎಂಪಿ ಆಯುಕ್ತರಿಂದ ಕೆಂಪೇಗೌಡ ಬಡಾವಣೆ ಕಾಮಗಾರಿಗಳ ಪರಿಶೀಲನೆ

ಸಂಪರ್ಕ ರಸ್ತೆ ಕಾಮಗಾರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಲ್ಲಿ, ಕೆಂಚನಪುರದಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಖ್ಯ ಸಂಪರ್ಕ ರಸ್ತೆ (ಎಂಎಆರ್) ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳಲಾದ ಪ್ರದೇಶದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮಂಗಳವಾರ ಕಾಮಗಾರಿ ಆರಂಭಿಸಿತು.

ಕನ್ನಲ್ಲಿ ಗ್ರಾಮದ ಸರ್ವೆ ನಂ. 100/1, 64/2 ಮತ್ತು 67/1 ಮತ್ತು ಕೆಂಚನಪುರ ಗ್ರಾಮದ ಸರ್ವೆ ನಂ. 17/1, 2, 3, 4 ಮತ್ತು 16/1ರಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಪ್ರದೇಶದಲ್ಲಿ ಮುಖ್ಯ ಸಂಪರ್ಕ ರಸ್ತೆ ಅಭಿವೃದ್ಧಿಪಡಿಸಲು ಬಿಡಿಎ ಯೋಜನೆ ರೂಪಿಸಿದೆ. ಆದರೆ ಸ್ಥಳೀಯ ಭೂಮಾಲೀಕರು ಭೂಪರಿಹಾರದ ನಿವೇಶನಗಳನ್ನು ಪಡೆದಿದ್ದರೂ ಈ ಪ್ರದೇಶದಲ್ಲಿ ರಸ್ತೆ ನಿರ್ಮಾಣಕ್ಕೆ ಅಡ್ಡಿ ಉಂಟು ಮಾಡುತ್ತಿದ್ದರು.

ನಾಡಪ್ರಭು ಕೆಂಪೇಗೌಡ ಬಡಾವಣೆ ಮುಖ್ಯ ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕನ್ನಲ್ಲಿ, ಕೆಂಚನಪುರದಲ್ಲಿ ಬಿಡಿಎ ಮಂಗಳವಾರ ಆರಂಭಿಸಿತು

ಬಿಡಿಎ ಆಯುಕ್ತ ಎನ್. ಜಯರಾಮ್ ಅವರು ಮುಖ್ಯ ರಸ್ತೆ, ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಡ್ಡಿಪಡಿಸುತ್ತಿದ್ದ ಭೂಮಾಲೀಕರೊಡನೆ ಸ್ಥಳದಲ್ಲಿಯೇ ಸಭೆ ನಡೆಸಿದರು. ಅವರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದಾಗಿ ಭರವಸೆ ನೀಡಿದರು.

ಬಿಡಿಎ ಆಯುಕ್ತರ ಸೂಚನೆಯಂತೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಬಾಗಿ ಅವರು ಬಿಡಿಎ ಸಿಬ್ಬಂದಿಗೆ ರಕ್ಷಣೆ ನೀಡಲು ಪೊಲೀಸರಿಗೆ ಮನವಿ ಮಾಡಿಕೊಂಡಿದ್ದರು. ಬಿಡಿಎ, ಸೋಮವಾರ ಸಂಪರ್ಕ ರಸ್ತೆ ಕಾಮಗಾರಿ ಆರಂಭಿಸಿತು. ಬಿಡಿಎ ಆರಕ್ಷಕ ಅಧೀಕ್ಷ ಕೆ. ನಂಜುಂಡೇಗೌಡ ನೇತೃತ್ವದ ಸಿಬ್ಬಂದಿ ಕುಂಬಳಗೋಡು, ತಾವರೆಕೆರೆ, ಮಾಗಡಿ ಪೊಲೀಸರೊಂದಿಗೆ ಕಾಮಗಾರಿ ನಡೆಸಲು ರಕ್ಷಣೆ ಒದಗಿಸಿದ್ದರು.

ನಾಡಪ್ರಭು ಕೆಂಪೇಗೌಡ ಬಡಾವಣೆ ಮೂಲಕ ಮಾಗಡಿ ರಸ್ತೆಯನ್ನು ಸಂಪರ್ಕಿಸುವ ಮುಖ್ಯ ಸಂಪರ್ಕ ರಸ್ತೆ ಒಟ್ಟು 10 ಕಿ.ಮೀ ಉದ್ದವಿದೆ. ಮಂಗಳವಾರ 1.5 ಕಿ.ಮೀ ಉದ್ದದ ರಸ್ತೆ ಕಾಮಗಾರಿ ಆರಂಭವಾಗಿದ್ದು, ಒಂದು ಕಿ.ಮೀ ರಸ್ತೆ ಭೂಮಿಯು ವ್ಯಾಜ್ಯ ನ್ಯಾಯಾಲಯದಲ್ಲಿದೆ ಎಂದು ಎಂಜಿನಿಯರ್ ಮಾಹಿತಿ ನೀಡಿದರು.

ಡಾಂಬರೀಕರಣ: ನಾಡಪ್ರಭು ಕೆಂಪೇಗೌಡ ಬಡಾವಣೆಯ 5, 6, 7 ಬ್ಲಾಕ್‌ಗಳಲ್ಲಿ 9ಮೀ., 12 ಮೀ., 15ಮೀ. ಅಗಲದ ರಸ್ತೆಗಳ ಡಾಂಬರೀಕರಣಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಶೀಘ್ರವಾಗಿ ಕಾಮಗಾರಿಗಳನ್ನು ಪ್ರಾರಂಭಿಸಿ ಎಲ್ಲ ಮೂಲಸೌಕರ್ಯಗಳನ್ನು ಒದಗಿಸಲು ಅಧಿಕಾರಿಗಳಿಗೆ ಜಯರಾಮ್ ಸೂಚಿಸಿದರು.

ಬಿಡಿಎ ಎಂಜಿನಿಯರಿಂಗ್ ಸದಸ್ಯ ಡಾ. ಶಾಂತರಾಜಣ್ಣ, ನಗರ ಯೋಜಕ ಸದಸ್ಯ ಎಲ್. ಶಶಿಕುಮಾರ್, ಉಪ ಆಯುಕ್ತ ಸೌಜನ್ಯ ಉಪಸ್ಥಿತರಿದ್ದರು.

‘ಸ್ಟೂಡೆಂಟ್ ಲಿಟ್ ಫೆಸ್ಟ್’ ನಾಳೆಯಿಂದ

ಬೆಂಗಳೂರು: ಯುವಕ ಸಂಘದ ಫ್ರೀ ಸ್ಪೇಸ್ ಫೋರಂ ಇದೇ 11, 12ರಂದು ಜಯನಗರದ ಯುವಪಥದಲ್ಲಿ ‘ಸ್ಟೂಡೆಂಟ್ ಲಿಟ್ ಫೆಸ್ಟ್-2024’ ಏರ್ಪಡಿಸಿದೆ.

ಸಾಹಿತ್ಯದ ಅವಲೋಕನ ಮತ್ತು ಕ್ರಿಯಾಶೀಲತೆ, ಬಹುಭಾಷಾ ಸಾಹಿತ್ಯ ಪ್ರದರ್ಶನ, ಡಿಜಿಟಲ್ ಸ್ಟೋರಿ ಟೆಲ್ಲಿಂಗ್, ಸೃಜನಶೀಲ ಬರವಣಿಗೆಗೆ ಸಂಬಂಧಿಸಿದ ಕಾರ್ಯಾಗಾರಗಳು, ಪುಸ್ತಕ ಮೇಳ ಮತ್ತು ಪ್ರದರ್ಶನ, ಪ್ರಕಾಶನದ ಭವಿಷ್ಯಕ್ಕೆ ಸಂಬಂಧಿಸಿ ಚರ್ಚೆ ನಡೆಯಲಿದೆ.

ವಿದ್ಯಾರ್ಥಿಗಳು, ಉದಯೋನ್ಮುಖ ಬರಹಗಾರರು, ಸಂಶೋಧಕರು, ವಿದ್ವಾಂಸರು, ಶಿಕ್ಷಣ ತಜ್ಞರು, ಸಾಹಿತ್ಯ ಕಾರ್ಯಕರ್ತರು, ಕಲಾವಿದರು ಮತ್ತು ಸಂಸ್ಥೆಗಳು, ಸಾಹಿತ್ಯ ಸಂಸ್ಥೆಗಳ ಪಾಲುದಾರರು, ಸಾಹಿತ್ಯ ಉತ್ಸಾಹಿಗಳು ಮತ್ತು ಪ್ರಕಾಶನ ಸಂಸ್ಥೆಗಳನ್ನು ಈ ಸಾಹಿತ್ಯ ಉತ್ಸವದಲ್ಲಿ ಪಾಲ್ಗೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಈ ಕುರಿತ ಮಾಹಿತಿಗಳಿಗೆ: 91083 08052 ಅಥವಾ studentlitfest@gmail.com ಅನ್ನು ಸಂಪರ್ಕಿಸಬಹುದು.

|| JAI SRI GURUDEV ||

BGS MCH Hospital (BGS MCH)

(Affiliated to Adichunchanagiri University)

Nagarur, Dasanapura, Bengaluru North, Bengaluru – 562123

ADICHUNCHANAGIRI UNIVERSITY

Applications are invited for upcoming Medical College with 605 Bedded Hospital at Nagarur, Bangalore North.
The College is likely to start from Academic Year 2024-25.
Following vacancies are available on Urgent Basis.

PROFESSORS / ASSOCIATE PROFESSORS / ASSISTANT PROFESSORS / SR. RESIDENTS

Anatomy	Community Medicine	General Surgery
Physiology	General Medicine	ENT
Biochemistry	Paediatrics	Ophthalmology
Pathology	Dermatology	Orthopedics
Pharmacology	Psychiatry	Dentistry
Microbiology	Anaesthesialogy	OBG
Forensic Medicine	Radiology	

Eligibility : As per NMC Norms
Salary: Attractive Salary will be given as per the experience & Eligibility

Address : Nagarur, Dasanapura, Bangalore North, Bengaluru –562123, Karnataka. E-mail : adminbgsmch@acu.edu.in

Ph : 9591187490

Note : Priority will be given Pre & Para Staff who are willing to join Immediately.

‘ನಿವೃತ್ತಿ ಬಳಿಕ ರಾಜಕೀಯ ಪ್ರವೇಶ ಸರಿಯಲ್ಲ’

ಸರ್ಕಾರಿ ನೌಕರರ ನಡೆ ಬಗ್ಗೆ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ನೌಕರರು ನಿವೃತ್ತಿಯ ಬಳಿಕ ರಾಜಕೀಯಕ್ಕೆ ಬರುತ್ತಿದ್ದಾರೆ. ಅಧಿಕಾರದ ಆಸೆಗಾಗಿ ಈ ರೀತಿಯ ನಡೆ ತಾಳುವುದು ಸರಿಯಲ್ಲ’ ಎಂದು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಸಹಕಾರದಲ್ಲಿ ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮಠದ ಹಿರಿಯ ವಿದ್ಯಾರ್ಥಿ ಹಾಗೂ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಲ್. ರೇವಣಸಿದ್ದಯ್ಯ ಅವರಿಗೆ ‘ಶ್ರೀ ಸಿದ್ಧಗಂಗಾ ಸಿರಿ’ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ.

‘ಸರ್ಕಾರಿ ನೌಕರರು 30 ರಿಂದ 40 ವರ್ಷ ಸರ್ಕಾರಿ ವೇತನ ಪಡೆಯುತ್ತಾರೆ. ಇವರು ನಿವೃತ್ತಿ ಬಳಿಕ ರಾಜಕೀಯಕ್ಕೆ ಪ್ರವೇಶಿಸುವ ಬದಲು, ತಮ್ಮ ಅನುಭವವನ್ನು ಗ್ರಾಮೀಣ ಪ್ರದೇಶಗಳ ಪ್ರಗತಿಗೆ ಬಳಸುವುದು ಉತ್ತಮ’ ಎಂದರು.

‘ಇತ್ತೀಚಿನ ದಿನಗಳಲ್ಲಿ ಪ್ರಶಸ್ತಿಗಳನ್ನು ನೀಡುವವರ ಹಾಗೂ ಪಡೆಯುವವರರ ಸಂಖ್ಯೆ ಹೆಚ್ಚಳವಾಗುತ್ತಿದೆ. ಪ್ರಶಸ್ತಿಗಳನ್ನು ಕೊಡುವುದು ಹಾಗೂ ಪಡೆಯುವುದು ಕಚೇರಿಗಳ ಬಾಗಿಲುಗಳನ್ನು ಎಳೆದಂತೆ, ತಳ್ಳಿದಂತೆ ಆಗುತ್ತಿದೆ. ಕೆಲವು ಪ್ರಶಸ್ತಿಗಳಿಗೆ ಕೊಡುವವರ ಮನವೊಲಿಕೆ ನಡೆದರೆ, ಇನ್ನೂ ಕೆಲವು ಪ್ರಶಸ್ತಿಗಳಿಗೆ ಸ್ವೀಕರಿಸುವವರ ಮನವೊಲಿಸಬೇಕಾಗುತ್ತದೆ’ ಎಂದು ಹೇಳಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅವರು, ‘ಈ ನಾಡಿನಲ್ಲಿ ಶರಣ ಚಳವಳಿ ನಡೆಯದಿದ್ದರೆ ಸಮಾಜದಲ್ಲಿ ಸುಧಾರಣೆ ಸಾಧ್ಯವಾಗುತ್ತಿರಲಿಲ್ಲ. ಅನ್ನ, ಅಕ್ಷರದ ವಿಚಾರದಲ್ಲಿ ಮಠಗಳು ಮಾಡಿದಷ್ಟು ಕೆಲಸವನ್ನು ಬೇರೆ ಯಾವುದೇ ಸಂಸ್ಥೆಗಳು ಮಾಡಿಲ್ಲ. ಈ ಕಾಯಕದಲ್ಲಿ ಸಿದ್ದಗಂಗಾ ಮಠ ದೇಶಕ್ಕೆ ಮಾದರಿ. ಇದೇ ರೀತಿ, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವೈಟ್‌ಫೀಲ್ಡ್‌ನಲ್ಲಿರುವ ಶ್ರೀ ಸತ್ಯಸಾಯಿ ಆಸ್ಪತ್ರೆ ಮಾದರಿಯಲ್ಲಿಯೇ ಸಿದ್ದಗಂಗಾ ಮಠವೂ ಆಸ್ಪತ್ರೆ ನಿರ್ಮಿಸಲಿ’ ಎಂದರು.

ಪ್ರಶಸ್ತಿ ಸ್ವೀಕರಿಸಿದ ಎಲ್. ರೇವಣಸಿದ್ದಯ್ಯ, ‘ಸಿದ್ದಗಂಗಾ ಮಠವು ಪೋಷಕರಿಗೆ ಧ್ರುವತಾರೆಯಾಗಿದೆ. ಇಲ್ಲಿನ ಹಳೆಯ ವಿದ್ಯಾರ್ಥಿ ಎನ್ನಲು ನಮಗೆ ಹೆಮ್ಮೆ ಆಗುತ್ತದೆ’ ಎಂದರು.

ಕಾರ್ಯಕ್ರಮದಲ್ಲಿ ಎಲ್. ರೇವಣಸಿದ್ದಯ್ಯ– ಪತ್ನಿ ವಿನೋದ ದಂಪತಿಗೆ ‘ಶ್ರೀ ಸಿದ್ಧಗಂಗಾ ಸಿರಿ’ ಪ್ರಶಸ್ತಿಯನ್ನು ಗೊ.ರು. ಚನ್ನಬಸಪ್ಪ ಪ್ರದಾನ ಮಾಡಿದರು. ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಕಾರ್ಯದರ್ಶಿ ಕೆ.ವಿ.ನಾಗರಾಜಮೂರ್ತಿ, ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಬಿ.ಎಲ್. ಶಂಕರ್, ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹಾದೇವಯ್ಯ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ರಾಜಕಾರಣದಲ್ಲಿ ಪಶ್ಚಾತ್ತಾಪ ಪಡುತ್ತಿದ್ದೇವೆ’

‘ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ನಾನು ಹಾಗೂ ಬಿ.ಎಲ್. ಶಂಕರ್ ರಾಜಕಾರಣಕ್ಕೆ ಸೂಕ್ತರಲ್ಲ. ರಾಜಕೀಯಕ್ಕೆ ಹೇಗೋ ಬಂದಿದ್ದೇವೆ. ಈ ಕ್ಷೇತ್ರವನ್ನು ಬಿಟ್ಟು ಹೋಗಲೂ ಆಗುತ್ತಿಲ್ಲ. ಕಾನೂನು ಪದವೀಧರರಾದ ನಮ್ಮಿಬ್ಬರಿಗೂ ಈಗ ವಕೀಲ ವೃತ್ತಿ ಮಾಡಲು ಸಾಧ್ಯವಿಲ್ಲ. ಎಲ್ಲಿಗೂ ಹೋಗಲು ಸಾಧ್ಯವಾಗದಿದ್ದರಿಂದ ರಾಜಕೀಯದಲ್ಲಿ ಉಳಿದಿದ್ದೇವೆ. ಸಮಾಜ ಬದಲಾವಣೆಯಾಗುತ್ತದೆ ಎಂಬ ಆಶಾವಾದದಲ್ಲಿ ಇದ್ದೇವೆ. ರಾಜಕಾರಣ ಇಷ್ಟು ಹೊಲಸಾಗುತ್ತದೆ ಎಂದು ಗೊತ್ತಿದ್ದರೆ ಖಂಡಿತ ಬರುತ್ತಿರಲಿಲ್ಲ. ಈಗ ಪಶ್ಚಾತ್ತಾಪ ಪಡುತ್ತಿದ್ದೇವೆ’ ಎಂದು ಮುಖ್ಯಮಂತ್ರಿ ಸಲಹೆಗಾರರಾದ ಬಿ.ಆರ್. ಪಾಟೀಲ ಅವರು ಬೇಸರ ವ್ಯಕ್ತಪಡಿಸಿದರು.

ಹರಳು ಮತ್ತು ಚಿನ್ನಾಭರಣ ವಲಯಕ್ಕೆ ನೀಡಿದ ಅತ್ಯುತ್ತಮ ಕೊಡುಗೆಯನ್ನು ಪರಿಗಣಿಸಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್ ಅವರಿಗೆ, ಮುಂಬೈನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ‘ಹಾಲ್ ಆಫ್ ಫೇಮ್’ ಗೌರವ ನೀಡಿ ಪುರಸ್ಕರಿಸಲಾಯಿತು. ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಅಧ್ಯಕ್ಷ ವಿಪುಲ್ ಶಾ, ಉಪಾಧ್ಯಕ್ಷ ಕಿರಿತ್ ಬನ್ಸಾಲಿ ಹಾಜರಿದ್ದರು

11, 12ರಂದು ಪತ್ರಿಕಾ ವಿತರಕರಿಗೆ ವಿಮಾ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಸಹಯೋಗದಲ್ಲಿ ಇದೇ 11 ಮತ್ತು 12ರಂದು ಬೆಂಗಳೂರು ನಗರ ಪತ್ರಿಕಾ ವಿತರಕರು ಮತ್ತು ಪತ್ರಿಕೆ ಹಂಚುವವರಿಗೆ ವಿಮಾ ಸೌಲಭ್ಯ ನೋಂದಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಯಶವಂತಪುರದ ಎಪಿಎಂಸಿ ಯಾರ್ಡ್‌ನ 6ನೇ ಮುಖ್ಯರಸ್ತೆಯಲ್ಲಿರುವ ಗಣೇಶ ದೇವಸ್ಥಾನ ಪಕ್ಕದ ಸಭಾಂಗಣದಲ್ಲಿ ಈ ನೋಂದಣಿ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿಕೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಪಿ.ಜಿ. ಬಾಲಾಜಿ, ಸೀನಿಯರ್ ಲೇಬರ್ ಇನ್‌ಸ್ಪೆಕ್ಟರ್– 9880217133, ಶಂಭುಲಿಂಗ ಕೆ.– 99725 34666 ಇವರನ್ನು ಸಂಪರ್ಕಿಸಬಹುದು.

ಐಐಎಚ್‌ಆರ್‌ನಲ್ಲಿ 3 ದಿನದ ರಾಷ್ಟ್ರೀಯ ಪುಷ್ಪ ಕೃಷಿ ಸಮ್ಮೇಳನ ಆರಂಭ

ಹೊಸ ತಳಿ, ತಂತ್ರಜ್ಞಾನ ಅಭಿವೃದ್ಧಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಪುಷ್ಪ ಕೃಷಿ ಕ್ಷೇತ್ರದಲ್ಲಿ ಹೊಸ ತಳಿಗಳು ಹಾಗೂ ಹೊಸ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಂತೆ ಆಂಧ್ರಪ್ರದೇಶದ ಡಾ.ವೈಎಸ್‌ಆರ್ ತೋಟಗಾರಿಕಾ ವಿಶ್ವವಿದ್ಯಾಲಯದ ಕುಲಪತಿ ಟಿ. ಜಾನಕಿರಾಮ್ ವಿಜ್ಞಾನಿಗಳಿಗೆ ಸಲಹೆ ನೀಡಿದರು.

ಇಲ್ಲಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ(ಐಐಎಚ್‌ಆರ್) ಮಂಗಳವಾರದಿಂದ ಆರಂಭವಾದ ‘ಭಾರತದಲ್ಲಿ ಪುಷ್ಪ ಕೃಷಿಯಲ್ಲಿನ ಇತ್ತೀಚಿಗಿನ ಒಲವು ಮತ್ತು ಭವಿಷ್ಯದ ನಿರೀಕ್ಷೆಗಳು’ ಕುರಿತ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಜೈವಿಕ ತಂತ್ರಜ್ಞಾನಗಳ ಮೂಲಕ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಬಹುದು. ಕೃತಕ ಬುದ್ದಿಮತ್ತೆ(ಎಐ), ಸೆನ್ಸರ್‌ಗಳನ್ನು ಬಳಸಿಕೊಂಡು ನಿಖರ ಕೃಷಿ ಪದ್ಧತಿ ಮೂಲಕ ಪುಷ್ಪಕೃಷಿ ಕೈಗೊಳ್ಳಲು ಅವಕಾಶವಿದೆ. ಡ್ರೋಣ್ ತಂತ್ರಜ್ಞಾನವೂ ಪುಷ್ಪಕೃಷಿಗೆ ನೆರವಾಗುತ್ತದೆ’ ಎಂದರು.

ಪುಷ್ಪ ಕೃಷಿ ರಾಷ್ಟ್ರೀಯ ಸಮ್ಮೇಳನದಲ್ಲಿ ಆಂಧ್ರಪ್ರದೇಶದ ಡಾ.ವೈಎಸ್‌ಆರ್ ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಟಿ. ಜಾನಕಿರಾಮ್ ಮಾತನಾಡಿದರು. ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್. ಐಸಿಎಆರ್ ತೋಟಗಾರಿಕಾ ವಿಭಾಗದ ಸಹಾಯಕ ಮಹಾನಿರ್ದೇಶಕ ಸುಧಾಕರ್ ಪಾಂಡೆ, ಐಐಎಚ್‌ಆರ್ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ಭಾರತೀಯ ಪುಷ್ಪಕೃಷಿ ನಿರ್ದೇಶನಾಲಯದ ನಿರ್ದೇಶಕ ಕೆ.ವಿ ಪ್ರಸಾದ್ ಅವರು ಭಾಗವಹಿಸಿದ್ದರು.

ರಾಜ್ಯ ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್.ರಮೇಶ್, ’ಜಾಗತಿಕ ಮಟ್ಟದಲ್ಲಿ ಬಳಕೆಯಾಗುವಂತಹ ಹೂವಿನ ತಳಿ ಹಾಗೂ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಂತೆ ವಿಜ್ಞಾನಿಗಳಿಗೆ ತಿಳಿಸಿದರು. ’ರೈತರು ತಮ್ಮ ಜಮೀನಿನಲ್ಲಿ ಯಾವುದೇ ಹೊಸ ಬೆಳೆಗಳನ್ನು ಬೆಳೆಯುವ ಮೊದಲು, ತಜ್ಞರು, ವಿಜ್ಞಾನಿಗಳು, ಮಾರುಕಟ್ಟೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ನಂತರ ಮುಂದುವರಿಯಿರಿ’ ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಪುಷ್ಪ ಕೃಷಿಯಲ್ಲಿ ಸಾಧನೆ ಮಾಡಿದ ನಾಲ್ವರು ರೈತರನ್ನು ಸನ್ಮಾನಿಸಲಾಯಿತು. ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ‘ಅರ್ಕ ಕೀರ್ತನ’ ಹೆಸರಿನ ಸುಗಂಧರಾಜ ತಳಿಯನ್ನು ಬೆಳೆಯಲು ರೈತೋದ್ಯಮಿಯೊಬ್ಬರಿಗೆ ಪರವಾನಗಿ ನೀಡಲಾಯಿತು.

ಹಳೆ ಪಿಂಚಣಿ ಮರು ಜಾರಿಗೆ ನೌಕರರ ಆಗ್ರಹ

ಪ್ರಜಾವಾಣಿ ವಾರ್ತೆ

ಯಲಹಂಕ: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿ ಪದ್ಧತಿ ಮುಂದುವರಿಸಬೇಕು ಎಂದು ಒತ್ತಾಯಿಸಿ, ಎ.ಐ.ಆರ್.ಎಫ್ ಹಾಗೂ ಎನ್.ಎಫ್.ಐ.ಆರ್ ಸಂಘಟನೆಗಳ ನೇತೃತ್ವದಲ್ಲಿ ರೈಲು ಗಾಲಿ ಕಾರ್ಖಾನೆಯ ನೌಕರರು ಕಾರ್ಖಾನೆಯ ಪ್ರವೇಶ ದ್ವಾರದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದರು.

ಕೇಂದ್ರಸರ್ಕಾರ ಜಾರಿಗೊಳಿಸಿರುವ ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿ ಪದ್ಧತಿಯನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿ, ಎ.ಐ.ಆರ್.ಎಫ್ ಹಾಗೂ ಎನ್.ಎಫ್.ಐ.ಆರ್ ಸಂಘಟನೆಗಳ ನೇತೃತ್ವದಲ್ಲಿ ಯಲಹಂಕದ ರೈಲುಗಾಲಿ ಕಾರ್ಖಾನೆಯ ನೌಕರರು ಮಂಗಳವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ಈ ವೇಳೆ ಮಾತನಾಡಿದ ಎ.ಐ.ಆರ್.ಎಫ್ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಿ.ಎ.ವಿಜಯಕುಮಾರ್, 'ಹಳೆಯ ಪಿಂಚಣಿ ಯೋಜನೆಯಲ್ಲಿ ಕಾರ್ಮಿಕರಿಗೆ ಈಗಿರುವ ಮೂಲವೇತನ ಹಾಗೂ ತುಟ್ಟಿಭತ್ಯೆಯಲ್ಲಿ ಅರ್ಧಭಾಗ ಪಿಂಚಣಿ ರೂಪದಲ್ಲಿ ಸಿಗುತ್ತಿತ್ತು. ಆದರೆ ಹೊಸ ಪಿಂಚಣಿ ಪದ್ಧತಿಯಲ್ಲಿ ಕೇವಲ ₹2 ಸಾವಿರದಿಂದ ₹ 5 ಸಾವಿರ ಮಾತ್ರ ಸಿಗಲಿದ್ದು, ಈ ಯೋಜನೆಯು ಕಾರ್ಮಿಕರಿಗೆ ಮಾರಕವಾಗಿದೆ. ಇದರಿಂದ 2004ರ ನಂತರ ನೇಮಕಾತಿ ಆದ ಕಾರ್ಮಿಕರಿಗೆ ಬಹಳನಷ್ಟ ಉಂಟಾಗಲಿದ್ದು, ನಿವೃತ್ತಿ ಜೀವನ ನಡೆಸಲು ತುಂಬಾ ಕಷ್ಟವಾಗಲಿದೆ. ಹಾಗಾಗಿ, ಕೂಡಲೆ ಹೊಸ ಪಿಂಚಣಿ ಪದ್ಧತಿಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿ ಪದ್ಧತಿಯನ್ನು ಮರು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ವಲಯ ಪ್ರಾಂತೀಯ ಕಾರ್ಯದರ್ಶಿ ವಿ.ದಯಾನಂದ ರಾವ್ ಮಾತನಾಡಿ, ಹೊಸ ಪಿಂಚಣಿ ಪದ್ಧತಿಯಿಂದ ನಿವೃತ್ತ ಕಾರ್ಮಿಕರಿಗೆ ಬಹಳ ಅನ್ಯಾಯವಾಗಲಿದೆ. ಮನೆ ಬಾಡಿಗೆ, ಮಕ್ಕಳ ಶಿಕ್ಷಣ, ಆರೋಗ್ಯ ಮತ್ತಿತರ ಅಗತ್ಯತೆಗಳಿಗೆ ಹಣಕಾಸಿನ ಸಮಸ್ಯೆ ಉಂಟಾಗಿ, ಜೀವನ ನಡೆಸಲು ಕಷ್ಟವಾಗಲಿದೆ. ಆದ್ದರಿಂದ ಹಳೆಯ ಪದ್ಧತಿಯಡಿ ನೌಕರರಿಗೆ ಪಿಂಚಣಿ ಸೌಲಭ್ಯ ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರೈಲು ಗಾಡಿಗಳ ಚಾಲನೆ ಸ್ಥಗಿತಗೊಳಿಸುವ ಮೂಲಕ ಹೋರಾಟವನ್ನು ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಸಿದರು.

ಎನ್.ಎಫ್.ಐ.ಆರ್ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕೆ.ಸುರೇಶ್, ವಲಯ ಪ್ರಾಂತೀಯ ಕಾರ್ಯದರ್ಶಿ ಎಸ್.ರಮೇಶ್ ಉಪಸ್ಥಿತರಿದ್ದರು.

ಚಿಂತಲಪಲ್ಲಿ ವೆಂಕಟರಾಮಯ್ಯ ಜನ್ಮ ಶತಮಾನೋತ್ಸವ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಗೀತ ವಿದ್ವಾನ್ ಚಿಂತಲಪಲ್ಲಿ ವೆಂಕಟರಾಮಯ್ಯ ಅವರ ಜನ್ಮ ಶತಮಾನೋತ್ಸವವನ್ನು ಇದೇ 15ರಂದು ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿದೆ' ಎಂದು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಚಿಂತಲಪಲ್ಲಿ ವೆ. ಶ್ರೀನಿವಾಸ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಂತಲಪಲ್ಲಿ ವೆಂಕಟರಾಮಯ್ಯ ಅವರು ಸಂಗೀತ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಪಿಪಿಟಿಯ ಮೂಲಕ ಪ್ರಸ್ತುತಪಡಿಸಲಾಗುವುದು. ಜೊತೆಗೆ ವಿವಿಧ ಸಂಗೀತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ವ್ಯಾಸರಾಜ ಮಠದ ವಿದ್ಯಾತೀರ್ಥ ಶ್ರೀಪಾದ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಗಾಯಕ ಆರ್.ಕೆ. ಪದ್ಮನಾಭ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ವೀಣಾ ವಾದಕಿ ಸುಮಾ ಸುಧೀಂದ್ರ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

25ನೇ ವರ್ಷದ ಸಾಮೂಹಿಕ ವಿವಾಹ

ಬೆಂಗಳೂರು: ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ ವತಿಯಿಂದ 25ನೇ ವರ್ಷದ ಉಚಿತ ಸಾಮೂಹಿಕ ವಿವಾಹವನ್ನು ಫೆಬ್ರುವರಿ 29ರಂದು ಆಯೋಜಿಸಲಾಗಿದೆ.

ಬನಶಂಕರಿ ದೇವಸ್ಥಾನದಲ್ಲಿ ಸಾಮೂಹಿಕ ವಿವಾಹ ನಡೆಯಲಿದೆ. ಈ ವಿವಾಹಮಹೋತ್ಸವಕ್ಕೆ ಎಲ್ಲ ಜಾತಿ, ಮತದವರೂ ವಧು–ವರರ ಹೆಸರನ್ನು ನೋಂದಾಯಿಸಬಹುದು ಎಂದು ವೇದಿಕೆಯ ವ್ಯವಸ್ಥಾಪಕ ಎ.ಎಚ್. ಬಸವರಾಜು ತಿಳಿಸಿದ್ದಾರೆ.

ವಧು–ವರರಿಗೆ ಹೊಸ ಬಟ್ಟೆ, ಬಾಸಿಂಗ, ಕಂಕಣದಾರ, ಹೂವಿನಹಾರ, ಮಾಂಗಲ್ಯ, ಕಾಲುಂಗುರ, ಪೇಟ ನೀಡಲಾಗುತ್ತದೆ. ಬಂಧುಗಳು, ಅತಿಥಿಗಳು ಮತ್ತು ಸ್ಥಳೀಯರಿಗೆ ಊಟದ ವ್ಯವಸ್ಥೆ ಇರುತ್ತದೆ. ವಿವರಗಳಿಗೆ 080-26712988, 70190 73889.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

GEMS- ET @ 2002
THE PRESIDENCY GROUP OF INSTITUTIONS
Gurukula, Amarapura Road, Sira-572137, Tumkur (Dist), Karnataka

Co-Educational English Medium, secular Day Cum Residential Institutions with a strength of 5000 students located on a 20 Acre campus in the heart of SIRA city, 120 Km from Bangalore on NH4, requires qualified, competent & experienced staff. Those fluent in English, effective in teaching/administration and looking for long-term association with the institution can apply for the following posts.

PRINCIPALS
Trained Post Graduates with minimum 05 years experience in the said post in reputed ICSE/CBSE Schools with proven track record.
Salary: Rs. 100,000 - 1,50,000 pm based on competency.

THE PRESIDENCY PUBLIC SCHOOL - CBSE (No.830710)

SECONDARY TEACHERS
Trained post graduates/ graduates in Science, Mathematics, English, Social Studies, Humanities & Computer Science with proven track record of teaching in CBSE classes IX & X.
Salary: Rs. 50,000 -1,00,000 pm based on competency.

MIDDLE SCHOOL TEACHERS
Trained Science / Arts / Humanities graduates to teach VI - VIII classes
Salary: Rs.35,000 - 60,000 pm based on competency.

PRIMARY TEACHERS
Graduates with D.Ed / B.Ed to teach I to V classes
Salary: Rs.30,000 - 50,000 pm based on competency.

NURSERY TEACHERS
Graduates with Nursery / Montessori Training
Salary: Rs.20,000 - 35,000 pm based on competency.

THE PRESIDENCY PUBLIC SCHOOL - ICSE (KA-118)

MIDDLE / HIGH SCHOOL TEACHERS
Trained Post graduates/ graduates in English, History, Geography, Physics, Chemistry, Biology, Mathematics & Computer Application with proven track record of teaching in ICSE Classes.
Salary: Rs.50,000 - 1,00,000 pm based on competency.

PRESIDENCY PU COLLEGE (UU0228)

LECTURERS
Trained Post graduates in Physics, Chemistry, Biology, Mathematics, Computer Science &, English with proven track record of teaching in English medium classes and competency to train students for IIT-JEE, NEET & CET.
Salary: Rs.75,000 - 1,25,000 pm based on competency.

INDIAN LANGUAGE TEACHERS
Indian Language Teachers PRT/TGT/PGT in Kannada & Hindi
Salary : State Scale

OTHERS
- Student Counselor
- Physical Education Teacher
- Fine Arts / Crafts
- Librarian
- Sports Coaches
- (Games/Swimming)
- Life Skill Instructors
- Lab Instructors
- Wardens (Gents/Ladies)

Salary : State Scale
Food & Accommodation will be provided on request

INTERVIEWS
Please send a hand written application with CV & Recent Passport Size photograph within 15 days to the Administrator at the above mentioned address. Short listed candidates will be called for interview. Preference will be given to female teachers & couples. Interviews/ Demo will be held in the month of February 2024.
tppsresource@gmail.com

B. B. U. L. JAIN VIDYALAYA
(Affiliated to CBSE, Delhi) (Managed by : Shree Mahaveer Jain Shikshan Sangh)
84, K.R. Road, Shankarapuram, Bangalore-4
Phone : 080 41554379 / 41520744 / 7795482145

WE ARE HIRING
- **Subject Co-ordinators for Middle & High School:** Graduate with B.Ed., who has 5 years experience as Co-ordinator.
- **Primary, Middle and High School:** Graduates with B.Ed. to teach English, Hindi, Kannada, Maths, Science, Social Science.
- **Nursery Teachers:** Qualified, experienced, young Graduate teachers with Nursery or Montessori Training, Fluent in English.
- **English Teacher** for Primary (Phonic Trained)
- **Qualified Teachers** for P.T. , Library, Computer Science, Art & Music

Interested candidates may send their resume to principal.jv@gmail.com on or before 17th January 2024. The selected candidates will have to bring their original markscard, last drawn salary certificate when called for an Interview.
(Applicants aged below 50 years & only localites can apply)

BGS BLOOMFIELD HIGH
[Recognised by the Govt of Karnataka]
Grade I to X - CBSE Curriculum
No.38, 6th Cross, 3rd Block T.R. Nagar, Basavanagudi, B'lore- 70
Ph. No. : 080 – 26763777, Website: bgsbloomfield.com

REQUIRED
PRINCIPAL, VICE PRINCIPAL & TEACHERS

Candidates with a minimum qualification of M.Sc. & B.Ed. with 5 years of experience in a CBSE School (as Principal/ Vice Principal)

Experienced Teachers with B.A/ B.Sc. & B.Ed. to Teach Science (Biology, Physics, Chemistry), Maths, Social Science, English, Kannada, Hindi and Art & Craft.

Experienced Nursery Teachers with NTT.

Experienced Accountant and Front Office Executive.

Note: Attractive package commensurate with higher qualification and experience.

Apply within 7 days to bloomfieldadm@gmail.com 94485 28484
Augustine Charles, Administrator

POORNAPRAJNA EDUCATION CENTRE, INDIRANAGAR
(Promoted & Managed by Udupi Sri Admar Mutt Education Council)
C.A Site No. 48, New Thippasandra, HAL 3rd Stage, Bangalore -75. Ph.080-25292930

English medium school under Karnataka State syllabus invites applications for the post of
PRINCIPAL
having Master's degree in any stream with M Ed / B Ed, 5 years experience as Principal & 10 years in teaching. Preferred age 40 years and above.

Apply to the Hon. Secretary before 31-01-2024 through post or email to poornaprajnants@gmail.com

---

ARVIND Residential School & PU College, Kunigal
Ph: 08132-210000/ 01. Mob: 9483683005/ 002.
Website: www.arvindinternationalschool.com
www.arvindpucollege.com

REQUIRES DEDICATED & PASSIONATE PROFESSIONALS WITH GOOD COMMUNICATION SKILLS
- **PUC LECTURERS** (Science & Commerce Stream) Well Experienced NEET & JEE faculties
- **RESIDENTIAL PRINCIPALS** With sound knowledge of School & College administration
- **CO-ORDINATOR** (ICSE/ CBSE & STATE)
- **Nursery/ Primary/ Middle School/ High school Teachers** (ICSE/ CBSE & STATE)
- **Warden (M/F), Nurse (F), Cooks, PE Teachers**

Experienced in all streams with desired qualification
Send your resume with recent passport size photo to airsjobs@gmail.com within 7 days
THOSE WHO HAVE ALREADY APPLIED NEED NOT APPLY AGAIN

KNE PUBLIC SCHOOL
Estd. 1966
Doddabommasandra, Vidyaranyapura, Bangalore – 97

REQUIRED

PRINCIPAL
Post Graduate with B.Ed Minimum 5 years experience preferably in CBSE/ICSE schools with good academic and administrative proficiency

NURSERY TEACHER
NTT or Montessori training

PRIMARY & HIGH SCHOOL TEACHERS
Graduate with B.Ed
Subjects: English, Social Science, Mathematics, Science, Kannada, Hindi, Computer Science

PHYSICAL EDUCATION TEACHER, DANCE & MUSIC TEACHER, ART & CRAFT TEACHER

LIBRARIAN
B.Lib

SCHOOL BUS DRIVERS
Heavy Vehicle License

Apply within 7 days from the date of publication with all relevant documents to the Email: knetrustinstitutions@gmail.com

WALK IN INTERVIEW on 12th, 13th & 14th January, 2024 between 11 AM TO 2 PM
KNE Public School, Doddabommasandra, Vidyaranyapura, Bangalore – 97

Mob: 9535800165 9164155540

WANTED LECTURERS: PHYSICS, CHEMISTRY, COMPUTER SCIENCE, ECONOMICS, COMMERCE, ENGLISH. VIVEKANANDA PU COLLEGE. (UNIT OF VIP HIGH SCHOOL) Adugodi Bengaluru-30 Principal: 9036362673 viphighschoolinadugodi@gmail.com

HOLY ANGEL'S High School Hampinagar, Vijayanagar, Bengaluru-560104. Phone:23404465/23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

REQUIRES
- MARKETING EXECUTIVES
- ADMISSION COUNSELLOR (for District wise)
- PRINCIPAL • FACULTIES for All Subjects with NEET & JEE
- HOSTEL WARDENS
- LIBRARIAN for New Residential PU College with NEET & JEE Academy.

1 to 10 English Medium School
- PRINCIPAL • FACULTIES

All Subjects-English,Maths, Social Studies,Hindi, Sanskrit Kannada, PT, Crafts, Drivers

K.T.G & Anuradha PU College
S V Sunrise English School
Hegganahalli Cross, Via Magadi Rd, Sunkadakatte, Bangalore-91
9845051023 , 9880453539
ktgcolleges@gmail.com

"WANTED BRANCH_MANAGERS Female Telecallers Sales-Managers Sales_Executives Freelancers Salary: ₹15k to-1Lakh Plus Incentives. 9071615300, 7829956789. Work_Location: M.G.Road, RT.Nagar, Vasanthnagar, Mysore_Road, Nagawara, Shivajinagar &.Yelahanka. hrjp365@gmail.com

Walk-in

DRIVER LOGISTICS LLP
WALK-IN INTERVIEW on 13th & 14th January 2024

Sl No.	Positions	Min. Exp. (In Logistics & Warehousing)	Interview Date:
1	Business Development Executive	0 - 1 years	13/01/2024
2	Assistant Manager - Sales	5 - 8 years	13/01/2024
3	Management Trainee	Graduate/Post Graduate Freshers	13/01/2024
4	Warehouse Manager / Asst. Manager	6- 10 Years	14/01/2024
5	Team Lead (Warehouse Operations)	3 - 5 years	14/01/2024
6	Supervisor (Warehouse Operations)	0 - 1 years	14/01/2024
7	Billing Executive (SAP, Excel)	0 - 1 years	14/01/2024
8	Management Trainee	Logistics Freshers	14/01/2024

Candidates who are unable to attend walk in can send their profiles to: careers@driverlogistics.in or Whatsapp CV to 9037464421
Venue: Driver Logistics LLP
Address: Building No. 24/2, Lakshmipura Road, G C Gowdru Warehouse, Dombarahalli, Bangalore Urban - 562162.
Interview Time: 10 AM to 4 PM

Overseas

Wanted
Immediately required house help lady care taker for a Couple and a small child settled in Singapore. Must know cooking both veg and non veg. Salary 30k per month with accommodation and food, age should be below 50 yrs.
Only valid Passport Holders can apply
Interested may contact: +91 9741913516

Drivers

ಬೇಕಾಗಿದ್ದಾರೆ
ಪ್ರಮುಖ ಸ್ಟೀಲ್ ಟ್ರೇಡಿಂಗ್ ಕಂಪನಿಗಳಲ್ಲಿ ಒಂದಾದ ಶ್ರೀ ಲಕ್ಷ್ಮಿ ಸ್ಟೀಲ್ ಸಪ್ಲೈಯರ್ಸ್ ಇವರಿಗೆ
1. ಅತ್ತಿಬೆಲೆ ಪ್ರದೇಶದಲ್ಲಿ ಹೆವಿ ವೆಹಿಕಲ್ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ ಕ್ಯಾಂಟರ್ ವಾಹನಗಳ ಚಾಲಕ ಬೇಕಾಗಿದ್ದಾರೆ.
ಸಂಪರ್ಕಿಸಿ:
9480834473
7022008691
ಅಥವಾ ಇ-ಮೇಲ್ ಕಳಿಸಿ:
ganesh.c@slgroup.in

General

WANTED ADVISORS/ AGENTS for a leading Co-operative Society in Bangalore.. attractive commission and MFA given. Contact: 9901983850/ 9845597993.

Hotel

REQUIRED HOTEL STAFF
An Upcoming Vegetarian Restaurant near Anantha Vidyaniketan at Devanahalli looking for following position offering mandate based attractive salary packages.
1. Experts in Mulabagilu Dosa
2. Chefs. (South, North & Chinese)
3. F & B Service Staff.
4. Kitchen Staff.
5. Exp in Juice & Sandwich

Required minimum 2-3 years, experience in relevant fields, Interested Candidates are required to send the CV along with credentials at E-mail: aanantha2024@gmail.com
Call: 8296817364

Hospital & Medical Jobs

HOSMAT HOSPITAL
HOSMAT HOSPITAL, is Recruiting the following staff Male & Female at HOSMAT Second Unit at Ring Road, Hennur Junction and Third Unit of Hosmat at Sadashivanagar, Palace Orchards, No.18, Bellary Road and a Recuperation & Recovery Rehabilitation Centre at HOSMAT, Magrath Road for Neuro & Ortho

Visiting Consultants are welcome in all 3 units. Attractive Professional incentives are paid

1. Intensivists, Internal Medicine or Anaesthetists
2. Sr / Jr Orthopaedic Consultants & Registrars
3. General Physician
4. Pulmonologist
5. Pulmonary Test Technician (PFT)
6. Neurologist
7. Non Invasive Cardiologist.
8. Medical Gastroenterologist
9. Physical Medical & Rehabilitation (P M & R)
10. Geriatric Physician
11. Clinical Psychologist
12 Psychiatrist
13. Facio Maxillary Surgeon
14. Vascular Surgeon
15. Endocrinologist
16. Nephrologist
17. ENT
18. Surgical & Medical Oncologist
19. Gynaecologist
20 Cardio Thorasic Surgeon
21. Radiologist
22. Duty Doctor - ICU & Wards
23. Casualty Medical Officers/ Emergency Room Doctors
24. Chief Marketing Officer
25. Manager of Recovery / Recuperation centre
26. Audiologist
27. Speech Therapist/ Swallowing therapist
28. Neuro Physio Therapist
29. Senior Billing and Collection Manager
30. House Keeping – in charge
31. OT Manager
32 O T Scrub Nurses & O T technicians
33. O T Assts & OT Boys,

Call: 91084 50312
veenagh@hosmathospitals.com /
coordinatorhosmat@gmail.com /

Part-Time Jobs

TOP MNC Com. Licensed By Central Govt. Retired/ VRS Persons 2nd Career Opportunity Age Above 45 Years 35K To 40K: 9886641282/ 7019215243

RENTAL PROPERTIES

Accommodation Available

Commercial

OFFICE SPACE AVAILABLE in the heart of the city, 2000 Sq.ft, CSI Compound, behind Unity Building, Bangalore Contact: 9845036560/ 7795099921

REAL ESTATE SELLING

Flat

Basavanagudi

SALE DUPLEX 3BHK FLAT BASAVANGUDI PRIME 1550 SFT SBA COVERED CARPARK, LIFT. 1.85CR NEGOTIABLE A-KATHA: 9886019240

Nagasandra

SALE, FULLY Furnished 3 BHK 'Aditya Apartments' #53, 1st Main, 1st Cross, HMT Layout, Nagasandra Main Road. Rs. 70 Lakhs. Contact: 9845140325, 9379282930

Sites

Tumkur

"TUMKUR 40'X40' Site for sale SIT Extension Good location, Genuine Buyers only Contact: 7760388034/ 9242135834"

Villas/Bunglows

Vijayanagar

FOR SALE FANCY LUXURIOUS ARCHITECT BUNGLOW SITE 50X80 BUILTUP 7000 SFT VIJAYA NAGAR OWNER: 9900180128

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Finance

NO CIBIL, No Income. Loans available for mortgage, property purchase and construction apartments. Contact: 7019460997.

Business Offers

Agents Wanted

WANTED REAL Estate Agent to work as Business Partner. Sarakki Homes. 9663676464.

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

EDUCATIONAL

Special Courses

DIPLOMA IN Student Counselling, 5th Batch, 6 months, ONLINE course, Starts:16-Jan. WhatsApp 9886044221. www.darwinpsychologycentre.com

Tuitions

REVOLUTIONIZE YOUR Learning Process with T.S. Shivashankar DSc PhD USA Maths and Physics Expert 9743095715 Living in Mahalaxmi Layout At Your Door Step ANY Maths Physics Chemistry French Hindi English Civil Aeronautical Mechanical Electrical & Electronics All Subjects At All and Different Levels Fluent in English, Hindi Kannada French & Portuguese Educated In USA, Brazil, Canada, England, France, Germany, Holland, Greece & Russia, Also Educated in Kendriya Vidyalaya I.I.T Kanpur Twice 1981, 12th Standard Pass out from K.V.I.T.T. Kanpur Big Push Given for Maths with instant Results to follow Father DR. T.KSrikantaiah Former Professor, Aeronautical Engg Dept I.I.T Kanpur Very Rare Case of a Person Coming From Industry into Academics in two Related Fields Civil and Aeronautical Aircraft Structures, Structural Engg Basically Being A Civil Engg Concept thus having more than the Proper and required credential and Making it big with Indian Aeronautics DR. T.KSrikantaiah PhD (Canada)

Training

NURSERY TEACHERS TRAINING Course at JNANABHARATHI,with in Class Training 6_Months/1_year (offline/online),100% Job_Assurance. Call:6363032729

PERSONAL

Change of Name

CHANGE OF NAME
I, SRINIVASAN RAMA MOORTHY, Residing at # 690, Aravinth Kudhil, Anglo Indian Colony, 6th Cross, Robertsonpet, KGF-563122,Kolar Dist., have changed my name to **SRINIVASAN GOLD RAMA MOORTHY** vide affidavit dt:08-01-2024, before Notary N. Srinivasa, KGF Henceforth I shall be called SRINIVASAN GOLD RAMA MOORTHY only

I,KUMARI SASMITA PATRO, changed my name to SASMITA PATRO dated: 03.01.2024. Sworn before Notary H.S.Sakalesh Aradhya, Bengaluru.

CHANGE OF NAME
I, KIRAN KUMAR RAMAIAH Residing at # 400, Ground Floor, 1st E Main Road, Near Ambedkar Park, Koramangala 8th Block, Bengaluru-95 have changed our minor son's name from LOHIT GOWDA K to **MOHITH GOWDA K** vide affidavit dt:06-01-2024, before Notary K.V. Bachi Reddy, Bengaluru Henceforth he shall be know as MOHITH GOWDA K only.

I, BISHA MANI aged 45 years residing #25, SreeVaibhav, 6th 'G' Cross, Kaggadasapura MainRoad, C.V. Raman Nagar, Bengaluru-560093 have changed my minor son's (aged 17 years) name from THUSHAR CHANDRA MUKKATTIL to THUSHAR CHANDRA vide affidavit dated 09.01.2024 before Notary Sreedharan Nair P.N., Bangalore. Henceforth he shall be called as THUSHAR CHANDRA only in all records.

I, GOPINATHA S, S/o, Selvam P. R/o #334, 14th Cross, Janakiraman Layout, Kamanahalli Main Road, Bengaluru-33 have changed my name as SHAIJITH ABHINAV Vide affidavit dated 9/01/2024 before Notary BR. Shashikala, Bangalore

I, SAMREEN R/o. #28, Munnibyrappa Block, Devara Jeevan Halli, Arabic College Post, Bangalore- 560045, have changed my name to SAMREEN BANU, vide affidavit dated 08/01/2024, before notary Lakshminarayan, Bangalore.

PUBLIC NOTICE

PUBLIC NOTICE
This is to inform the general public that my Client **Mr.Nitesh C.A,** has negotiated with **Smt. D.Nandani and Smt. D.Chandana** both are children of Late Saraswathamma W/O Late H.N.Diwakar Rao, for the purchase of Schedule Property mentioned below herein. The owner aforementioned have represented to my client that they have the absolute right, title and interest in the Schedule Property to the exclusion of any other person. The owners has also represented that the Schedule Property is not the subject matter of any claims, litigation, mortgage, charge, lease, or any encumbrance whatsoever, In the event of the existence of any claim, litigation, charge, encumbrance etc., over the Schedule Property by any person, firm, institution or company, we do hereby call upon them to file the same with us, in writing with documentary proof to substantiate the same, within 10 days from the date of publication of this notice failing which, my Client will presume the representations of the Owners to be true and proceed with the transaction. Any claims made thereafter will not be entertained.

SCHEDULE PROPERTY
All that piece and parcel of the immovable property being Vacant Site bearing No.108, situated at 4th "C" Block, Koramangala, Bengaluru, presently assigned with PID No. 68-8-108, BBMP Ward No.151. Bounded on the: **East by** Site No.109; **West by** Site No.107; **North by** Road; and **South by** Site No.93.

Palanethra.N,
Advocate, Office at No.435, 2 nd Floor, 27th Main, HSR Layout, 1st Sector, Bengaluru -560 102, Mob: 91413 45621; 73490 85757
Bangalore 07-01-2024

LOST
Notice is hereby given that the Share Certificate(s) No. 265682 for 41460 Ordinary Shares of Rupee 1 each fully paid bearing distinctive No(s). 9326078422 - 9326119881 of ITC Limited Standing in the Name of Dr. Dronnadula Venkatarama Reddy has/have been reported Lost /misplaced and that an application for issue of Duplicate Certificate(s) in respect thereof has been made to the company's investor service centre, ITC Limited 37, JL Nehru Road, Kolkata-700071. To whom objection, if any, against issuance of such duplicate share certificate(s) should be made **within 15 days** from the date of Publication of this Notice
The Public are cautioned against dealing in any manner with these shares.
Dr. Dronnadula Venkatamara Reddy
No. 2/1, Palace Road, Vasanthnagar, Bengaluru-560001
Bengaluru
Date: 09-01-2024

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD The Power of Good
Classifieds
More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...
Book your Ad with us now !
www.dhclassifieds.com
BOOK NOW
For more details contact:
+91 9845114560 | +91 9886213331 | +91 9900428036 |
+91 9731810277 | +91 9901641752 | 080-45557163/164

ಸಂಕ್ಷಿಪ್ತ ಸುದ್ದಿ

ಎದೆ ಹಾಲು ಗಂಟಲಲ್ಲಿ ಸಿಲುಕಿ ಮಗು ಸಾವು

ಕಾಸರಗೋಡು: ಜಿಲ್ಲೆಯ ಬಂಬ್ರಾಣದಲ್ಲಿ ತಾಯಿಯ ಎದೆ ಹಾಲು ಗಂಟಲಲ್ಲಿ ಸಿಲುಕಿ ಮಗು ಮಂಗಳವಾರ ಮೃತಪಟ್ಟಿದೆ.

ಸ್ಥಳೀಯ ನಿವಾಸಿ ಅಬ್ದುಲ್ ಅಜೀಜ್-ಖದೀಜಾ ದಂಪತಿ ಪುತ್ರಿ, ಎರಡೂವರೆ ತಿಂಗಳ ಹಸುಳೆ ಮೃತಪಟ್ಟಿದೆ. ಮಲಗಿಕೊಂಡು ಎದೆಹಾಲು ಕುಡಿದ ಮಗು, ನಂತರ ಎಷ್ಟು ಹೊತ್ತಾದರೂ ಎಚ್ಚರಗೊಳ್ಳದೆ ಇದ್ದಾಗ ಮನೆಯವರು ಕುಂಬಳೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಅದಾಗಲೇ ಮಗು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಕುಂಬಳೆ ಪೊಲೀಸರು ಮಹಜರು ನಡೆಸಿದರು.

ಕೊಡಗಿನ ಹಲವೆಡೆ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಹಲವಡೆ ಮಂಗಳವಾರ ಸಾಧಾರಣ ಮಳೆಯಾಗಿದೆ. ಮಡಿಕೇರಿ ಪಟ್ಟಣದಲ್ಲಿ ಗುಡುಗು–ಮಿಂಚು ಸಹಿತ ಮಳೆ ಬಿದ್ದಿತು. ನಾಪೋಕ್ಲು ವ್ಯಾಪ್ತಿಯ ಹಲವಡೆಯೂ ಸುರಿದಿದೆ. ಸೋಮವಾರಪೇಟೆ ತಾಲ್ಲೂಕಿನ ಹಲವೆಡೆ ಹಗುರ ಮಳೆಯಾಗಿದ್ದು, ಕಾಫಿ ಬೆಳೆಗಾರರಿಗೆ ಸಮಸ್ಯೆಯಾಗಿದೆ.

ಕರಡಿ ಮಜಲು ಕಲಾವಿದ ಗುರುಲಿಂಗಪ್ಪ ನಿಧನ

ಗುರಲಿಂಗಪ್ಪ ಕರಡಿ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಪಟ್ಟಣದ ಕಲ್ಪಡಗಲ್ಲಿ ನಿವಾಸಿ, ಕರಡಿ ಮಜಲು ಕಲಾವಿದ ಗುರುಲಿಂಗಪ್ಪ ವೀರಸಂಗಪ್ಪ ಕರಡಿ (85) ಮಂಗಳವಾರ ನಿಧನರಾದರು. ಸಂಜೆ ಅಂತ್ಯಕ್ರಿಯೆ ನೆರವೇರಿತು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಹದಿನೈದನೇ ವಯಸ್ಸಿಗೆ ಕರಡಿ ಮಜಲು ಕಲಾಕ್ಷೇತ್ರಕ್ಕೆ ಕಾಲಿಟ್ಟ ಗುರಲಿಂಗಪ್ಪ ಅವರಿಗೆ ಕರ್ನಾಟಕ ರಾಜ್ಯೋತ್ಸವ (2015), ಜಾನಪದ ಲೋಕ, ಲೋಕೋತ್ಸವ ಸೇರಿ ಹಲವು ಪ್ರಶಸ್ತಿಗಳು ಸಂದಿವೆ.

ಸಾರ್ಕ್, ದಕ್ಷಿಣ ವಲಯ ಸಾಂಸ್ಕೃತಿಕ ಉತ್ಸವ, ಭಾರತದ ಅಂತರ ರಾಷ್ಟ್ರೀಯ ಸಂಗೀತ ಮಹೋತ್ಸವ ಸೇರಿ ಹಲವು ಅನೇಕ ಪ್ರತಿಷ್ಠಿತ ಕಲಾ ಮಹೋತ್ಸವಗಳಲ್ಲಿ ಅವರು ಕರಡಿ ಮಜಲು ಕಲೆ ಪ್ರದರ್ಶಿಸಿದ್ದರು.

ಗಡಿ ಜಿಲ್ಲೆಯಲ್ಲಿ ಮಹಾರಾಷ್ಟ್ರ ಸರ್ಕಾರದ ಯೋಜನೆ: ಹಣ ನೇರವಾಗಿ ಆಸ್ಪತ್ರೆಗೆ ಜಮೆ

ಆರೋಗ್ಯ ವಿಮೆಗೆ ₹34 ಕೋಟಿ ಅನುದಾನ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಕರ್ನಾಟಕದ ಗಡಿಯೊಳಗಿನ 865 ಹಳ್ಳಿ–ಪಟ್ಟಣಗಳ ಜನರಿಗಾಗಿ ಮಹಾರಾಷ್ಟ್ರ ಸರ್ಕಾರ ಜಾರಿಗೊಳಿಸಿರುವ 'ಮಹಾತ್ಮ ಜ್ಯೋತಿ ರಾವ್ ಫುಲೆ ಜನಾರೋಗ್ಯ ವಿಮೆ' ಯೋಜನೆಗೆ ಅಲ್ಲಿನ ಸರ್ಕಾರ ₹34 ಕೋಟಿ ಅನುದಾನ ಮೀಸಲಿಟ್ಟಿದೆ.

ಫಲಾನುಭವಿಗಳ ಆಯ್ಕೆಗೆ ಬೆಳಗಾವಿ ನಗರದಲ್ಲಿ ನಾಲ್ಕು ಕೇಂದ್ರಗಳನ್ನು ತೆರೆಯಲಾಗಿದೆ. ಜನವರಿ 4ರಿಂದ 7ರವರೆಗೆ ಖಡಕ್ ಗಲ್ಲಿಯ ಕೇಂದ್ರದಲ್ಲಿ 17 ಅರ್ಜಿಗಳು ಬಂದಿದ್ದು, ಮೂರೇ ದಿನಗಳಲ್ಲಿ ಆರು ಮಂದಿಗೆ ₹50 ಸಾವಿರದಿಂದ ₹3 ಲಕ್ಷದವರೆಗೆ ವಿಮೆ ಜಮೆಯಾಗಿದೆ.

'ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದ ತಕ್ಷಣ ಮೊಬೈಲ್ ಸಂಖ್ಯೆಗೆ ಲಿಂಕ್ ಬರುತ್ತದೆ. ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಿಫಾರಸು ಪತ್ರ, 'ನಾನು ಮರಾಠಿ ಭಾಷಿಗ' ಎಂಬ ಮುಚ್ಚಳಿಕೆ ಮತ್ತು ಆಸ್ಪತ್ರೆ ಬಿಲ್ ಲಗತ್ತಿಸಿ ಅಪ್‌ಲೋಡ್ ಮಾಡಬೇಕು. ಹಣ ನೇರವಾಗಿ ಆಸ್ಪತ್ರೆಗೆ ಜಮೆಯಾಗುತ್ತದೆ' ಎಂದು ಜನಾರೋಗ್ಯ ವಿಮೆಯ ಸೇವಾಪ್ರತಿನಿಧಿಗಳು ತಿಳಿಸಿದ್ದಾರೆ.

'ಕರ್ನಾಟಕ ಸರ್ಕಾರ ನೀಡುವ ಯಶಸ್ವಿನಿ, ಆಯುಷ್ಮಾನ್–ಆರೋಗ್ಯ ಕರ್ನಾಟಕ ಯೋಜನೆಗಳ ಫಲಾನುಭವಿ ಆಗಲು ಹತ್ತಾರು ನಿಯಮಗಳಿವೆ. ಅಂತ್ಯೋದಯ ಕಾರ್ಡ್ ಹೊಂದಿರಬೇಕು, ಮನೆಯಲ್ಲಿ ವಾಹನ ಇರಬಾರದು, ಆದಾಯ ತೆರಿಗೆ ಪಾವತಿ ಸುವವರಾಗಿರಬಾರದು, ಬ್ಯಾಂಕ್ ಖಾತೆ- ಆಧಾರ್ ಸಂಖ್ಯೆ ಜೋಡಣೆ... ಮುಂತಾದ ಅಡೆತಡೆಗಳಿವೆ. ಇಷ್ಟೆಲ್ಲ ಜಂಜಾಟವೇ ಬೇಡ ಎಂದು ಮರಾಠಿಗರು ಮಹಾರಾಷ್ಟ್ರದ ಯೋಜನೆಗೆ ಮೊರೆ ಹೋಗಬಹುದು. ಇದನ್ನು ಕರ್ನಾಟಕ ಸರ್ಕಾರ ಈಗಲೇ ನಿಲ್ಲಿಸಬೇಕು' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಒತ್ತಾಯಿಸಿದ್ದಾರೆ.

ಆಸ್ಪತ್ರೆಗಳೂ ಮರಾಠಿಮಯ!

ಬೆಳಗಾವಿ, ಬೀದರ್, ಕಾರವಾರ ನಗರಗಳಲ್ಲಿ ಮರಾಠಿ ಭಾಷೆ ಬಳಸುವ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಪಡೆಯಬೇಕು ಎಂಬ ನಿಯಮ ಮಹಾರಾಷ್ಟ್ರ ಸರ್ಕಾರ ಮಾಡಿದೆ. ಅಂಥ 10 ಆಸ್ಪತ್ರೆಗಳನ್ನು ಗುರುತಿಸಿದೆ. 2023ರ ಮಾರ್ಚ್ 2ರಂದು ಮಹಾರಾಷ್ಟ್ರ ಸರ್ಕಾರ ಹೊರಡಿಸಿದ ಆದೇಶದಲ್ಲೇ ಈ ಅಂಶವಿದೆ.

'ಯಾವ ಆಸ್ಪತ್ರೆ ಕನ್ನಡಿಗರಿಗೆ ಒಳಪಟ್ಟಿದೆಯೋ ಅದರತ್ತ ಮರಾಠಿಗರು ಇಣುಕಿ ಕೂಡ ನೋಡಬಾರದು ಎಂಬುದು ಇದರ ಉದ್ದೇಶ' ಎಂದು ಕನ್ನಡ ಹೋರಾಟಗಾರರು ದೂರಿದ್ದಾರೆ.

'ಯೋಜನೆಗೆ 1,000 ಆಸ್ಪತ್ರೆಗಳನ್ನು ಮೊದಲು ಗುರುತಿಸಲಾಗಿತ್ತು. 865 ಹಳ್ಳಿಗಳಿಗೆ ವಿಸ್ತರಣೆ ಮಾಡಿದ ಮೇಲೆ ಗಡಿ ಭಾಗದ ಎಂಟು ಜಿಲ್ಲೆಗಳ 140 ಆಸ್ಪತ್ರೆಗಳನ್ನು ಸೇರಿಸಲಾಗಿದೆ' ಎಂಬುದೂ ಆದೇಶ ಪತ್ರದಲ್ಲಿದೆ.

ಮಹಾರಾಷ್ಟ್ರ ಆರೋಗ್ಯ ವಿಮೆ ಜಾರಿ ಮಾಡಿದ ಬಗ್ಗೆ ಯಾರಾದರೂ ದೂರು ನೀಡಿದರೆ ಮಾತ್ರ ಪರಿಶೀಲಿಸುತ್ತೇವೆ. ಈ ವಿಚಾರದಲ್ಲಿ ನಮ್ಮ ಸರ್ಕಾರದ ನಿರ್ದೇಶನ ಪಾಲಿಸುತ್ತೇವೆ

ನಿತೇಶ್ ಪಾಟೀಲ, ಜಿಲ್ಲಾಧಿಕಾರಿ

ಮರಾಠಿಗರು ಕನ್ನಡಿಗರೊಂದಿಗೆ ಮುಖ್ಯವಾಹಿನಿಯಲ್ಲಿ ಬೆರೆತಿದ್ದಾರೆ. ಅವರನ್ನು ರಾಜಕೀಯ ಅಥವಾ ಭಾವನಾತ್ಮಕವಾಗಿ ಸೆಳೆಯಲು ಆಗದು. ಅದಕ್ಕೆ ಹಣದ ಆಮಿಷ ಒಡ್ಡಲಾಗುತ್ತಿದೆ

ಅಶೋಕ ಚಂದರಗಿ, ಅಧ್ಯಕ್ಷ, ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

ಮಹಾರಾಷ್ಟ್ರ ಸರ್ಕಾರ ಯಾವ ಆಸ್ಪತ್ರೆಗೆ ವಿಮೆ ಪಾವತಿಸುತ್ತಿದೆ ಗೊತ್ತಾಗಿಲ್ಲ. ವಿಮೆ ಪಾವತಿ ಸಂಬಂಧ ಯಾವ ಮನವಿ ಕೂಡ ನನಗೆ ಬಂದಿಲ್ಲ

ಡಾ.ಮಹೇಶ್ ಕೋಣೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ನಾಫೆಡ್ ಮೂಲಕ ಕೊಬ್ಬರಿ ಖರೀದಿ

ತುಮಕೂರು: ರೈತರ ಪ್ರತಿಭಟನೆಗೆ ಮಣಿದಿರುವ ಸರ್ಕಾರ ಕೊನೆಗೂ ನಾಫೆಡ್ ಮೂಲಕ ಉಂಡೆ ಕೊಬ್ಬರಿ ಖರೀದಿಗೆ ಮುಂದಾಗಿದೆ. ತುಮಕೂರು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೊಬ್ಬರಿ ಖರೀದಿಸಲು ಆದೇಶಿಸಲಾಗಿದೆ.

ಜ. 20ರಿಂದ ನೋಂದಣಿಗೆ ಅವಕಾಶ ನೀಡಿದ್ದು, 45 ದಿನಗಳ ಕಾಲ ರೈತರು ನೋಂದಣಿ ಮಾಡಿಕೊಳ್ಳಬಹುದಾಗಿದೆ. ಮೂರು ತಿಂಗಳ ಕಾಲವಷ್ಟೇ ಖರೀದಿ ಮಾಡಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರತಿ ಎಕರೆಗೆ ಗರಿಷ್ಠ 6 ಕ್ವಿಂಟಲ್, ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಕೊಬ್ಬರಿ ಖರೀದಿಸಲಾಗುತ್ತದೆ. ಕೇಂದ್ರ ಸರ್ಕಾರ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಲ್‌ಗೆ ₹12 ಸಾವಿರ ನಿಗದಿಪಡಿಸಿದೆ.

ಕೃತಕ ಬುದ್ಧಿಮತ್ತೆ, ಯಂತ್ರಕಲಿಕೆಯ ಸಂಶೋಧನೆಗೆ ಸಹಕಾರಿ

16 ಹೊಸ ದತ್ತಾಂಶ ಸಂಗ್ರಹ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಭಾರತೀಯ ಭಾಷಾ ಸಂಸ್ಥಾನದ (ಸಿಐಐಎಲ್) ಭಾರತೀಯ ಭಾಷಾ ದತ್ತಾಂಶ ಒಕ್ಕೂಟದಿಂದ (ಎಲ್‌ಡಿಸಿ–ಐಎಲ್) ಕೃತಕ ಬುದ್ಧಿಮತ್ತೆ ಮತ್ತು ಯಂತ್ರಕಲಿಕೆಯ ಸಂಶೋಧನೆಗಾಗಿ ಭಾರತೀಯ ಭಾಷೆಗಳ 16 ಹೊಸ ದತ್ತಾಂಶ ಸಂಗ್ರಹಗಳನ್ನು (ಡೇಟಾಸೆಟ್) ಬಿಡುಗಡೆ ಮಾಡಲಾಗಿದೆ.

ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಎಲ್‌ಡಿಸಿ–ಐಎಲ್‌ನ 8ನೇ ಯೋಜನಾ ಸಲಹಾ ಸಮಿತಿ ಸಭೆಯಲ್ಲಿ ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರದ ತಜ್ಞರು ಪಾಲ್ಗೊಂಡಿದ್ದರು.

ಈ ಹೊಸ ದತ್ತಾಂಶ ಸಂಗ್ರಹವು ಕೃತಕ ಬುದ್ಧಿಮತ್ತೆ (ಎಐ) ಮತ್ತು ಯಂತ್ರ ಕಲಿಕೆಯಲ್ಲಿ ಗುಣಮಟ್ಟದ ಸಂಶೋಧನೆ ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ದತ್ತಾಂಶ ಸಂಗ್ರಹಗಳು ಸ್ವಯಂಚಾಲಿತ ಮಾತಿನ ಅಥವಾ ಧ್ವನಿಯ ಗ್ರಹಿಕೆ, ಧ್ವನಿಯ ನೇರ ಅನುವಾದ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ನೆರವಾಗುತ್ತವೆ. ಭಾರತೀಯ ಭಾಷೆಗಳಲ್ಲಿ ತಂತ್ರಾಂಶ ಉಪಕರಣಗಳಿಂದ ಫಲಿತಾಂಶಗಳ ಗುಣಮಟ್ಟವನ್ನು ಸುಧಾರಿಸಲು ಸಹಕಾರಿಯಾಗಲಿದೆ ಎಂದು ಒಕ್ಕೂಟ ಹೇಳಿದೆ.

ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನ

ಈ ದತ್ತಾಂಶ ಸಂಗ್ರಹಗಳು, ಅನುಸೂಚಿತ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ತಮಿಳು, ಮರಾಠಿ, ಕನ್ನಡ, ಮಲಯಾಳ, ಒಡಿಯಾ, ಅಸ್ಸಾಮಿ, ಕೊಂಕಣಿ, ಮೈಥಿಲಿ, ಉರ್ದು ಮತ್ತು ನೇಪಾಳಿ ಒಳಗೊಂಡಿವೆ. ಭಾರತೀಯ ಇಂಗ್ಲಿಷ್‌ನ 2 ರೂಪಾಂತರಗಳ (ವೇರಿಯೆಂಟ್)ನ್ನು ಒಳಗೊಂಡಿದೆ. ಭಾರತೀಯ ಇಂಗ್ಲಿಷ್‌ನ ಬಂಗಾಳಿ (ಇಂಡಿಯನ್ ಇಂಗ್ಲಿಷ್–ಬೆಂಗಾಲಿ ಸೆಂಟೆನ್ಸ್ ಅಲೈನ್ಡ್ ಸ್ಪೀಚ್ ಕಾರ್ಪಸ್) ಮತ್ತು ಕನ್ನಡ ರೂಪಾಂತರ (ಇಂಗ್ಲಿಷ್–ಕನ್ನಡ ಸೆಂಟೆನ್ಸ್ ಅಲೈನ್ಡ್ ಸ್ಪೀಚ್ ಕಾರ್ಪಸ್) ಹೊಂದಿದೆ ಎಂದು ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ತಾರೀಖ್ ಖಾನ್ ತಿಳಿಸಿದ್ದಾರೆ.

(ಇಂಗ್ಲಿಷ್–ಕನ್ನಡ ಸೆಂಟೆನ್ಸ್ ಅಲೈನ್ಡ್ ಸ್ಪೀಚ್ ಕಾರ್ಪಸ್ ಎಂದರೆ, ಇಂಗ್ಲಿಷ್ ಉಚ್ಚಾರಣೆಯ ಮೇಲೆ ಮಾತೃಭಾಷೆಯ ಪ್ರಭಾವವು ಇರುವುದರಿಂದ ಸಮಗ್ರ ಇಂಡಿಯನ್ ಇಂಗ್ಲಿಷ್ ವಾಗ್ದತ್ತಾಂಶಕ್ಕಾಗಿ ವಿವಿಧ ಭಾರತೀಯ ಹಿನ್ನೆಲೆಯಿಂದ ಬಂದವರಿಂದ ಇಂಗ್ಲಿಷ್‌ನ ಉಚ್ಚಾರಣೆಯನ್ನು ಧ್ವನಿಮುದ್ರಿಸಬೇಕಾಗುತ್ತದೆ. ಸದ್ಯಕ್ಕೆ ಕನ್ನಡ ಮತ್ತು ಬಂಗಾಳಿ ಮಾತೃಭಾಷೆಯವರಿಂದ ಧ್ವನಿಮುದ್ರಿತ ವಾಗ್ದತ್ತಾಂಶವನ್ನು ಮುಕ್ತಗೊಳಿಸಲಾಗಿದೆ.)

ಭಾರತೀಯ ಇಂಗ್ಲಿಷ್ ಸಹ ಒಂದು ಭಾಷೆಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ದೇಶದಲ್ಲಿ ತನ್ನದೇ ಆದ ರೂಪಾಂತರಗಳನ್ನು ಹೊಂದುತ್ತಾ, ಇಲ್ಲಿನ ವಿವಿಧ ಮಾತೃ ಭಾಷೆಗಳೊಂದಿಗೆ ಸಮ್ಮಿಳಿತವಾಗಿ ತನ್ನದೇ ಆದ ವಿಭಿನ್ನ ಭಾಷಾ ಶೈಲಿಗಳೊಂದಿಗೆ, ಕೆಲವು ಭಾಷಾ ವಿಜ್ಞಾನ ಹಾಗೂ ಧ್ವನಿ ವಿಜ್ಞಾನ ವೈಶಿಷ್ಟ್ಯಗಳೊಂದಿಗೆ ಪ್ರಭಾವಿತವಾಗಿವೆ ಹೇಳಿದ್ದಾರೆ.

ಇದೇ ಮೊದಲ ಬಾರಿಗೆ ಸಂಸ್ಥೆಯು ಛತ್ತೀಸಗಢಿ ಭಾಷೆಯ 2 ದತ್ತಾಂಶ ಸಂಗ್ರಹಗಳನ್ನು ಬಿಡುಗಡೆ ಮಾಡಿದ್ದು, ಇದು ಹಿಂದಿ ಭಾಷೆಯೊಂದಿಗೆ ಸಂಯೋಜಿತ ಮಾತೃಭಾಷೆಯಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ -2020ರಲ್ಲಿ ಶಿಫಾರಸು ಮಾಡಿರುವಂತೆ ಶಿಕ್ಷಣ ಮತ್ತು ತಂತ್ರಜ್ಞಾನವನ್ನು ದೇಶದ ಎಲ್ಲಾ ಮಾತೃಭಾಷೆಗಳ ಮೂಲಕ ಉತ್ತೇಜಿಸುವ ಸರ್ಕಾರದ ಗಂಭೀರ ನಿಲುವನ್ನು ಇದು ಪ್ರತಿಪಾದಿಸುತ್ತದೆ ಎಂದು ಮಾಹಿತಿ ನೀಡಲಾಗಿದೆ. ಈ ಎಲ್ಲಾ ದತ್ತಾಂಶ ಸಂಗ್ರಹಗಳು ಒಕ್ಕೂಟದ ಡೇಟಾ ಡಿಸ್ಟ್ರಿಬ್ಯೂಷನ್ ಪೋರ್ಟಲ್‌ನಲ್ಲಿ https://data.ldcil.org ಲಭ್ಯವಿದೆ. ಒಟ್ಟು 57 ದತ್ತಾಂಶ ಸಂಗ್ರಹಗಳಿವೆ ಎಂದು ಮಾಹಿತಿ ನೀಡಿದ್ದಾರೆ.

ದಾರ್ಶನಿಕ ಬೆಂಗಳೂರಿನ ಕುಂಬಳಗೋಡು ಸಮೀಪ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ನಿರ್ಮಿಸುತ್ತಿರುವ ಬಸವಣ್ಣನವರ 112 ಅಡಿ ಎತ್ತರದ ಪ್ರತಿಮೆ ಪ್ರಜಾವಾಣಿ ಚಿತ್ರ: ರಂಜು ಪಿ.

ರಾಜ್ಯದ 16,529 ಶ್ರದ್ಧಾ ಕೇಂದ್ರಗಳಲ್ಲಿ ಸ್ವಚ್ಛತಾ ಸಪ್ತಾಹ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ನೇತೃತ್ವದಲ್ಲಿ ರಾಜ್ಯದ 4.12 ಲಕ್ಷ ಸ್ವಯಂಸೇವಕರು ಚರ್ಚ್, ಮಸೀದಿ, ಬಸದಿ, ಮಂದಿರ ಸೇರಿ 16,529 ಧಾರ್ಮಿಕ ಶ್ರದ್ಧಾ ಕೇಂದ್ರಗಳ ಸ್ವಚ್ಛತಾ ಕಾರ್ಯಕ್ರಮ ಆರಂಭಿಸಿದ್ದಾರೆ.

ಈ ಅಭಿಯಾನ ಜ.7ರಿಂದ ಆರಂಭಗೊಂಡಿದ್ದು, ಜ.13ರವರೆಗೆ ನಡೆಯಲಿದೆ.

ಜ.14ರ ಮಕರ ಸಂಕ್ರಾಂತಿಗೂ ಮೊದಲು ಎಲ್ಲ ಶ್ರದ್ಧಾಕೇಂದ್ರಗಳನ್ನು ಸ್ವಚ್ಛಗೊಳಿಸಿ ನೈರ್ಮಲ್ಯ ಕಾಪಾಡಲು ಉದ್ದೇಶಿಸಲಾಗಿದೆ.

ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ ಅವರ ಆಶಯದಂತೆ 8 ವರ್ಷಗಳಿಂದ ಪ್ರತಿವರ್ಷ ಸ್ವಾತಂತ್ರ್ಯ ದಿನಾಚರಣೆ ಮತ್ತು ಮಕರಸಂಕ್ರಾಂತಿ ಸಂದರ್ಭ ಸ್ವಚ್ಛತಾ ಸಪ್ತಾಹ ಹಮ್ಮಿಕೊಂಡು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಎಲ್.ಎಚ್.ಮಂಜುನಾಥ್ ತಿಳಿಸಿದ್ದಾರೆ.

ಪ್ಲಾಸ್ಟಿಕ್ ಗುಣಮಟ್ಟ: ಹೈಕೋರ್ಟ್ ಮನ್ನಣೆ

ಬೆಂಗಳೂರು: ಪ್ಲಾಸ್ಟಿಕ್ ಉತ್ಪನ್ನಗಳನ್ನು ಸಿದ್ಧಪಡಿಸಲು ಬಳಸುವ ಕಚ್ಚಾವಸ್ತು ಪಾಲಿ ಎಥಿಲೀನ್‌ಗೆ ಗುಣಮಟ್ಟ ನಿಯಂತ್ರಣ ಮಾಡುವ ದಿಸೆಯಲ್ಲಿ ಕೇಂದ್ರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಕೇಂದ್ರ ಸರ್ಕಾರ 2021ರ ಏಪ್ರಿಲ್ 15ರಂದು ಹೊರಡಿಸಿರುವ ಅಧಿಸೂಚನೆ ರದ್ದುಗೊಳಿಸುವಂತೆ ಕೋರಿ ಅಖಿಲ ಭಾರತ ಎಚ್‌ಡಿಪಿಇ (ಹೈಡೆನ್ಸಿಟಿ ಪಾಲಿ ಎಥಿಲೀನ್–ಪಿಪಿ) ಮತ್ತು ಪಾಲಿಪ್ರೊಪಿಲೀನ್ ಫ್ಯಾಬ್ರಿಕ್ ತಯಾರಿಕಾ ಸಂಘ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೇಕ್ ಇನ್ ಇಂಡಿಯಾ ಯೋಜನೆಯಡಿ ಸಿದ್ಧಗೊಳ್ಳುವ ಉತ್ಪನ್ನಗಳಲ್ಲಿ ಗುಣಮಟ್ಟ ಕಾಯ್ದುಕೊಂಡಲ್ಲಿ ಮಾತ್ರ ವಿಶ್ವದ ಇತರ ದೇಶಗಳೊಂದಿಗೆ ಪೈಪೋಟಿ ನಡೆಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಎಲ್ಲ ಮಾನದಂಡಗಳನ್ನು ಅನುಸರಿಸಬೇಕಾಗುತ್ತದೆ. ಆದ್ದರಿಂದ, ಕೇಂದ್ರದ ನಿರ್ಧಾರದಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ' ಎಂದು ತಿಳಿಸಿದೆ.

₹170 ಕೋಟಿ ವಿದ್ಯಾರ್ಥಿ ವೇತನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತ ಸಮುದಾಯದ 2.50 ಲಕ್ಷ ವಿದ್ಯಾರ್ಥಿಗಳಿಗೆ 2023–24ನೇ ಸಾಲಿನ ₹ 170.7 ಕೋಟಿ ವಿದ್ಯಾರ್ಥಿವೇತನವನ್ನು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ಬಿಡುಗಡೆಗೊಳಿಸಿದರು.

ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಈ ವಿಷಯ ಪ್ರಕಟಿಸಿದರು. 1 ರಿಂದ 8ನೇ ತರಗತಿಯಲ್ಲಿ ಕಲಿಯುತ್ತಿರುವ 2,35,661 ವಿದ್ಯಾರ್ಥಿಗಳಿಗೆ ₹ 1 ಸಾವಿರದಿಂದ ₹ 3,500 ಸಾವಿರವರೆಗೆ ವಿದ್ಯಾರ್ಥಿ ವೇತನ ನೀಡಲು ₹90.30 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುವ 280 ವಿದ್ಯಾರ್ಥಿಗಳಿಗೆ ತಲಾ ₹ 20 ಲಕ್ಷದಂತೆ ₹25.27 ಕೋಟಿ, ಪಿಎಚ್‌ಡಿ ಮತ್ತು ಎಂಫಿಲ್ ವ್ಯಾಸಂಗ ಮಾಡುವ 308 ವಿದ್ಯಾರ್ಥಿಗಳಿಗೆ ತಿಂಗಳಿಗೆ ₹10 ಸಾವಿರದಂತೆ ₹3.50 ಕೋಟಿ, ಐಟಿಐ, ಐಐಎಂ ಪ್ರವೇಶ ಪಡೆದಿರುವ 19 ವಿದ್ಯಾರ್ಥಿಗಳಿಗೆ ತಲಾ ₹2 ಲಕ್ಷದಂತೆ ₹38 ಲಕ್ಷ, ವಿದ್ಯಾಸಿರಿ ಯೋಜನೆ ಅಡಿಯಲ್ಲಿ ವಸತಿನಿಲಯ ವಂಚಿತ 3,330 ವಿದ್ಯಾರ್ಥಿ ಗಳಿಗೆ ₹13.50 ಕೋಟಿ ಬಿಡುಗಡೆ ಮಾಡಿರುವುದಾಗಿ ಹೇಳಿದರು.

ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್, ನಿರ್ದೇಶಕ ಜಿಲಾನಿ ಮೊಕಾಶಿ, ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್ ಬಾಷಾ ಪಾಲ್ಗೊಂಡಿದ್ದರು.

ಸ್ತಬ್ಧಚಿತ್ರಕ್ಕೆ ಸಿಗದ ಅವಕಾಶ: ಸಿ.ಎಂ ಕಿಡಿ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ರಾಜ್ಯದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ನಿರಾಕರಣೆ ಮಾಡುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರವು ರಾಜ್ಯದ ಏಳು ಕೋಟಿ ಕನ್ನಡಿಗರಿಗೆ ಅವಮಾನ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಆಕ್ರೋಶ ಹೊರ ಹಾಕಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಟ್ಯಾಗ್ ಮಾಡಿದ್ದಾರೆ. ಕೇಂದ್ರ ಸರ್ಕಾರವು ತನ್ನ ತಪ್ಪನ್ನು ತಿದ್ದಿಕೊಂಡು ಗಣರಾಜ್ಯೋತ್ಸವ ಪರೇಡ್‌ನ ಸ್ತಬ್ಧಚಿತ್ರ ಪ್ರದರ್ಶನದಲ್ಲಿ ರಾಜ್ಯಕ್ಕೆ ಅವಕಾಶ ನೀಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ಹಿಂದಿನ ವರ್ಷ ಕೂಡ ಮೊದಲಿಗೆ ರಾಜ್ಯದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ನಿರಾಕರಣೆ ಮಾಡಿತ್ತು. ವಿವಾದದ ಸ್ವರೂಪ ಪಡೆದ ನಂತರ ಅನುಮತಿ ನೀಡಿತ್ತು ಎಂದು ಅವರು ಹೇಳಿದ್ದಾರೆ.

ನವಕರ್ನಾಟಕದ ಅಭಿವೃದ್ಧಿಯ ದೃಷ್ಟಾರ, ಸಾಮಾಜಿಕ ನ್ಯಾಯದ ಹರಿಕಾರರಾಗಿ ಮಾದರಿ ರಾಜ್ಯವಾಗಿ ಕಟ್ಟಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸ್ತಬ್ಧಚಿತ್ರ, ರಾಜಧಾನಿ ಬೆಂಗಳೂರಿನ ಗ್ರಾಮದೇವತೆ ಅಣ್ಣಮ್ಮದೇವಿಯ ದೇವಸ್ಥಾನದ ಸ್ತಬ್ಧಚಿತ್ರ ಒಳಗೊಂಡಂತೆ ಸುಮಾರು 4 ಸ್ತಬ್ಧಚಿತ್ರ ಮಾದರಿಗಳಿಗೆ ಅವಕಾಶ ಕೋರಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರದ ಆಯ್ಕೆ ಸಮಿತಿಯು ನಮ್ಮ ಮನವಿಯನ್ನು ತಿರಸ್ಕರಿಸಿ, ನಾಡಿನ ಅಸೀಮ ಸಾಧನೆ ಮತ್ತು ಮಾದರಿ ಸಾಧಕರನ್ನು ದೇಶಕ್ಕೆ ಪರಿಚಯಿಸುವ ಅವಕಾಶವನ್ನು ಕಸಿದುಕೊಂಡಿದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಿರುವುದು ಕೇಂದ್ರದ ಬಿಜೆಪಿ ಸರ್ಕಾರಕ್ಕೆ ನುಂಗಲಾರದ ತುತ್ತಾಗಿದೆ. ಹೆಜ್ಜೆಹೆಜ್ಜೆಗೂ ಕನ್ನಡಿಗರ ಮೇಲೆ ಕೇಂದ್ರ ಸರ್ಕಾರ ರಾಜಕೀಯ ದುರುದ್ದೇಶದಿಂದ ಪ್ರಹಾರ ಮಾಡುತ್ತಿದೆ.

ಇದರ ಜೊತೆಗೆ ಈಗ ಸ್ತಬ್ಧಚಿತ್ರ ಪ್ರದರ್ಶನದಲ್ಲಿ ಅವಕಾಶ ನಿರಾಕರಿಸಿ ನಮ್ಮ ಅಸ್ಮಿತೆಯ ಮೇಲೆ ದಾಳಿಗೆ ಇಳಿದಿದೆ ಎಂದೂ ಅವರು ಆರೋಪಿಸಿದ್ದಾರೆ.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.-26122023-250898
CG-DL-E-26122023-250898
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 5219] नई दिल्ली, शुक्रवार, दिसम्बर 22, 2023 / पौष 1, 1945
No. 5219] NEW DELHI, FRIDAY, DECEMBER 22, 2023 / PAUSHA 1, 1945

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
ಹಿರಿಯೂರು–ಹುಳಿಯಾರ್ ಸೆಕ್ಷನ್ (ರಾ.ಹೆ. 150ಎ)
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ, ಪಿ.ಡಬ್ಲ್ಯೂಡಿ. ಆವರಣ, ಬೆಂಗಳೂರು–560001.

ಸಾರ್ವಜನಿಕ ಪ್ರಕಟಣೆ
(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ಎಸ್.ಓ. ನಂ.5449(ಇ) – ಅಧಿಸೂಚನೆ ಸಂಖ್ಯೆ : ಎಸ್.ಓ. ನಂ. 3876(ಇ) ದಿನಾಂಕ: 01.09.2023 ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ಚಿತ್ರದುರ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎರಲ್ಲಿ design Km 410.600 (Existing Km 413.740) to design Km 441.900 (Existing Km 447.610)** (ಹಿರಿಯೂರು – ಹುಳಿಯಾರ್ **ಸೆಕ್ಷನ್**) ರವರೆಗೆ ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ ಮಾಡುವ ಸಲುವಾಗಿ **ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು** ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **"ಪ್ರಜಾವಾಣಿ"** ಮತ್ತು **"ಡೆಕ್ಕನ್ ಹೆರಾಲ್ಡ್"** ದಿನಪತ್ರಿಕೆಗಳಲ್ಲಿ ದಿನಾಂಕ **05ನೇ ಸೆಪ್ಟೆಂಬರ್ 2023ರ** ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜಿ)(1), 3(ಜಿ)(2), 3(ಜಿ)(3) ಮತ್ತು 3(ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮದ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ಹೊಸದುರ್ಗ ತಾಲ್ಲೂಕು: (1) ಚಿಕ್ಕಬ್ಯಾಲದಕೆರೆ (2) ದೊಡ್ಡಬ್ಯಾಲದಕೆರೆ **ಹಿರಿಯೂರು ತಾಲ್ಲೂಕು:** (1) ಉಡವಳ್ಳಿ (2) ಇದ್ದಲಗೇನಹಳ್ಳಿ	**19.01.2024** ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ	ಪ್ರವಾಸಿ ಮಂದಿರ, ಹಿರಿಯೂರು.

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ – 150ಎ, ಹಿರಿಯೂರು–ಹುಳಿಯಾರ್ ಸೆಕ್ಷನ್
ಕೆ.ಆರ್. ವೃತ್ತ, ಪಿ.ಡಬ್ಲ್ಯೂಡಿ. ಆವರಣ, ಬೆಂಗಳೂರು–560001.

ಷೆಡ್ಯೂಲ್

ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎ ರಲ್ಲಿ **design Km 410.600 (Existing Km 413.740) to design Km 441.900 (Existing Km 447.610)** (ಹಿರಿಯೂರು – ಹುಳಿಯಾರ್ ಸೆಕ್ಷನ್)ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಿತ್ರದುರ್ಗ

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು: ಹೊಸದುರ್ಗ					
ಗ್ರಾಮದ ಹೆಸರು : ಚಿಕ್ಕಬ್ಯಾಲದಕೆರೆ					
1	13/1	ಖಾಸಗಿ	ಖುಷ್ಕಿ	0.0202	ಮಂಗಪ್ಪ ಬಿನ್ ದಾಸಪ್ಪ, ಎಂ.ದಾಸಪ್ಪ ಬಿನ್ ಮಂಗಪ್ಪ
ಗ್ರಾಮದ ಹೆಸರು : ದೊಡ್ಡಬ್ಯಾಲದಕೆರೆ					
2	162	ಖಾಸಗಿ	ಖುಷ್ಕಿ/NAK	0.595	ಎನ್.ಲೋಕೇಶ್ ಬಿನ್ ನರಸಿಂಹಯ್ಯ ಅಲಿನೇಟೆಡ್
3	35/1	ಖಾಸಗಿ	ಖುಷ್ಕಿ	0.101	ಪರಣ್ಣ ಬಿನ್ ಕಾರಿಯಪ್ಪ, ಬಿ.ಕೆ.ರಾಮಯ್ಯ ಬಿನ್ ಕರಿಯಪ್ಪ, ಕರಿಯಪ್ಪ ಬಿನ್ ಕಿಟ್ಟಪ್ಪ
4	35/6	ಖಾಸಗಿ	ಖುಷ್ಕಿ	0.4202	ಸತ್ಯನಾರಾಯಣ ಬಿನ್ ಬಿ.ಎಲ್.ರಮೇಶ್, ಬಿ.ಇ.ನಾಗರಾಜ್ ಬಿನ್ ಈರಣ್ಣ
5	36	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ/ ಖರಾಬು	0.075	ಕಂಚಿಗಪ್ಪ ಬಿನ್ ಸುಳ್ಳುವರದಪ್ಪ, ಈರಪ್ಪ ಬಿನ್ ಜಂಪಯ್ಯ, ಚಿದಾನಂದಯ್ಯ ಎಂ, ಲಕ್ಕಣಮ್ಮ, ಲೋಕೇಶ್ವರಪ್ಪ ಮತ್ತು ಇತರರು
6	37	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ / ಖರಾಬು	0.055	ಉಲ್ಲುಬನ್ನಿ ಖರಾಬು, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಚಿತ್ರದುರ್ಗ, ಮಲ್ಲಿಕಾರ್ಜುನಪ್ಪ, ಚಿತ್ತಮ್ಮ ಕೋಂ ಜಂಪಯ್ಯ, ಕೆಂಚಮ್ಮ, ಕಾಳಯ್ಯ, ಚಿಕ್ಕಮ್ಮ, ಕೆಂಚಯ್ಯ, ಲಕ್ಕಪ್ಪ
7	39	ಖಾಸಗಿ	ಖುಷ್ಕಿ	0.0125	ದೊಡ್ಡಯ್ಯ ಬಿನ್ ಕುರುಬುವರದಪ್ಪ, ಬಿ.ಎಲ್.ಜೈಪ್ರಕಾಶ್ ಬಿನ್ ಲಕ್ಕಪ್ಪ, ನಾಗರಾಜು, ಕರಿಯಪ್ಪ ಹಾಗೂ ಇತರರು
8	40/13	ಖಾಸಗಿ	ಖುಷ್ಕಿ	0.0175	ಆರ್.ಶಶಿಧರ ಬಿನ್ ಬಿ.ಕೆ.ರಾಮಯ್ಯ
9	40/14	ಖಾಸಗಿ	ಖುಷ್ಕಿ	0.0175	ಬಿ.ಕೆ. ರಾಮಯ್ಯ ಬಿನ್ ಕರಿಯಪ್ಪ
10	40/15	ಖಾಸಗಿ	ಖುಷ್ಕಿ	0.0303	ಪರಣ್ಣ ಬಿನ್ ಕರಿಯಪ್ಪ
11	40/8	ಖಾಸಗಿ	ಖುಷ್ಕಿ	0.0101	ಕರಿಯಮ್ಮ ಕೋಂ ಲೇಟ್ ಹನುಮಂತಪ್ಪ, ದುರ್ಗಯ್ಯ ಬಿನ್ ಲೇಟ್ ಲಕ್ಕಪ್ಪ, ಕಾಂತರಾಜು, ಸುಶೀಲಮ್ಮ, ಲಕ್ಷ್ಮಮ್ಮ, ಗಂಗಾಧರ
12	40/9	ಖಾಸಗಿ	ಖುಷ್ಕಿ	0.0404	ತಿಮ್ಮಯ್ಯ ಬಿನ್ ಕರಿಯಪ್ಪ, ಲಕ್ಕಪ್ಪ ಬಿನ್ ಕರಿಯಪ್ಪ, ಬೇವಿನಾಳಪ್ಪ ಬಿನ್ ಕರಿಯಪ್ಪ, ಮಲ್ಲಿಕಾರ್ಜುನ ಬಿನ್ ಲೇಟ್ ಮರಿಯಪ್ಪ
13	98/1	ಖಾಸಗಿ	ಖುಷ್ಕಿ	0.163	ವರದಪ್ಪ ಬಿನ್ ವರದಪ್ಪ ಎಕೆ
14	98/2	ಖಾಸಗಿ	ಖುಷ್ಕಿ	0.505	ಶ್ರೀನಿವಾಸ ಜೆ ಬಿ ಬಿನ್ ಬಸವರಾಜ
ತಾಲ್ಲೂಕು: ಹಿರಿಯೂರು					
ಗ್ರಾಮದ ಹೆಸರು : ಉಡವಳ್ಳಿ					
15	6/1	ಖಾಸಗಿ	ತರಿ	0.0303	ಸೈಯದ್ ಅಜ್ಗರ್ ಬಿನ್ ಸೈಯದ್ ಅಫ್ಜಲ್
16	6/7	ಖಾಸಗಿ	ತರಿ	0.045	ಲಿಯಾಕತ್ ಅಲಿ ಹುಸೇನ್ ಬಿನ್ ಇನಾಯತ್‌ಉಲ್ಲಾ
ಗ್ರಾಮದ ಹೆಸರು : ಇದ್ದಲಗೇನಹಳ್ಳಿ					
17	30/5	ಖಾಸಗಿ	NAK	0.125	ಆರ್.ಚಿದಾನಂದ್ ಬಿನ್ ರಾಜಣ್ಣ
18	30/6	ಖಾಸಗಿ	NAK	0.0025	ಆರ್.ಚಿದಾನಂದ್ ಬಿನ್ ರಾಜಣ್ಣ
19	48/4	ಖಾಸಗಿ	ಖುಷ್ಕಿ	0.138	ಬೃಂದಾದೇವಿ ಎಂ.ಎಸ್. ಕೋಂ ದಿವಂಗತ ಪ್ರಸನ್ನಕುಮಾರ್, ಸುಮಂತ್ ಖಾದಿ ಬಿನ್ ಲೇಟ್ ಪ್ರಸನ್ನಕುಮಾರ್, ಮೈನರ್ ಗಾರ್ಡಿಯನ್: ತಾಯಿ ಬೃಂದಾದೇವಿ
			ಒಟ್ಟು	2.4035	

[F. No. 12037/57/2016-KNT(P-6)/3D]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ದಾಖಲೆಯಿಲ್ಲದ ₹85.39 ಲಕ್ಷ ನಗದು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಕಳವು ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲಿನಿಂದ ಬಿಡುಗಡೆಯಾಗಿದ್ದ ಚಿನ್ನಾಭರಣ ಅಂಗಡಿ ಮಾಲೀಕರೊಬ್ಬರು ಜೂಜಾಟದ ಅಡ್ಡೆ ನಡೆಸುತ್ತಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಈ ಪ್ರಕರಣದಲ್ಲಿ ಆರು ಮಂದಿಯನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ರಾಜ್ ಜೈನ್ ತಲೆಮರೆಸಿಕೊಂಡಿದ್ದಾನೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದರು.

ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯ ಸಿರ್ಸಿ ವೃತ್ತದ ಪಾರ್ಕ್ ವೆಸ್ಟ್ ಅಪಾರ್ಟ್‌ಮೆಂಟ್‌ನಲ್ಲಿ ಜೂಜಾಟ ನಡೆಸುತ್ತಿದ್ದ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ, ಆರೋಪಿಗಳನ್ನು ಬಂಧಿಸಿದ್ದರು. ಆರೋಪಿಗಳಿಂದ ಅಂದು ₹1.43 ಲಕ್ಷ ನಗದು ಜಪ್ತಿ ಮಾಡಲಾಗಿತ್ತು. ಬಳಿಕ ಮನೆಯನ್ನು ಶೋಧಿಸಿದಾಗ ಎರಡು ಬ್ಯಾಗ್‌ಗಳಲ್ಲಿ ದಾಖಲೆಗಳಿಲ್ಲದ ₹ 85.39 ಲಕ್ಷ ನಗದು ಪತ್ತೆಯಾಗಿದೆ. ಜೆ.ಜೆ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹೇಳಿದರು.

‘ಆರೋಪಿ ರಾಜ್‌ಜೈನ್ ನಗರ್ತ ಪೇಟೆಯಲ್ಲಿ ಚಿನ್ನಾಭರಣ ಶಾಪ್ ಹೊಂದಿದ್ದು ತನ್ನ ಕೆಲಸಗಾರರ ಮೂಲಕ ಕಳುಹಿಸಿದ್ದ 3.5 ಕೆ.ಜಿ. ಚಿನ್ನಾಭರಣ ಕಳವು ನಡೆದಿದೆ ಎಂದು ಕಾಟನ್‌ಪೇಟೆ ಠಾಣೆಯಲ್ಲಿ ದೂರು ನೀಡಿದ್ದ. ಬಳಿಕ ತನಿಖೆಯಲ್ಲಿ ಈತನೇ ಕಳವು ಮಾಡಿರುವುದು ಪತ್ತೆಯಾಗಿ, ಬಂಧಿಸಲಾಗಿತ್ತು’ ಎಂದು ಕಮಿಷನರ್ ತಿಳಿಸಿದರು.

ದೇಶದಾದ್ಯಂತ ದಾಖಲಾಗಿದ್ದ 546 ಪ್ರಕರಣಗಳಲ್ಲಿ ಬಂಧಿತರ ಬ್ಯಾಂಕ್ ಖಾತೆ ಬಳಕೆ

‘ಫೆಡೆಕ್ಸ್’ ವಂಚನೆ: 14 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಸಾರ್ವಜನಿಕರಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ‘ಫೆಡೆಕ್ಸ್ ಕೊರಿಯರ್’ನಲ್ಲಿ ನಿಮ್ಮ ಹೆಸರಿನಲ್ಲಿ ಮಾದಕ ವಸ್ತುಗಳು ಪೂರೈಕೆ ಆಗುತ್ತಿದೆ ಎಂದು ಬೆದರಿಸಿ, ಲಕ್ಷಾಂತರ ರೂಪಾಯಿ ಸುಲಿಗೆ ಮಾಡುತ್ತಿದ್ದ ರಾಜ್ಯ ಹಾಗೂ ಹೊರರಾಜ್ಯದ 14 ಮಂದಿ ಆರೋಪಿಗಳನ್ನು ವಿಶೇಷ ತನಿಖಾ ದಳದ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಲಲಿತ್‌ಕುಮಾರ್, ರಮೇಶ್ ಕುಮಾರ್, ದಿಲೀಪ್ ಸೋನಿ, ಗುಜರಾತ್‌ನ ಖಾಂಜಿ ಬಾಯ್, ಭಟ್ಕಳದ ಆಸೀಂ ಅಪಂಡಿ, ಮಹಮ್ಮದ್ ಸಲೀಂ ಸೈಫ್, ಕೇರಳದ ಮಲ್ಲಪುರಂನ ಕೆ.ಪಿ. ನೌಫಲ್, ಕೆ.ರಿಯಾಜ್, ನೌಫಲ್, ಅರ್ಷದ್, ಎಂ.ಪಿ. ಆಷೀಕ್, ಮಹಮ್ಮದ್ ರಾಜಿ, ಮಕಾನಿ ಕರೀಂ ಲಾಲ್ ಸೇರಿದಂತೆ 14 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳು ವಿವಿಧ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿಸಿಕೊಂಡಿದ್ದ ₹25.47 ಲಕ್ಷ ಹಣವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಅಪರಾಧ ಸುದ್ದಿ

‘ಇತ್ತೀಚಿಗೆ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಜೈನ್ ನೇತೃತ್ವದಲ್ಲಿ ವಿಶೇಷ ತನಿಖಾ ದಳ ರಚಿಸಲಾಗಿತ್ತು. ಫೆಡೆಕ್ಸ್‌ಗೆ ಸಂಬಂಧಿಸಿದಂತೆ 330 ಪ್ರಕ ರಣಗಳ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿತ್ತು. ಆರೋಪಿಗಳನ್ನು ಬಂಧಿಸಿ ಆರು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ’ ಎಂದು ಮಾಹಿತಿ ನೀಡಿದರು.

‘ಫೆಡೆಕ್ಸ್ ವಂಚನೆಗೆ ಸಂಬಂಧಿಸಿ ದಂತೆ ದೇಶದಾದ್ಯಂತ ದಾಖಲಾಗಿದ್ದ 546 ಪ್ರಕರಣಗಳಲ್ಲಿ ಬಂಧಿತರು ಆರೋಪಿಗಳ ಬ್ಯಾಂಕ್ ಖಾತೆಗಳನ್ನು ಹಣ ವರ್ಗಾವಣೆಗೆ ಬಳಕೆ ಮಾಡಿಕೊಳ್ಳಲಾಗಿತ್ತು. ಆರೋಪಿಗಳ ಬಂಧನದಿಂದ ಬೆಂಗಳೂರು ನಗರದ ಆರು ಪ್ರಕರಣ ಗಳು ಪತ್ತೆಯಾಗಿವೆ. ‘ಫೆಡೆಕ್ಸ್’ಗೆ ಸಂಬಂ ಧಿಸಿದಂತೆ ನಗರದ ಪೊಲೀಸರು ಮೊದಲ ಬಾರಿಗೆ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ. ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಮಾಹಿತಿ ನೀಡಿದರು.

‘ಸಾರ್ವಜನಿಕರಿಗೆ ಐ.ವಿ.ಆರ್ ಮೂಲಕ ಕರೆ ಮಾಡುತ್ತಿದ್ದ ಆರೋಪಿಗಳು, ತಮ್ಮ ಹೆಸರಿನಲ್ಲಿರುವ ಕೊರಿಯರ್‌ನಲ್ಲಿ ಮಾದಕ ವಸ್ತುವಿದ್ದು ಮುಂಬೈಯಿಂದ ತೈವಾನ್‌ಗೆ ವರ್ಗಾವಣೆಯಾಗುತ್ತಿದೆ ಎಂದು ಬೆದರಿಕೆ ಹಾಕುತ್ತಿದ್ದರು. ಅಲ್ಲದೇ ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿದೆ. ಈ ಸಂಬಂಧ ಪ್ರಕರಣ ದಾಖಲು ಮಾಡಲಾಗುವುದು ಎಂದು ಪೊಲೀಸರ ಸೋಗಿನಲ್ಲಿ ಕರೆ ಮಾಡುತ್ತಿದ್ದರು. ಕೂಡಲೇ ಮುಂಬೈ ಅಪರಾಧ ವಿಭಾಗಕ್ಕೆ ತನಿಖೆಗೆ ಬರಬೇಕು ಅಥವಾ ವಿಡಿಯೊ ಕರೆ ಮೂಲಕ ತನಿಖೆಗೆ ಸಹಕರಿಸಬೇಕೆಂದು ಬೆದರಿಸುತ್ತಿದ್ದರು. ತನಿಖೆಗೆ ಸಹಕಾರ ನೀಡದಿದ್ದರೆ ಬಂಧಿಸಲಾಗುವುದೆಂದು ಬೆದರಿಕೆ ಒಡ್ಡುತ್ತಿದ್ದರು’ ಎಂದು ಮಾಹಿತಿ ನೀಡಿದರು.

ಆರ್‌ಬಿಐ ಸಂಸ್ಥೆಯ ಹೆಸರು ಬಳಕೆ: ‘ಕರೆ ಮಾಡುತ್ತಿದ್ದ ಆರೋಪಿಗಳು, ಪೊಲೀಸ್ ಇಲಾಖೆ, ಎನ್‌.ಸಿ.ಬಿ, ಸಿಬಿಐ, ಇಡಿ ಹಾಗೂ ಆರ್‌ಬಿಐ ಸಂಸ್ಥೆಗಳ ಹೆಸರು ಹೇಳುತ್ತಿದ್ದರು. ನಂತರ, ವಿವಿಧ ಬ್ಯಾಂಕ್ ಖಾತೆಗಳಿಗೆ ಲಕ್ಷಾಂತರ ರೂಪಾಯಿಯನ್ನು ಆನ್‌ಲೈನ್ ಮೂಲಕ ಹಣವನ್ನು ವರ್ಗಾವಣೆ ಮಾಡಿಸಿ ಕೊಳ್ಳುತ್ತಿದ್ದರು’ ಎಂದು ಪೊಲೀಸ್ ಕಮಿಷನರ್ ಹೇಳಿದರು.

ವಿದೇಶದಿಂದ ನಿಯಂತ್ರಣ?: ‘ಫೆಡೆಕ್ಸ್ ವಂಚನೆ ಸಂಬಂಧ ದೇಶದಾದ್ಯಂತ ಸಾವಿರಾರು ಪ್ರಕರಣ ದಾಖಲಾಗಿವೆ. ಪ್ರಮುಖ ಆರೋಪಿ ವಿದೇಶ ದಲ್ಲಿ ಕುಳಿತು ಕಾರ್ಯಾಚರಿಸುತ್ತಿರುವ ಸಾಧ್ಯತೆಯಿದೆ. ಹೀಗಾಗಿ ತನಿಖೆ ನಡೆಯುತ್ತಿದೆ. 6 ಪ್ರಕರಣಗಳಲ್ಲಿ ಅಂದಾಜು ₹2 ಕೋಟಿ ಮೊತ್ತವನ್ನು ಆರೋಪಿಗಳು ಪಡೆದು ಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ವೇಶ್ಯಾವಾಟಿಕೆ ಜಾಲ: 9 ಮಂದಿ ಬಂಧನ

ಬೆಂಗಳೂರು: ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ವಿದೇಶಿ ಮಹಿಳೆ ಸೇರಿ 9 ಆರೋಪಿಗಳನ್ನು ಪೂರ್ವವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಪುಲಕೇಶಿನಗರದಲ್ಲಿ ವಾಸವಾಗಿದ್ದ ಟರ್ಕಿ ದೇಶದ ಬಿಯೋನಾಜ್ ಸ್ವಾಮಿಗೌಡ (39), ಆಕೆಯ ಸಹಚರರಾದ ಒಡಿಶಾದ ಜಿತೇಂದ್ರ ಸಾಹು(43), ಪ್ರಮೋದ್ ಕುಮಾರ್(31), ಮನೋಜ್ ದಾಸ್(23) ಅಸ್ಸಾಂನ ಸೌಮಿತ್ರ ಚಂದ್(26), ಮಹಾಲಕ್ಷ್ಮೀ ಲೇಔಟ್ ನಿವಾಸಿ ಪ್ರಕಾಶ್(32), ಲಗ್ಗೆರೆಯ ವೈಶಾಕ್(22), ಪರಪ್ಪನ ಅಗ್ರಹಾರ ನಿವಾಸಿ ಗೋವಿಂದರಾಜ್(34) ಮತ್ತು ನಂದಿನಿಲೇಔಟ್ ನಿವಾಸಿ ಅಕ್ಷಯ್(32) ಬಂಧಿತರು.

ವಿದೇಶದ 7 ಹಾಗೂ ರಾಜ್ಯದ ಇಬ್ಬರು ಮಹಿಳೆಯರನ್ನು ರಕ್ಷಿಸಲಾಗಿದೆ.

ಹಲಸೂರು ಠಾಣೆ ವ್ಯಾಪ್ತಿಯ ದೊಮ್ಮಲೂರಿನ ದಿ ಲೀಲಾ ಪಾರ್ಕ್ ಹೋಟೆಲ್‌ನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ದಾಳಿ ನಡೆಸಿದ್ದ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದಾರೆ.

‘ವಾಟ್ಸ್‌ಆ್ಯಪ್ ಮತ್ತು ಟೆಲಿಗ್ರಾಂನಲ್ಲಿ ‘ಬೆಂಗಳೂರು ಡೇಟಿಂಗ್ ಕ್ಲಬ್’ ಎಂಬ ಗ್ರೂಪ್ ಮೂಲಕ ಗ್ರಾಹಕರನ್ನು ಸೆಳೆದು ದಂಧೆ ನಡೆಸುತ್ತಿದ್ದರು. ಅಲ್ಲದೆ, ವಿದೇಶಿ ಮಹಿಳೆಯರು ಹಾಗೂ ನೆರೆ ರಾಜ್ಯದ ಮಹಿಳೆಯರನ್ನು ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿಸಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಬಿಯೋನಾಜ್ ಸ್ವಾಮಿಗೌಡ ದಂಧೆಯ ರೂವಾರಿ’ ಎಂದು ಪೊಲೀಸರು ಹೇಳಿದರು.

‘ಪ್ರಕರಣದ ಸೂತ್ರಧಾರಿ ಬಿಯೋನಾಜ್ 15 ವರ್ಷಗಳ ಹಿಂದೆ ಟರ್ಕಿಗೆ ಬಂದಿದ್ದ ಉದ್ಯಮಿ ರೋಹಿತ್ ಸ್ವಾಮಿಗೌಡ ಎಂಬಾತನನ್ನು ಪ್ರೀತಿಸಿ ಮದುವೆಯಾಗಿದ್ದಳು. ಬಳಿಕ ಬೆಂಗಳೂರಿಗೆ ಬಂದು ಪೀಣ್ಯದಲ್ಲಿ ಕುಟುಂಬ ಸಮೇತ ವಾಸವಾಗಿದ್ದರು. ಕೆಲ ವರ್ಷಗಳ ಹಿಂದೆ ರೋಹಿತ್ ಸ್ವಾಮಿಗೌಡ ಮೃತಪಟ್ಟಿದ್ದರು. ನಂತರ ಬಿಯೋನಾಜ್, ಪುಲಕೇಶಿನಗರದಲ್ಲಿ ಎರಡು ಫ್ಲ್ಯಾಟ್ ಖರೀದಿಸಿದ್ದಳು. ಮಧ್ಯವರ್ತಿಗಳ ಮೂಲಕ ವಿದೇಶದ ಮಹಿಳೆಯರನ್ನು ಬೆಂಗಳೂರಿಗೆ ಕರೆಸಿ ವೇಶ್ಯಾವಾಟಿಕೆ ದಂಧೆಗೆ ದೂಡುತ್ತಿದ್ದಳು’ ಎಂದು ಪೊಲೀಸರು ಹೇಳಿದರು.

ನಿರ್ವಾಣ್ ಸ್ಪಾ– ತನಿಖೆ ಚುರುಕು: ಮಹಾದೇವಪುರ ಠಾಣೆ ವ್ಯಾಪ್ತಿಯ ನಿರ್ವಾಣ್ ಸ್ಪಾ ಮೇಲೆ ದಾಳಿ ನಡೆಸಿ ವಿದೇಶಿ ಮಹಿಳೆಯರು ಸೇರಿ 40 ಮಂದಿಯನ್ನು ರಕ್ಷಿಸಲಾಗಿದೆ. ಈ ಪೈಕಿ 33 ಮಂದಿ ಭಾರತೀಯರು ಇದ್ದಾರೆ. ಆರೋಪಿಯಿಂದ ₹5.18 ಲಕ್ಷ ಜಪ್ತಿ ಮಾಡಿದ್ದು, 68 ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ನಿರ್ವಾಣ್ ಸ್ಪಾದಲ್ಲಿ ನಡೆಯುತ್ತಿದ್ದ ಅಕ್ರಮ ಚಟುವಟಿಕೆಗೆ ಯಾರೇ ಅಧಿಕಾರಿಗಳು ಬೆಂಬಲ ನೀಡುತ್ತಿದ್ದರು ಕ್ರಮ ಕೈಗೊಳ್ಳಲಾಗುವುದು. ತನಿಖೆ ನಡೆಯುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ರೌಡಿ ಕೊಲೆ: 10 ಆರೋಪಿಗಳ ಬಂಧನ

ಬೆಂಗಳೂರು: ಲಕ್ಕಸಂದ್ರದ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ರೌಡಿ ಜಯಪ್ರಕಾಶ್ ಅಲಿಯಾಸ ನಾಯಿ ಅಪ್ಪಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದ 10 ಆರೋಪಿಗಳನ್ನು ಆಡುಗೋಡಿ ಪೊಲೀಸರು ಬಂಧಿಸಿದ್ದಾರೆ.

ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಅಭಿಷೇಕ್ ಅಲಿಯಾಸ್ ಅಭಿ, ದಿಲೀಪ್ ಅಲಿಯಾಸ್ ಲಕ್ಕಸಂದ್ರ ದಿಲೀಪ್, ಶರತ್‌ಚಂದ್ರ ಅಲಿಯಾಸ್ ಪುಳಿಯೋಗರೆ, ರವಿಕುಮಾರ್, ಸುಬೇಂದು ಅಲಿಯಾಸ್ ಕಣ್ಣ ಹಾಗೂ ಕೊಲೆಗೆ ನಾಲ್ಕು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ‘ಕೃತ್ಯಕ್ಕೆ ಬಳಸಿದ ಕಾರು, ಮೂರು ದ್ವಿಚಕ್ರ ವಾಹನಗಳು ಹಾಗೂ ಮಾರ ಕಾಸ್ತ್ರಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ’ ಎಂದರು.

‘ಸ್ಥಳೀಯ ನಿವಾಸಿಯಾಗಿದ್ದ ಜಯಪ್ರಕಾಶ್, ಅಪರಾಧ ಹಿನ್ನೆಲೆಯುಳ್ಳವನಾಗಿದ್ದ. ಲಕ್ಕಸಂದ್ರದ ಬಸ್ ತಂಗುದಾಣ ಬಳಿಯೇ ದೇವಸ್ಥಾನವಿದೆ. ಪ್ರತಿ ವರ್ಷದಂತೆ ಈ ವರ್ಷವೂ ಅನ್ನದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜಯಪ್ರಕಾಶ್ ಸಹ ಕಾರ್ಯಕ್ರಮದಲ್ಲಿದ್ದ. ಮಾರಕಾಸ್ತ್ರ ಸಮೇತ ಬಂದಿದ್ದ ದುಷ್ಕರ್ಮಿಗಳು, ಏಕಾಏಕಿ ದಾಳಿ ಮಾಡಿದ್ದರು. ಪ್ರಾಣ ಭಯದಲ್ಲಿ ಜಯಪ್ರಕಾಶ್ ತಪ್ಪಿಸಿಕೊಂಡು ರಸ್ತೆಯಲ್ಲಿ ಓಡಲಾರಂಭಿಸಿದ್ದ. ನಂತರ ಆತ ಹೋಟೆಲ್‌ವೊಂದಕ್ಕೆ ನುಗ್ಗಿದ್ದ. ಅಲ್ಲಿಗೂ ನುಗ್ಗಿದ ದುಷ್ಕರ್ಮಿಗಳು ಜಯ ಪ್ರಕಾಶ್‌ನನ್ನು ಕೊಲೆ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಹಳೇ ದ್ವೇಷದ ಹಿನ್ನೆಲೆಯಲ್ಲಿ ಕೊಲೆ ನಡೆದಿದೆ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಆಸ್ತಿಗೆ ಹಾನಿ: ಕರವೇ ಅಧ್ಯಕ್ಷ ನಾರಾಯಣಗೌಡ ಮತ್ತೆ ಬಂಧನ

ಬೆಂಗಳೂರು: ಕರ್ನಾಟಕ ರಕ್ಷಣಾ ವೇದಿಕೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದ ವೇಳೆ ನಡೆದ ಗಲಾಟೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರು ಮಂಗಳವಾರ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಮತ್ತೆ ಜೈಲು ಸೇರಿದರು.

ವಾಣಿಜ್ಯ ಮಳಿಗೆಗಳಲ್ಲಿ ಕನ್ನಡ ಕಡ್ಡಾಯವಾಗಿ ಬಳಸುವಂತೆ ಹಾಗೂ ನಾಮಫಲಕದಲ್ಲಿ ಶೇ 60ರಷ್ಟು ಕನ್ನಡ ಭಾಷೆ ಬಳಕೆ ಮಾಡುವಂತೆ ಒತ್ತಾಯಿಸಿ ನಾರಾಯಣಗೌಡ ನೇತೃತ್ವದಲ್ಲಿ ಜಾಥಾ ನಡೆದಿತ್ತು. ಆಗ ಗಲಾಟೆ ನಡೆದು ನಾಮಫಲಕಕ್ಕೆ ಮಸಿ ಬಳಿಯಲಾಗಿತ್ತು. ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಅವರೂ ಸೇರಿದಂತೆ 36 ಕಾರ್ಯಕರ್ತರನ್ನು ಬಂಧಿಸಲಾಗಿತ್ತು.

ಶನಿವಾರ ಜಾಮೀನು ಲಭಿಸಿದ್ದರೂ ಆದೇಶ ಪ್ರತಿ ಲಭಿಸದ ಕಾರಣಕ್ಕೆ ಬಿಡುಗಡೆಗೊಂಡಿರಲಿಲ್ಲ. ಮಂಗಳವಾರ ವಕೀಲರು ಜೈಲು ಅಧಿಕಾರಿಗಳಿಗೆ ಜಾಮೀನು ಆದೇಶ ಹಸ್ತಾಂತರಿಸಿದರು. ಅದಾದ ಮೇಲೆ ಬಿಡುಗಡೆಯಾದರು. ಸ್ಥಳದಲ್ಲಿ ಕಾದಿದ್ದ ಕುಮಾರಸ್ವಾಮಿ ಬಡಾವಣೆಯ ಠಾಣೆ ಪೊಲೀಸರು ಅವರನ್ನು ಬಂಧಿಸಿದರು.

‘ಸಾರ್ವಜನಿಕರ ಆಸ್ತಿಗೆ ಹಾನಿ ಮಾಡಿದ ಸಂಬಂಧ 2017ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಮತ್ತೆ ಬಂಧಿಸಲಾಗಿದೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಧೀಶರ ಎದುರು ಹಾಜರುಪಡಿಸಿ, ಮತ್ತೆ ಜೈಲಿಗೆ ಕಳುಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಚಾರ ನಿಯಮ ಉಲ್ಲಂಘನೆ: 711 ಡಿ.ಎಲ್ ಅಮಾನತು

ಬೆಂಗಳೂರು: ನಗರದಲ್ಲಿ ಕಳೆದ ವರ್ಷ ಅಪಘಾತ ಹಾಗೂ ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಚಾಲಕರು ಹಾಗೂ ಬೈಕ್ ಸವಾರರ 711 ಚಲನಾ ಪರವಾನಗಿ (ಡಿ.ಎಲ್)ಗಳನ್ನು ಅಮಾನತು ಮಾಡಲಾಗಿದೆ.

ನಗರ ಸಂಚಾರ ವಿಭಾಗದ ವ್ಯಾಪ್ತಿಯಲ್ಲಿ ಕಳೆದ ವರ್ಷ 2,974 ಡಿ.ಎಲ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು.

ಬೆಂಗಳೂರು ನಗರ, ರಾಜ್ಯದ ಇತರೆ ಜಿಲ್ಲೆ ಹಾಗೂ ಹೊರ ರಾಜ್ಯದ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಡಿ.ಎಲ್ ಅಮಾನತು ಮಾಡುವಂತೆ ಕಳುಹಿಸಲಾಗಿತ್ತು. ಅದರಂತೆ ಸಾರಿಗೆ ಇಲಾಖೆ ಅಧಿಕಾರಿಗಳು, ಡಿ.ಎಲ್ ಅಮಾನತು ಮಾಡಿದ್ದಾರೆ. ಉಳಿದ, 2,263 ಡಿ.ಎಲ್‌ಗಳನ್ನು ಅಮಾನತು ಪಡಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಸಂಚಾರ ವಿಭಾಗದ ಪೊಲೀಸರು ಮಾಹಿತಿ ನೀಡಿದ್ದಾರೆ.

ಕಾನೂನು ಉಲ್ಲಂಘಿಸಿ ನೋಂದಣಿ ಮಾಲೀಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ಅಪಾರ್ಟ್‌ಮೆಂಟ್ ಮಾಲೀಕರು ನೋಂದಣಿ ಮಾಡಬೇಕಿದ್ದ ‘ಡೀಡ್ ಆಫ್ ಡಿಕ್ಲರೇಷನ್’ ಅನ್ನು ಫ್ಲ್ಯಾಟ್ ಮಾಲೀಕರೊಬ್ಬರು ನಿಯಮ ಉಲ್ಲಂಘಿಸಿ ನೋಂದಣಿ ಮಾಡಿದ್ದು, ಈ ಸಂಬಂಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರಸ್ತೆಯ ಕೈಲಾಸ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರ ಗಣಪತಿ ಹೆಗ್ಡೆ ಮತ್ತಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್‌ನಲ್ಲಿ ಏನಿದೆ?: ‘ಕೆಂಗೇರಿ ಉಪ ನೋಂದಣಾಧಿಕಾರಿ ಕಚೇರಿಯ ಹಿರಿಯ ನೋಂದಣಾಧಿಕಾರಿ ವೆಂಕಟೇಶ್ ಅವರು, ಅಕ್ಟೋಬರ್ 13ರಂದು ನೀಡಿದ್ದ ಲಿಖಿತ ದೂರಿನ ಬಗ್ಗೆ ಜ.2ರಂದು ಲಿಖಿತವಾಗಿ ಮಾಹಿತಿ ಪಡೆದುಕೊಂಡು ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಗಣಪತಿ ಹೆಗ್ಡೆ ಅವರು 2015ರ ಅಕ್ಟೋಬರ್ 16ರಂದು ತಮ್ಮ ಕಚೇರಿಯಲ್ಲಿ ಡೀಡ್ ಆಫ್ ಡಿಕ್ಲರೇಷನ್ ಅನ್ನು ನೋಂದಾಯಿಸಿದ್ದಾರೆ. ಆದರೆ, ಅವರಿಗೆ ಪತ್ರಗಳನ್ನು ಹಾಜರುಪಡಿಸಿ ನೋಂದಣಿ ಮಾಡಿಕೊಳ್ಳುವ ಅಧಿಕಾರ ಇಲ್ಲ. ಆದರೂ, ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಡೀಡ್ ಆಫ್ ಡಿಕ್ಲರೇಷನ್ ನೋಂದಣಿ ಮಾಡಿಕೊಂಡಿದ್ದಾರೆಂದು ದೂರುದಾರ ಕೆ.ಎಸ್. ರವಿಕುಮಾರ್ ಆರೋಪಿಸಿದ್ದಾರೆ. ಗಣಪತಿ ಅವರು ಒಂದು ಫ್ಲ್ಯಾಟ್‌ಗೆ ಮಾಲೀಕರಾಗಿದ್ದು, ಡೀಡ್ ಆಫ್ ಡಿಕ್ಲರೇಷನ್ ನೋಂದಣಿ ಮಾಡುವಾಗ ಕೆಲವು ವಿಚಾರಗಳನ್ನು ಮರೆಮಾಚಿದ್ದಾರೆ. ಸಿ.ಎನ್. ವಸಂತ, ಆರ್.ರಾಮಯ್ಯ, ಬಿ.ಎಂ.ನಾಗರಾಜು, ಎನ್.ಎಸ್. ವೆಂಕಟಚಲಪತಿ, ಬಿ.ಎನ್. ತಿಪ್ಪೇಸ್ವಾಮಿ, ಹರೀಶ್‌ಕುಮಾರ್, ಕಿರಣ್‌ಕುಮಾರ್, ಮುರಳೀಧರ್ ತಿಲಕ್ ಎಸ್. ತಲ್ಲಿಕೇರಿ, ಅರುಣ್ ಬಿ. ಕನ್ನೂರು, ಜಿ.ಶೈಲಜಾ, ರಾಘವೇಂದ್ರ, ಪ್ರಭಾಕರ್ ಮತ್ತಿತರರ ಪರವಾಗಿ ಜಿಪಿಎ ಹೋಲ್ಡರ್ ಗಣಪತಿ ಅವರು ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯ್ದೆ ಅನ್ನು ಉಲ್ಲಂಘಿಸಿ ನೋಂದಣಿ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ರಾಜ್ಯಪಾಲರಿಗೆ ಕಪ್ಪು ಬಾವುಟ ಪ್ರದರ್ಶನ

ಇಡುಕ್ಕಿ (ಪಿಟಿಐ): ಕೇರಳ ರಾಜ್ಯಪಾಲ ಆರಿಫ್ ಮೊಹಮದ್ ಖಾನ್ ಅವರು ತೊಡುಪುಳಕ್ಕೆ ಭೇಟಿ ನೀಡಿದ್ದ ವೇಳೆ ಎಲ್‌ಡಿಎಫ್‌ನ ಯುವ ಘಟಕದ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿದರು.

ಕೇರಳ ಸರ್ಕಾರದ ಭೂಹಂಚಿಕೆ ಕಾಯ್ದೆ 2023ಕ್ಕೆ ರಾಜ್ಯಪಾಲರು ಅಂಕಿತ ಹಾಕದಿರುವುದನ್ನು ವಿರೋಧಿಸಿ ಇಡುಕಿಯಲ್ಲಿ ಎಲ್‌ಡಿಎಫ್ ಕರೆಕೊಟ್ಟಿದ್ದ ಹರತಾಳದ ನಡುವೆಯೇ ರಾಜ್ಯಪಾಲರು ಇಡುಕ್ಕಿ ಜಿಲ್ಲೆಗೆ ಭೇಟಿ ನೀಡಿದ್ದರು. ‘ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನ ಸಮಿತಿ’ಯ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯಪಾಲರು ತೆರಳುತ್ತಿದ್ದ ವೇಳೆ ಕಾರನ್ನು ತಡೆಯಲು ಯತ್ನಿಸಿದ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿದರು.

ಸಿಪಿಎಂನ ಸ್ಥಳೀಯ ಕಾರ್ಯಕರ್ತರು ರಾಜ್ಯಪಾಲರ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿ, ಧಿಕ್ಕಾರ ಕೂಗಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯಪಾಲ ಖಾನ್ ಅವರು, ‘ನನ್ನ ಸಾಂವಿಧಾನಿಕ ಕರ್ತವ್ಯಗಳನ್ನು ನಾನು ಮಾಡುತ್ತಿದ್ದೇನೆ. ನಾನು ಜನರ ಸೇವಕ ಹೊರತು ರಬ್ಬರ್ ಸ್ಟಾಂಪ್ ಅಲ್ಲ. ಕೇರಳದ ಜನರ ಅಭಿವೃದ್ಧಿಗಾಗಿ ಕೆಲಸ, ಮಾಡುವುದು ನನ್ನ ಕರ್ತವ್ಯ. ಈ ವಿಚಾರದಲ್ಲಿ ಯಾರೊಂದಿಗೂ ರಾಜಿ ಆಗುವುದಿಲ್ಲ’ ಎಂದರು.

ಆರ್‌.ಅಶೋಕ ನೇತೃತ್ವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿದ ಆರ್. ಅಶೋಕ ನೇತೃತ್ವದ ಬಿಜೆಪಿ ನಿಯೋಗ ಬರಪರಿಸ್ಥಿತಿ ಕುರಿತು ಪಕ್ಷ ಸಿದ್ಧಪಡಿಸಿದ ವರದಿಯನ್ನು ಸಲ್ಲಿಸಿತು. ನಿಯೋಗದಲ್ಲಿ ಶಾಸಕ ಬಸವರಾಜ ಬೊಮ್ಮಾಯಿ, ಸಂಸದ ಡಿ.ವಿ. ಸದಾನಂದಗೌಡ ಹಾಗೂ ಬೆಂಗಳೂರು ಪ್ರತಿನಿಧಿಸುವ ಬಿಜೆಪಿ ಶಾಸಕರಿದ್ದರು

ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲ

ಬಿಜೆಪಿಯಿಂದ ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭೀಕರ ಬರಗಾಲವಿದ್ದು, ಕಾಂಗ್ರೆಸ್ ನೇತೃತ್ವದ ಸರ್ಕಾರ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬಿಜೆಪಿಯ ಶಾಸಕರು ಮತ್ತು ಸಂಸದರ ನಿಯೋಗ ಮಂಗಳವಾರ ದೂರು ಸಲ್ಲಿಸಿತು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ನೇತೃತ್ವದ ನಿಯೋಗದಲ್ಲಿ ಸಂಸದ ಡಿ.ವಿ. ಸದಾನಂದ ಗೌಡ, ಶಾಸಕರಾದ ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಕೆ. ಗೋಪಾಲಯ್ಯ ಮತ್ತು ಮುನಿರತ್ನ ನಿಯೋಗದಲ್ಲಿದ್ದರು.

ಬಿಜೆಪಿಯ ಶಾಸಕರು ಮತ್ತು ಮುಖಂಡರು ವಿವಿಧ ಜಿಲ್ಲೆಗಳಲ್ಲಿ ನಡೆಸಿದ ಬರ ಅಧ್ಯಯನ ಪ್ರವಾಸದ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಿದ ನಿಯೋಗ, ‘ಸಂಕಷ್ಟದಲ್ಲಿರುವ ಜನರಿಗೆ ನೆರವು ನೀಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ತಕ್ಷಣ ಮಧ್ಯ ಪ್ರವೇಶಿಸಿ ಪರಿಹಾರ ಕಾರ್ಯಗಳನ್ನು ಚುರುಕುಗೊಳಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಆಗ್ರಹಿಸಿತು.

ಅಸಲು ಪಾವತಿಸಿದ ರೈತರಿಗೆ ಬಡ್ಡಿ ಮನ್ನಾ ಮಾಡುವ ಬದಲಿಗೆ ಎಲ್ಲ ರೈತರ ₹ 2 ಲಕ್ಷದವರೆಗಿನ ಕೃಷಿ ಸಾಲ ವನ್ನು ಮನ್ನಾ ಮಾಡಬೇಕು. ಬೆಳೆ ನಷ್ಟದ ಪರಿಹಾರವನ್ನು ತ್ವರಿತವಾಗಿ ಪಾವತಿಸಬೇಕು. ಸಂಕಷ್ಟದಲ್ಲಿರುವ ಜನರಿಗೆ ಆಹಾರದ ಕಿಟ್ ವಿತರಿಸಬೇಕು. ಶಾಸಕರ ನೇತೃತ್ವದ ಕಾರ್ಯಪಡೆಗಳಿಗೆ ತಲಾ ₹ 5 ಕೋಟಿ ಅನುದಾನ ಬಿಡುಗಡೆ ಮಾಡಬೇಕು ಎಂಬ ಬೇಡಿಕೆಗಳುಳ್ಳ ಮನವಿಯನ್ನೂ ನಿಯೋಗವು ರಾಜ್ಯಪಾಲರಿಗೆ ಸಲ್ಲಿಸಿತು.

‘ಕೈಲಾಗದಿದ್ದರೆ ರಾಜೀನಾಮೆ ನೀಡಲಿ’: ರಾಜ್ಯಪಾಲರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, ‘ಕೇಂದ್ರ ಕಡೆ ಕೈ ತೋರಿಸುವುದನ್ನು ಬಿಟ್ಟು ರಾಜ್ಯ ಸರ್ಕಾರವು ರೈತರಿಗೆ ತ್ವರಿತವಾಗಿ ಪರಿಹಾರ ವಿತರಿಸಬೇಕು. ಅದು ಸಾಧ್ಯವಾಗದಿದ್ದರೆ ಈ ಸರ್ಕಾರದಲ್ಲಿರುವ ಎಲ್ಲರೂ ರಾಜೀನಾಮೆ ನೀಡಲಿ’ ಎಂದು ಆಗ್ರಹಿಸಿದರು.

‘ಬರಗಾಲದಿಂದ ಜನರು ಕಂಗೆಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರವು ಅಲ್ಪಸಂಖ್ಯಾತರ ತುಷ್ಟೀಕರಣದಲ್ಲೇ ಕಾಲ ಕಳೆಯುತ್ತಿದೆ. ಸರ್ಕಾರದ ವೈಫಲ್ಯ ಗಳನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ’ ಎಂದರು.

ವೈದ್ಯರ ಕೊರತೆ: ಕೇಂದ್ರ–ರಾಜ್ಯಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರೂ ಸೇರಿದಂತೆ 16 ಸಾವಿರಕ್ಕೂ ಹೆಚ್ಚಿನ ವೈದ್ಯಕೀಯ ಸಿಬ್ಬಂದಿ ಕೊರತೆ’ ಇದೆ ಎಂಬ ಆಕ್ಷೇಪಣೆಗೆ ಸಂಬಂಧಿಸಿದ ಅರ್ಜಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧದ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿ ವಿಚಾರಣೆಯನ್ನು ಫೆಬ್ರುವರಿ 8ಕ್ಕೆ ಮುಂದೂಡಿದೆ.

ಏನಿದು ಅರ್ಜಿ?: ರಾಜ್ಯದ ಎಲ್ಲ ಜಿಲ್ಲೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಂಬಿಬಿಎಸ್ ವೈದ್ಯರೂ ಸೇರಿದಂತೆ 16 ಸಾವಿರಕ್ಕೂ ಹೆಚ್ಚು ವೈದ್ಯಕೀಯ, ಅರೆ ವೈದ್ಯಕೀಯ ಹಾಗೂ ಡಿ ಗ್ರೂಪ್ ಸಿಬ್ಬಂದಿ ಕೊರತೆ ಇದೆ ಎಂಬ ಬಗ್ಗೆ ‘ಫೆಡರೇಷನ್ ಆಫ್ ಇಂಡಿಯನ್ ಛೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ’ (ಎಫ್‌ಐಸಿಸಿಐ) ವರದಿಯೊಂದನ್ನು ಬಿಡುಗಡೆ ಮಾಡಿತ್ತು.

‘ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 723 ಎಂಬಿಬಿಎಸ್ ವೈದ್ಯರು, 7,492 ಶುಶ್ರೂಷಕಿಯರು, 1,517 ಲ್ಯಾಬ್ ಟೆಕ್ನೀಷಿಯನ್‌ಗಳು, 1,512 ಫಾರ್ಮಾಸಿಸ್ಟ್‌ಗಳು, 1,752 ಸಹಾಯಕರು 3,253 ಗ್ರೂಪ್ ಡಿ ನೌಕರರೂ ಸೇರಿದಂತೆ 16,500ಕ್ಕೂ ಹೆಚ್ಚು ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ, ತಾಂತ್ರಿಕ ಹಾಗೂ ಡಿ ಗ್ರೂಪ್ ನೌಕರರ ಕೊರತೆ ಇದೆ. ನಗರ ಪ್ರದೇಶಗಳಲ್ಲಿ 245, ಗ್ರಾಮೀಣ ಪ್ರದೇಶದಲ್ಲಿ 209 ಸೇರಿ ಒಟ್ಟು 454 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆ ಇದೆ’ ಎಂದು ವರದಿಯಲ್ಲಿ ತಿಳಿಸಲಾಗಿತ್ತು. ಈ ವರದಿ ಉಲ್ಲೇಖಿಸಿ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ಸುದ್ದಿಯನ್ನು ಆಧರಿಸಿ ಹೈಕೋರ್ಟ್ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿತ್ತು.

ಸರ್ಕಾರದ ಕಾರ್ಯದರ್ಶಿಗೆ ಶಿಕ್ಷೆಯಾದರೆ ಗೊತ್ತಾಗುತ್ತೆ...

ಬೆಂಗಳೂರು: ‘ಮಲ ಹೊರುವ ಪದ್ಧತಿಯನ್ನು ನಿಷೇಧಿಸಲಾಗಿದ್ದರೂ ಅದನ್ನು ಜೀವಂತವಾಗಿ ಇರಿಸಲಾಗಿದೆ ಮತ್ತು ಇಂತಹ ಪ್ರಕರಣಗಳಲ್ಲಿ ಯಾರೊಬ್ಬರಿಗೂ ಯಾಕೆ ಶಿಕ್ಷೆಯಾಗಿಲ್ಲ’ ಎಂದು ಖಾರವಾಗಿ ಪ್ರಶ್ನಿಸಿರುವ ಹೈಕೋರ್ಟ್, ‘ಇದೊಂದು ರೀತಿಯಲ್ಲಿ ನ್ಯಾಯದ ವಿಡಂಬನೆ ಆಗಿದ್ದು, ಸರ್ಕಾರದ ಕಾರ್ಯದರ್ಶಿಗೆ ಶಿಕ್ಷೆ ವಿಧಿಸದೇ ಹೋದರೆ ಏನೂ ಸುಧಾರಣೆಯಾಗುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಈ ಕುರಿತ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ಸೋಮವಾರ ವಿಚಾರಣೆ ನಡೆಸಿ, ‘ಮಲ ಹೊರುವುದಕ್ಕೆ ಪರಿಶಿಷ್ಟ ಜಾತಿಯ ಜನರನ್ನು ಬಳಕೆ ಮಾಡಿದಾಗ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ನಿಷೇಧ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲು ಅವಕಾಶ ಇದ್ದರೂ ಅದನ್ನು ಬಳಕೆ ಮಾಡುತ್ತಿಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿತು.

ವಿಚಾರಣೆ ವೇಳೆ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಶ್ರೀಧರ್ ಪ್ರಭು, ‘ಮಲ ಹೊರುವ ಪದ್ಧತಿಯಲ್ಲಿ ತೊಡಗಿರುವವರಿಗೆ ಪುನರ್ವಸತಿ ಕಲ್ಪಿಸಬೇಕು ಮತ್ತು ಮಲ ಸ್ವಚ್ಛತೆಗೆ ತಂತ್ರಜ್ಞಾನ ಬಳಕೆ ಮಾಡಬೇಕು’ ಎಂದರು.

ಇದಕ್ಕೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ‘ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಲ ಸ್ವಚ್ಛತೆಗೆ ಸರ್ಕಾರ ಯಂತ್ರಗಳ ಖರೀದಿ ಪ್ರಕ್ರಿಯೆ ಆರಂಭಿಸಿದೆ’ ಎಂದು ಪ್ರತಿಕ್ರಿಯಿಸಿದರು.

ಇದಕ್ಕೆ ಮುಖ್ಯ ನ್ಯಾಯಮೂರ್ತಿ ವರಾಳೆ ಅವರು, ‘ಈ ಕೆಲಸಕ್ಕೆ ಬೃಹತ್ ಕಂಪೆನಿಗಳ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಬಳಕೆ ಮಾಡಬಹುದು. ಯಾಂತ್ರಿಕ ವ್ಯವಸ್ಥೆಗೆ ಜೋತು ಬಿದ್ದು ಮಂದಗತಿಗೆ ಆಸ್ಪದ ನೀಡುವಂತಾಗಬಾರದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರಂತೂ ವಿಚಾರಣೆಯ ಒಂದು ಹಂತದಲ್ಲಿ, ‘ಮಲ ಹೊರುವ ಪದ್ಧತಿ ನಿಷೇಧಿಸಿ 2013ರಲ್ಲೇ ಕಾಯ್ದೆ ಜಾರಿಗೆ ತರಲಾಗಿದೆ. ಆದರೂ ಸರ್ಕಾರ ಆರೋಪಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತಿಲ್ಲ. ಮಹತ್ವ ಇಲ್ಲದ ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಮಾತ್ರ ಕ್ರಮವೇ ಇಲ್ಲವಾಗಿದೆ. ಇಂತಹ ಪ್ರಕರಣದ ವಿಚಾರಣೆಯಲ್ಲಿ ಕಳಪೆ ಸಾಮರ್ಥ್ಯ ಪ್ರದರ್ಶಿಸಿದ ಪ್ರಾಸಿಕ್ಯೂಷನ್ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ’ ಎಂದು ಕಿಡಿಕಾರಿದರು.

ರಾಜ್ಯದ ಕೆಲವೆಡೆ ಶಾಲಾ ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಯನ್ನೂ ಇದೇ ಪ್ರಕರಣದ ಜೊತೆ ಸೇರ್ಪಡೆ ಮಾಡಲು ಆದೇಶಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಆಕ್ಷೇಪಣೆ ಸಲ್ಲಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಲಾಗಿದೆ.

ಸನ್ನದು ಅಮಾನತು ಆದೇಶ ವಜಾ

ಬೆಂಗಳೂರು: ಸಹೋದ್ಯೋಗಿಯಾಗಿದ್ದ ಕಿರಿಯ ವಕೀಲೆಗೆ ಲೈಂಗಿಕ ಕಿರುಕುಳ ನೀಡಿ ಜೀವ ಬೆದರಿಕೆ ಹಾಕಿದ ಆರೋಪಪಡಿ ನಗರದ ಕೌಟುಂಬಿಕ ನ್ಯಾಯಾಲಯಗಳ ವಕೀಲ ಎಚ್.ಮಂಜುನಾಥ್ (46) ಅವರ ಸನ್ನದನ್ನು ತಾತ್ಕಾಲಿಕವಾಗಿ ಅಮಾನತುಪಡಿಸಿದ್ದ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಆದೇಶವನ್ನು ಹೈಕೋರ್ಟ್ ತಳ್ಳಿ ಹಾಕಿದೆ.

‘ಎಚ್. ಮಂಜುನಾಥ್ ಅವರು ಇದೇ 10ರೊಳಗೆ ಆಕ್ಷೇಪಣೆ ಸಲ್ಲಿಸಬೇಕಿದ್ದು, ಪರಿಷತ್ ಇದನ್ನು ಪರಿಗಣಿಸಬೇಕು’ ಎಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶಿಸಿದೆ.

ವಿಚಾರಣೆ ವೇಳೆ ಸ್ವತಃ ವಾದ ಮಂಡಿಸಿದ್ದ ಎಚ್.ಮಂಜುನಾಥ್, ‘ಆಕ್ಷೇಪಣೆ ಸಲ್ಲಿಸಲು ನನ್ನಿಂದ ವಿಳಂಬವಾಗಿದೆ. ಅಷ್ಟಕ್ಕೇ ನನ್ನ ಸನ್ನದನ್ನು ಅಮಾನತು ಮಾಡಲಾಗಿದೆ. ನನ್ನ ವಿರುದ್ಧದ ದೂರನ್ನು ಕಾಯ್ದೆಬದ್ಧ ರೀತಿಯಲ್ಲಿ ಸ್ಥಾಪಿಸಲಾಗಿರುವ ಸಮಿತಿಯ ಮುಂದೆ ಇರಿಸಬೇಕಿತ್ತು. ಆದರೆ ಇರಿಸಿಲ್ಲ. ಆದ್ದರಿಂದ, ನನ್ನ ವಿರುದ್ಧದ ದೂರು ಮತ್ತು ಇದಕ್ಕೆ ಸಂಬಂಧಿಸಿದ ಆದೇಶ ಊರ್ಜಿತವಾಗುವುದಿಲ್ಲ’ ಎಂದು ಪ್ರತಿಪಾದಿಸಿದ್ದರು.

ಪ್ರಕರಣವೇನು?: ‘ದೂರುದಾರ ವಕೀಲೆ ನೀಡಿದ್ದ ದೂರಿಗೆ ಸಂಬಂಧಿಸಿದಂತೆ ಎಚ್. ಮಂಜುನಾಥ್ (ಸನ್ನದು ನಂಬರ್ ಕೆಎಆರ್ 1260/2014) ಅವರಿಗೆ ಕಾರಣ ಕೇಳಿ ಪರಿಷತ್ ನೋಟಿಸ್ ಜಾರಿಗೊಳಿಸಿತ್ತು. ಇದಕ್ಕೆ ಪ್ರತಿಯಾಗಿ ಮಂಜುನಾಥ್ 2023ರ ಅಕ್ಟೋಬರ್ 5ರಂದು ಪರಿಷತ್‌ಗೆ ಪತ್ರವೊಂದನ್ನು ಸಲ್ಲಿಸಿ ವಿವರಣೆ ಸಲ್ಲಿಸಲು 10ರಿಂದ 14 ದಿನಗಳ ಅವಕಾಶ ಬೇಕು ಎಂದು ಕೋರಿದ್ದರು. ಆದರೆ, 30 ದಿನ ಕಳೆದರೂ ವಿವರಣೆಯನ್ನಾಗಲೀ ಅಥವಾ ಆಕ್ಷೇಪಣೆಯನ್ನಾಗಲೀ ಸಲ್ಲಿಸಲು ಅವರು ವಿಫಲವಾಗಿದ್ದಾರೆ. ಹೀಗಾಗಿ, ಸನ್ನದನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸುವ ನಿರ್ಧಾರಕ್ಕೆ ಬರಲಾಗಿದೆ’ ಎಂಬ ಅಭಿಪ್ರಾಯದೊಂದಿಗೆ ಪರಿಷತ್ ಸದಸ್ಯರ ಶಿಸ್ತು ಸಮಿತಿಯು ಸನ್ನದು ಅಮಾನತು ನಿರ್ಧಾರ ಕೈಗೊಂಡಿತ್ತು.

ಶಿವಮೂರ್ತಿ ಶರಣರಿಗೆ ಹೈಕೋರ್ಟ್ ಪ್ರಶ್ನೆ

ಯಾಕಿಷ್ಟು ಅಧಿಕಾರದ ಹಪಾಹಪಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಷರತ್ತುಬದ್ಧ ಜಾಮೀನು ಪಡೆದು ಜೈಲಿನಿಂದ ಹೊರಬಂದಿರುವ ನಿಮಗೆ ಅಧಿಕಾರ ನಡೆಸಲು ಯಾಕೆ ಅಷ್ಟೊಂದು ಹಪಾಹಪಿ’ ಎಂದು ಹೈಕೋರ್ಟ್, ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರನ್ನು ಪ್ರಶ್ನಿಸಿದೆ.

‘ಪೋಕ್ಸೊ ಪ್ರಕರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಿಂದ ಹೊರಬಂದ ನಂತರ ಶರಣರು ಮುರುಘಾ ಮಠದ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷರಾಗಿ ಕಾರ್ಯಭಾರ ವಹಿಸಿಕೊಳ್ಳುವ ಮೂಲಕ ನ್ಯಾಯಾಂಗ ನಿಂದನೆ ಎಸಗಿದ್ದಾರೆ’ ಎಂದು ಆರೋಪಿಸಿ ಎಸ್‌ಜೆಎಂ ವಿದ್ಯಾಪೀಠದ ಆಡಳಿತ ಮಂಡಳಿ ನಿರ್ದೇಶಕ ಆರ್. ನಾಗರಾಜ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಮುಖ್ಯಾಂಶಗಳು

- ಫೆ. 5ಕ್ಕೆ ವಿಚಾರಣೆ ಮುಂದೂಡಿಕೆ
- ಮೌಖಿಕ ಆದೇಶ

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಧನಂಜಯ ಜೋಶಿ ಅವರು, ‘ಮಠದ ಆಡಳಿತಕ್ಕೆ ಸಂಬಂಧಿಸಿದಂತೆ ಇದೇ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠ ನೀಡಿದ್ದ ಆದೇಶವನ್ನು ಶರಣರು ಉಲ್ಲಂಘಿಸಿದ್ದಾರೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಶರಣರೇ ನಿಮಗೆ ಯಾಕಿಷ್ಟು ಅಧಿಕಾರದ ಆತುರ. ದೋಷಾರೋಪಗಳಿಂದ ಮುಕ್ತರಾಗುವತನಕ ದೂರ ಇರುವುದು ಒಳಿತಲ್ಲವೇ? ಜಿಲ್ಲಾ ಪ್ರಧಾನ ನ್ಯಾಯಾಧೀಶರು ಉಸ್ತುವಾರಿ ವಹಿಸುವಂತೆ ಇದೇ ಕೋರ್ಟ್ ಹೇಳಿತ್ತಲ್ಲವೇ? ಹಾಗೊಂದು ವೇಳೆ ಜಿಲ್ಲಾ ಪ್ರಧಾನ ನ್ಯಾಯಾಧೀಶರು ಸಮರ್ಪಕವಾಗಿ ಕಾರ್ಯಭಾರ ಮಾಡುತ್ತಿಲ್ಲ ಎಂದಾದರೆ ಅದನ್ನು ನೋಡಿಕೊಳ್ಳಲು ನಾವಿಲ್ಲವೇ? ನಿಮಗ್ಯಾಕೆ ಈ ಪರಿ ಅವಸರ’ ಎಂದು ಅಸಮಾಧಾನ ಹೊರ ಹಾಕಿತು.

‘ನೀವು ಚುನಾವಣೆ ಮೂಲಕ ಗೆದ್ದು ಅಧಿಕಾರ ಹಿಡಿದಿದ್ದೀರಿ ಎಂದಾದರೆ ಸರಿ ಎನ್ನಬಹುದಿತ್ತು. ಆದರೆ, ನೀವು ಆ ರೀತಿ ಆಯ್ಕೆಯಾದವರಲ್ಲವಲ್ಲಾ? ಹಾಗಾಗಿ, ನೀವು ಇಂದಿನಿಂದ ವಿದ್ಯಾಪೀಠದ ಯಾವುದೇ ನೀತಿ ನಿರೂಪಣೆಯ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳಬಾರದು. ಕೇವಲ ದೈನಂದಿನ ವ್ಯವಹಾರಗಳಲ್ಲಿ ಮಾತ್ರವೇ ನಿಮ್ಮ ಪಾಲುದಾರಿಕೆ ಇರಲಿ’ ಎಂದು ಮೌಖಿಕವಾಗಿ ಆದೇಶಿಸಿತು.

ಇದಕ್ಕೆ ಪ್ರತಿವಾದಿಗಳಾದ ಶಿವಮೂರ್ತಿ ಶರಣರು ಮತ್ತು ಬಸವಪ್ರಭು ಸ್ವಾಮೀಜಿ ಪರ ಹಾಜರಿದ್ದ ಹಿರಿಯ ವಕೀಲ ಉದಯ ಹೊಳ್ಳ ಅವರು, ‘ಈ ವಿಷಯದಲ್ಲಿ ನಾನು ಪ್ರತಿವಾದಿಗಳ ಪರ ನ್ಯಾಯಪೀಠಕ್ಕೆ ಪೂರ್ಣ ಭರವಸೆ ಕೊಡುತ್ತೇನೆ. ಶರಣರು ವಿದ್ಯಾಪೀಠದ ನೀತಿ ನಿರೂಪಣೆಯ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳಬಾರದು ಎಂಬುದನ್ನು ಮನವರಿಕೆ ಮಾಡಿಕೊಡುತ್ತೇನೆ’ ಎಂದು ನ್ಯಾಯಪೀಠಕ್ಕೆ ಮೌಖಿಕ ಮುಚ್ಚಳಿಕೆ ನೀಡಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 5ಕ್ಕೆ ಮುಂದೂಡಿತು.

‘ರಸ್ತೆ ಗುಂಡಿ ಮುಚ್ಚಲು ಕ್ರಮ’

ಬೆಂಗಳೂರು: ‘ತುಮಕೂರು ನಗರದ ರಸ್ತೆಗಳಲ್ಲಿ ಉಂಟಾಗಿರುವ ಅಪಾಯಕಾರಿ ಗುಂಡಿಗಳನ್ನು ಮುಚ್ಚಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ’ ಎಂದು ತುಮಕೂರು ಮಹಾನಗರ ಪಾಲಿಕೆ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ವಕೀಲ ಎಲ್. ರಮೇಶ್ ನಾಯಕ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತುಮಕೂರು ಪಾಲಿಕೆ ಪರ ಹಾಜರಿದ್ದ ಆರ್. ಸುಬ್ರಹ್ಮಣ್ಯ, ಸ್ಥಳ ಪರಿಶೀಲನೆ ನಡೆಸಿ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಈ ಹಿಂದೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ನ್ಯಾಯಾಲಯ ನೀಡಿದ್ದ ನಿರ್ದೇಶನದ ಅನುಸಾರ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ನೀಡಿದರು.

ಮಾಲೂರು ಶಾಸಕ ನಂಜೇಗೌಡ ಮನೆಯಲ್ಲಿ 20 ಇ.ಡಿ ಅಧಿಕಾರಿಗಳು • ದಾಖಲೆಗಳಿಗೆ ಹುಡುಕಾಟ

ಸತತ 40 ತಾಸುಗಳ ಇ.ಡಿ ಶೋಧ ಅಂತ್ಯ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ತಾಲ್ಲೂಕಿನ ಕೊಮ್ಮನಹಳ್ಳಿಯಲ್ಲಿರುವ ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಅವರ ನಿವಾಸದ ಮೇಲೆ ದಾಳಿ ನಡೆಸಿ ಸತತ 40 ಗಂಟೆ ಶೋಧ ಕಾರ್ಯ ನಡೆಸಿದ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ತೆರಳಿದರು.

ಸೋಮವಾರ ನಸುಕಿನ 5.30ಕ್ಕೆ ಮೂರು ಇನೋವಾ ಕಾರಿನಲ್ಲಿ ಬಂದ ಸುಮಾರು 20 ಅಧಿಕಾರಿಗಳು ದಾಳಿ ನಡೆಸಿದ್ದರು. ಎರಡನೇ ದಿನವಾದ ಮಂಗಳವಾರ ರಾತ್ರಿ 10 ಗಂಟೆವರೆಗೆ ವಿವಿಧ ದಾಖಲೆಗಳನ್ನು ಜಾಲಾಡಿದರು.

ಅಕ್ರಮ ಹಣ ವರ್ಗಾವಣೆ ನಡೆದಿರುವ ದೂರುಗಳಿದ್ದು, ಅದಕ್ಕೆ ಪೂರಕವಾದ ದಾಖಲೆಗಳನ್ನು ಅಧಿಕಾರಿಗಳು ಶೋಧಿಸಿರುವುದು ತಿಳಿದು ಬಂದಿದೆ. ಅಲ್ಲದೇ, ಕೋಚಿಮುಲ್ ನೇಮಕಾತಿ ಅಕ್ರಮ ಆರೋಪ, ಶಾಸಕರ ವಿವಿಧ ವ್ಯವಹಾರಗಳ ದಾಖಲೆ ಪರಿಶೀಲಿಸಿದ್ದಾರೆ.

ಮಂಗಳವಾರ ವಹಿವಾಟು ದಾಖಲೆ ಪರಿಶೀಲನೆ ಮತ್ತು ಲೆಕ್ಕಪತ್ರ ಪರಿಶೋಧನೆಗೆ ತೆರಿಗೆ ಇಲಾಖೆ (ಐ.ಟಿ) ಅಧಿಕಾರಿಗಳನ್ನೂ ಕರೆಸಿಕೊಂಡಿದ್ದರು ಎಂದು ತಿಳಿದು ಬಂದಿದೆ. ಬ್ಯಾಂಕ್ ಖಾತೆ, ಲೆಕ್ಕಪತ್ರ, ವಹಿವಾಟಿನ ದಾಖಲೆ ಪರಿಶೀಲಿಸಿದರು.

ಮಾಲೂರು ತಾಲ್ಲೂಕಿನ ಕೊಮ್ಮನಹಳ್ಳಿಯ ತಮ್ಮ ನಿವಾಸದಲ್ಲಿ ಮಂಗಳವಾರ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶೋಧ ನಡೆಸುತ್ತಿದ್ದಾಗ ಶಾಸಕ ಕೆ.ವೈ. ನಂಜೇಗೌಡ ಬಾಲ್ಕನಿಯಿಂದ ಬೆಂಬಲಿಗರತ್ತ ಕೈಮುಗಿದರು

'ಅಕ್ರಮ ಹಣ ವರ್ಗಾವಣೆ ದೂರುಗಳಿಗೆ ಪೂರಕವಾದ ದಾಖಲೆಗಳನ್ನು ಅಧಿಕಾರಿಗಳು ಶೋಧಿಸಿದರು ಎನ್ನಲಾಗಿದೆ. ಶಾಸಕ, ಅವರ ಇಬ್ಬರು ಮಕ್ಕಳು ಮತ್ತು ಸಹಾಯಕ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದರು. ಎರಡು ದಿನಗಳಿಂದ ಹಲವರನ್ನು ಕರೆದು ತಂದು ಮಾಹಿತಿ ಕಲೆ ಹಾಕಿದರು' ಎಂದು ಮೂಲಗಳು ತಿಳಿಸಿವೆ.

ಕೆಲ ಕಾಗದ ಪತ್ರಗಳಿಗೆ ಸಹಿ ಹಾಕುವಂತೆ ಇ.ಡಿ ಅಧಿಕಾರಿಗಳು ಕೋರಿದ್ದು, ಅದಕ್ಕೆ ಶಾಸಕರು ಒಪ್ಪದೆ ದಾಖಲೆ ಒದಗಿಸುವುದಾಗಿ ಹೇಳಿದ್ದಾರೆ ಎಂದು ಗೊತ್ತಾಗಿದೆ.

ಮುಖ್ಯಾಂಶಗಳು

- ಎರಡನೇ ದಿನಕ್ಕೆ ಮುಕ್ತಾಯವಾದ ಶೋಧ
- ಬ್ಯಾಂಕ್ ಖಾತೆ, ಲೆಕ್ಕಪತ್ರಗಳು, ವಹಿವಾಟಿನ ದಾಖಲೆ ಪರಿಶೀಲನೆ
- ಒಟ್ಟು 15 ಕಡೆ ದಾಳಿ ನಡೆಸಿದ್ದ 80ಕ್ಕೂ ಹೆಚ್ಚು ಅಧಿಕಾರಿಗಳು

ಕೊಮ್ಮನಹಳ್ಳಿಯಲ್ಲಿರುವ ಶಾಸಕರ ಒಡೆತನದ ನಂಜುಂಡೇಶ್ವರ ಸ್ಟೋನ್ ಕ್ರಷರ್, ಕೋಲಾರದ ಗೌರಿಪೇಟೆಯಲ್ಲಿರುವ ಆಡಿಟರ್ ಕಚೇರಿ, ಕೋಚಿಮುಲ್ ಮುಖ್ಯ ಕಚೇರಿ ಸೇರಿದಂತೆ ಸೋಮವಾರ ಒಟ್ಟು 15 ಕಡೆ 80ಕ್ಕೂ ಹೆಚ್ಚು ಅಧಿಕಾರಿಗಳು ದಾಳಿ ನಡೆಸಿದ್ದರು.

ಬೆಂಗಳೂರಿನ ರಾಮಮೂರ್ತಿನಗರದ ನಿವಾಸದಲ್ಲಿ ಕೋಚಿಮುಲ್ ಆಡಳಿತಾತ್ಮಕ ನಿರ್ದೇಶಕ ನಾಗೇಶ್ ಅವರಿಂದ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದ್ದಾರೆ. ಶಾಸಕರ ನಿವಾಸದ ಸುತ್ತ ಸಿಆರ್‌ಪಿಎಫ್ ಯೋಧರು ಭದ್ರತೆ ಒದಗಿಸಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿದ್ದರು.

ಮುಳುವಾಯಿತೇ ವಿದೇಶ ಪ್ರವಾಸ, ನೇಮಕಾತಿ?

ಕೋಲಾರ ತಾಲ್ಲೂಕಿನ ಬೆಳಗಾನಹಳ್ಳಿ ಸಮೀಪ ಸುಮಾರು ₹200 ಕೋಟಿ ವೆಚ್ಚದ ಎಂವಿಕೆ ಗೋಲ್ಡನ್ ಡೇರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಕೆಲವೇ ದಿನಗಳಲ್ಲಿ ಕೋಚಿಮುಲ್ ಅಧ್ಯಕ್ಷ ನಂಜೇಗೌಡ, ಹಲವು ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕ ಗೋಪಾಲಮೂರ್ತಿ ಹಾಗೂ ಕೆಲ ಅಧಿಕಾರಿಗಳು ಯುರೋಪ್ ಪ್ರವಾಸ ಕೈಗೊಂಡಿದ್ದರು.

ಹೈನುಗಾರಿಕೆ ಅಧ್ಯಯನಕ್ಕಾಗಿ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಂಡಿದ್ದಾಗಿ ನಂಜೇಗೌಡ ಹೇಳಿದರೂ ಈ ಬಗ್ಗೆ ಸಾರ್ವಜನಿಕ ವಲಯಗಳಲ್ಲಿ ಭಾರಿ ಟೀಕೆ ವ್ಯಕ್ತವಾಗಿದ್ದವು.

ಆನಂತರ ಕೋಚಿಮುಲ್‌ನ 75 ಹುದ್ದೆಗಳ ಭರ್ತಿಗೆ ನಡೆದ ನೇಮಕಾತಿ ವಿಚಾರದಲ್ಲಿ ಅಕ್ರಮ ನಡೆದಿರುವ ಆರೋಪ ಮಾಡಲಾಗಿತ್ತು.

ಶಾಸಕರ ಒಡೆತನದ ಕ್ರಷರ್, ಅವರು ಅಧ್ಯಕ್ಷರಾಗಿರುವ ಕೋಚಿಮುಲ್ ವಿಚಾರವಾಗಿ ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ಪದೇ ಪದೇ ಆರೋಪ ಮಾಡುತ್ತಲೇ ಇದ್ದರು. ಲೋಕಸಭೆ ಚುನಾವಣೆ ಹಾಗೂ ಕೋಚಿಮುಲ್ ಆಡಳಿತ ಮಂಡಳಿ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇದ್ದಾಗ ಈ ಶೋಧ ನಡೆದಿದೆ.

ಬಾಬು ಕರೆದೊಯ್ದ ಇ.ಡಿ ಅಧಿಕಾರಿಗಳು

ಚಿಂತಾಮಣಿ: ಕೋಚಿಮುಲ್ ನಿರ್ದೇಶಕ ಅಶ್ವತ್ಥನಾರಾಯಣ ಬಾಬು ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಮಂಗಳವಾರ ಕರೆದೊಯ್ದಿದ್ದಾರೆ.

ಸೋಮವಾರ ಬೆಳಿಗ್ಗೆ ನಗರದಲ್ಲಿರುವ ಅಶ್ವತ್ಥನಾರಾಯಣ ಬಾಬು ಅವರ ಮನೆ ಮೇಲೆ ದಾಳಿ ನಡೆಸಿದ್ದ ಅಧಿಕಾರಿಗಳು ಮಂಗಳವಾರ ಸಂಜೆಯವರೆಗೂ ದಾಖಲೆಗಳನ್ನು ಪರಿಶೀಲಿಸಿದರು. ಮಾಹಿತಿ ಸಂಗ್ರಹಿಸಿದರು. ನಂತರ ದಾಖಲೆಗಳ ಸಮೇತ ಬಾಬು ಅವರನ್ನು ಕರೆದುಕೊಂಡು ಹೊರಟರು.

ಅಧಿಕಾರಿಗಳು ಸೋಮವಾರ ರಾತ್ರಿ ಮನೆಯಲ್ಲಿಯೇ ತಂಗಿದ್ದರು. ಬೆಳಿಗ್ಗೆ ಮತ್ತೊಂದು ಕಾರಿನಲ್ಲಿ ಅಧಿಕಾರಿಗಳ ತಂಡ ಬಂದಿತು.

ಮತ್ತಷ್ಟು ವಿಚಾರಣೆಗಾಗಿ ಕೋಲಾರದ ಕೋಚಿಮುಲ್ ಆಡಳಿತ ಕಚೇರಿಗೆ ಕರೆದುಕೊಂಡು ಹೋಗಿದ್ದಾರೆ ಎನ್ನಲಾಗುತ್ತಿದೆ. ಅವರನ್ನು ಬಂಧಿಸಲಾಗಿದೆಯೇ ಅಥವಾ ಹೆಚ್ಚಿನ ವಿಚಾರಣೆಗಾಗಿ ಕರೆದೊಯ್ಯಲಾಗಿದೆಯೇ ಎನ್ನುವ ಬಗ್ಗೆ ನಗರದಲ್ಲಿ ಚರ್ಚೆಗಳು ತೀವ್ರವಾಗಿವೆ. ಸ್ಥಳೀಯ ಪೊಲೀಸರಿಗೂ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಹಂಸಲೇಖ, ಪಾಟ್ಕರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹಂಸಲೇಖ

ಮೇಧಾ ಪಾಟ್ಕರ್

ಬಾಗಲಕೋಟೆ: ಜಿಲ್ಲೆಯ ಕೂಡಲಸಂಗಮದ ಬಸವ ಧರ್ಮ ಪೀಠವು ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ಸ್ವಾಮಿ 'ಲಿಂಗಾನಂದಶ್ರೀ ಪ್ರಶಸ್ತಿ' ಮತ್ತು ನರ್ಮದಾ ಬಚಾವೋ ಆಂದೋಲನದ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರಿಗೆ 'ಬಸವಾತ್ಮಜೆ ಪ್ರಶಸ್ತಿ' ಘೋಷಿಸಿದೆ.

'ಲಿಂಗಾನಂದಶ್ರೀ ಪ್ರಶಸ್ತಿಯು ₹1 ಲಕ್ಷ ಮತ್ತು ಬಸಾವಾತ್ಮಜೆ ಪ್ರಶಸ್ತಿ ₹50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಪ್ರಯುಕ್ತ ಜನವರಿ 12ರಿಂದ ಮೂರು ದಿನ 37ನೇ ಶರಣ ಮೇಳ ನಡೆಯಲಿದೆ. ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದು, ಈ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಬಸವಧರ್ಮ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಅವರು ತಿಳಿಸಿದ್ದಾರೆ.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಬೆಂಗಳೂರು ಉತ್ತರ ವಿ.ವಿ: ಪರೀಕ್ಷೆ ಮುಗಿದ 15 ದಿನದಲ್ಲೇ ಫಲಿತಾಂಶ

ಪ್ರಜಾವಾಣಿ ವಾರ್ತೆ

ಹೊಸಕೋಟೆ: 'ಪದವಿ ಪರೀಕ್ಷೆಗಳು ಮುಗಿದ ಕೇವಲ 15 ದಿನಗಳಲ್ಲಿಯೇ ಫಲಿತಾಂಶವನ್ನು ಕೊಡಲು ವಿಶ್ವವಿದ್ಯಾಲಯ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ' ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಡಾ.ಕೆ.ತಿಪ್ಪೇಸ್ವಾಮಿ ಅವರು ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಎಲ್ಲಾ ಕ್ಷೇತ್ರಗಳಲ್ಲಿಯೂ ತಂತ್ರಜ್ಞಾನವೇ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು ವಿಶ್ವವಿದ್ಯಾಲಯದ ಪ್ರತಿ ಹಂತವೂ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಆದ್ದರಿಂದ ನಾವೂ ಸಹ ತಂತ್ರಜ್ಞಾನದ ವೇಗಕ್ಕೆ ಒಗ್ಗಿಕೊಳ್ಳಬೇಕಾಗಿದೆ. ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯನ್ನು ರೂಪಿಸಿ ವಿದ್ಯಾರ್ಥಿಗಳಿಗೆ ಬೇಕಾದ ಬೋಧನಾ ಸಾಮಗ್ರಿಯಿಂದ ಹಿಡಿದು ಆಂತರಿಕ ಅಂಕ, ಮೌಲ್ಯಮಾಪನ, ಫಲಿತಾಂಶ ಎಲ್ಲವೂ ಇದರಲ್ಲಿಯೇ ಸಿಗುತ್ತಿದೆ' ಎಂದರು.

'ಯುಯುಸಿಎಂಎಸ್‌ನಲ್ಲಿಯೇ ವಿದ್ಯಾರ್ಥಿ ದಾಖಲಾತಿಯಿಂದ ಫಲಿತಾಂಶದವರೆಗೂ ಸಂಪೂರ್ಣ ಮಾಹಿತಿ ದಾಖಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ತಾವು ಯುಯುಸಿಎಂಎಸ್‌ನಲ್ಲಿ ದಾಖಲಿಸುವ ಪ್ರತಿಯೊಂದು ಮಾಹಿತಿಯೂ ತಪ್ಪಿಲ್ಲದಂತೆ ಇರಬೇಕು. ಪ್ರತಿಯೊಂದು ಆನ್‌ಲೈನ್‌ನಲ್ಲಿಯೇ ನಿರ್ವಹಿಸಲ್ಪಡುತ್ತಿದ್ದು, ಯಾವುದೇ ಸಣ್ಣ ತಪ್ಪು ನಡೆಯದಂತೆ ತುಂಬಾ ಎಚ್ಚರಿಕೆಯಿಂದ ಮಾಹಿತಿಯನ್ನು ತುಂಬಬೇಕಾಗುತ್ತದೆ. ಸಣ್ಣ ತಪ್ಪಿಗೆ ದೊಡ್ಡ ತೊಂದರೆ ಎದುರಿಸಬೇಕಾಗಬಹುದು, ಇದರ ಬಗ್ಗೆ ಎಚ್ಚರವಿರಲಿ' ಎಂದು ಹೇಳಿದರು.

ಹೊಸಕೋಟೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಬೆಂಗಳೂರು ಉತ್ತರ ವಿವಿಯ ಪರೀಕ್ಷಾಂಗ ಕುಲಸಚಿವ ಡಾ.ಕೆ.ತಿಪ್ಪೇಸ್ವಾಮಿ

ನಾಪತ್ತೆಯಾಗಿದ್ದ ಬೆಂಗಳೂರಿನ ಯುವಕ ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಬೆಂಗಳೂರಿನಲ್ಲಿ ನಾಪತ್ತೆಯಾಗಿದ್ದ ಯುವಕನೊಬ್ಬನ ಮೃತದೇಹ ತಾಲ್ಲೂಕಿನ ಸಿಂಗರಾಜಪುರ ಗ್ರಾಮದ ಹೊರವಲಯದಲ್ಲಿರುವ ಗವಿರಂಗಸ್ವಾಮಿ ಬೆಟ್ಟದ ಬಳಿ ಕೊಳೆತ ಸ್ಥಿತಿಯಲ್ಲಿ ಮಂಗಳವಾರ ಬೆಳಿಗ್ಗೆ ಪತ್ತೆಯಾಗಿದೆ.

ಲೋಕೇಶ್ (35) ಮೃತ ವ್ಯಕ್ತಿ. ಬೆಂಗಳೂರಿನ ಹೊಸಕೆರೆಹಳ್ಳಿ ನಿವಾಸಿಯಾದ ಈತ ಡಿ.31 ರಂದು ನಾಪತ್ತೆಯಾಗಿದ್ದ. ಈ ಸಂಬಂಧ ಬೆಂಗಳೂರು ಗಿರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬೆಂಗಳೂರಿನಿಂದ ಬಂದು ಸಿಂಗರಾಜಪುರದ ಗವಿರಂಗಸ್ವಾಮಿ ಬೆಟ್ಟದಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಬೆಟ್ಟದ ಬಳಿ ಕಳೆದ ಮೂರು ನಾಲ್ಕು ದಿನಗಳಿಂದ ಬೈಕ್‌ವೊಂದು ನಿಂತಿದ್ದನ್ನು ಗಮನಿಸಿದ ಸ್ಥಳೀಯರು ಅನುಮಾನಗೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ತಾಲ್ಲೂಕಿನ ಅಕ್ಕೂರು ಠಾಣೆ ಪೊಲೀಸರು ಸುತ್ತಮುತ್ತ ಪರಿಶೀಲನೆ ನಡೆಸಿದಾಗ ಯುವಕನ ಮೃತದೇಹ ಪತ್ತೆಯಾಗಿದೆ. ಬೈಕ್ ನಂಬರಿನ ಆಧಾರದ ಮೇಲೆ ಯುವಕನ ವಿಳಾಸವನ್ನು ಪತ್ತೆ ಹಚ್ಚಲಾಗಿದೆ. ಆನಂತರ ಆತ ಕಾಣೆಯಾಗಿದ್ದ ವಿಷಯದ ಆಧಾರದ ಮೇಲೆ ಸಾವಿನ ವಿಚಾರ ಬೆಳಕಿಗೆ ಬಂದಿದೆ. ಕೊಳೆತಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿರುವ ಕಾರಣ ಈತ ಮೂರು ದಿನಗಳ ಹಿಂದೆಯೆ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

ಮೃತದೇಹವು ಬೆಟ್ಟದ ಕಂದಕದಲ್ಲಿ ಬಿದ್ದಿದ್ದು, ಅದನ್ನು ತೆಗೆಯಲು ಪೊಲೀಸರು ಹರಸಾಹಸ ಪಟ್ಟರೂ ಸಾಧ್ಯವಾಗಲಿಲ್ಲ. ಆನಂತರ ಪೊಲೀಸರು ಬೆಂಗಳೂರಿನಿಂದ ವಿಶೇಷ ಪರಿಣಿತರ ತಂಡವನ್ನು ಕರೆಸಿ ಮೃತದೇಹವನ್ನು ಹೊರತೆಗೆಯುವ ಕಾರ್ಯದಲ್ಲಿ ತೊಡಗಿದ್ದರು. ಸಂಜೆಯಾದರೂ ಮೃತದೇಹವನ್ನು ಹೊರತೆಗೆಯಲು ಸಾಧ್ಯವಾಗಿರಲಿಲ್ಲ.

ಯುವಕನ ವಾರಸುದಾರರಿಗೆ ವಿಷಯ ಮುಟ್ಟಿಸಲಾಗಿದ್ದು, ಸ್ಥಳದಲ್ಲಿ ಯುವಕನ ಪೋಷಕರು ಹಾಗೂ ಸಂಬಂಧಿಕರು ಬೀಡುಬಿಟ್ಟಿದ್ದರು. ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹರಿಯಾಣದಲ್ಲಿ ನಡೆದ 2ನೇ ಜೂನಿಯರ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಡಾಡ್ಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಟ್ರೋಫಿ ಗೆದ್ದ ಕರ್ನಾಟಕದ ಬಾಲಕ, ಬಾಲಕಿಯರ ತಂಡಗಳು

ರಾಷ್ಟ್ರೀಯ ಡಾಡ್ಜ್‌ಬಾಲ್: ಕರ್ನಾಟಕದ ಸಬ್ ಜೂನಿಯರ್ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಬ್ ಜೂನಿಯರ್ ಬಾಲಕರ ಮತ್ತು ಬಾಲಕಿಯರ ತಂಡಗಳು ಹರಿಯಾಣದಲ್ಲಿ ನಡೆದ 2ನೇ ಜೂನಿಯರ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಡಾಡ್ಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವು.

ಸಬ್ ಜೂನಿಯರ್ ಬಾಲಕರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ ತಂಡವು 4-3ರಿಂದ ಆತಿಥೇಯ ಹರಿಯಾಣ ತಂಡವನ್ನು ಮಣಿಸಿತು. ಸೆಮಿಫೈನಲ್‌ನಲ್ಲಿ ಕರ್ನಾಟಕ 5-2ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತ್ತು. ಈ ಪಂದ್ಯಗಳಲ್ಲಿ ಕರ್ನಾಟಕ ತಂಡದ ನಾಯಕ ಭರತ್ ವಿ.ಬಿ, ಸಮರ್ಥ್, ಪಿ. ಕಾರ್ತಿಕ್ ಮಿಂಚಿದರು.

ಸಬ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಕರ್ನಾಟಕವು ಫೈನಲ್‌ನಲ್ಲಿ 3-2ರಿಂದ ಪಂಜಾಬ್ ತಂಡವನ್ನು ಮಣಿಸಿತು. ನಾಯಕಿ ವರ್ಷಾರಾಜ್ ಮತ್ತು ದೀಪಿಕಾ ಆಟ ಗಮನ ಸೆಳೆಯಿತು.

ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಕರ್ನಾಟಕ ತಂಡವು ರನ್ನರ್ ಅಪ್ ಸ್ಥಾನ ಪಡೆಯಿತು. ಸೆಮಿಫೈನಲ್‌ನಲ್ಲಿ ಮಹಾರಾಷ್ಟ್ರವನ್ನು 2-1ರಿಂದ ಮಣಿಸಿದ್ದ ಕರ್ನಾಟಕ, ಫೈನಲ್‌ನಲ್ಲಿ ಗುಜರಾತ್‌ಗೆ 1-2ರಿಂದ ಪರಾಭವಗೊಂಡಿತು. ಜೂನಿಯರ್ ಬಾಲಕರ ವಿಭಾಗದ ರಾಜ್ಯ ತಂಡವು ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಪಡೆಯಿತು.

ರಶ್ಮಿ ಶುಕ್ಲಾ ಮಹಾರಾಷ್ಟ್ರ ಡಿಜಿಪಿ

ರಶ್ಮಿ ಶುಕ್ಲಾ

ಮುಂಬೈ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ರಶ್ಮಿ ಶುಕ್ಲಾ ಅವರು ಮಹಾರಾಷ್ಟ್ರದ ಪೊಲೀಸ್ ಮಹಾ ನಿರ್ದೇಶಕರಾಗಿ (ಡಿಜಿಪಿ) ಮಂಗಳವಾರ ಅಧಿಕಾರ ವಹಿಸಿಕೊಂಡರು.

ಈ ಮೂಲಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅತ್ಯುನ್ನತ ಸ್ಥಾನಕ್ಕೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

1988ನೇ ಬ್ಯಾಚಿನ ಐಪಿಎಸ್ ಅಧಿಕಾರಿ, 59 ವರ್ಷದ ಶುಕ್ಲಾ ಅವರನ್ನು ಸಶಸ್ತ್ರ ಸೀಮಾ ದಳದ ಡಿಜಿಪಿಯಾಗಿ ನಿಯೋಜಿಸಲಾಗಿತ್ತು. ಮಹಾ ವಿಕಾಸ ಅಘಾಡಿ (ಎಂವಿಎ) ಸರ್ಕಾರದ ಅವಧಿಯಲ್ಲಿ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಇವರನ್ನು ಆರೋಪಿಯನ್ನಾಗಿ ಮಾಡಲಾಗಿತ್ತು. ಈ ಸಂಬಂಧ ಶುಕ್ಲಾ ವಿರುದ್ಧ ದಾಖಲಾಗಿದ್ದ ಎರಡು ಎಫ್‌ಐಆರ್‌ಗಳನ್ನು 2023ರ ಸೆಪ್ಟೆಂಬರ್‌ನಲ್ಲಿ ಬಾಂಬೆ ಹೈಕೋರ್ಟ್ ರದ್ದುಗೊಳಿಸಿತ್ತು.

ಕನ್ನಡ ಕಡ್ಡಾಯಕ್ಕೆ ಎಂಇಎಸ್ ವಿರೋಧ

ಬೆಳಗಾವಿ: 'ನಾಮಫಲಕದಲ್ಲಿ ಶೇ 60ರಷ್ಟು ಕನ್ನಡ ಬಳಸಬೇಕೆಂಬ ರಾಜ್ಯ ಸರ್ಕಾರದ ಆದೇಶ ಹಿಂಪಡೆಯಬೇಕು' ಎಂದು ಆಗ್ರಹಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

'ಸುಪ್ರೀಂ ಕೋರ್ಟ್‌ನಲ್ಲಿರುವ ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದದ ಇತ್ಯರ್ಥ ಆಗುವವರೆಗೆ ನಾಮಫಲಕದಲ್ಲಿ ಕನ್ನಡ ಕಡ್ಡಾಯಗೊಳಿಸಲು ಬರುವುದಿಲ್ಲ. ಗಡಿ ವಿವಾದಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಇದನ್ನು ಅನುಷ್ಠಾನ ಮಾಡಬಾರದು' ಎಂದು ಅವರು ಒತ್ತಾಯಿಸಿದರು.

ಈ ನಡೆಯಿಂದ ಆಕ್ರೋಶಗೊಂಡ ಕರುನಾಡು ವಿಜಯಸೇನೆ ಕಾರ್ಯಕರ್ತರು, ಎಂಇಎಸ್ ವಿರುದ್ಧ ಪ್ರತಿಭಟನೆಗೆ ಇಳಿದರು.

'ಕರ್ನಾಟಕದಲ್ಲಿ ಕನ್ನಡ ಕಡ್ಡಾಯ ಮಾಡಲು ಎಂಇಎಸ್‌ನ ಅನುಮತಿ ಪಡೆಯಬೇಕೆ? ಅವರ ಮನವಿಗಳನ್ನು ಅಧಿಕಾರಿಗಳು ಸ್ವೀಕರಿಸಬಾರದು. ಒಂದು ವೇಳೆ ಸ್ವೀಕರಿಸಿದರೆ, ನಮ್ಮ ಮೇಲೆ ಗುಂಡು ಹಾರಿಸಿ ಮುಂದೆ ಹೋಗಿ' ಎಂದು ಎಚ್ಚರಿಕೆ ನೀಡಿದರು.

'ಆಂಧ್ರದಲ್ಲಿ ನಕಲಿ ಮತದಾರರ ನೋಂದಣಿ'

ವಿಜಯವಾಡ (ಪಿಟಿಐ): ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರದ ವಿರುದ್ಧ ದೂರು ನೀಡಲು ಟಿಡಿಪಿ ಮತ್ತು ಜನಸೇನಾ ಪಕ್ಷಗಳು ಚುನಾವಣಾ ಆಯೋಗದ ತಂಡವನ್ನು ಭೇಟಿ ಮಾಡಿವೆ.

ಆಂಧ್ರಪ್ರದೇಶದಲ್ಲಿ ನಕಲಿ ಮತದಾರರ ನೋಂದಣಿ ನಡೆಯುತ್ತಿದೆ ಎಂದು ಆರೋಪಿಸಿರುವ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷ, ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು, ನಾರಾ ಲೋಕೇಶ್ ಮತ್ತು ಇತರರ ವಿರುದ್ಧ ಚುನಾವಣಾ ಆಯೋಗಕ್ಕೆ ಮಂಗಳವಾರ ದೂರು ಸಲ್ಲಿಸಿದೆ.

ರಾಜ್ಯಕ್ಕೆ ಭೇಟಿ ನೀಡಿರುವ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ಮತ್ತು ಇತರೆ ಅಧಿಕಾರಿಗಳನ್ನು ಭೇಟಿ ಮಾಡಿರುವ ರಾಜ್ಯಸಭೆ ಸದಸ್ಯ ವಿ. ವಿಜಯಸಾಯಿ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ ನಿಯೋಗವು, ರಾಜ್ಯದಲ್ಲಿ ನೋಂದಣಿಯಾಗಿರುವ ನಕಲಿ ಮತದಾರರ ಹೆಸರುಗಳನ್ನು ಮತದಾನ ಪಟ್ಟಿಯಿಂದ ತೆಗೆದುಹಾಕಬೇಕು ಎಂದು ಒತ್ತಾಯಿಸಿದೆ.

ಚುನಾವಣಾ ಆಯೋಗದ ಅಧಿಕಾರಿಗಳ ಭೇಟಿ ಬಳಿಕ ಮಾತನಾಡಿದ ಸಂಸದ ರೆಡ್ಡಿ, 'ತೆಲಂಗಾಣದಲ್ಲಿ ಚುನಾವಣೆ ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ ತೆಲಂಗಾಣದ ಜನರನ್ನು ಕರೆತಂದು ಆಂಧ್ರಪ್ರದೇಶದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಕೆಲಸವನ್ನು ಟಿಡಿಪಿ ಮಾಡಿದೆ. ಇದು ಅಕ್ರಮ' ಎಂದು ಆರೋಪಿಸಿದರು.

ಕೆಕೆಆರ್‌ಡಿಬಿ: ಸಕಾಲದಲ್ಲಿ ಅನುದಾನ ವೆಚ್ಚಕ್ಕೆ ಸಿ.ಎಂ ಸಲಹೆ

ಯೋಜನೆ ತ್ವರಿತ ಜಾರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಸಾಲಿನ (2023-24) ಕ್ರಿಯಾ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಿ ಕಾಮಗಾರಿಗಳನ್ನು ತಕ್ಷಣವೇ ಕೈಗೆತ್ತಿಕೊಳ್ಳಬೇಕು' ಎಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಮಂಡಳಿಯ ಪ್ರಗತಿ ಪರಿಶೀಲನೆ ಮಂಗಳವಾರ ನಡೆಸಿದ ಅವರು, 'ಮಂಡಳಿಯಲ್ಲಿ ಪ್ರಸ್ತುತ ₹ 2,106 ಕೋಟಿ ಲಭ್ಯವಿದೆ. ಸರ್ಕಾರ ಅಧಿಕಾರಕ್ಕೆ ಬಂದ ನಂತರ ₹ 757.66 ಕೋಟಿ ವೆಚ್ಚ ಮಾಡಲಾಗಿದೆ. ಈ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಇನ್ನೂ ₹ 1 ಸಾವಿರ ಕೋಟಿ ವೆಚ್ಚ ಆಗುವ ಸಾಧ್ಯತೆಗಳಿವೆ. ಸಕಾಲದಲ್ಲಿ ಅನುದಾನ ವೆಚ್ಚ ಮಾಡಲು ಅನುವಾಗುವಂತೆ ಕಾರ್ಯನಿರ್ವಹಿಸಬೇಕು' ಎಂದು ಮಂಡಳಿಯ ಅಧ್ಯಕ್ಷರು, ಕಲ್ಯಾಣ ಕರ್ನಾಟಕದ ಭಾಗದ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಧಿಕಾರಿಗಳಿಗೆ ಸಲಹೆ ನೀಡಿದರು.

'ಮುಂದಿನ ವರ್ಷದ ಕ್ರಿಯಾ ಯೋಜನೆ ಮಾರ್ಚ್ ಅಂತ್ಯದ ಒಳಗೆ ರೂಪಿಸಬೇಕು. ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿ ಅಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಶೇ 50ಕ್ಕೂ ಹೆಚ್ಚಿರುವ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕು. ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿಗಳನ್ನು ಈ ವರ್ಷವೇ ಪೂರ್ಣಗೊಳಿಸಬೇಕು. ಹಿಂದಿನ ವರ್ಷದ ಕಾಮಗಾರಿಗಳನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಬೇಕು' ಎಂದೂ ಸೂಚಿಸಿದರು.

ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್, ಸಚಿವರಾದ ಶರಣಪ್ರಕಾಶ ಪಾಟೀಲ, ಈಶ್ವರ್ ಖಂಡ್ರೆ, ಜಮೀರ್ ಅಹಮದ್ ಖಾನ್, ಶರಣಬಸಪ್ಪ ದರ್ಶನಾಪುರ, ಪ್ರಿಯಾಂಕ್ ಖರ್ಗೆ, ಶಿವರಾಜ್ ತಂಗಡಗಿ, ಎನ್. ಎಸ್. ಬೋಸರಾಜು, ರಹೀಂ ಖಾನ್, ಡಿ. ಸುಧಾಕರ್, ಮುಖ್ಯಮಂತ್ರಿಯ ಸಲಹೆಗಾರರಾದ ಬಿ.ಆರ್. ಪಾಟೀಲ (ನೀತಿ ಮತ್ತು ಕಾರ್ಯಕ್ರಮ), ಬಸವರಾಜ ರಾಯರಡ್ಡಿ (ಆರ್ಥಿಕ), ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜು ಮತ್ತು ನಸೀರ್ ಅಹಮದ್, ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಸಭೆಯಲ್ಲಿದ್ದರು.

ದಾಬಸ್ ಪೇಟೆ: ರಾಗಿ ಖರೀದಿ ನೊಂದಣಿ ಆರಂಭ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ರಾಗಿ ಬೆಳೆಗಾರರ ಅನುಕೂಲಕ್ಕಾಗಿ ದಾಬಸ್ ಪೇಟೆ ಪಟ್ಟಣದ ಕೆಂಚಪ್ಪನವರ ಬಿಲ್ಡಿಂಗ್‌ನಲ್ಲಿ ಮಂಗಳವಾರದಿಂದ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಗೆ ನೋಂದಣಿ ಕಾರ್ಯ ಆರಂಭವಾಗಿದೆ.

ಈಗಾಗಲೇ ನೆಲಮಂಗಲದ ಕಸಬಾ ಹೋಬಳಿಯ ಕೆಂಪಲಿಂಗನಹಳ್ಳಿ, ತ್ಯಾಮಗೊಂಡ್ಲು ಹೋಬಳಿಯ ಕಳಲುಘಟ್ಟ ವಿಎಸ್‌ಎಸ್‌ಎನ್ ಕೇಂದ್ರಗಳಲ್ಲಿ ರಾಗಿ ಖರೀದಿಗೆ ನೋಂದಣಿ ಕೇಂದ್ರಗಳನ್ನು ತೆರೆಯಲಾಗಿದೆ.

ಕಳೆದ ಸಾಲಿನಲ್ಲಿ ನೆಲಮಂಗಲ ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ಮಾತ್ರ ಖರೀದಿ ಕೇಂದ್ರ ತೆರೆಯಲಾಗಿತ್ತು. ಇದರಿಂದ ತಾಲ್ಲೂಕಿನ ಎಲ್ಲಾ ರೈತರು ಒಂದೇ ಜಾಗದಲ್ಲಿ ಜಮಾಯಿಸಿದ್ದರಿಂದ ಸಾಕಷ್ಟು ತೊಂದರೆ ಎದುರಾಗಿತ್ತು. ರೈತರು ಬೆಳಗಿನಿಂದ ಸಂಜೆ ತನಕ ಕಾಯಬೇಕಾದ ಸ್ಥಿತಿ ಬಂದಿತ್ತು.

ಈ ಹಿನ್ನಲೆಯಲ್ಲಿ ಶಾಸಕ ಶ್ರೀನಿವಾಸ್ ಅವರ ಮನವಿಯಂತೆ ಜಿಲ್ಲಾಧಿಕಾರಿಗಳು ತಾಲ್ಲೂಕಿನ ಮೂರು ಹೋಬಳಿಗಳಲ್ಲೂ ರಾಗಿ ಖರೀದಿ ಕೇಂದ್ರ ತೆರೆದಿದ್ದಾರೆ.

ಪ್ರತಿ ಕ್ವಿಂಟಾಲ್ ರಾಗಿಗೆ ಸರ್ಕಾರ ₹3,846 ಬೆಂಬಲ ಬೆಲೆ ನಿಗದಿಪಡಿಸಿದೆ. ಪ್ರತಿ ಎಕರೆಗೆ 10 ಕ್ವಿಂಟಲ್ ರಾಗಿ ಖರೀದಿಸಲು ಅವಕಾಶ ನೀಡಿದೆ. ಈ ಬಾರಿ ಬಯೋಮೆಟ್ರಿಕ್ ವ್ಯವಸ್ಥೆ ಇರುವುದರಿಂದ ಜಮೀನಿನ ಮಾಲೀಕರು ಖುದ್ದಾಗಿ ಬಂದು ನೊಂದಣಿ ಮಾಡಿಸಬೇಕು.

ರೈತರು ಕೃಷಿ ಇಲಾಖೆ ನೀಡಿರುವ ಎಫ್‌ಐಡಿ ಸಂಖ್ಯೆ, ಆಧಾರ್ ಸಂಖ್ಯೆ, ಪಹಣಿ ತಂದು ಬಯೋಮೆಟ್ರಿಕ್‌ನಡಿ ನೋಂದಣಿ ಮಾಡಿಸಬೇಕು ಎಂದು ರಾಗಿ ಖರೀದಿ ಕೇಂದ್ರದ ಉಸ್ತುವಾರಿ ನಾರಾಯಣ ಮೂರ್ತಿ ತಿಳಿಸಿದ್ದಾರೆ.

ಮೈಸೂರು ರೇಸ್

ಐರನ್ ಕ್ಲಾಡ್ ಗೆಲ್ಲುವ ನಿರೀಕ್ಷೆ

ಸಿ.ದಶರಥರಾಮ ಶೆಟ್ಟಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರನ್ ಕ್ಲಾಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಶೀಈಸ್‌ಅನ್‌ಸ್ಟಾಪಬಲ್ 6. ಕ್ಯಾಲಿಪ್ಸೊ ಕಿಂಗ್ 1, ಪರ್ಫೆಕ್ಟ್ ಹಾರ್ಟ್ 5
2ನೇ ರೇಸ್: ಅರಿಗಾಟೊ 1, ಫ್ಲೀಟ್ ಟ್ಯಾಕ್ಟಿಕಲ್ 10, ಯೂನಿಟಿ 8
3ನೇ ರೇಸ್: ವೆಂಚೆಂಗ್ 5, ಐ ಕ್ಯಾನ್ 8, ಮೈ ಲೈಫ್ ಮೈ ರೂಲ್ಸ್ 4
4ನೇ ರೇಸ್: ಕೇಸರಿ ಕ್ವೀನ್ 2, ಡಿ ಫೈಟರ್ 12, ಸ್ಟಾರ್ ಜ್ಯೂಯಲ್ 1
5ನೇ ರೇಸ್: ಐರನ್ ಕ್ಲಾಡ್ 3, ಪ್ರಿನ್ಸ್ ಕಾರ್ಪೊರೇಟ್ 4, ಸೆಗೆರಾ 1
6ನೇ ರೇಸ್: ಇಂಡಿಯನ್ ಗ್ಲೋರಿ 8, ಫ್ಯೂರಿಯಸ್ ಫನ್ 7, ಇಂಡಿಯನ್ ಪೇಟ್ರಿಯೆಟ್ 2
7ನೇ ರೇಸ್: ಸಿಯೊಲ್ ಫಾರ್ ಬುಲೆಟ್ 10, ಮೇಬ್ಯೂರಿ 1, ಬ್ಯೂಟಿಫುಲ್ ಓಬ್ಲಿವಿಯನ್ 4

ಉತ್ತಮ ಬೆಟ್: ಶೀಈಸ್‌ಅನ್‌ಸ್ಟಾಪಬಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬಿಬಿಎಂಪಿ: 2023ರ ಮಾರ್ಚ್‌ನಲ್ಲಿ ಚಾಲನೆಯಾಗಿದ್ದ ಯೋಜನೆ ಟೆಂಡರ್‌ಗೆ ಸಜ್ಜು

'ಸುರಕ್ಷ 75 ಜಂಕ್ಷನ್' ಯೋಜನೆ ಕೊನೆಗೂ ಸಿದ್ಧ

• ಆರ್. ಮಂಜುನಾಥ್

ಬೆಂಗಳೂರು: ರಾಜ್ಯ ಹಾಗೂ ಬಿಬಿಎಂಪಿಯ 2023-24ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿದ್ದ 'ಸುರಕ್ಷ ಮಿಷನ್- 75' ಜಂಕ್ಷನ್‌ಗಳ ಅಭಿವೃದ್ಧಿ ಯೋಜನೆ ಆರಂಭವಾಗಲು ಸಜ್ಜಾಗಿದೆ.

ಪಾದಚಾರಿಗಳಿಗೆ ಸುರಕ್ಷಿತವಾಗಿರಿಸುವ ಜಂಕ್ಷನ್‌ಗಳ ಅಭಿವೃದ್ಧಿ ಯೋಜನೆಗೆ 2023ರ ಮಾರ್ಚ್ 27ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದ್ದರು. ನಂತರ ನನೆಗುದಿಗೆ ಬಿದ್ದಿದ್ದ ಈ ಯೋಜನೆಗೆ ಇದೀಗ ಚಾಲನೆ ದೊರೆತಿದ್ದು, ಟೆಂಡರ್ ಕರೆಯುವ ಘಟ್ಟಕ್ಕೆ ಬಂತು ನಿಂತಿದೆ.

75 ಜಂಕ್ಷನ್‌ಗಳನ್ನು ಮರುವಿನ್ಯಾಸಗೊಳಿಸಿ, ರಸ್ತೆ ಬಳಕೆದಾರರಿಗೆ, ವಿಶೇಷವಾಗಿ ಪಾದಚಾರಿಗಳು ಮತ್ತು ಸೈಕ್ಲಿಸ್ಟ್‌ಗಳು ರಸ್ತೆ ಅಪಘಾತಗಳಿಂದ ಸುರಕ್ಷಿತಗೊಳಿಸುವ ಉದ್ದೇಶವನ್ನು 'ಸುರಕ್ಷ ಮಿಷನ್-75' ಹೊಂದಿದೆ. ಬಿಬಿಎಂಪಿ ಅನುದಾನದಲ್ಲಿ ₹150 ಕೋಟಿಯನ್ನು ಈ ಯೋಜನೆಗೆ ಮೀಸಲಿಡಲಾಗಿತ್ತು. ಒಂದು ಚದರ ಮೀಟರ್‌ಗೆ ₹1,650 ವೆಚ್ಚದಲ್ಲಿ ವಲಯವಾರು ಎಂಟು ಪ್ಯಾಕೇಜ್‌ಗಳಲ್ಲಿ ₹114.27 ಕೋಟಿ ಅಂದಾಜಿನ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. 2025ರ ಮಾರ್ಚ್ ಅಂತ್ಯಕ್ಕೆ 75 ಜಂಕ್ಷನ್‌ಗಳ ಅಭಿವೃದ್ಧಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಹಡ್ಸನ್ ವೃತ್ತದಲ್ಲಿ ನಡೆಯುತ್ತಿರುವ ಜಂಕ್ಷನ್ ಅಭಿವೃದ್ಧಿ ಕಾಮಗಾರಿ

ಎಲ್ಲಿ, ಎಷ್ಟು ಜಂಕ್ಷನ್?

ವಲಯ	ಜಂಕ್ಷನ್	ಚದರ ಮೀಟರ್	ವೆಚ್ಚ (ಕೋಟಿಗಳಲ್ಲಿ)
ಪೂರ್ವ	14	1,39,820	₹23.07
ಮಹದೇವಪುರ	13	1,24,150	₹20.48
ಪಶ್ಚಿಮ	11	1,08,660	₹17.92
ಬೊಮ್ಮನಹಳ್ಳಿ	9	75,920	₹12.52
ದಕ್ಷಿಣ	9	70,890	₹11.69
ಯಲಹಂಕ	8	56,780	₹9.36
ಆರ್.ಆರ್. ನಗರ	7	81,980	₹13.52
ದಾಸರಹಳ್ಳಿ	4	34,360	₹5.66
ಒಟ್ಟು	75	6,92,560	₹114.27

ಬೆಂಗಳೂರು ಟ್ರಾಫಿಕ್ ಪೊಲೀಸ್, ವಿಶ್ವ ಸಂಪನ್ಮೂಲ ಸಂಸ್ಥೆ- ಭಾರತ (ಡಬ್ಲ್ಯುಆರ್‌ಐ) ಸಹಯೋಗದೊಂದಿಗೆ, ಬ್ಲೂಮ್‌ಬರ್ಗ್ ಫಿಲಾಂತ್ರೊಪಿಸ್ ಜಾಗತಿಕ ರಸ್ತೆ ಸುರಕ್ಷತೆಗಾಗಿ ಲೋಕೋಪಕಾರಿ ಉಪಕ್ರಮ (ಬಿಜಿಆರ್‌ಎಸ್) ಅಡಿಯಲ್ಲಿ ಈ ಯೋಜನೆಯನ್ನು ಆರಂಭಿಸಲಾಗುತ್ತಿದೆ. ಬಿಬಿಎಂಪಿಯ ಟ್ರಾಫಿಕ್ ಎಂಜಿನಿಯರಿಂಗ್ ಸೆಲ್ (ಟಿಇಸಿ) ವಿಭಾಗದಿಂದ ಈ ಯೋಜನೆಯನ್ನು ನಿರ್ವಹಿಸಲಾಗುತ್ತದೆ.

'ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ನೇತೃತ್ವದ ಎಂಜಿನಿಯರ್‌ಗಳು 75 ಜಂಕ್ಷನ್‌ಗಳನ್ನು ಅಂತಿಮಗೊಳಿಸಿದ್ದಾರೆ. ಮೊದಲಿನ ಪಟ್ಟಿಯಲ್ಲಿದ್ದ 10 ಜಂಕ್ಷನ್‌ಗಳು ಈಗಾಗಲೇ ಅಭಿವೃದ್ಧಿಯಾಗಿದ್ದು, ಅವುಗಳನ್ನು ಕೈಬಿಡಲಾಗಿದೆ. 65 ಜಂಕ್ಷನ್‌ಗಳನ್ನೇ ಅಭಿವೃದ್ಧಿಪಡಿಸಲು ಯೋಜಿಸಿತ್ತಾದರೂ, ಯೋಜನೆಯ ಹೆಸರು 'ಸುರಕ್ಷ-75' ಆಗಿರುವುದರಿಂದ ಹೊಸದಾಗಿ 10 ಜಂಕ್ಷನ್‌ಗಳನ್ನು ಪಟ್ಟಿಗೆ ಸೇರಿಸಲಾಗಿದೆ. ಈ ಯೋಜನೆಯ ಪಟ್ಟಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಮ್ಮತಿ ನೀಡಿದ ಕೂಡಲೇ ಟೆಂಡರ್ ಆಹ್ವಾನಿಸಲಾಗುತ್ತದೆ' ಎಂದು ಬಿಬಿಎಂಪಿ ಟಿಇಸಿ ವಿಭಾಗದ ಎಂಜಿನಿಯರ್ ತಿಳಿಸಿದರು.

25 ಜಂಕ್ಷನ್ ಮಾರ್ಚ್ ಅಂತ್ಯಕ್ಕೆ ಸಿದ್ಧ!

ದೂಳು, ಕಸ, ಮುರಿದುಬಿದ್ದ ಕಲ್ಲು, ಬೇಲಿಯಿಂದ ಬೇಸರ ಮೂಡಿಸುತ್ತಿದ್ದ 25 ಜಂಕ್ಷನ್‌ಗಳ ಸ್ವರೂಪ ಬದಲಾಗುತ್ತಿದ್ದು, ಇವುಗಳ ಕಾಮಗಾರಿ ಮಾರ್ಚ್ ಅಂತ್ಯಕ್ಕೆ ಮುಗಿಯಲಿದೆ. ಜಂಕ್ಷನ್‌ಗಳ ಸೌಂದರ್ಯ ವೃದ್ಧಿಯ ಜೊತೆಗೆ ನಾಗರಿಕರು ವಿರಮಿಸಲು ಅವಕಾಶವನ್ನೂ ಕಲ್ಪಿಸಲಾಗಿದೆ.

ಕುಳಿತುಕೊಳ್ಳಲು ಕಲ್ಲಿನ ಕುರ್ಚಿಗಳ ಜೊತೆಗೆ, ಮರಗಳನ್ನು ಉಳಿಸಿಕೊಂಡು, ಹೊಸ ಸಸಿ ಅಥವಾ ಆಲಂಕಾರಿಕ ಗಿಡಗಳನ್ನು ನೆಡಲಾಗುತ್ತಿದೆ. 23 ಜಂಕ್ಷನ್‌ಗಳಲ್ಲಿ ಕಾರಂಜಿಯನ್ನೂ ಸ್ಥಾಪಿಸಲಾಗುತ್ತಿದ್ದು, ವಾಯುಮಾಲಿನ್ಯವನ್ನು ತಡೆಯುವ ಉದ್ದೇಶವಿದೆ.

ಟೌನ್‌ಹಾಲ್, ಶೇಷಾದ್ರಿ ರಸ್ತೆಯ ಮೌರ್ಯ ವೃತ್ತ, ಹಡ್ಸನ್ ವೃತ್ತ, ಎನ್.ಆರ್.ಸ್ಕ್ವೇರ್, ಬ್ರಿಗೇಡ್ ರಸ್ತೆ, ಮೆಯೊ ಹಾಲ್, ಕೆ.ಎಚ್.ವೃತ್ತ, ಅಶೋಕ ಪಿಲ್ಲರ್ ಸೇರಿದಂತೆ 25 ಜಂಕ್ಷನ್‌ಗಳ ಅಭಿವೃದ್ಧಿ ಅಂತಿಮ ಹಂತದಲ್ಲಿದೆ. 15ನೇ ಹಣಕಾಸು ಆಯೋಗದ ಅನುದಾನದ ₹23.80 ಕೋಟಿ ವೆಚ್ಚ ಮಾಡಲಾಗುತ್ತಿದೆ' ಎಂದು ಟಿಇಸಿ ವಿಭಾಗದ ಎಂಜಿನಿಯರ್ ಮಾಹಿತಿ ನೀಡಿದರು.

ತಂತ್ರಜ್ಞಾನ



ಬಯೋಸೆನ್ಸರ್ಸ್ ಭರವಸೆಯ ಬೆಳಕು

ಇ.ಎಸ್. ಸುಧೀಂದ್ರ ಪ್ರಸಾದ್

ಸಾವು ಅನಿವಾರ್ಯವಲ್ಲ, ಆಯ್ಕೆ ಎಂಬ ಒಕ್ಕಣೆಯೊಂದಿಗೆ ಹಲವು ವರ್ಷಗಳ ಹಿಂದೆ ಅಂತರರಾಷ್ಟ್ರೀಯ ನಿಯತಕಾಲಿಕೆಯಲ್ಲಿ ಪ್ರಕಟವಾದ ಲೇಖನ 'ಡೆತ್ ಆಫ್ ಡೆತ್ ಬೈ 2045'. ಮೃತ್ಯುವಿಗೇ ಮೃತ್ಯು ಎಂಬ ಲೇಖನ ಆ ಕಾಲಕ್ಕೆ ಪ್ರಶ್ನೆ ಮೂಡಿಸಿತ್ತು. ಇದೀಗ ಇದು ಸಾಧ್ಯ ಎಂಬಂಥ ಬೆಳವಣಿಗೆಗಳು ವೈದ್ಯಕೀಯ ಕ್ಷೇತ್ರಗಳಲ್ಲಿ ಆಗಿವೆ. ಸದೃಢರಾಗಿ ದೀರ್ಘಾಯುಗಳಾಗುವ ನಿಟ್ಟಿನಲ್ಲಿ ಹಲವಾರು ಸಾಧನಗಳು ಮಾರುಕಟ್ಟೆಗೆ ಪ್ರವೇಶಿಸಿವೆ. ಅಂಥವುಗಳಲ್ಲಿ ಒಂದು ಬಯೊಸೆನ್ಸರ್ಸ್.

ಸ್ಮಾರ್ಟ್‌ಫೋನ್‌ಗಳ ಕ್ಯಾಮೆರಾ, ಗೈರೋಸ್ಕೋಪ್‌ಗಳನ್ನೇ ಬಳಸಿ ಆರೋಗ್ಯ ಕಾಳಜಿಯ ಉಪಯುಕ್ತ ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಸ್ಮಾರ್ಟ್‌ವಾಚ್‌ಗಳ ಮೂಲಕ ದೇಹವು ಆಮ್ಲಜನಕ ಹೀರುವಿಕೆ ಪ್ರಮಾಣ, ರಕ್ತದೊತ್ತಡ, ನಿದ್ರೆಯ ಪ್ರಮಾಣ ಹೀಗೆ ಹಲವು ಸ್ಥಿತಿಗಳನ್ನು ತಿಳಿಸುವ ತಂತ್ರಾಂಶಗಳ ಅಭಿವೃದ್ಧಿಯಾಗಿವೆ. ಈಗ ತಂತ್ರಜ್ಞರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಭವಿಷ್ಯದಲ್ಲಿ ಸಂಭವಿಸಬಹುದಾದ ಅನಾರೋಗ್ಯದ ಸ್ಥಿತಿಗಳನ್ನು ಮೊದಲೇ ಅಂದಾಜಿಸುವ ಸಾಧನಗಳನ್ನು ಅಭಿವೃದ್ಧಿಪಡಿಸುತ್ತಲೇ ಇದ್ದಾರೆ.

ಕಣ್ಣನ್ನು ಗಮನಿಸಿ ಮುಂದಿನ ಐದು ವರ್ಷಗಳಲ್ಲಿ ಹೃದ್ರೋಗ ಸಮಸ್ಯೆ ಪತ್ತೆ ಮಾಡುವ ತಂತ್ರಾಂಶವನ್ನು ಗೂಗಲ್ ಪರಿಚಯಿಸುತ್ತಿರುವ ಕುರಿತು ಕಂಪನಿಯ ಸಿಇಒ ಸುಂದರ ಪಿಚೈ ಹೇಳಿದ್ದರು. ಕೃತಕ ಬುದ್ಧಿಮತ್ತೆ ಆಧಾರಿತ ಈ ತಂತ್ರಾಂಶದ ಅಭಿವೃದ್ಧಿಗೆ ಸುಮಾರು ಮೂರು ಲಕ್ಷ ಜನರ ಮಾಹಿತಿ ನೀಡಲಾಗಿದೆ. ಇದು ವೈದ್ಯರ ಕೆಲಸವನ್ನು ಇನ್ನಷ್ಟು ಸುಲಭಗೊಳಿಸಲಿದೆ.

ಈ ಸಾಧನದಿಂದ ರಕ್ತ ಪರೀಕ್ಷೆ, ಬೃಹತ್ ಯಂತ್ರಗಳ ನೆರವಿನ ಅಗತ್ಯವಿಲ್ಲ. ಕೇವಲ ಒಂದು ಸೆನ್ಸರ್ ಕಣ್ಣಿನೊಳಗಿನ ರಕ್ತನಾಳದಲ್ಲಿ ರಕ್ತದ ಪರಿಚಲನೆ ಗ್ರಹಿಸಿಯೇ ಭವಿಷ್ಯದ ಆರೋಗ್ಯವನ್ನು ತಿಳಿಸಲಿದೆ. ಯಾವುದೇ ಅನಾಹುತಗಳು ಆಕಸ್ಮಿಕವಾಗಿರದೆ, ಜೀವನಶೈಲಿ, ಚಿಕಿತ್ಸೆಯ ಮೂಲಕ ಅಪಾಯವನ್ನು ತಪ್ಪಿಸುವ ಅಥವಾ ತಗ್ಗಿಸುವ ಸಾಧ್ಯತೆಗಳು ಹೆಚ್ಚು ಎಂದು ತಜ್ಞರು ಹೇಳುತ್ತಾರೆ.

ಇದೀಗ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಶೋಧಕರು ಇಯರ್ ಬಡ್ ಮಾದರಿಯ ಬಯೊಸೆನ್ಸರ್ಸ್ ಒಂದನ್ನು ಅಭಿವೃದ್ಧಿಪಡಿಸಿದ್ದು, ಮೂರ್ಛೆ ರೋಗ ಕಾಡುವ ಮೊದಲೇ ಎಚ್ಚರಿಸುವ ತಂತ್ರಜ್ಞಾನ ಇದು ಎಂದಿದ್ದಾರೆ. ಇಯರ್ ಬಡ್‌ಗಳ ಬಳಕೆ ತೀರಾ ಸಾಮಾನ್ಯ ಎನ್ನುವಂತಾಗಿದೆ. ಮೀಟಿಂಗ್, ಹಾಡು ಕೇಳಲು, ಕೈಗಳನ್ನು ಫೋನ್ ಹಿಡಿಯುವುದರಿಂದ ಸ್ವತಂತ್ರಗೊಳಿಸಿ ಆರಾಮವಾಗಿ ಓಡಾಡಲು ಈ ಸಾಧನದ ಬಳಕೆ ವ್ಯಾಪಕವಾಗಿದೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ತಜ್ಞರು ಅಭಿವೃದ್ಧಿಪಡಿಸಿರುವ ಇಯರ್ ಬಡ್ ಕಿವಿಯೊಳಗಿನ ನರಗಳಿಂದ ಸೂಕ್ಷ್ಮ ಮಾಹಿತಿ ಸಂಗ್ರಹಿಸಿ ಮಿದುಳಿನ ನರದೌರ್ಬಲ್ಯದ ಮಾಹಿತಿಯನ್ನು ಮೊದಲೇ ತಿಳಿಸುತ್ತದೆ.



ಕೆಲಸ ಮಾಡುವುದು ಹೇಗೆ?

ಮಿದುಳಿನ ವಿದ್ಯುತ್ ಸಂಚಾರದ ಮಾಹಿತಿ ಹಾಗೂ ದೇಹದ ಬೆವರು ಸ್ರವಿಸುವಿಕೆಯ ಮಾಹಿತಿಯಷ್ಟೇ ಸಾಕು, ಮಿದುಳಿನ ನರದೌರ್ಬಲ್ಯದ ಮಾಹಿತಿ ಸಂಗ್ರಹಿಸುವ ಇಯರ್ ಬಡ್ ಇದು. ಈ ಸಾಧನದ ಅಭಿವೃದ್ಧಿಗೆ ಬಯೊಮೆಡಿಕಲ್, ರಸಾಯನವಿಜ್ಞಾನ, ಎಲೆಕ್ಟ್ರಿಕಲ್ ಮತ್ತು ನ್ಯಾನೊ ಎಂಜಿನಿಯರಿಂಗ್ ವಿಭಾಗದ ಸಂಶೋಧಕರು ಕೈಜೋಡಿಸಿದ್ದಾರೆ.

ಇಯರ್ ಬಡ್‌ನಲ್ಲಿ ಮಿದುಳಿನ ಕಾರ್ಯವೈಖರಿ ತಿಳಿಯುವ ಇಇಜಿ ಅಳವಡಿಸಲಾಗಿದೆ. ಇದು ಮಿದುಳಿನ ವಿದ್ಯುತ್ ಪ್ರಸಾರದ ಮಾಹಿತಿಯನ್ನು ಅರಿಯಲಿದೆ. ಜತೆಗೆ ದೇಹದ ಪ್ರಮುಖ ಅಂಗದ ಆರೋಗ್ಯದ ಸ್ಥಿತಿ ತಿಳಿಸುತ್ತದೆ. ಮತ್ತೊಂದೆಡೆ ದೇಹದ ಬೆವರಿನ ಮಾದರಿ ಪಡೆದು ಅದನ್ನು ಅಧ್ಯಯನಕ್ಕೆ ಒಳಪಡಿಸುತ್ತದೆ.

ಇದರಿಂದ ವ್ಯಾಯಾಮ ಅಥವಾ ಇನ್ಯಾವುದೇ ಕ್ರಿಯೆಯಲ್ಲಿದ್ದಾಗ ನಮ್ಮ ದೇಹದ ಒತ್ತಡ ತಡೆದುಕೊಳ್ಳುವ ಸಾಮರ್ಥ್ಯ ಅಥವಾ ಒತ್ತಡ ಹೆಚ್ಚಾಗಿ ಮೂರ್ಛೆ ರೋಗಕ್ಕೆ ತುತ್ತಾಗುವ ಅಪಾಯದ ಕುರಿತೂ ಮಾಹಿತಿ ನೀಡಲಿದೆ.

ಇಇಜಿ ಪರೀಕ್ಷೆಗೆ ಬಳಸುವ ಹೆಡ್‌ಸೆಟ್ ಅಳವಡಿಸಿ ಮಾಹಿತಿ ಸಂಗ್ರಹಿಸಲಾಗಿದೆ. ರಕ್ತ ಮಾದರಿ ಸಂಗ್ರಹಿಸಿ ಅದರಿಂದಲೂ ದಾಖಲೆ ಸಂಗ್ರಹಿಸಲಾಗಿದೆ, ಕಿವಿಯಲ್ಲಿ ಬೆವರು ಸ್ರವಿಸುವ ಗ್ರಂಥಿಗಳಿರುತ್ತವೆ ಮತ್ತು ಕಿವಿಗಳು ಮಿದುಳಿಗೆ ಅತ್ಯಂತ ಸಮೀಪ. ಜತೆಗೆ ಇಯರ್ ಬಡ್‌ಗಳು ಹಲವು ವರ್ಷಗಳಿಂದ ತಂತ್ರಜ್ಞಾನ ಕ್ಷೇತ್ರದಲ್ಲಿ ಬಳಕೆಯಲ್ಲಿವೆ. ಈ ಸಂಶೋಧನೆಯಲ್ಲಿ ಇದನ್ನು ಬಳಸಲು ತೀರ್ಮಾನಿಸಲಾಯಿತು ಎಂದು ಸಂಶೋಧಕ ಯುಚೆನ್ ಶು ಹೇಳಿದ್ದಾರೆ.

ಈ ಇಯರ್ ಬಡ್‌ನಲ್ಲಿ ಅತ್ಯಾಧುನಿಕ ರಾಸಾಯನಿಕ ಸೆನ್ಸರ್‌ಗಳನ್ನು ಬಳಸಲಾಗಿದೆ. ಜತೆಗೆ ಎಲೆಕ್ಟ್ರೊ ಫಿಸಿಯಾಲಜಿಕಲ್ ಸಿಗ್ನಲ್‌ಗಳನ್ನು ಸಂಗ್ರಹಿಸುವ ಸೆನ್ಸರ್‌ಗಳೂ ಇದರಲ್ಲಿವೆ. ವ್ಯಕ್ತಿಯ ದೇಹದ ರಾಸಾಯನಿಕ ಕ್ರಿಯೆ ಬದಲಾವಣೆ ಗ್ರಹಿಸಿ ಅದರ ಮಾಹಿತಿಯನ್ನು ತಂತ್ರಾಂಶಕ್ಕೆ ಇದು ರವಾನಿಸಲಿದೆ. ಕೃತಕ ಬುದ್ಧಿಮತ್ತೆಯು ಇದನ್ನು ವಿಶ್ಲೇಷಿಸಿ ಸದ್ಯ ಆಗುತ್ತಿರುವ ಮತ್ತು ಮುಂದೆ ಎಚ್ಚರಿಕೆ ವಹಿಸಬೇಕಾದ ಆರೋಗ್ಯ ಕಾಳಜಿಯ ಮಾಹಿತಿ ತಿಳಿಸಲಿದೆ.

ಭವಿಷ್ಯದಲ್ಲಿ ಈ ಇಯರ್ ಬಡ್ ಅನ್ನೇ ಬಳಸಿ ರಕ್ತದಲ್ಲಿನ ಸಕ್ಕರೆ ಅಂಶ, ಆಮ್ಲಜನಕ ಹೀರುವಿಕೆಯ ಪ್ರಮಾಣ ತಿಳಿಸುವ ಸಾಧನವನ್ನೂ ಅಳವಡಿಸುವ ನಿಟ್ಟಿನಲ್ಲಿ ಪ್ರಯೋಗಗಳು ನಡೆದಿವೆ ಎಂದು ಸಂಶೋಧಕರು ಹೇಳಿದ್ದಾರೆ.

ಸದ್ಯ ಬಳಕೆಯಲ್ಲಿರುವ ಎಲೆಕ್ಟ್ರಾನಿಕ್ ಸಾಧನಗಳನ್ನೇ ಬಯೊಸೆನ್ಸರ್‌ಗಳನ್ನಾಗಿ ಮಾರ್ಪಡಿಸಿ ಮಷಿನ್ ಲರ್ನಿಂಗ್, ಕೃತಕ ಬುದ್ಧಿಮತ್ತೆಯಂತ ಆಧುನಿಕ ತಂತ್ರಜ್ಞಾನ ಬಳಸಿ ಉಪಯುಕ್ತ ಸಾಧನಗಳ ಅಭಿವೃದ್ಧಿ ನಡೆಯುತ್ತಿದೆ. ಇದರಿಂದ ಅನಾರೋಗ್ಯದ ಕುರಿತು ಮೊದಲೇ ಮಾಹಿತಿ ತಿಳಿಸಿ, ಮುಂಜಾಗ್ರತೆ ವಹಿಸಲು ಕಾಲಾವಕಾಶ ದೊರೆತಂತೆ ಆಗುತ್ತದೆ.

ನೀರು ಗುಟುಕರಿಸುವ ಮುನ್ನ...

ಬಾಟಲಿ ನೀರು ಸುರಕ್ಷಿತವೆಂದು ಅದನ್ನೇ ಕುಡಿಯುತ್ತಿರುವಿರಾ... ಇರಿ, ಒಂದೆರಡು ನಿಮಿಷ... ನೀವು ಕುಡಿದ ಒಂದೆರಡು ಗುಟುಕುಗಳಲ್ಲಿ ಸಾವಿರಾರು ಪ್ಲಾಸ್ಟಿಕ್ ಕಣಗಳನ್ನೂ ನುಂಗಿರುತ್ತೀರಿ. ಹೀಗೆಂದು ವಾಷಿಂಗ್ಟನ್‌ನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (National Scince Academy) ತಿಳಿಸಿದೆ.

ಬಾಟಲಿ ನೀರಿನಲ್ಲಿ ಪ್ಲಾಸ್ಟಿಕ್ ಕಣಗಳಿರುತ್ತವೆ ಎಂಬುದು ಹೊಸ ವಿಷಯವಲ್ಲ. ಆದರೆ ಈ ಮೊದಲು ಅಂದಾಜಿಸಿದ ಪ್ರಮಾಣಕ್ಕಿಂತಲೂ ನೂರು ಪಟ್ಟು ಹೆಚ್ಚಿರುತ್ತವೆ ಎಂದು ಹೊಸ ಅಧ್ಯಯನ ತಿಳಿಸಿದೆ. ವಿಜ್ಞಾನಿಗಳು ಒಂದು ಲೀಟರ್ ನೀರಿನಲ್ಲಿ ಸರಾಸರಿ 2,40,000 ಕಣಗಳನ್ನು ಪತ್ತೆ ಹಚ್ಚಿದ್ದಾರೆ. ಇವೆಲ್ಲವೂ ಜನಪ್ರಿಯ ಬ್ರ್ಯಾಂಡ್‌ನ ಬಾಟಲಿ ನೀರಿನ ಮಾದರಿಗಳೇ ಆಗಿದ್ದವು ಎನ್ನುವುದೂ ಗಮನಾರ್ಹವಾಗಿದೆ.

ನೀರಿನಲ್ಲಿ ಕಂಡು ಬರುವ ಪ್ಲಾಸ್ಟಿಕ್ ಕಣಗಳು ಆರೋಗ್ಯಕ್ಕೆ ಮಾರಕವಾಗಬಹುದು ಎಂದು ಈ ಹಿಂದೆಯೇ ಅಂದಾಜಿಸಲಾಗಿತ್ತು. ಆದರೆ ಈ ಹಿಂದಿನ ಅಂದಾಜಿಗಿಂತ 10–100 ಪಟ್ಟು ಹೆಚ್ಚು ಹಾನಿಕರವಾಗಿದೆ ಎಂದು ಈ ಹೊಸ ಅಧ್ಯಯನ ತಿಳಿಸುತ್ತಿದೆ.

ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದರ ಕುರಿತು ವಿಸ್ತ್ರತ ಅಧ್ಯಯನ ಕೈಗೊಳ್ಳಲಾಗುತ್ತಿದೆ.

ಒಂದು ವೇಳೆ, ಬಾಟಲಿ ನೀರಿನಲ್ಲಿರುವ ಈ ನ್ಯಾನೊ (ತೃಣಕಣ) ಕಣಗಳ ಕುರಿತು ಆತಂಕವಿದ್ದರೆ ಪರ್ಯಾಯವಾಗಿ ನಲ್ಲಿ ನೀರನ್ನೇ ಕುಡಿಯುವುದು ಉತ್ತಮ ಎಂದು ಈ ಸಂಶೋಧನೆಯನ್ನು ಕೈಗೊಂಡಿರುವ ವಿಜ್ಞಾನಿಗಳ ತಂಡದ ಬಿಯಾನ್ ಯಾನ್ ಅಭಿಪ್ರಾಯಪಟ್ಟಿದ್ದಾರೆ.

ಕುಡಿಯುವುದಕ್ಕೆ ಬಾಟಲಿ ನೀರು ಅಲ್ಲದೆ ಬೇರೆ ಆಯ್ಕೆ ಇಲ್ಲ ಎಂಬಂತಹ ಸಂದರ್ಭದಲ್ಲಿ ನೀರು ಕುಡಿಯದೆ ನಿರ್ಜಲೀಕರಣಕ್ಕೆ ಒಳಗಾಗುವುದಕ್ಕಿಂತ ಬಾಟಲಿ ನೀರನ್ನೇ ಕುಡಿಯಿರಿ. ನೀರು ಕುಡಿಯದೇ ಇರುವುದು, ಇಂಥ ನೀರು ಕುಡಿಯುವುದಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದೂ ಅವರು ಎಚ್ಚರಿಸಿದ್ದಾರೆ.

ಪ್ಲಾಸ್ಟಿಕ್‌ನ ಈ ಅತಿಸಣ್ಣ ಕಣಗಳು ಎಲ್ಲೆಡೆಯೂ ಹರಡುತ್ತಿವೆ. ದೊಡ್ಡ ಪ್ಲಾಸ್ಟಿಕ್‌ನಿಂದ ಹೊರಹೊಮ್ಮುವ ಈ ಕಣಗಳು ಪರಿಸರದಲ್ಲಿ ಎಲ್ಲೆಡೆಯೂ ಕಂಡು ಬರುತ್ತಿವೆ. ಉತ್ತರ ಮತ್ತು ದಕ್ಷಿಣ ಧ್ರುವಗಳಿಂದ ಆರಂಭಿಸಿ, ಎತ್ತರದ ಗಿರಿಶಿಖರಗಳಲ್ಲಿಯೂ ಈ ಸೂಕ್ಷ್ಮಾತಿ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ಕಂಡು ಬರುತ್ತಿವೆ. ಈ ಕಾರಣದಿಂದಲೇ ನಾವು ಸೇವಿಸುವ ನೀರು ಮತ್ತು ಆಹಾರದಲ್ಲಿಯೂ ಈ ಕಣಗಳು ಸೇರ್ಪಡೆಯಾಗಿವೆ.

ಸೂಕ್ಷ್ಮಾತಿ ಸೂಕ್ಷ್ಮ ಕಣಗಳು ಒಂದು ಮೈಕ್ರೊಮೀಟರ್‌ಗಿಂತಲೂ ಚಿಕ್ಕದಾಗಿರುತ್ತವೆ. ಹಾಗಾಗಿಯೇ ನಮ್ಮ ಜೀರ್ಣಾಂಗ, ಶ್ವಾಸಕೋಶಗಳ ಮೂಲಕವೂ ಹಾದುಹೋಗುತ್ತವೆ. ನಂತರ ನೇರವಾಗಿ ನಮ್ಮ ರಕ್ತನಾಳಗಳನ್ನು ಪ್ರವೇಶಿಸುತ್ತವೆ. ಮುಂದಿನ ಹಂತವೇ ನಮ್ಮ ಮಿದುಳು ಮತ್ತು ಹೃದಯ. ಇನ್ನೂ ಜನಿಸದ ಮಕ್ಕಳ ಪ್ಲಾಸೆಂಟಾವನ್ನು ಸಹ ಈ ಕಣಗಳು ಪ್ರವೇಶಿಸಬಹುದಾಗಿದೆ.

ಹೀಗೆ ಈ ಕಣಗಳು ದೇಹವನ್ನು ಸೇರುವುದರಿಂದ ಆಗುವ ಪರಿಣಾಮಗಳ ಕುರಿತು ತುಂಬ ಕಡಿಮೆ ಅಧ್ಯಯನಗಳಾಗಿವೆ. ಈಗ ಲಭ್ಯ ಇರುವ ಮಾಹಿತಿಯ ಪ್ರಕಾರ ಮಾನವ ದೇಹದ ಮೇಲೆ ಅಡ್ಡಪರಿಣಾಮಗಳು ಕಂಡು ಬಂದಿವೆ. ಸಂತಾನೋತ್ಪತ್ತಿ ಮತ್ತು ಜೀರ್ಣ ಹಾಗೂ ವಾತ ಸಮಸ್ಯೆಗಳು ಉಂಟಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಪರಿಸರದ ಮೇಲಿನ ಪರಿಣಾಮದ ಕುರಿತು ಇನ್ನಷ್ಟೇ ಅಧ್ಯಯನಗಳನ್ನು ಕೈಗೊಳ್ಳಬೇಕಿದೆ.

ಬಾಟಲಿ ನೀರಿನಲ್ಲಿ ಈ ಕಣಗಳ ಇರುವಿಕೆಯನ್ನು ಪತ್ತೆ ಮಾಡಲು ಸ್ಟಿಮ್ಯುಲೇಟೆಡ್ ರಾಮನ್ ಸ್ಕ್ಯಾಟರಿಂಗ್ ಮೈಕ್ರೊಸ್ಕೋಪಿ ಎಂಬ ವಿಧಾನವನ್ನು ಈ ತಂಡ ಅನುಸರಿಸಿದೆ. ಈ ಅಧ್ಯಯನ ತಂಡದ ವಿಜ್ಞಾನಿಯೊಬ್ಬರು ಈ ವಿಧಾನವನ್ನು ಕಂಡು ಹಿಡಿದಿದ್ದಾರೆ. ಈ ವಿಧಾನದಲ್ಲಿ ಎರಡು ಲೇಸರ್‌ಗಳ ಮೂಲಕ, ನಿರ್ದಿಷ್ಟವಾದ ಕಣಗಳನ್ನು ಪತ್ತೆ ಮಾಡಲಾಗುತ್ತದೆ. ಕಂಪ್ಯೂಟರ್ ಅಲ್ಗೊರಿದಮ್ ಮೂಲಕ ಪ್ಲಾಸ್ಟಿಕ್ ಕಣಗಳ ಪ್ರಮಾಣವನ್ನು ಪತ್ತೆ ಮಾಡಲಾಗಿದೆ.

ಮೂರು ಜನಪ್ರಿಯ ಬ್ರ್ಯಾಂಡ್‌ಗಳ ನೀರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಯಾವ ಬ್ರ್ಯಾಂಡ್

ಎಂಬುದನ್ನು ಅವರು ಬಹಿರಂಗಪಡಿಸಲು ಒಪ್ಪಿಲ್ಲ. ಎಲ್ಲ ಬಾಟಲಿಯ ನೀರಿನಲ್ಲಿಯೂ ಪ್ಲಾಸ್ಟಿಕ್ ಕಣಗಳು ಇರುತ್ತವೆ. ಕೇವಲ ಮೂರು ಬ್ರ್ಯಾಂಡ್‌ಗಳ ಹೆಸರು ಹೇಳುವುದು ಸಮಂಜಸವಲ್ಲ ಎನ್ನುವುದು ಯಾನ್ ಅವರ ಅಭಿಪ್ರಾಯವಾಗಿದೆ.

ಪ್ರತಿ ಲೀಟರ್ ನೀರಿನಲ್ಲಿ 1,10,000ದಿಂದ 3,70,000 ಸೂಕ್ಷ್ಮಾತಿ ಸೂಕ್ಷ್ಮ ಕಣಗಳು ಪತ್ತೆಯಾಗಿವೆ. ಶೇ 90ರಷ್ಟು ಈ ಕಣಗಳಿದ್ದರೆ ಉಳಿದವು ಸೂಕ್ಷ್ಮ ಪ್ಲಾಸ್ಟಿಕ್ ಕಣಗಳಾಗಿವೆ. ನೀರು ಶುದ್ಧೀಕರಿಸಲು ಬಳಸುವ ಫಿಲ್ಟರ್‌ನಿಂದ ಬಂದಿರಬಹುದಾದ ನೈಲಾನ್ ಕಣಗಳೇ ಹೆಚ್ಚಾಗಿವೆ ಎಂದೂ ವಿವರಿಸಿದ್ದಾರೆ. ಇದಲ್ಲದೆ ಬಾಟಲಿಗಳನ್ನು ತಯಾರಿಸುವ PET, ಕಣಗಳೂ ಕಂಡು ಬಂದಿವೆ. ಬಾಟಲಿಯನ್ನು ತೆರೆದಾಗ, ಮುಚ್ಚಿದಾಗ ಹಾಗೂ ಕೆಲವೊಮ್ಮೆ ಅಮುಕಿದಾಗಲೂ ಪ್ಲಾಸ್ಟಿಕ್ ಕಣಗಳು ನೀರಿನೊಂದಿಗೆ ಬೆರೆತಿವೆ ಎಂದೂ ಅವರು ತಿಳಿಸಿದ್ದಾರೆ.

ನಲ್ಲಿ ನೀರನ್ನು ಕೂಡ ಪರೀಕ್ಷೆಗೆ ಒಳಪಡಿಸುವುದಾಗಿ ಅಧ್ಯಯನ ತಂಡ ತಿಳಿಸಿದೆ.

ಆಧಾರ: ಎಎಫ್‌ಪಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

17) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:– ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

18) ಪ್ಲನೇರಿಯ ಎಂಬ ಸರಳ ಜೀವಿಯ ಪುನರುತ್ಪಾದನೆಯ ಚಿತ್ರ ಬರೆಯಿರಿ

ಉತ್ತರ:–



21) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ

(i) ಭೌತ ಸ್ಥಿತಿ : ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) ಕರಗುವ ಮತ್ತು ಕುದಿಬಿಂದುಗಳು : ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) ವಿಲೀನತೆ : ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) ವಿದ್ಯುದ್ವಾಹಕತೆ : ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್‌ಅನ್ನು ಹರಿಯಲು ಬಿಡುತ್ತವೆ.

22) ನರಕೋಶದ ಅಂದವಾದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



23) ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯ ಬಗ್ಗೆ ಬರೆಯಿರಿ

ಉತ್ತರ:– ಒಂದು ಜೀವಕೋಶದಿಂದ ಎರಡು ಜೀವಕೋಶಗಳ ಉಂಟಾಗುವಿಕೆಯು ಡಿಎನ್‌ಎ ಮತ್ತು ಕೋಶೀಯ ರಚನೆಗಳ ಪ್ರತೀಕರಣವನ್ನು ಒಳಗೊಂಡಿದೆ. ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯು ನಾವು ಗಮನಿಸಿರುವಂತೆ ಸಂಪೂರ್ಣವಾಗಿ ನಿಖರವಾಗಿರುವುದಿಲ್ಲ ಮತ್ತು ಇದರಲ್ಲುಂಟಾಗುವ ದೋಷಗಳು ಜೀವಿಸಂದಣಿಯಲ್ಲಿನ ಭಿನ್ನತೆಗಳ ಆಕರವಾಗಿರುತ್ತದೆ. ಭಿನ್ನತೆಗಳು ಉಂಟಾಗದಂತೆ ಪ್ರತಿಯೊಂದು ಜೀವಿಯನ್ನು ರಕ್ಷಿಸಲಾಗುವುದಿಲ್ಲ. ಆದರೆ ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ. ಆದ್ದರಿಂದ ಹೆಚ್ಚು ಹೆಚ್ಚು ಭಿನ್ನತೆಗಳನ್ನು ಉಂಟುಮಾಡಲು ಸಾಧ್ಯವಾಗುವ ಸಂತಾನೋತ್ಪತ್ತಿ ವಿಧಾನಗಳೊಂದಿಗೆ ಜೀವಿಗಳು ಸಜ್ಜುಗೊಂಡವು ಎಂಬ ಅರ್ಥವನ್ನು ಇದು ಉಂಟುಮಾಡುತ್ತದೆ.

ಡಿಎನ್‌ಎ ಸ್ವಪ್ರತೀಕರಣವು ಸಂಪೂರ್ಣ ನಿಖರವಾಗಿಲ್ಲದಿದ್ದರೂ ನಿಧಾನಗತಿಯಲ್ಲಿ ಭಿನ್ನತೆಗಳು ಉಂಟಾಗುವಷ್ಟರ ಮಟ್ಟಿಗೆ ಅವು ನಿಖರವಾಗಿರುತ್ತವೆ. ಒಂದು ವೇಳೆ ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಗಳು ಕಡಿಮೆ ನಿಖರತೆಯನ್ನು ಹೊಂದಿದ್ದರೆ ಅನೇಕ ಫಲಿತ ಡಿಎನ್‌ಎ ಪ್ರತಿಗಳು ಕೋಶೀಯ ರಚನೆಗಳೊಂದಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅವು ಸಾಯುತ್ತವೆ.

ಈಗಾಗಲೇ ಹಿಂದಿನ ಪೀಳಿಗೆಗಳಿಂದ ಸಂಗ್ರಹಿತವಾದ ಭಿನ್ನತೆಗಳನ್ನು ಹೊಂದಿರುವ ಡಿಎನ್‌ಎ ತನ್ನ ಪ್ರತಿಯೊಂದು ಜೀವಿಸಂದಣಿಯ ಪ್ರತಿಯಲ್ಲಿ ಹೊಸ ಭಿನ್ನತೆಯನ್ನು ಉಂಟುಮಾಡುತ್ತದೆ. ಹೀಗೆ ಎರಡು ವಿಭಿನ್ನ ಜೀವಿಗಳು ಸಂಗ್ರಹಿತ ಭಿನ್ನತೆಗಳ ಸಾಕಷ್ಟು ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಿನ್ನತೆಗಳು ಜೀವಂತ ಜೀವಿಗಳಲ್ಲಿರುವುದರಿಂದ ಅವು ಯಾವುದೇ ಕೆಟ್ಟ ಪರಿಣಾಮಗಳನ್ನು ಹೊಂದಿಲ್ಲವೆಂಬುದು ನಿಶ್ಚಿತ. ಹೀಗೆ ಎರಡು ಅಥವಾ ಹೆಚ್ಚು ಜೀವಿಗಳಲ್ಲಿನ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ. ಪ್ರತಿ ಸಂಯೋಜನೆಯೂ ಅಪೂರ್ವವಾಗಿರುತ್ತದೆ ಏಕೆಂದರೆ ಅಲ್ಲಿ ಎರಡು ವಿಭಿನ್ನ ಜೀವಿಗಳ ಒಳಗೊಳ್ಳುವಿಕೆ ಇದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

24) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಓಮ್‌ನ ನಿಯಮಗಳನ್ನು ನಿರೂಪಿಸಿ (ಜೂನ್ 2019 ಪರೀಕ್ಷೆ)

2) ವಾಹಕ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ವಿವರಿಸಿ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವಾಧ್ಯಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC MATHS

MODEL QUESTIONS

Multiple choice Questions

7. If $\frac{(x+1)^2}{(x^3+x} = \frac{A}{x} + \frac{Bx+C}{x^2+1}$, then $\operatorname{cosec}^{-1}\left(\frac{1}{A}\right) + \cot^{-1}\left(\frac{1}{B}\right) + \sec^{-1} C =$

(A) 0 (B) $\frac{\pi}{2}$

(C) $\frac{5\pi}{6}$ (D) $\frac{\pi}{6}$

Ans : (C) $\frac{5\pi}{6}$

(.....Contd)

Expln :– $\frac{(x+1)^2}{x^3+x} = \frac{A}{x} + \frac{Bx+C}{x^2+1} = \frac{A(x^2+1)+x(Bx+C)}{x(x^2+1)}$

$\therefore A(x^2+1)+Bx^2+Cx = x^2+2x+.$

Equating the coefficients of x^2, x constants on both sides,

we get A + B = 1, C = 2, A = 1 $\therefore$ B = 0

$\operatorname{cosec}^{-1}\left(\frac{1}{A}\right) + \cot^{-1}\left(\frac{1}{B}\right) + \sec^{-1} C = \operatorname{cosec}^{-1}1 + \cot^{-1}0 + \sec^{-1}2$

$= \frac{\pi}{2} + 0 + \frac{\pi}{3} = \frac{5\pi}{6}.$

8. The remainder obtained when 1! + 2! + 3! + … + 11! Is divided by 12 is

(A) 8 (B) 6

(C) 9 (D) 7

Ans: (C) 9

Expln:- 1! + 2! + 3! + ….. + 11! = 1 + 2 + 6 + 24 + 120 +720 + …. + 11!

From $\lfloor 5$ onwards each is a multiple of 12,

i.e., $\lfloor 5 = 12k_1$, $\lfloor 6 = 12k_1 \times 6 = 12\,k_2$ ....

Thus allterms from $\lfloor 5$ onwards are divisible by 12.

1! + 2! + 3! + 4! = 33

$\therefore 33 + 12k \equiv -3 \bmod 12$ i.e., $\lfloor 1 + \lfloor 2 + ... + \lfloor 11 \equiv -3 \bmod 12$

or $\lfloor 1 + \lfloor 2 + \lfloor 3 ..... + \lfloor 11 \equiv 9 \bmod 12$.

MODEL QUESTIONS

I. Answer all the following:-

1. A relation R on A = {1 2 3} defined by R = {(1 1) (1 2) (3 3)} is not symmetric why?

Ans:- (1 2) $\in$ R but (2 1) $\notin$ R

$\therefore$ R is not symmetric

2. Write the domain of f(x) = $\cos^{-1}$ x

Ans:- $-1 \le x \le 1$ (or) $x \in [-1, 1]$ [(-1 1) is wrong]

3. Define scalar matrix.

Ans:- A Diagonal matrix is said to be scalar matrix if all its diagonal elements are equal.

4. $A\begin{bmatrix} 1 & 2 \\ 3 & 4 \end{bmatrix}$ Find |2 A|.

Ans :– $2A = \begin{bmatrix} 2 & 4 \\ 6 & 8 \end{bmatrix}$ $|2 \quad A| = \begin{vmatrix} 2 & 4 \\ 6 & 8 \end{vmatrix} = 16 - 24 = -8$

5. If $y = \log(\sin x)$ find $\frac{dy}{dx}$.

Ans :– $\frac{dy}{dx} = \frac{\cos x}{\sin x} = \cot x$ (or) $e^y = \sin x$

$\Rightarrow e^y \frac{dy}{dx} = \cos x \Rightarrow \frac{dy}{dx} = \frac{\cos x}{e^y}$

6. Evaluate $\int(\sin x + \cos x)\,dx$

Ans :– $\int(\sin x + \cos x) = -\cos x + \sin x + c$

(or) $\sin x - \cos x + c$

7. Find the direction cosines of the vector $\vec{a} = \hat{i} + 2j + 3k$

Ans :– $|\vec{a}| \sqrt{1+4+9} = \sqrt{14}$

DC's of $\vec{a}$ are $\frac{1}{\sqrt{14}}, \frac{2}{\sqrt{14}}, \frac{3}{\sqrt{14}}$

8. Find the equation of the plane having intercept 3 on Y axis and parallel to ZOX plane

Ans:- Equation of plane is y = 3 or = $\frac{y}{3} = 1$

9. Define optimal solution in the linear programming problem

Ans:- Any point in the feasible region gives the optimum value of the objective function is called an optimal solution

10. An urn contains 5 red and 2 black balls, two balls are randomly selected. Let X represents the number of black balls, what are the possible values of X?

Ans:- Both the balls are black,

$\therefore$ value of X is 2

If one is red then another one is black ball,

$\therefore$ value of X is 1

If both the balls are red then, the number of black balls are zero,

$\therefore$ value of X is 0

$\therefore$ Possible values of X are 0, 1, 2

II. Answer questions:-

11. Define binary operation on the set. Verify whether the operation * defined on Z by a * b = ab + 1 is binary or not?

Ans:- A binary operation * on a set A is a function * from A x A to A $\forall a, b \in Z$

then $a * b = ab + 1 \in Z$

$\therefore$ * is a binary operation on Z

12. Find the simplest form of $\tan^{-1}\sqrt{3} - \sec^{-1}(-2)$

Ans :– $\frac{\pi}{3} - (\pi - \sec^{-1} 2) = \frac{\pi}{3} - \left(\pi - \frac{\pi}{3}\right) = \frac{\pi}{3} - \frac{2\pi}{3} = -\frac{\pi}{3}$

ಉಸಿರುಕಟ್ಟಿಸಿ ಕೊಲೆ ಮಾಡಿದ ಶಂಕೆ

ಇಂಡೊನೇಷ್ಯಾದಿಂದ ಹಿರಿಯೂರಿಗೆ ಧಾವಿಸಿಬಂದ ಬಾಲಕನ ತಂದೆ • ಮರಣೋತ್ತರ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮೃತ ಬಾಲಕನ ಮುಖ ಹಾಗೂ ಎದೆಯಲ್ಲಿ ಊತ ಕಾಣಿಸಿಕೊಂಡಿದ್ದು, ಕುತ್ತಿಗೆ ಭಾಗದಲ್ಲಿ ಉಸಿರುಕಟ್ಟಿಸಿ ಕೊಲೆ ಮಾಡಿದ ಸಾಧ್ಯತೆ ಇದೆ ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯ ಡಾ.ಕುಮಾರ್ ನಾಯ್ಕ ಅವರು ತಿಳಿಸಿದರು.

ಹಿರಿಯೂರು ಸಾರ್ವಜನಿಕ ಆಸ್ಪತ್ರೆಯ ಶವಾಗಾರದಲ್ಲಿ ಮಂಗಳವಾರ ರಾತ್ರಿ ಮರಣೋತ್ತರ ಪರೀಕ್ಷೆ ಮುಗಿಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಕುತ್ತಿಗೆ ಭಾಗವನ್ನು ಬಿಗಿಹಿಡಿದು ಉಸಿರುಕಟ್ಟಿಸಲಾಗಿದೆ. ದಿಂಬು ಬಳಸಿ ಕೃತ್ಯ ಎಸಗಿರಬಹುದು. ಕೊಲೆಯಾದ ಬಳಿಕ ಮೂಗು ಹಾಗೂ ಬಾಯಿಯಿಂದ ರಕ್ತ ಹೊರಬಂದಿದೆ. ದೇಹದ ಯಾವುದೇ ಭಾಗದಲ್ಲಿ ಗಾಯದ ಗುರುತುಗಳಿಲ್ಲ. ಬಾಲಕ ಮೃತಪಟ್ಟು 36 ಗಂಟೆಗೂ ಹೆಚ್ಚು ಸಮಯ ಕಳೆದಿದೆ’ ಎಂದು ಹೇಳಿದರು.

ಮೃತ ಬಾಲಕನ ತಂದೆ ವೆಂಕಟರಮಣ್ ಇಂಡೊನೇಷ್ಯಾದಿಂದ ಮಂಗಳವಾರ ಸಂಜೆ ಹಿರಿಯೂರಿಗೆ ಬಂದರು. ಶವಾಗಾರಕ್ಕೆ ತೆರಳಿ ಪುತ್ರನ ಮೃತದೇಹ ಕಂಡು ಭಾವುಕರಾದರು. ಐಮಂಗಲ ಠಾಣೆ ಹಾಗೂ ಗೋವಾ ಪೊಲೀಸರ ಸಮ್ಮುಖದಲ್ಲಿ ವೈದ್ಯರು ಮರಣೋತ್ತರ ಪರೀಕ್ಷೆಯನ್ನು ಪೂರ್ಣಗೊಳಿಸಿದರು. ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಬಾಲಕನ ಮೃತದೇಹವನ್ನು ವೆಂಕಟರಮಣ್‌ಗೆ ಹಸ್ತಾಂತರಿಸಲಾಯಿತು.

ಪ್ರತಿಭಾವಂತ ಮಹಿಳೆಯರ ಪಟ್ಟಿಯಲ್ಲಿ ಹೆಸರು ?

ಬೆಂಗಳೂರು: ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ ವಿಶ್ವದ 100 ಪ್ರತಿಭಾವಂತ ಮಹಿಳೆಯರ ಪಟ್ಟಿಯಲ್ಲಿ ತನಗೂ ಸ್ಥಾನ ಸಿಕ್ಕಿದೆ ಎಂಬುದಾಗಿ ಸುಚನಾ, ಲಿಂಕ್ಡ್ ಇನ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 2021ರಲ್ಲಿ ಪ್ರಕಟವಾದ ಪಟ್ಟಿಯನ್ನು ಹಂಚಿಕೊಂಡ ಸುಚನಾ, ವಿದೇಶದಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವುದಾಗಿ ಉಲ್ಲೇಖಿಸಿದ್ದಾರೆ.

30 ಮಂದಿಗೆ ಕೆಲಸ: ನಗರಕ್ಕೆ 12 ವರ್ಷಗಳ ಹಿಂದೆ ಬಂದಿದ್ದ ಸುಚನಾ ಅವರು ಕೋರಮಂಗಲದ ಕಂಪನಿಯೊಂದರಲ್ಲಿ ಡೇಟಾ ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದರು.

2020ರಲ್ಲಿ ರೆಸಿಡೆನ್ಸಿ ರಸ್ತೆಯ ಕಟ್ಟಡವೊಂದರಲ್ಲಿ ಮೈಂಡ್‌ಫುಲ್ ಎಐ ಲ್ಯಾಬ್ ಹೆಸರಿನ ಸ್ಟಾರ್ಟ್‌ಅಪ್ ಕಂಪನಿ ತೆರೆದಿದ್ದರು. ಆ ಕಂಪನಿಯಲ್ಲಿ ಸುಮಾರು 30 ಮಂದಿಗೆ ಉದ್ಯೋಗ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಪ್ರಕರಣ ಸಂಬಂಧ ಗೋವಾ ಪೊಲೀಸರು ಯಾವುದೇ ಮಾಹಿತಿ ಕೇಳಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ದಾಂಪತ್ಯದಲ್ಲಿ ಬಿರುಕು

ಭೌತ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿರುವ ಕೋಲ್ಕತ್ತಾ ಮೂಲದವರು ಎನ್ನಲಾದ ಸುಚನಾ ಸೇಠ್, 2008ರಲ್ಲಿ ಬೆಂಗಳೂರಿನ ಖಾಸಗಿ ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿದ್ದರು. 2010ರಲ್ಲಿ ವೆಂಕಟರಮಣ್ ಎಂಬವರನ್ನು ವಿವಾಹವಾಗಿದ್ದರು. ದಂಪತಿಗೆ 2019ರಲ್ಲಿ ಪುತ್ರ ಚಿನ್ಮಯ್ ಜನಿಸಿದ್ದ. ಅದಾಗಲೇ ದಾಂಪತ್ಯದಲ್ಲಿ ಬಿರುಕು ಮೂಡಿದ್ದರಿಂದ 2020ರಲ್ಲಿ ವಿಚ್ಛೇದನಕ್ಕೆ ನ್ಯಾಯಾಲಯದ ಮೆಟ್ಟಿಲೇರಿದ್ದರು. ಪ್ರತಿ ಭಾನುವಾರ ಪುತ್ರನೊಂದಿಗೆ ಮಾತನಾಡಲು ಪತಿಗೆ ನ್ಯಾಯಾಲಯ ಅವಕಾಶ ಕಲ್ಪಿಸಿತ್ತು. ಇದು ಸುಚನಾಗೆ ಇಷ್ಟವಿರಲಿಲ್ಲ ಎಂದು ಮೂಲಗಳು ಮಾಹಿತಿ ನೀಡಿವೆ.

ಸುಳ್ಳು ಮಾಹಿತಿ ನೀಡಿದ್ದ ಆರೋಪಿ

ಹೋಟೆಲ್ ಕೊಠಡಿಯಲ್ಲಿ ರಕ್ತದ ಕಲೆಗಳನ್ನು ಪರಿಶೀಲಿಸಿದ ಗೋವಾ ಪೊಲೀಸರು, ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದ್ದರು. ಪುತ್ರನೊಂದಿಗೆ ಹೋಟೆಲ್‌ಗೆ ಬಂದಿದ್ದ ಮಹಿಳೆ ತೆರಳುವಾಗ ಏಕಾಂಗಿಯಾಗಿ ಇದ್ದದ್ದು ಗಮನಕ್ಕೆ ಬಂದಿತ್ತು. ಜೊತೆಗಿದ್ದ ದೊಡ್ಡ ಟ್ರಾಲಿ ಸೂಟ್‌ಕೇಸ್ ಬ್ಯಾಗ್ ಅನುಮಾನ ಮೂಡಿಸಿತ್ತು. ಮಹಿಳೆಯನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಪೊಲೀಸರು ಬಾಲಕನ ಬಗ್ಗೆ ವಿಚಾರಿಸಿದ್ದರು.

ಮಡಗಾಂವ್‌ನ ಸ್ನೇಹಿತರ ಮನೆಯಲ್ಲಿ ಪುತ್ರನನ್ನು ಬಿಟ್ಟು ಬಂದಿದ್ದಾಗಿ ಮಹಿಳೆ ವಿಳಾಸ ನೀಡಿದ್ದರು. ಕಾರ್ಯಪ್ರವೃತ್ತರಾದ ಪೊಲೀಸರು ಪರಿಶೀಲಿಸಿದಾಗ ಸುಳ್ಳು ವಿಳಾಸ ನೀಡಿದ್ದು ಖಚಿತವಾಗಿತ್ತು. ಕಾರು ಚಾಲಕನ ಮೊಬೈಲ್ ಫೋನ್‌ಗೆ ಕರೆ ಮಾಡಿದ ಗೋವಾ ಪೊಲೀಸರು ಮಹಿಳೆಯನ್ನು ಪೊಲೀಸರಿಗೆ ಒಪ್ಪಿಸುವಂತೆ ಸೂಚಿಸಿದ್ದರು ಎಂದು ಮೂಲಗಳು ವಿವರಿಸಿವೆ.

ಶವ ಸಾಗಿಸುವಾಗ ಸಿಕ್ಕಿಬಿದ್ದ ತಾಯಿ

ಒಂದನೇ ಪುಟದಿಂದ...

ಉತ್ತರ ಗೋವಾದ ಹೋಟೆಲ್‌ವೊಂದರ ಕೊಠಡಿಯನ್ನು ಜ. 6ರಂದು ಬಾಡಿಗೆ ಪಡೆದು ಪುತ್ರನೊಂದಿಗೆ ತಂಗಿದ್ದರು. ಜ.8ರಂದು ಕೊಠಡಿ ತೆರವುಗೊಳಿಸಿದ ಸುಚನಾ, ಬೆಂಗಳೂರಿಗೆ ಮರಳಲು ಕಾರು ಒದಗಿಸುವಂತೆ ಹೋಟೆಲ್ ಸಿಬ್ಬಂದಿಗೆ ಸೂಚಿಸಿದ್ದರು. ಕಾರು ಬದಲು ವಿಮಾನ ಸೂಕ್ತ ಆಯ್ಕೆ ಎಂಬ ಸಲಹೆಯನ್ನು ನಿರಾಕರಿಸಿದ ಆರೋಪಿ, ಬಾಡಿಗೆ ಕಾರಿನಲ್ಲಿ ಸೋಮವಾರ ನಸುಕಿನಲ್ಲಿ ಪ್ರಯಾಣ ಬೆಳೆಸಿದ್ದರು.

ಕೊಠಡಿ ಸ್ವಚ್ಛತೆಗೆ ತೆರಳಿದ್ದ ಹೋಟೆಲ್ ಸಿಬ್ಬಂದಿಗೆ ರಕ್ತದ ಕಲೆಗಳಿರುವುದು ಗಮನಕ್ಕೆ ಬಂದಿತ್ತು. ಅನುಮಾನಗೊಂಡ ಅವರು ತಕ್ಷಣ ಕಲಂಗೂಟ್ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಕೊಠಡಿ, ಸಿ.ಸಿ. ಟಿವಿ ಪರಿಶೀಲಿಸಿದಾಗ ಬಾಲಕ ಕೊಲೆಯಾಗಿರುವ ಸುಳಿವು ಲಭ್ಯವಾಗಿತ್ತು. ಸುಚನಾ ಬಾಡಿಗೆಗೆ ಪಡೆದಿದ್ದ ಕಾರಿನ ಚಾಲಕನಿಗೆ ದೂರವಾಣಿ ಕರೆ ಮಾಡಿದ ಪೊಲೀಸರು ಘಟನೆ ಹಾಗೂ ಮಹಿಳೆಯ ಅನುಮಾನಾಸ್ಪದ ವರ್ತನೆಯ ಬಗ್ಗೆ ಕೊಂಕಣಿ ಭಾಷೆಯಲ್ಲಿ ವಿವರಿಸಿದ್ದರು. ಸಮೀಪದ ಠಾಣೆಯ ಪೊಲೀಸರಿಗೆ ಮಹಿಳೆಯನ್ನು ಒಪ್ಪಿಸುವಂತೆ ಸೂಚನೆ ನೀಡಿದ್ದರು.

ಕ್ಯಾಬ್ ಚಾಲಕನಿಗೆ ಈ ಸೂಚನೆ ದೊರೆತಾಗ ಅವರ ಕಾರು ರಾಷ್ಟ್ರೀಯ ಹೆದ್ದಾರಿ- 48ರ ಚಿತ್ರದುರ್ಗ - ಹಿರಿಯೂರು ಮಧ್ಯೆ ಸಾಗುತ್ತಿತ್ತು. ಹಿರಿಯೂರು ತಾಲ್ಲೂಕಿನ ಐಮಂಗಲ ಟೋಲ್ ಸಮೀಪದ ಹೆದ್ದಾರಿ ಬದಿಯಲ್ಲಿದ್ದ ಠಾಣೆಗೆ ನೇರವಾಗಿ ಕಾರು ಕೊಂಡೊಯ್ದ ಚಾಲಕ, ಪೊಲೀಸರ ಸಮ್ಮುಖದಲ್ಲಿ ಡಿಕ್ಕಿ ಪರಿಶೀಲಿಸಿದಾಗ ಪ್ರಕರಣ ಬಹಿರಂಗಗೊಂಡಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

‘ಗೋವಾ ಪೊಲೀಸರ ಮಾಹಿತಿ ಮೇರೆಗೆ ಐಮಂಗಲ ಠಾಣೆಯ ಪೊಲೀಸರು ಸೋಮವಾರ ಕಾರೊಂದನ್ನು ತಪಾಸಣೆ ನಡೆಸಿದ್ದರು. ಕಾರಿನಲ್ಲಿದ್ದ ಸೂಟ್‌ಕೇಸ್‌ನಲ್ಲಿ ನಾಲ್ಕು ವರ್ಷದ ಬಾಲಕನ ಮೃತದೇಹ ಪತ್ತೆಯಾಗಿತ್ತು. ತಕ್ಷಣ ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು. ಬಾಲಕನ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ಸಾಗಿಸಿದ್ದು, ಆರೋಪಿಯನ್ನು ಗೋವಾ ಪೊಲೀಸರಿಗೆ ಹಸ್ತಾಂತರಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಕತ್ತು ಹಿಸುಕಿ ಕೊಲೆ ಸಾಧ್ಯತೆ: ಹೋಟೆಲ್ ಕೊಠಡಿಯಲ್ಲಿ ಕತ್ತು ಹಿಸುಕಿ ಪುತ್ರನನ್ನು ಕೊಲೆ ಮಾಡಿರುವ ಸುಚನಾ, ನಂತರ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಕೈ ಕೊಯ್ದುಕೊಳ್ಳಲು ಪ್ರಯತ್ನಿಸಿದಾಗ ರಕ್ತ ಕೊಠಡಿಯಲ್ಲಿ ಬಿದ್ದಿದೆ. ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರ ಬದಲಿಸಿದ ಆರೋಪಿ, ಬಾಲಕನ ಮೃತದೇಹವನ್ನು ಸೂಟ್‌ಕೇಸ್‌ಗೆ ತುಂಬಿದ್ದಾರೆ ಎಂದು ಹೇಳಲಾಗಿದೆ.

‘ಬಾಲಕನ ಮೃತದೇಹದಲ್ಲಿ ರಕ್ತದ ಕಲೆ ಪತ್ತೆಯಾಗಿಲ್ಲ. ಎದೆಯ ಭಾಗ ಕಪ್ಪಾಗಿದ್ದು, ಕತ್ತು ಹಿಸುಕಿ ಕೊಲೆ ಮಾಡಿದ ಸಾಧ್ಯತೆ ಇದೆ ಎಂಬುದಾಗಿ ವೈದ್ಯರು ಪ್ರಾಥಮಿಕ ಮಾಹಿತಿ ನೀಡಿದ್ದಾರೆ. ಮಹಿಳೆಯ ಕೈಯಲ್ಲಿದ್ದ ಆಳವಾದ ಗಾಯದ ಕುರಿತು ಪ್ರಶ್ನಿಸಿದಾಗ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾಗಿ ಮಾಹಿತಿ ನೀಡಿದ್ದಾರೆ. ಗೋವಾ ಪೊಲೀಸರು ತನಿಖೆ ಮುಂದುವರಿಸಿದ್ದಾರೆ’ ಎಂದು ಐಮಂಗಲ ಠಾಣೆಯ ಪೊಲೀಸರು ಹೇಳಿದ್ದಾರೆ.

ಗೋವಾ ವರದಿ: ಮಂಗಳವಾರ ಮಧ್ಯಾಹ್ನ ಆರೋಪಿಯನ್ನು ಗೋವಾಗೆ ಕರೆತಂದು ಮಾಪುಸಾ ಪಟ್ಟಣದ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆಕೆಯನ್ನು ಆರು ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕೆ ತಡೆ • ರಾಜ್ಯ ಸರ್ಕಾರದ ಮನವಿ

ಆದೇಶ ಮಾರ್ಪಾಡಿಗೆ ‘ಸುಪ್ರೀಂ’ಗೆ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ನೀಡಿರುವ ತಡೆಯಾಜ್ಞೆಯನ್ನು ಮಾರ್ಪಡಿಸಬೇಕು ಎಂದು ಕೋರಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದೆ.

ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಹೈಕೋರ್ಟ್ ವಿಭಾಗೀಯ ಪೀಠವು 2023ರ ಅಕ್ಟೋಬರ್ 13ರಂದು ಆದೇಶಿಸಿತ್ತು. ಈ ಆದೇಶಕ್ಕೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು 2024ರ ಜನವರಿ 3ರಂದು ತಡೆಯಾಜ್ಞೆ ನೀಡಿತ್ತು.

‘ತಡೆಯಾಜ್ಞೆಯಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಹೀಗಾಗಿ, ನೇಮಕಾತಿ ಆದೇಶಗಳನ್ನು ಹೊರಡಿಸಿದ ಶಿಕ್ಷಕರಿಗೆ ಉದ್ಯೋಗವನ್ನು ಮುಂದುವರಿಸಲು ಅನುಮತಿ ನೀಡಬೇಕು’ ಎಂದು ರಾಜ್ಯ ಸರ್ಕಾರ ಕೋರಿದೆ. ಕರ್ನಾಟಕ ಸರ್ಕಾರವು ವಕೀಲ ಡಿ.ಎಲ್.ಚಿದಾನಂದ ಮೂಲಕ ಅರ್ಜಿ ಸಲ್ಲಿಸಿದೆ.

‘ದೊಡ್ಡ ಸಂಖ್ಯೆಯ ಶಿಕ್ಷಕರ ನೇಮಕಕ್ಕೆ ತಡೆ ನೀಡಲಾಗಿದೆ. ಶೈಕ್ಷಣಿಕ ವರ್ಷದ ನಿರ್ಣಾಯಕ ಘಟ್ಟದಲ್ಲಿ ಇಷ್ಟೇ ಪ್ರಮಾಣದ ಅತಿಥಿ ಶಿಕ್ಷಕರ ಸೇವೆ ಪಡೆಯಲು ಸಾಧ್ಯವಿಲ್ಲ. ಇದಲ್ಲದೆ, ಅನೇಕ ಅತಿಥಿ ಶಿಕ್ಷಕರು ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಲು ಹಿಂಜರಿಯುತ್ತಾರೆ’ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರವು ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯ ಪತಿಯ ಆದಾಯ ಪ್ರಮಾಣಪತ್ರವನ್ನು ಪರಿಗಣಿಸಿತ್ತು. ‘ಮದುವೆಯಾದ ಮಹಿಳೆಯರು ಪತಿಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ನೇಮಕಾತಿ ಅಧಿಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಮೆರಿಟ್ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ’ ಎಂದು ಆರೋಪಿಸಿ ಅವಕಾಶವಂಚಿತರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಹೈಕೋರ್ಟ್‌ನ ಏಕಸದಸ್ಯ ಪೀಠವು, ‘ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರವನ್ನೂ ಪರಿಗಣಿಸಬೇಕು’ ಎಂದು ಆದೇಶಿಸಿ, ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರದ್ದುಗೊಳಿಸಿತ್ತು. ಕೋರ್ಟ್ ಆದೇಶದಂತೆ ಸರ್ಕಾರವು ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಿತ್ತು. ಹೊಸ ಪಟ್ಟಿ ಪ್ರಕಟಿಸಿದಾಗ ಮೊದಲಿದ್ದ ಪಟ್ಟಿಯಿಂದ 451 ಅಭ್ಯರ್ಥಿಗಳು ಹೊರಗುಳಿದರು. ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿತ್ತು. ಏಕಸದಸ್ಯ ಪೀಠದ ಆದೇಶವನ್ನು ದ್ವಿಸದಸ್ಯ ಪೀಠ ರದ್ದುಗೊಳಿಸಿತ್ತು.

ಸಾಮರ್ಥ್ಯ ಪರೀಕ್ಷೆ ಯಶಸ್ವಿಯಾದರೆ ಭಾರಿ ವಾಹನ ಸಂಚಾರಕ್ಕೆ ಅವಕಾಶ

ಪೀಣ್ಯ ಮೇಲ್ಸೇತುವೆ: ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ತುಮಕೂರು ರಸ್ತೆಯ ಮೇಲ್ಸೇತುವೆ.

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ-4ರ ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಯಲ್ಲಿ ನಡೆಯುತ್ತಿದ್ದ ಕೇಬಲ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು, ಮೇಲ್ಸೇತುವೆ ಸಾಮರ್ಥ್ಯ ಪರೀಕ್ಷೆಗಾಗಿ (ಲೋಡ್ ಟೆಸ್ಟಿಂಗ್) ಇದೇ 16ರ ರಾತ್ರಿ 11ರಿಂದ 19ರ ಬೆಳಿಗ್ಗೆ 11ರ ವರೆಗೆ ಎಲ್ಲ ರೀತಿಯ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಮೇಲ್ಸೇತುವೆ ಸಾಮರ್ಥ್ಯ ಪರೀಕ್ಷೆಗಾಗಿ ವಾಹನ ಸಂಚಾರ ನಿಷೇಧಿಸುವಂತೆ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗಳು, ನಗರ ಸಂಚಾರ ವಿಭಾಗದ ಪೊಲೀಸರಿಗೆ ಮನವಿ ಸಲ್ಲಿಸಿದ್ದರು.ಮೇಲ್ಸೇತುವೆಯಲ್ಲಿಸಂಚರಿಸುತ್ತಿದ್ದ ಕಾರು, ಬೈಕ್ ಸೇರಿದಂತೆ ಸಣ್ಣ ವಾಹನಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ನೆಲಮಂಗಲದ ಕಡೆಯಿಂದ ಮೇಲ್ಸೇತುವೆ ಮೂಲಕ ನಗರಕ್ಕೆ ಬರುತ್ತಿದ್ದ ವಾಹನಗಳು ಕೆನ್ನಮೆಟಲ್ (ವಿಡಿಯಾ) ಬಳಿಯ ಮೇಲ್ಸೇತುವೆ ಪಕ್ಕದ ಎನ್‌ಎಚ್‌-4 ರಸ್ತೆ, ಸರ್ವೀಸ್ ರಸ್ತೆಯಲ್ಲಿ ಬರಬೇಕು. 8ನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಎಸ್‌ಆರ್‌ಎಸ್ ಜಂಕ್ಷನ್ ಮೂಲಕ ಗೊರಗುಂಟೆಪಾಳ್ಯ ತಲುಪಬಹುದು.

ಸಿಎಂಟಿಐ ಜಂಕ್ಷನ್‌ನಿಂದ ನೆಲಮಂಗಲ ಕಡೆಗೆ ಪೀಣ್ಯ ಮೇಲ್ಸೇತುವೆಯಲ್ಲಿ ಸಾಗುವ ವಾಹನಗಳು ಮೇಲ್ಸೇತುವೆ ಕೆಳಗಿನ ಎನ್‌ಎಚ್ ರಸ್ತೆ ಹಾಗೂ ಸೇವಾ ರಸ್ತೆಯನ್ನೇ ಬಳಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

20ಕ್ಕೂ ಹೆಚ್ಚು ಜಿಲ್ಲೆ ಹಾಗೂ ಹೊರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದೆ.

‘ಗೊರಗುಂಟೆಪಾಳ್ಯ ವೃತ್ತದಿಂದ ಕೆನ್ನಮೆಟಲ್(ವಿಡಿಯಾ) ಜಂಕ್ಷನ್‌ವರೆಗೆ ಒಟ್ಟು 120 ಪಿಲ್ಲರ್‌ಗಳಿದ್ದು, ಎರಡು ಪಿಲ್ಲರ್‌ಗಳ ನಡುವೆ ತಲಾ ಎರಡು ಕೇಬಲ್ ಅಳವಡಿಸಿ ಸಾಮರ್ಥ್ಯ ಹೆಚ್ಚಿಸಲಾಗಿದೆ. ಈಗ ಬೇರೆ ಬೇರೆ ವೇಗದಲ್ಲಿ ವಾಹನಗಳನ್ನು ಓಡಿಸಿ ಪರೀಕ್ಷೆ ನಡೆಸಲಾಗುವುದು. ಅದಾದ ಮೇಲೆ ಆರು ಟ್ರಕ್‌ಗಳಿಗೆ ಮಣ್ಣು ತುಂಬಿಸಿ ಮೇಲ್ಸೇತುವೆ ಮೇಲೆ ಓಡಿಸಿ ಪರೀಕ್ಷಿಸಲಾಗುವುದು. ಯಶಸ್ವಿಯಾದರೆ ಈ ತಿಂಗಳ ಅಂತ್ಯದಿಂದ ಮೇಲ್ಸೇತುವೆಯಲ್ಲಿ ಎಲ್ಲ ರೀತಿ ವಾಹನ ಸಂಚಾರಕ್ಕೆ ಅವಕಾಶ ಸಿಗಲಿದೆ’ ಎಂದು ಮೇಲ್ಸೇತುವೆ ಅಧ್ಯಯನ ಸಮಿತಿ ಸದಸ್ಯ ಚಂದ್ರ ಕಿಶನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಭಾರಿ ವಾಹನ ಸಂಚಾರಕ್ಕೆ ಅವಕಾಶವಾದ ಮೇಲೆ ಎರಡು ಪಿಲ್ಲರ್‌ಗಳ ಮಧ್ಯೆಯಿರುವ ತುಕ್ಕು ಹಿಡಿದಿರುವ ಉಳಿದ ಕೇಬಲ್‌ಗಳ ಬದಲಾವಣೆ ಕಾಮಗಾರಿ ನಡೆಯಲಿದೆ. ಇದಕ್ಕೆ ಒಂದು ವರ್ಷ ಬೇಕಿದೆ’ ಎಂದು ಮಾಹಿತಿ ನೀಡಿದರು.

‘ಪೆಟ್ರೋಲ್ ಬಂಕ್‌ಗಳಲ್ಲಿ ಕನ್ನಡ ಫಲಕಕ್ಕೆ ಸೂಚನೆ’

ಬೆಂಗಳೂರು: ‘ಕರ್ನಾಟಕದ ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸುವಂತೆ ಸೂಚನೆ ನೀಡಲಾಗಿದೆ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಾದೇಶಿಕ ಭಾಷೆಗಳಲ್ಲಿ ದರ ಪಟ್ಟಿ ಪ್ರಕಟಿಸುವಂತೆ ಪೆಟ್ರೋಲ್ ಬಂಕ್‌ಗಳ ಮಾಲೀಕರಿಗೆ ಸೂಚಿಸಲಾಗಿದೆ. ಕನ್ನಡದಲ್ಲಿ ದರಪಟ್ಟಿ ಪ್ರಕಟಣೆ ಬುಧವಾರದಿಂದಲೇ ಜಾರಿಗೆ ಬರಲಿದೆ’ ಎಂದರು.

ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರ ಏರುಗತಿಯಲ್ಲಿದೆ. ಭಾರತದಲ್ಲಿ ಎರಡು ವರ್ಷಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ದರ ಕಡಿಮೆಯಾಗಿದೆ. ಜನರು ಈ ಬೆಳವಣಿಗೆಯನ್ನು ಗಮನಿಸುತ್ತಿದ್ದಾರೆ. ಅದಕ್ಕಾಗಿಯೇ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸರಿಯಾದ ಪಾಠ ಕಲಿಸಿದ್ದಾರೆ ಎಂದು ಪುರಿ ಅವರು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಪಿ.ಸಿ. ಮೋಹನ್, ರಾಷ್ಟ್ರೀಯ ವಕ್ತಾರರಾದ ಜಾಫರ್ ಇಸ್ಲಾಂ, ತೂಹಿನ್ ಸಿನ್ಹಾ, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.

‘ಮಸೀದಿ, ದರ್ಗಾಗಳಲ್ಲಿ ದೀಪ ಬೆಳಗಲು ಅಭಿಯಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದಲ್ಲಿ ರಾಮನ ವಿಗ್ರಹ ಪ್ರತಿಷ್ಠಾಪನೆಯ ದಿನದಂದು ಎಲ್ಲ ಮಸೀದಿ ಮತ್ತು ದರ್ಗಾಗಳಲ್ಲಿ ಐದು ದೀಪಗಳನ್ನು ಬೆಳಗಿಸುವಂತೆ ಮನವೊಲಿಸಲು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಸದಸ್ಯರು ಅಭಿಯಾನ ಆರಂಭಿಸಲಿದ್ದಾರೆ ಎಂದು ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಜಮಾಲ್ ಸಿದ್ದಿಕ್ಕಿ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ರಾಮ ಮಂದಿರದ ಉದ್ಘಾಟನೆ ಮತ್ತು ವಿಗ್ರಹ ಪ್ರತಿಷ್ಠಾಪನೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಸೀದಿ ಮತ್ತು ದರ್ಗಾ ಸಮಿತಿ ಸದಸ್ಯರನ್ನು ಮನವೊಲಿಸಲು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಕಾರ್ಯಕರ್ತರಿಗೆ ಸೂಚಿಸಲಾಗಿದೆ’ ಎಂದರು.

‘ಇದೊಂದು ಐತಿಹಾಸಿಕ ಸನ್ನಿವೇಶ. ಅಯೋಧ್ಯೆಯಲ್ಲಿ ಶ್ರೀರಾಮನ ವಿಗ್ರಹ ಪ್ರತಿಷ್ಠಾಪನೆಯನ್ನು ನಾವೆಲ್ಲರೂ ಒಟ್ಟಾಗಿ ಸ್ವಾಗತಿಸಬೇಕಿದೆ. ದೇಶದ 140 ಕೋಟಿ ಜನರೂ ಈ ಸಂಭ್ರಮದಲ್ಲಿ ಭಾಗಿಯಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಬಯಸಿದ್ದಾರೆ’ ಎಂದು ಹೇಳಿದರು.

ದೇಶದ ಎಲ್ಲ ಮಸೀದಿ ಮತ್ತು ದರ್ಗಾಗಳ ಆವರಣಗಳಲ್ಲಿ ಇದೇ 14ರಿಂದ ಸ್ವಚ್ಛತಾ ಕೆಲಸಗಳನ್ನು ಆರಂಭಿಸಲಾಗುವುದು. ಸೂಫಿ ಸಂತರ ಸಭೆ, ಧಾರ್ಮಿಕ ಸಭೆಗಳನ್ನೂ ಆಯೋಜಿಸಲಾಗುವುದು. ಮಸೀದಿ ಮತ್ತು ದರ್ಗಾಗಳ ಎದುರು ಐದು ದೀಪಗಳನ್ನು ಬೆಳಗಿಸುವ ಮೂಲಕ ಶ್ರೀರಾಮ ಮಂದಿರದ ಉದ್ಘಾಟನೆಯನ್ನು ಸ್ವಾಗತಿಸುವಂತೆ ಮನವಿ ಮಾಡಲಾಗುವುದು ಎಂದರು.

ಸ್ಯಾಂಟ್ರೊ ರವಿಗೆ ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅತ್ಯಾಚಾರ, ವೇಶ್ಯಾವಾಟಿಕೆ ಸೇರಿದಂತೆ ಹಲವು ಪ್ರಕರಣಗಳ ಆರೋಪಿ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿಗೆ ಜಾಮೀನು ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಸ್ಯಾಂಟ್ರೊ ರವಿಯನ್ನು ಕರ್ನಾಟಕದ ಪೊಲೀಸರು ಗುಜರಾತ್‌ನ ಅಹಮದಾಬಾದ್‌ನಲ್ಲಿ 2023ರ ಜನವರಿಯಲ್ಲಿ ಬಂಧಿಸಿದ್ದರು. ಆತನ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಅದನ್ನು ಪ್ರಶ್ನಿಸಿ ಸ್ಯಾಂಟ್ರೊ ರವಿ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ಪೀಠ, ‘ಆರೋಪಿಯ ವಿರುದ್ಧ ಗುರುತರ ಆರೋಪಗಳಿವೆ. ಇಂತಹ ಸಂದರ್ಭದಲ್ಲಿ ಜಾಮೀನು ನೀಡುವುದು ಸೂಕ್ತ ಎನಿಸುವುದಿಲ್ಲ’ ಎಂದು ಮೌಖಿಕವಾಗಿ ಅಭಿಪ್ರಾಯಪಟ್ಟಿತು. ಬಳಿಕ ಅರ್ಜಿಯನ್ನು ವಜಾಗೊಳಿಸಿತು. ಕರ್ನಾಟಕ ಸರ್ಕಾರದ ಪರವಾಗಿ ವಕೀಲ ವಿ.ಎನ್.ರಘುಪತಿ ಹಾಗೂ ಸಂತ್ರಸ್ತೆ ಪರವಾಗಿ ಸಿ.ಬಿ.ಗುರುರಾಜ್ ವಾದಿಸಿದ್ದರು.

ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ ಬಗ್ಗೆ ರವಿ ವಿರುದ್ಧ 2023ರ ಜ.2ರಂದು ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ರಾಜ್ಯಪಾಲ ಗೆಹಲೋತ್‌ಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ.

ಪ್ರತ್ಯೇಕವಾಸಕ್ಕೆ ಒಳಗಾಗಿರುವ ಗೆಹಲೋತ್ ಅವರ ಆರೋಗ್ಯ ಸ್ಥಿರವಾಗಿದೆ ಎಂದು ರಾಜಭವನದ ಪ್ರಕಟಣೆ ತಿಳಿಸಿದೆ.

ಪ್ರತ್ಯೇಕವಾಸದ ಅವಧಿ ಮುಗಿಯುವ ವರೆಗೆ ರಾಜ್ಯಪಾಲರ ಪೂರ್ವ ನಿಗದಿತ ಕಾರ್ಯಕ್ರಮ, ಭೇಟಿಗಳನ್ನು ರದ್ದುಪಡಿಸಲಾಗಿದೆ ಎಂದೂ ಪ್ರಕಟಣೆ ಹೇಳಿದೆ.

ಪುರಸಭೆ ಕಾರ್ಯಾಲಯ, ಸಂಡೂರು

ಸಂಡೂರು (ತಾಲೂಕು) ಬಳ್ಳಾರಿ (ಜಿಲ್ಲೆ)

E-mail : itstaff_ulb_sandur@ymail.com Web site: www.sandoortown.gov.in

ಸಂ.ಪು.ಸ.ಸಂ/ವಿವಿದ ಅನುದಾನ /ಇ-ಟೆಂ.ಪ್ರ/2023-24/01 ದಿನಾಂಕ: 09.01.2024

ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)

2023-24 & 2020-21 ನೇಸಾಲಿನ 15ನೇ ಹಣಕಾಸು, ,2023-24 ನೇಸಾಲಿನ ಎಸ್ ಎಫ್ ಸಿ,2021-22 ನೇ ಸಾಲಿನ 15ನೇ ಹಣಕಾಸು, ಉಳಿತಾಯ,2023-24 ನೇಸಾಲಿನ ಎಸ್ ಎಫ್ ಸಿ ಕುಡಿಯುವ ನೀರಿನ ಅನುದಾನ & ಎಸ್ ಎಫ್ ಸಿ ಕುಡಿಯುವ ನೀರಿನ ಉಳಿಕೆ ಅನುದಾನದಡಿಯಲ್ಲಿ ಒಟ್ಟು ಮೊತ್ತ ರೂ.88.51ಲಕ್ಷಗಳಿಗೆ ಈ ಕೆಳಕಂಡ ಒಟ್ಟು 08 ಸಂಖ್ಯೆ ಪ್ಯಾಕೇಜ್‌ಗಳ ಕಾಮಗಾರಿಗಳಿಗೆ E-GOK, ಇ-ಪ್ರಕ್ಯೂರ್ ಮೆಂಟ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.ಅಸಕ್ತ ಗುತ್ತಿಗೆದಾರರು ವೆಬ್‌ಸೈಟ್ (https://kppp.karnataka.gov.in/) ಮೂಲಕ ಟೆಂಡರ್ ಸಲ್ಲಿಸಬಹುದು.

ಪ್ಯಾ. ಸಂ.	ಕಾಮಗಾರಿ ವಿವರ	ಇಂಡೆಂಟ್ ನಂ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಕಾಲಮಿತಿ
01	ಕುಡಿಯುವ ನೀರು ಕಾಮಗಾರಿ	DMA/2023-24/WS/WORK_INDENT11869	13.81	34,525/-	03 ತಿಂಗಳು
02		DMA/2023-24/WS/WORK_INDENT11786	5.18	12,950/-	03 ತಿಂಗಳು
03	ಚರಂಡಿ ಕಾಮಗಾರಿ	DMA/2023-24/OW/WORK_INDENT11794 (Reserved for ST Category Contractor)	29.60	29,600/-	04 ತಿಂಗಳು
04	ಟಿ ಸಿ ರೀಪೇರಿ	DMA/2023-24/EL/WORK_INDENT11769	2.68	6700/-	03 ತಿಂಗಳು
05	ಕಾಂಪೌಂಡ್ ಕಾಮಗಾರಿ/ಕಟ್ಟಡ ರೀಪೇರಿ	DMA/2023-24/BD/WORK_INDENT12202	3.28	8200/-	03 ತಿಂಗಳು
06		DMA/2023-24/BD/WORK_INDENT9837 (Reserved for SC Category contractor)	7.46	9325/-	04 ತಿಂಗಳು
07		DMA/202324/OW/WORK_INDENT12205 (Reserved for SC Category contractor)	6.50	8,125/-	04 ತಿಂಗಳು
08	ಪಾರ್ಕ ಅಭಿವೃದ್ಧಿ	DMA/2023-24/OW/WORK_INDENT11795	20.00	50,000/-	04 ತಿಂಗಳು

ಸಾಮಾನ್ಯ ಸೂಚನೆಗಳು:-

1) ಇ-ಪ್ರಕ್ಯೂರ್ ಮೆಂಟ್ ಮೂಲಕ ಮಾಹಿತಿ/ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ: 23.01.2024 ಸಾಯಂಕಾಲ 4.30 ರ ಒಳಗೆ.
2) ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.01.2024 ಸಾಯಂಕಾಲ 4.30 ರ ಒಳಗೆ.
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:27.01,2024 ಬೆಳಗ್ಗೆ 11.00ರ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ:29.01,2024 ಬೆಳಗ್ಗೆ 11.00ರ ನಂತರ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಸಂಬಂದಿಸಿದ ಕಿರಿಯ ಅಭಿಯಂತರರು, ಪುರಸಭೆ ಕಾರ್ಯಾಲಯ ಸಂಡೂರು ರವರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ **08395 – 260275, website: www.sandoortown.mrc.gov.in**

ಸಹಿ/- ಮುಖ್ಯಾಧಿಕಾರಿ, ಪುರಸಭೆ ಸಂಡೂರು

ಸಹಿ/-ಮಾನ್ಯ ಆಡಳಿತಾಧಿಕಾರಿಗಳು ಮತ್ತು ಸಹಾಯಕ ಅಯುಕ್ತರು, ಪುರಸಭೆ ಸಂಡೂರು

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.09/2023-24 ದಿನಾಂಕ:09.01.2024

ಅಧಿಸೂಚನೆ

2024-25 ನೇ ಸಾಲಿಗೆ ಕರ್ನಾಟಕದ ರಾಜ್ಯದಲ್ಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ

1. ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ, 2006 ನಿಯಮಗಳು (ತಿದ್ದುಪಡಿಗಳು) ನಿಯಮ 3, ನಿಯಮ 6 (3) ಮತ್ತು ನಿಯಮ (7) ರ ಅನ್ವಯ ಹಾಗು ಸರ್ಕಾರದ ಆದೇಶದ ಅನುಸಾರವಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಕರ್ನಾಟಕ **ಸಾಮಾನ್ಯ ಪ್ರವೇಶ ಪರೀಕ್ಷೆ-2024ಕ್ಕೆ,** ಅರ್ಹತೆ / ಮೆರಿಟ್‌ಅನ್ನು ಆಧರಿಸಿ, ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ / ವಿಶ್ವವಿದ್ಯಾಲಯ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಇಂಜಿನಿಯರಿಂಗ್, ತಂತ್ರಜ್ಞಾನ, ಯೋಗ ಮತ್ತು ನ್ಯಾಚುರೋಪತಿ, ಬಿ-ಫಾರ್ಮ, 2ನೇ ವರ್ಷದ ಬಿ-ಫಾರ್ಮ ಮತ್ತು ಫಾರ್ಮಾ-ಡಿ, ಕೃಷಿ ವಿಜ್ಞಾನ ಕೋರ್ಸುಗಳು, ವೆಟರಿನರಿ ಹಾಗು ಬಿ.ಎಸ್.ಸಿ. (ನರ್ಸಿಂಗ್) ಕೋರ್ಸುಗಳಲ್ಲಿ ಲಭ್ಯವಿರುವ ಸರ್ಕಾರದ ಪಾಲಿನ ಸೀಟುಗಳಿಗೆ ಸಂಬಂಧಿಸಿದಂತೆ, ಪೂರ್ಣಾವಧಿ ಕೋರ್ಸುಗಳ ಮೊದಲನೇ ವರ್ಷಕ್ಕೆ ಅಥವಾ ಮೊದಲನೇ ಸೆಮಿಸ್ಟರ್‌ಗೆ ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ 2024-25ನೇ ಸಾಲಿಗೆ ಅನ್ವಯಿಸುವಂತೆ ಪ್ರವೇಶ ನೀಡುವುದಕ್ಕೆ ಅರ್ಹ ಕರ್ನಾಟಕದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈ ಮೇಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವುದಕ್ಕೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ನಂತರ ಕೆಇಎ ನಡೆಸುವ **ಸಾಮಾನ್ಯ ಪ್ರವೇಶ ಪರೀಕ್ಷೆ 2024ಕ್ಕೆ** ಹಾಜರಾಗಬೇಕಿರುತ್ತದೆ. ಆನ್‌ಲೈನ್ ಅರ್ಜಿ ಸಲ್ಲಿಸಿವಿಕೆಯು application-cum-verification module ಆಗಿರುವುದರಿಂದ ದಾಖಲೆಗಳ ಪರಿಶೀಲನೆ ಭೌತಿಕವಾಗಿ ಇರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ಎಚ್ಚರಿಕೆಯಿಂದ ಭರ್ತಿ ಮಾಡಲು ಮತ್ತು ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

   ಕಡ್ಡಾಯ: ಎಲ್ಲಾ ವೃತ್ತಿಪರ ಕೋರ್ಸುಗಳ ಸೀಟು ಹಂಚಿಕೆಗೆ ಅರ್ಜಿಯು ಸಾಮಾನ್ಯವಾಗಿರುತ್ತದೆ, ಅಂದರೆ ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ, ಇಂಜಿನಿಯರಿಂಗ್, ತಂತ್ರಜ್ಞಾನ, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಬಿ-ಫಾರ್ಮ, 2ನೇ ವರ್ಷದ ಬಿ-ಫಾರ್ಮ ಮತ್ತು ಫಾರ್ಮಾ-ಡಿ, ಕೃಷಿ ವಿಜ್ಞಾನ ಕೋರ್ಸುಗಳು, ವೆಟರಿನರಿ ಹಾಗು ಬಿ.ಎಸ್.ಸಿ. (ನರ್ಸಿಂಗ್), ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳು. ಅಭ್ಯರ್ಥಿಗಳು ಸಿಇಟಿ-2024ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ. ನಂತರದ ದಿನಗಳಲ್ಲಿ ಅರ್ಜಿ ಸಲ್ಲಿಸಲು ಪೋರ್ಟಲ್ ತೆರೆಯಲಾಗುವುದಿಲ್ಲ ಎಂಬುದನ್ನು ಗಮನಿಸಿ. ಯುಜಿನೀಟ್-2024 ಫಲಿತಾಂಶಗಳ ಪ್ರಕಟಣೆಯ ನಂತರ ಕೆಇಎ ನಲ್ಲಿ ನೊಂದಾಯಿಸಲಾಗುವ ಅಭ್ಯರ್ಥಿಗಳಿಗೆ ಅವರ NEET ಸ್ಕೋರ್ ಮತ್ತು ರೋಲ್ ನಂಬರ್ ಅನ್ನು ದಾಖಲಿಸಲು ಇಂಟರ್‌ಫೇಸ್ ಅನ್ನು ನೀಡಲಾಗುವುದು.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ಸೀಟುಗಳ ಪ್ರವೇಶಕ್ಕಾಗಿ, ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳು, ಎನ್‌ಟಿಎ, ನವದೆಹಲಿ ಇವರು ನಡೆಸುವ **UGNEET-2024** ಕ್ಕೆ ನೊಂದಾಯಿಸಿ ಅರ್ಹತೆಯನ್ನು ಪಡೆದಿರಬೇಕು. (ಸಿಇಟಿ-2024ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ)
4. ಆರ್ಕಿಟೆಕ್ಚರ್ ಸೀಟುಗಳ ಪ್ರವೇಶಕ್ಕಾಗಿ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ರವರು ನಡೆಸುವ **NATA-2024** ರಲ್ಲಿ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಅರ್ಹತೆಯನ್ನು ಪಡೆದಿರಬೇಕು. (ಸಿಇಟಿ-2024ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ)
5. ಸರ್ಕಾರದ ಆದೇಶ ಸಂಖ್ಯೆ ಎಂಇಡಿ 51 ಆರ್‌ಜಿಯು 2023 ದಿನಾಂಕ 13-04-2023 ರ ಅನ್ವಯ ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಕ್ಕೂ ಸಹ ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳು ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕಿರುತ್ತದೆ. **ಕರ್ನಾಟಕೇತರ ಅಭ್ಯರ್ಥಿಗಳು ಇಂಜಿನಿಯರಿಂಗ್ ಮುಂತಾದ ಕೋರ್ಸುಗಳ ಪ್ರವೇಶಕ್ಕೆ ಅರ್ಹರಾಗುವುದಿಲ್ಲ ಮತ್ತು ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ.**
6. ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳ ಪ್ರವೇಶಾತಿಗೆ ಅರ್ಹತೆ ಪಡೆಯುವುದಕ್ಕಾಗಿ ಕರ್ನಾಟಕದ ಅಭ್ಯರ್ಥಿಗಳು ಸಿಇಟಿ-2024ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ ಆದರೆ ಸಿಇಟಿ-2024 ರ ಪರೀಕ್ಷೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಯಾವುದೇ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಅನ್‌ಲೈನ್ ಮೂಲಕ ನೊಂದಾಯಿಸುವ ಮೊದಲು, ಅಭ್ಯರ್ಥಿಗಳು ಮಾಹಿತಿ ಪುಸ್ತಕವನ್ನು ಓದಲು, ಮತ್ತು ಅರ್ಹತಾ ಷರತ್ತುಗಳು, ಸೀಟುಗಳ ವರ್ಗೀಕರಣ (ವಿವಿಧ ವರ್ಗದ ಸೀಟುಗಳು) ಮತ್ತು ಅಂತಹ ಸೀಟುಗಳನ್ನು ಪಡೆಯಲು ಇರುವ ಅರ್ಹತೆಗಳನ್ನು ಅರ್ಥ ಮಾಡಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಅರ್ಹತೆ: ನಿಯಮ 5 (1) ರ Karnataka Selection of Candidates for Admission to Government seats in Professional Educational Institutions Rules, 2006, ಅನ್ವಯ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು ಮತ್ತು ನಿಗದಿ ಪಡಿಸಿರುವ ಅರ್ಹತಾ ಕಂಡಿಕೆಗಳಲ್ಲಿ ಯಾವುದಾದರು ಒಂದರಲ್ಲಿ ಅರ್ಹತೆ ಹೊಂದಿರಬೇಕು, ಇಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸರ್ಕಾರಿ ಕೋಟದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪಡೆಯಲು ಅರ್ಹತೆಯನ್ನು ಹೊಂದುವುದಿಲ್ಲ. Eligibility for OCI / PIO candidates for Government seats shall be as per the directions of the Government.

7. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆಗಳು, ಶೈಕ್ಷಣಿಕ ಅರ್ಹತೆ ಹಾಗು ಇತರೆ ವಿವರಗಳನ್ನು ಒಳಗೊಂಡ **“ಯುಜಿಸಿಇಟಿ-2024-ಮಾಹಿತಿ ಪುಸ್ತಕ”** ವನ್ನು ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ನಲ್ಲಿ ಪ್ರಚುರಪಡಿಸಲಾಗುವುದು. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ಕೆಇಎ ನಡೆಸುವ ಸಿಇಟಿ ಮೂಲಕ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆಯಲು ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು.
8. **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ – ಶುಲ್ಕ ಪಾವತಿ – ವೇಳಾಪಟ್ಟಿ.**

I.	ಸಿಇಟಿ-2024ಕ್ಕೆ ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	ದಿನಾಂಕ 10-01-2024 ರ ಬೆ.11.00 ರಿಂದ
ii.	ಸಿಇಟಿ-2024ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	10-02-2024 ರ ರಾತ್ರಿ 11.59 ರ ವರೆಗೆ
iii.	ಸಿಇಟಿ-2024ಕ್ಕೆ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	14-02-2024
iv.	ಸಿಇಟಿ-2024ಕ್ಕೆ ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳುವುದು	07-04-2024 ರ ಬೆ. 11.00 ರ ನಂತರ

ಕೃಷಿಕ ಕುಟುಂಬ ಕೋಟದ ಅಡಿಯಲ್ಲಿ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಪ್ರಾಯೋಗಿಕ ಪರೀಕ್ಷೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಸಾಮಾನ್ಯ ಪ್ರವೇಶ ಪರೀಕ್ಷೆ – 2024ರ ವೇಳಾಪಟ್ಟಿ

ದಿನಾಂಕ	ದಿನ	ಸಮಯ	ವಿಷಯ	ಅಂಕಗಳು
18-04-2024	ಗುರುವಾರ	ಬೆಳಿಗ್ಗೆ 10.30 ರಿಂದ 11.50ರ ವರೆಗೆ	ಜೀವಶಾಸ್ತ್ರ	60
		ಮಧ್ಯಾಹ್ನ 02.30 ರಿಂದ 03.50ರ ವರೆಗೆ	ಗಣಿತಶಾಸ್ತ್ರ	60
19-04-2024	ಶುಕ್ರವಾರ	ಬೆಳಿಗ್ಗೆ 10.30 ರಿಂದ 11.50ರ ವರೆಗೆ	ಭೌತಶಾಸ್ತ್ರ	60
		ಮಧ್ಯಾಹ್ನ 02.30 ರಿಂದ 03.50ರ ವರೆಗೆ	ರಸಾಯನ ಶಾಸ್ತ್ರ	60

ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ (ಬೆಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ವಿಜಯಪುರ, ಮಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ)				
20-04-2024	ಶನಿವಾರ	ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30ರ ವರೆಗೆ	4ನೇ ತರಗತಿಯ ಮಟ್ಟದ	50

ಸೂಚನೆ:

1. ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ಧರಿಸುವ ಮೊದಲನೇ ಮತ್ತು ಎರಡನೇ ಪಿಯುಸಿ ಪಠ್ಯಕ್ರಮವನ್ನು ಅವಲಂಬಿಸಿರುತ್ತದೆ.
2. ಸಿಇಟಿ-2024 ಅರ್ಹತೆ: ಸಿಇಟಿ-2006ರ 15 (5) ಪ್ರವೇಶ ನಿಯಮಗಳು ಮತ್ತು ಎಮ್‌ಸಿಸಿ ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ.
3. ನಿಗದಿಪಡಿಸಿರುವ ಶೈಕ್ಷಣಿಕೆ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು MCI, DCI, AICTE, COA, NCISM, NCH, PCI, ಸರ್ಕಾರ, ವಿಶ್ವವಿದ್ಯಾಲಯ, ಅಪೆಕ್ಸ್ ಸಂಸ್ಥೆಗಳು ಕಾಲ ಕಾಲಕ್ಕೆ ನಿಗದಿಡಿಸುವ ನಿಯಮಗಳಿಗೆ / ಅನುಮೋದನೆಗೆ / ಷರತ್ತಿಗೆ ಒಳಪಟ್ಟಿರುತ್ತವೆ.
4. ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ಅಭ್ಯರ್ಥಿಯು ತುಂಬಿರುವುದು ಒಂದುವೇಳೆ ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವು ರದ್ದುಗೊಳ್ಳುವುದಕ್ಕೆ ಒಳಪಡುತ್ತದೆ.
5. ಅಭ್ಯರ್ಥಿಗಳು ಮಾಹಿತಿ ಪುಸ್ತಕವನ್ನು ಓದಿದ್ದಾರೆ ಮತ್ತು ಅದರಲ್ಲಿ ನೀಡಿರುವ ಷರತ್ತುಗಳನ್ನು ಮತ್ತು ಇತರೆ ನಿಯಮಗಳನ್ನು ಒಪ್ಪಿಕೊಂಡಿದ್ದಾರೆಂದು ಹಾಗು ನಂತರ ಯುಜಿಸಿಇಟಿ-2024 ಕ್ಕೆ ಆನ್‌ಲೈನ್ ಅರ್ಜಿಯನ್ನು ನಿಯಮಾನುಸಾರ ಸಲ್ಲಿಸಿರುತ್ತಾರೆಂದು ಪರಿಗಣಿಸಲಾಗುತ್ತದೆ.
6. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಸಂದೇಹಗಳಿದ್ದಲ್ಲಿ, ಅವರು ಕರ್ನಾಟಕದಲ್ಲಿ ವ್ಯಾಸಂಗ ಮಾಡುತ್ತಿರುವ ಆಯಾ ಕಾಲೇಜುಗಳಲ್ಲಿ ಕಾಲೇಜು ಟ್ರೈನರ್ ಗಳನ್ನು ಸಂಪರ್ಕಿಸಿ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಸಹಿ/-
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾಪ್ರ/2958/2023-24

KEA Mobile App https://kea.kar.nic.in keaugcet24@gmail.com

ಕೆಇಎ ಸಹಾಯವಾಣಿ ಸಂಖ್ಯೆಗಳು: 080 – 23 460 460 (ಐದು ಲೈನುಗಳು–ಬೆ. 9.30 ರಿಂದ ಸಂ. 6.00 – ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)



ಸುಭಾಷಿತ

ಒಂದು ವಿಷಯವನ್ನು ಸರಳವಾಗಿ ವಿವರಿಸಲು ನಿಮಗೆ ಸಾಧ್ಯವಾಗುತ್ತಿಲ್ಲ ಎಂದಾದರೆ, ಆ ವಿಷಯವನ್ನು ನೀವು ಸರಿಯಾಗಿ ತಿಳಿದುಕೊಂಡಿಲ್ಲ ಎಂದರ್ಥ.

–ಆಲ್‌ಬರ್ಟ್ ಐನ್‌ಸ್ಟೀನ್

ಉತ್ತಮ ಫಲಿತಾಂಶಕ್ಕೆ ಮುಚ್ಚಳಿಕೆ ಬೋಧಕರು ಹರಕೆಯ ಕುರಿಗಳಲ್ಲ

ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 100ರಷ್ಟು ಫಲಿತಾಂಶದ ಸಾಧನೆ ಮಾಡಿಯೇ ತೀರುವಂತೆ ಕಾಲೇಜು ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಮೇಲೆ ಪದವಿಪೂರ್ವ ಶಿಕ್ಷಣ ಇಲಾಖೆಯ ಕೆಲವು ಉಪನಿರ್ದೇಶಕರು ಹೇರುತ್ತಿರುವ ಒತ್ತಡ ಅನಾರೋಗ್ಯಕರವಾದುದು. 2023–24ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ನೀಡುವುದಕ್ಕೆ ಬದ್ಧರಾಗಿರುತ್ತೇವೆ, ಕಳಪೆ ಫಲಿತಾಂಶ ಬಂದರೆ ಶಿಸ್ತುಕ್ರಮ ಅನುಭವಿಸುತ್ತೇವೆ ಎನ್ನುವ ಅರ್ಥದ ಮುಚ್ಚಳಿಕೆಯನ್ನು ಪಿಯು ಕಾಲೇಜುಗಳ ಪ್ರಾಂಶುಪಾಲರು ಮತ್ತು ವಿಷಯವಾರು ಉಪನ್ಯಾಸಕರಿಂದ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಬರೆಸಿಕೊಳ್ಳುತ್ತಿದ್ದಾರೆ ಎಂದು ವರದಿಯಾಗಿದೆ. ಮುಚ್ಚಳಿಕೆ ಪತ್ರದ ನಮೂನೆಯನ್ನು ಉಪನಿರ್ದೇಶಕರ ಕಚೇರಿಯಿಂದಲೇ ಮುದ್ರಿಸಿ ಕಾಲೇಜುಗಳಿಗೆ ಕಳುಹಿಸಿಕೊಡಲಾಗಿದೆ ಎಂದು ಹೇಳಲಾಗಿದೆ. ಕಾಲೇಜುಗಳಿಂದ ಉತ್ತಮ ಫಲಿತಾಂಶ ಅಪೇಕ್ಷಿಸುವುದು ಹಾಗೂ ನೂರಕ್ಕೆ ನೂರರಷ್ಟು ಫಲಿತಾಂಶ ಸಾಧನೆ ಮಾಡುವಂತೆ ಪ್ರಾಂಶುಪಾಲರು ಹಾಗೂ ಉಪನ್ಯಾಸಕರನ್ನು ಅಧಿಕಾರಿಗಳು ಪ್ರೇರೇಪಿಸುವುದು ತಪ್ಪೇನಲ್ಲ. ಆದರೆ, ಉದ್ದೇಶ ಸಾಧನೆಗಾಗಿ ಅವರು ಅನುಸರಿಸುತ್ತಿರುವ ಮಾರ್ಗ ಅತಿರೇಕದ್ದಾಗಿದೆ ಹಾಗೂ ಶೇ 100ರ ಸಾಧನೆಯಷ್ಟೇ ಉತ್ತಮ ಫಲಿತಾಂಶದ ಮಾನದಂಡ ಎನ್ನುವ ಅವರ ನಂಬಿಕೆಯೂ ತಪ್ಪು ತಿಳಿವಳಿಕೆಯಿಂದ ಕೂಡಿದುದಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ಮತ್ತು ಸೃಜನಶೀಲತೆಯ ವಿಕಾಸಕ್ಕೆ ಪೂರಕವಾಗಿ ವಿದ್ಯಾಸಂಸ್ಥೆಗಳನ್ನು ರೂಪಿಸಬೇಕೇ ಹೊರತು, ಕಾಲೇಜುಗಳನ್ನು ಯುದ್ಧಭೂಮಿಗಳನ್ನಾಗಿ ಪರಿವರ್ತಿಸಬಾರದು. ಕಾಗದದ ಮೇಲಿನ ಫಲಿತಾಂಶದಿಂದ ವಿದ್ಯಾರ್ಥಿಗಳಿಗಾಗಲೀ ಸಮಾಜಕ್ಕಾಗಲೀ ಹೆಚ್ಚಿನ ಉಪಯೋಗ ಇಲ್ಲ. ಉತ್ತಮ ಫಲಿತಾಂಶ ಸಾಧನೆಯ ಹೆಸರಿನ ಅತಿರೇಕದ ಕ್ರಮಗಳು ಶಿಕ್ಷಣ ಕ್ಷೇತ್ರವನ್ನು ಹಾನಿಗೊಳಿಸುವ ಸಾಧ್ಯತೆಯೇ ಹೆಚ್ಚು. ಪ್ರತಿಶತ ನೂರರ ಫಲಿತಾಂಶ ಸಾಧಿಸಲೇಬೇಕೆನ್ನುವ ಒತ್ತಡವು ಕಾಲೇಜಿನ ಸಿಬ್ಬಂದಿ ಅಡ್ಡದಾರಿ ಹಿಡಿಯಲು ಕಾರಣವಾಗಬಹುದು. ಈ ಬಗೆಯ ಒತ್ತಡವು ಸಾಮೂಹಿಕ ನಕಲು ಮಾಡುವುದಕ್ಕೆ ಅವಕಾಶ ಕಲ್ಪಿಸಿರುವ ಬಹಳಷ್ಟು ಉದಾಹರಣೆಗಳಿವೆ. ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳು, ವಿಶೇಷವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸವಲತ್ತುಗಳ ಕೊರತೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಉತ್ತಮ ಫಲಿತಾಂಶದ ಹೆಸರಿನಲ್ಲಿ ಅವರ ಮೇಲೆ ಒತ್ತಡ ಹೇರುವುದು ಮಾನಸಿಕ ಒತ್ತಡಕ್ಕೆ ಕಾರಣವಾಗಬಹುದು. ಒತ್ತಡ ನಿರ್ವಹಿಸಲು ಸಾಧ್ಯವಾಗದ ವಿದ್ಯಾರ್ಥಿಗಳು ಕಾಲೇಜುಗಳಿಂದ ವಿಮುಖರಾಗಲೂಬಹುದು.

ಸಾಮಾಜಿಕ ಹಾಗೂ ಶೈಕ್ಷಣಿಕ ತಾರತಮ್ಯಗಳನ್ನು ನಿವಾರಿಸುವುದು ಸರ್ಕಾರದ ಆದ್ಯತೆಯಾಗಬೇಕಿದೆ

ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿನ ದ್ವಿತೀಯ ಪಿಯು ಫಲಿತಾಂಶ ಆತಂಕಪಡುವಷ್ಟು ಕಳಪೆ ಆಗಿಯೇನೂ ಇಲ್ಲ. 2021–22ನೇ ಸಾಲಿನಲ್ಲಿ ಶೇ 61.88ರಷ್ಟು ಫಲಿತಾಂಶ ಬಂದಿದ್ದರೆ, 2022-23ರಲ್ಲಿ ಶೇ 74.67ರಷ್ಟು ಫಲಿತಾಂಶ ದಾಖಲಾಗಿದೆ. ಈ ಉತ್ತಮ ಫಲಿತಾಂಶಕ್ಕೆ ಪದವಿಪೂರ್ವ ಶಿಕ್ಷಣ ಇಲಾಖೆ ಕೈಗೊಂಡಿರುವ ಹಲವು ಸುಧಾರಣಾ ಕ್ರಮಗಳು ಕಾರಣವಾಗಿವೆ. ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಶ್ರಮವೂ ಉತ್ತಮ ಫಲಿತಾಂಶದ ಹಿಂದಿದೆ. ಈ ಫಲಿತಾಂಶವನ್ನು ಮತ್ತಷ್ಟು ಸುಧಾರಿಸುವ ದಿಸೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಸೃಜನಶೀಲ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಸದ್ಯದ ಪದವಿಪೂರ್ವ ಪರೀಕ್ಷಾ ಕ್ರಮ ವಿದ್ಯಾರ್ಥಿಸ್ನೇಹಿಯಾಗಿದೆ. ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿಕ್ಕೆಂದೇ ಶೈಕ್ಷಣಿಕ ವರ್ಷವೊಂದರಲ್ಲಿ ಮೂರು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷಾ ಪದ್ಧತಿಯ ಆಶಯಕ್ಕೆ ತದ್ವಿರುದ್ಧವಾಗಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರನ್ನು ಅನಗತ್ಯ ಒತ್ತಡಕ್ಕೆ ದೂಡುವ ಪ್ರಯತ್ನಗಳು ಸರಿಯಾದುವಲ್ಲ. ಎಲ್ಲ ಪ್ರದೇಶಗಳಿಂದಲೂ ಶೇ 100ರಷ್ಟು ಫಲಿತಾಂಶವನ್ನು ನಿರೀಕ್ಷಿಸುವುದು ಹಾಗೂ ಫಲಿತಾಂಶ ಸಾಧನೆಗಾಗಿ ಬೆದರಿಕೆಯ ಮಾರ್ಗ ಅನುಸರಿಸುವುದು ಯಾವ ರೀತಿಯಿಂದಲೂ ಸಮರ್ಥನೀಯವಲ್ಲ. ಆತಂಕದಿಂದ ಕೂಡಿದ ಮನಃಸ್ಥಿತಿ ಯಲ್ಲಿ ಉತ್ತಮ ಬೋಧನೆ ಹಾಗೂ ಕಲಿಕೆ ಅಸಾಧ್ಯ. ಫಲಿತಾಂಶದ ಏರುಪೇರಿಗೆ ಬೋಧನೆಯ ಜೊತೆಗೆ ಸಾಮಾಜಿಕ ಸ್ಥಿತಿಗತಿಗಳೂ ಕಾರಣವಾಗುತ್ತವೆ. ಕಾಲೇಜುಗಳಲ್ಲಿರುವ ಸವಲತ್ತುಗಳು ಕೂಡ ಫಲಿತಾಂಶದ ಮೇಲೆ ಪ್ರಭಾವ ಬೀರುತ್ತವೆ. ಪಿಯು ಫಲಿತಾಂಶ ಉತ್ತಮಗೊಳ್ಳಬೇಕಾದರೆ, ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚಿನ ಸುಧಾರಣೆಯಾಗಬೇಕಾಗಿದೆ. ಬೇರು ದುರ್ಬಲವಾಗಿರುವಾಗ, ಕೊಂಬೆರೆಂಬೆಗಳು ಸದೃಢವಾಗಿರಬೇಕೆಂದು ನಿರೀಕ್ಷಿಸುವುದು ಹುಂಬತನ. ಸಾಮಾಜಿಕ ಹಾಗೂ ಶೈಕ್ಷಣಿಕ ತಾರತಮ್ಯಗಳನ್ನು ನಿವಾರಿಸುವುದು ಸರ್ಕಾರದ ಆದ್ಯತೆಯಾಗಬೇಕಾಗಿದೆ. ಈ ತರತಮಗಳು ನಿವಾರಣೆಗೊಂಡು, ಒಳ್ಳೆಯ ಶೈಕ್ಷಣಿಕ ಸೌಲಭ್ಯಗಳು ದೊರೆತಾಗ ಫಲಿತಾಂಶ ಸಹಜವಾಗಿಯೇ ಉತ್ತಮವಾಗಿರುತ್ತದೆ.

ದಿನದ ಟ್ವೀಟ್

ನಿರ್ಣಾಯಕ...

2024ರ ಚುನಾವಣಾ ಫಲಿತಾಂಶ ನಿರ್ಧರಿಸುವಲ್ಲಿ ಮಹಾರಾಷ್ಟ್ರವು ಒಂದು ನಿರ್ಣಾಯಕ ರಾಜ್ಯವಾಗಲಿದೆ. ಅದರಲ್ಲೂ ವಿಶೇಷವಾಗಿ, ಶರದ್ ಪವಾರ್ ಅವರು ಸಕ್ರಿಯವಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದೇ ಆದಲ್ಲಿ ಇದೊಂದು ಅಸಾಧಾರಣ ಮೈತ್ರಿ ಆಗಲಿದೆ.

(ಲೋಕಸಭಾ ಚುನಾವಣೆಗಾಗಿ ಮಹಾರಾಷ್ಟ್ರದಲ್ಲಿ ಸೀಟು ಹಂಚಿಕೆ ಸಂಬಂಧ 'ಇಂಡಿಯಾ' ಮೈತ್ರಿಕೂಟದಲ್ಲಿ ಸಹಮತ ಮೂಡಿದೆ ಎನ್ನಲಾದ ಸುದ್ದಿಗೆ ಪ್ರತಿಕ್ರಿಯೆ)

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಕರ್ನಾಟಕದ ಈಗಿನ ಹಣಕಾಸು ಪರಿಸ್ಥಿತಿಯನ್ನು ನೋಡಿದರೆ, ಲೋಕಸಭೆ ಚುನಾವಣೆಯ ನಂತರ ಗ್ಯಾರಂಟಿಗಳನ್ನು ಮುಂದುವರಿಸಲು ಮತ್ತಷ್ಟು ಷರತ್ತುಗಳನ್ನು ಹಾಕುವ ಸಾಧ್ಯತೆ ಇದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 10-1-1999

• ಎಲ್ಲ ಪಕ್ಷಗಳಲ್ಲೂ ಒಳಜಗಳ ದಳದಲ್ಲಿ ಬಿಕ್ಕಟ್ಟು

ಬೆಂಗಳೂರು, ಜ. 9– ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ವೈಯಕ್ತಿಕ ಪ್ರತಿಷ್ಠೆಯು ಗುಂಪುಗಾರಿಕೆಗೆ ಕಾರಣವಾಗಿ ಪಕ್ಷಗಳ ವರ್ಚಸ್ಸು ಕುಂದಲಾರಂಭಿಸಿದ್ದು, ಕಾರ್ಯಕರ್ತರು ಹತಾಶರಾಗುತ್ತಿರುವುದು ರಾಜ್ಯ ರಾಜಕೀಯದ ಇತ್ತೀಚಿನ ಬೆಳವಣಿಗೆ ಆಗಿದೆ.

ಇದು ರಾಜ್ಯ ವಿಧಾನಸಭೆಯ ಚುನಾವಣಾ ವರ್ಷವಾದ್ದರಿಂದ ರಾಜಕೀಯ ಚಟುವಟಿಕೆಗಳಿಗೆ ಚಾಲನೆ ಬಂದಿರುವುದರ ಜೊತೆಗೆ ವರಿಷ್ಠ ನಾಯಕರ ನಡುವಣ ಭಿನ್ನಾಭಿಪ್ರಾಯ ಬಯಲಾಗುತ್ತಿದ್ದು, ಜನರು ಜುಗುಪ್ಸೆಗೊಳ್ಳುತ್ತಿದ್ದಾರೆ. ಇದರಿಂದ ಎರಡನೇ ಸಾಲಿನ ನಾಯಕರುಗಳಿಗೆ ಭವಿಷ್ಯದ ಚಿಂತೆ ಕಾಡತೊಡಗಿದೆ.

ಆಡಳಿತ ಪಕ್ಷವಾದ ಜನತಾದಳ, ವಿರೋಧ ಪಕ್ಷವಾದ ಕಾಂಗ್ರೆಸ್, ಮತ್ತೊಂದು ಪ್ರಬಲ ಪಕ್ಷವಾದ ಭಾರತೀಯ ಜನತಾ ಪಕ್ಷ ಹಾಗೂ ಲೋಕಶಕ್ತಿ ಸೇರಿದಂತೆ ಈ ಎಲ್ಲಾ ಪಕ್ಷಗಳ ಧುರೀಣರೂ ತಮ್ಮ ಈಗಿನ ರಾಜಕೀಯ ಶಕ್ತಿಗೆ ಅನುಗುಣವಾಗಿ ಪೈಪೋಟಿ ಮೇಲೆ ಕಿತ್ತಾಟ ನಡೆಸುತ್ತಿದ್ದಾರೆ.

• ಅಮಾನವೀಯ ವರ್ತನೆಗೆ ಆನೆ ಬಲಿ

ಬೆಂಗಳೂರು, ಜ. 9– ನಗರದ ಸಮೀಪದಲ್ಲಿರುವ ಮಂಚನಬೆಲೆ ಅರಣ್ಯ ಪ್ರದೇಶದಲ್ಲಿ ಎರಡು ಕಾಡಾನೆಗಳನ್ನು ಹಿಡಿಯುವ ಯತ್ನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಅಮಾನವೀಯವಾಗಿ ವರ್ತಿಸಿದ ಕಾರಣ, ಒಂದು ಕಾಡಾನೆ ದಾರುಣವಾಗಿ ಮೃತಪಟ್ಟ ಘಟನೆ ಇಂದು ನಡೆದಿದೆ.

50 ವರ್ಷಗಳ ಹಿಂದೆ

ಗುರುವಾರ, 10-1-1974

• ದಕ್ಷಿಣ ಕನ್ನಡಕ್ಕೆ ಸಾಕಷ್ಟು ಅಕ್ಕಿ ಪೂರೈಕೆಯಾಗಲಿ ಇಲ್ಲವೆ ಧಾನ್ಯ ಸಾಗಾಣಿಕೆ ನಿರ್ಬಂಧ ರದ್ದಾಗಲಿ

ಮಂಗಳೂರು, ಜ. 9– 'ಸರ್ಕಾರವು ಔಪಚಾರಿಕ ಪಡಿತರವನ್ನು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಜಾರಿಗೆ ತರುವ ಉದ್ದೇಶದಿಂದ ಸಾಕಷ್ಟು ಅಕ್ಕಿಯನ್ನು ಜಿಲ್ಲೆಗೆ ಪೂರೈಸಬೇಕು. ಇದು ಸಾಧ್ಯವಾಗದೇ ಹೋದರೆ ಅಂತರ ಜಿಲ್ಲಾ ಧಾನ್ಯ ಸಾಗಾಣಿಕೆ ಮೇಲಿನ ನಿರ್ಬಂಧವನ್ನು ತೆಗೆದುಹಾಕಿ ವ್ಯಾಪಾರಿ ಮೂಲಗಳು ಕಾರ್ಯವೆಸಗಲು ರಾಜ್ಯದಾದ್ಯಂತ ಏಕರೀತಿಯ ಧಾರಣೆಗಳು ಉಳಿಯುವಂತಹ ಅವಕಾಶ ಕೊಡಬೇಕು' ಎಂದು ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾಂಗ್ರೆಸ್ ಶಾಸಕರು ಮತ್ತು ತಾಲ್ಲೂಕು ಬೋರ್ಡ್ ಅಧ್ಯಕ್ಷರ ವಿಶೇಷ ಸಭೆಯು ಒತ್ತಾಯಪಡಿಸಿತು.

ಈ ಬಗ್ಗೆ ಸಭೆಯು ಅಂಗೀಕರಿಸಿದ ನಿರ್ಣಯದಲ್ಲಿ 'ಸರ್ಕಾರವು ಈ ಹೊಣೆಗಾರಿಕೆಯನ್ನು ವಹಿಸಿಕೊಳ್ಳದಿದ್ದರೆ ನಾವು ಜನರನ್ನು ಎದುರಿಸಲು ಸಾಧ್ಯವಾಗದು. ಜಿಲ್ಲೆಯಲ್ಲಿ ಉದ್ಭವಿಸುವ ಪರಿಸ್ಥಿತಿಗೂ ನಾವು ಜವಾಬ್ದಾರರಾಗಲಾರೆವು' ಎಂದು ತಿಳಿಸಲಾಗಿದೆ.

• ಒಣ ಜಿಲ್ಲೆಗಳಲ್ಲಿ ಫಲಕ್ಷೇತ್ರ

ಬೆಂಗಳೂರು, ಜ. 9– ಒಣ ಜಿಲ್ಲೆಗಳಾದ ಬಿಜಾಪುರ, ಗುಲ್ಬರ್ಗ, ರಾಯಚೂರು ಹಾಗೂ ಬೀದರ್ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ವಿಸ್ತರಿಸುವುದರ ಜೊತೆಗೆ ಮೋಸಂಬಿ ಫಲವನ್ನು ಪಡೆಯಲು ತೋಟಗಾರಿಕೆ ಇಲಾಖೆ ಕ್ರಮ ಕೈಗೊಳ್ಳಲಿದೆ.

ಕೃಷ್ಣಾ ಮೇಲಣ ಯೋಜನೆ, ಮಲಪ್ರಭಾ, ಘಟಪ್ರಭಾ ಯೋಜನೆಗಳು ನೀರಾವರಿ ಸೌಲಭ್ಯ ನೀಡುವ ಮುನ್ನ ಏತ ನೀರಾವರಿ ಮೂಲಕ ಈ ಹಣ್ಣನ್ನು ಬೆಳೆಯುವ ಬಗ್ಗೆ ಜನರಿಗೆ ಪರಿಚಯ ಮಾಡಿಕೊಡಲಾಗುವುದು ಎಂದು ತೋಟಗಾರಿಕೆ ರಾಜ್ಯ ಸಚಿವ ಕೆ.ಟಿ.ರಾಠೋಡ್ ಸುದ್ದಿಗಾರರಿಗೆ ತಿಳಿಸಿದರು.

ಸಿನಿಮಾ ನೀತಿ, ಸಹಾಯಧನ ನೀತಿ, ಪ್ರದರ್ಶನ ನೀತಿ: ಬೇಕು ಆಮೂಲಾಗ್ರ ಬದಲಾವಣೆ

ಚಿತ್ರರಂಗ ಮತ್ತು ಪಟ್ಟಭದ್ರರ ಏಕಸ್ವಾಮ್ಯ

ವಿಶ್ಲೇಷಣೆ

ಕೇಸರಿ ಹರವೂ

ಹದಿನೈದನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಫೆಬ್ರುವರಿ 29ರಿಂದ ಮಾರ್ಚ್ 7ರವರೆಗೂ ನಡೆಯಲಿದೆ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆಯನ್ನು ತಮ್ಮಲ್ಲೇ ಇರಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಕೋಮುಸೌಹಾರ್ದ, ಸಮಾನತೆ, ಲಿಂಗ ಸಮಾನತೆ, ಮಾನವೀಯತೆಯ ಸಂದೇಶಗಳು ಸಮಾಜಕ್ಕೆ ತಲುಪಬೇಕು. ಅಂತಹ ಚಲನಚಿತ್ರಗಳನ್ನು ಹೆಚ್ಚು ಜನಪ್ರಿಯಗೊಳಿಸುವ ದಿಸೆಯಲ್ಲಿ ಅಗತ್ಯವಿರುವ ಆರ್ಥಿಕ ನೆರವನ್ನು ಸರ್ಕಾರ ಒದಗಿಸಲಿದೆ' ಎಂದು ಹೇಳಿದ್ದಾರೆ.

ಭಾರತವೂ ಸೇರಿದಂತೆ ಜಗತ್ತಿನ ಹಲವಾರು ಪ್ರಜಾಪ್ರಭುತ್ವ ರಾಷ್ಟ್ರಗಳು ಬಲಪಂಥೀಯ ಏಕಾಧಿಪತ್ಯದ ಕಡೆಗೆ, ಭೂಮಿಯ ಸಂಪನ್ಮೂಲಗಳನ್ನು ಬಂಡವಾಳಶಾಹಿಗಳಿಗೆ ಒಪ್ಪಿಸಿ ಕೈತೊಳೆದುಕೊಳ್ಳುವ ಕಡೆಗೆ ಮತ್ತು ಪ್ರಜೆಗಳ ಖಾಸಗಿತನ, ಅಭಿವ್ಯಕ್ತಿಯನ್ನು ಮೊಟಕುಗೊಳಿಸಿ, ಅವರ ಸ್ವಾತಂತ್ರ್ಯವನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದರ ಕಡೆಗೆ ಚಲಿಸುತ್ತಿವೆ. ಇಂತಹ ಕಾಲಮಾನದಲ್ಲಿ ಸಿದ್ದರಾಮಯ್ಯ ಅವರ ಈ ಹೇಳಿಕೆ ಅತ್ಯಂತ ಸ್ವಾಗತಾರ್ಹ.

ಈ ಹೇಳಿಕೆಯು ರಾಜ್ಯದ ಎಲ್ಲ ಸಾಮಾಜಿಕ, ಆರ್ಥಿಕ ಮತ್ತು ಮಾನವಿಕ ರಂಗಗಳ ವಿಚಾರದಲ್ಲಿ ಈ ಸರ್ಕಾರಕ್ಕೆ ಇರುವ ಸಮಾಜವಾದಿ ಮತ್ತು ಸಮಾನತಾವಾದಿ ಆಶಯಗಳನ್ನು ಮುಂದಿಡುತ್ತದೆ. ಹಾಗೆಯೇ ಮುಂದುವರಿಯಬೇಕಷ್ಟೇ. ಪ್ರಸ್ತುತ ಇದು ಕರ್ನಾಟಕದ ಚಲನಚಿತ್ರರಂಗಕ್ಕೆ ಮತ್ತು ಈ ವರ್ಷದ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಸಂಬಂಧಿಸಿರುವುದರಿಂದ, ನಾನು ಅಷ್ಟಕ್ಕೇ ಸೀಮಿತಗೊಳಿಸಿ ಮುಂದುವರಿಸುತ್ತೇನೆ.

ಈ ಹೇಳಿಕೆಯ ಆಶಯಕ್ಕೆ ಪೂರಕವಾದ ವಾತಾವರಣ ರಾಜ್ಯದ ಚಿತ್ರರಂಗದಲ್ಲಿ ಇದೆಯೇ, ಇಲ್ಲವಾದರೆ, ಅಂತಹ ಗುಣಾತ್ಮಕ ವಾತಾವರಣವನ್ನು ಈ ಸರ್ಕಾರ ನಿರ್ಮಿಸಿ ಕೊಡಲು ಮುಂದಾಗುತ್ತದೆಯೇ ಎನ್ನುವ ಮುಖ್ಯ ಪ್ರಶ್ನೆ ಏಳುತ್ತದೆ.

ಚಿತ್ರೋದ್ಯಮಕ್ಕೂ ಚಿತ್ರಮಾಧ್ಯಮಕ್ಕೂ ಇರುವ ಕಂದಕ, ವೈರುಧ್ಯಗಳು ಸಾಮಾನ್ಯವಾಗಿ ಸರ್ಕಾರಗಳಿಗೆ ಕಾಣುವುದಿಲ್ಲ, ಕಂಡರೂ ಅಷ್ಟಾಗಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ಆಯಾ ಕಾಲದಲ್ಲಿ ಪ್ರಕಾಶಿಸುವ ತಾರೆಯರು, ಪ್ರಭಾವಿಗಳು ಮತ್ತು ಸ್ಥಾಪಿತ ಹಿತಾಸಕ್ತರು ಎಲ್ಲರಿಗೂ ಕಾಣುವಂತೆ ಸರ್ಕಾರಕ್ಕೂ ಕಂಡಿರುತ್ತಾರೆ. ಅವರುಗಳನ್ನೇ ಚಿತ್ರರಂಗದ ಪ್ರತಿನಿಧಿಗಳು ಎಂದು ಸರ್ಕಾರಗಳು ಗುರುತಿಸಿ, ಅವರನ್ನು ಚಿತ್ರರಂಗಕ್ಕೆ ಸಂಬಂಧಿಸಿದ ನೀತಿ ನಿರೂಪಣೆ, ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತವೆ.

ಚಿತ್ರೋದ್ಯಮವು ತನ್ನ ಮಿತಿಯಲ್ಲಿಯೇ ಚಿತ್ರಮಾಧ್ಯಮದ ತುಡಿತಗಳನ್ನು ಗೌರವಿಸುವ ಕಾಲವೊಂದಿತ್ತು. ಆದರೆ ಈಚಿನ ದಶಕಗಳಲ್ಲಿ, ವಾಣಿಜ್ಯವೇ ಚಲನಚಿತ್ರಗಳ ತಯಾರಿಕೆ ಮತ್ತು ಪ್ರದರ್ಶನದ ಆದ್ಯತೆಯ ಗುರಿ ಎಂದು ನಂಬಿ ಬಂಡವಾಳ ಹೂಡುವ ಚಿತ್ರೋದ್ಯಮಿಗಳು ಚಿತ್ರಮಾಧ್ಯಮದಲ್ಲಿನ ಸೃಜನಶೀಲ, ಕಲಾತ್ಮಕ ಮತ್ತು ಸಾಮಾಜಿಕ ಜವಾಬ್ದಾರಿಗಳಿಗೆ ಸಾಮಾನ್ಯವಾಗಿ ಹೆಚ್ಚು ಪ್ರಾಶಸ್ತ್ಯ ನೀಡುತ್ತಿಲ್ಲ. ತೀರಾ ಈಚಿನ ವರ್ಷಗಳಲ್ಲಿ ನಡೆದ ಕೆಲವು ವಿದ್ಯಮಾನಗಳು ಇದನ್ನು ಪುಷ್ಟೀಕರಿಸುತ್ತವೆ.

ಚಲನಚಿತ್ರವೊಂದು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯಿಂದ ಪ್ರಮಾಣೀಕರಣಗೊಂಡಿತೆಂದರೆ, ಆ ಚಿತ್ರದ ನಿರ್ಮಾಪಕ ಇಡೀ ದೇಶದಲ್ಲಿ ಅಧಿಕೃತ ನಿರ್ಮಾಪಕ ಎನಿಸಿಕೊಳ್ಳುತ್ತಾನೆ. ಆತನಿಗೆ ಇಲ್ಲಿಯ ಒಂದು ವಾಣಿಜ್ಯ ಮಂಡಳಿಯಲ್ಲಿ ಪೂರ್ಣಪ್ರಮಾಣದ ಸದಸ್ಯತ್ವ ಹಾಗೂ ವೋಟಿನ ಹಕ್ಕು ಪ್ರಾಪ್ತವಾಗುತ್ತಿತ್ತು. ಡಿಜಿಟಲೀಕರಣದಿಂದಾಗಿ ಯುವ, ಹೊಸ ಪ್ರತಿಭೆಗಳು ಬೆಳಕಿಗೆ ಬರಲು ಸಾಧ್ಯವಾಯಿತು. ನಮ್ಮಲ್ಲಿ ಪ್ರತಿವರ್ಷ ನಿರ್ಮಾಣಗೊಳ್ಳುವ ಚಿತ್ರಗಳ ಸಂಖ್ಯೆ ನಾಲ್ಕಾರು ಪಟ್ಟು ಹೆಚ್ಚಿತು. ಆದರೆ, ಕೆಲವು ಪಟ್ಟಭದ್ರರು ತಮ್ಮ ಏಕಸ್ವಾಮ್ಯವನ್ನು ಗಟ್ಟಿಗೊಳಿಸಿಕೊಳ್ಳುವ ಸಲುವಾಗಿ, ಅಂತಹ ಬಹುತೇಕ ಚಿತ್ರಗಳು ತೆರೆಕಾಣಲಾಗದ ಪರಿಸ್ಥಿತಿ ನಿರ್ಮಿಸಿದರು. ಅವರಿಗೆ ನಜರೊಪ್ಪಿಸುವವರ ಚಿತ್ರಗಳು ಮಾತ್ರ ತೆರೆಕಾಣುವಂತಾಯಿತು. ಅಲ್ಲದೆ, ಅವರನ್ನು ಇನ್ನಷ್ಟು ದೂರ ಇಡುವ ಉದ್ದೇಶದಿಂದ, 'ತೆರೆಕಂಡ ಚಿತ್ರಗಳ ನಿರ್ಮಾಪಕರಿಗಷ್ಟೇ ವೋಟಿನ ಹಕ್ಕು' ಎಂದು ಆ ವಾಣಿಜ್ಯ ಮಂಡಳಿಯ ನಿಯಮಾವಳಿಯಲ್ಲಿ ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದ ಬದಲಾವಣೆಯನ್ನು 2016ರಲ್ಲಿ ತಂದರು. ಮತ್ತೊಂದು ವಾಣಿಜ್ಯ ಮಂಡಳಿ ಸ್ಥಾಪನೆಯಾದರೂ ನಿರ್ಮಾಣ, ಪ್ರದರ್ಶನ ವ್ಯವಸ್ಥೆಯಲ್ಲಿ ಹೆಚ್ಚೇನೂ ಬದಲಾವಣೆ ಆಗಲಿಲ್ಲ.

ಹಿಂದಿನ ವರ್ಷದ ಅಂತ್ಯದಲ್ಲಿ, ಕೆಲವು ಕಾರಣಗಳಿಂದ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ ಕೆಲಸ ಸ್ಥಗಿತಗೊಂಡಿದ್ದರಿಂದ ಕನ್ನಡದ ಹಲವಾರು ಚಿತ್ರಗಳು ಡಿಸೆಂಬರ್ 31ರ ಒಳಗೆ ಪ್ರಮಾಣಪತ್ರ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಅವುಗಳಲ್ಲಿ ಬಹಳಷ್ಟು ಚಿತ್ರಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವ ಉದ್ದೇಶವನ್ನು ಹೊಂದಿದ್ದವು. ಕೆಲವು ದೊಡ್ಡ ನಿರ್ಮಾಪಕರು ಇಂತಹ 'ತೆರೆಕಾಣಲಾಗದ' ಚಿತ್ರಗಳ ನೂಕುನುಗ್ಗಲಿನಿಂದಾಗಿ ತಮ್ಮ ದೊಡ್ಡ ಬಜೆಟ್ ಚಿತ್ರಗಳು ಸರ್ಟಿಫೈ ಆಗಲು ಸಾಧ್ಯ ಆಗುತ್ತಿಲ್ಲ ಎಂದು ದೂರಿದರು.

ಹೀಗೆ ಹಲವಾರು ರೀತಿಯಲ್ಲಿ ಸಣ್ಣ, ಹೊಸ ಮತ್ತು ಉತ್ಸಾಹಿ ನಿರ್ಮಾತೃಗಳ ಬಗ್ಗೆ ಮುಖ್ಯವಾಹಿನಿ ಚಿತ್ರರಂಗದಲ್ಲಿ ಒಂದು ರೀತಿಯ ಅಸಡ್ಡೆಯ ವಾತಾವರಣವೇ ಇದೆ. ಹೊಸ ಬಂಡವಾಳ, ಹೊಸ ಪ್ರತಿಭೆಗಳು ಹರಿದು ಬಂದರೂ ಹೊಳೆಯಲ್ಲಿ ಹುಣಸೇಹಣ್ಣು ಕಿವುಚಿದಂತೆ ಆಗಿದೆ. ಇದರಿಂದಾಗಿ ಚಿತ್ರರಂಗ ಹೊಸ ಹರಿವಿನ, ಸೃಜನಶೀಲತೆಯ ಕೊರತೆಯಿಂದ ಸೊರಗುತ್ತಿದೆ. ಮಾಧ್ಯಮ ತನ್ನ ಜವಾಬ್ದಾರಿಗಳನ್ನು ನಿಭಾಯಿಸಲು ಬಂಡವಾಳ, ಪ್ರೋತ್ಸಾಹ ದೊರಕದೆ ನಲುಗುತ್ತಿದೆ. ಹೀಗಿರುವಾಗ, ಉದ್ಯಮಪತಿಗಳನ್ನು ಮಾತ್ರ ಚಿತ್ರರಂಗದ ಪ್ರತಿನಿಧಿಗಳು ಎಂದು ಸರ್ಕಾರ ಗುರುತಿಸಿದರೆ, ಅದು ಏಕಸ್ವಾಮ್ಯದ ಕೋಟೆಯನ್ನಷ್ಟೇ ಪರಿಗಣಿಸಿ, ಚಿತ್ರಮಾಧ್ಯಮವನ್ನು ದೂರವಿಟ್ಟಂತೆ ಆಗುತ್ತದೆ. ಮುಖ್ಯಮಂತ್ರಿಯವರ ಹೇಳಿಕೆ ಪ್ರಾಮಾಣಿಕತೆ ಇಲ್ಲದ ಜುಮ್ಲಾ ಎಂಬಂತಾಗುತ್ತದೆ. ಅದು ಸರ್ಕಾರದ ಆಶಯಗಳಿಗೆ ತೊಡಕುಗಳನ್ನು ಒಡ್ಡುವ ಸಾಧ್ಯತೆಯೇ ಹೆಚ್ಚು.

ಇಲ್ಲಿ ಚಿತ್ರೋದ್ಯಮವೆಂದರೆ 'ವ್ಯಾಪಾರಿ' ಚಿತ್ರಗಳು, ಚಿತ್ರಮಾಧ್ಯಮವೆಂದರೆ 'ಕಲಾತ್ಮಕ' ಚಿತ್ರಗಳು ಎಂದು ಕೆಲವು ಚಿತ್ರಾಸಕ್ತರೂ ಸೇರಿದಂತೆ ಅನೇಕರು ನಂಬಿರುವ ಅರ್ಥದಲ್ಲಿ ಹೇಳುತ್ತಿಲ್ಲ. ಮಾಧ್ಯಮದ ಏಳಿಗೆಗಾಗಿ ಬೇಕಾದ ವಾಣಿಜ್ಯೀಕರಣಕ್ಕೂ ಏಕಸ್ವಾಮ್ಯದ ಅತಿ ವಾಣಿಜ್ಯೀಕರಣಕ್ಕೂ ದೊಡ್ಡ ವ್ಯತ್ಯಾಸವಿದೆ. ಅಲ್ಲದೆ, ಏಕಸ್ವಾಮ್ಯ ವ್ಯವಸ್ಥೆಯು ಮುಖ್ಯಮಂತ್ರಿಯವರ ಹೇಳಿಕೆಯಲ್ಲಿನ ಮೌಲ್ಯಗಳುಳ್ಳ ಚಲನಚಿತ್ರಗಳನ್ನು ತಯಾರಿಸಬಾರದು ಎಂದೇನೂ ಇಲ್ಲ. ಆದರೆ, ಕಾರ್ಪೊರೇಟ್ ವಲಯ ಹಾಗೂ ಸಾಂಪ್ರದಾಯಿಕ ಕ್ಯಾಪಿಟಲಿಸಂನಿಂದ ಸಮಾಜವಾದಿ ಚಿಂತನೆಯ ಉತ್ಪನ್ನಗಳನ್ನು ನಿರೀಕ್ಷಿಸುವುದು ಎಂದರೆ, ಅವುಗಳ ಹುನ್ನಾರಗಳ ಖೆಡ್ಡಾಕ್ಕೆ ನಾವೇ ಹೋಗಿ ಬಿದ್ದಂತೆ ಆಗುತ್ತದೆ.

ಈ ಸೂಕ್ಷ್ಮ ವ್ಯತ್ಯಾಸವನ್ನು ಸರ್ಕಾರ ಮತ್ತು ಮುಖ್ಯಮಂತ್ರಿಯವರು ಅವಶ್ಯವಾಗಿ ಗುರುತಿಸಬೇಕು. ಅವರ ಹೇಳಿಕೆಯಲ್ಲಿನ ಮೌಲ್ಯಗಳುಳ್ಳ ಚಲನಚಿತ್ರಗಳಿಗೆ ಸರ್ಕಾರದ ಪ್ರೋತ್ಸಾಹವಿದೆ ಎಂಬುದೇ ಈ ಸರ್ಕಾರದ ಬದ್ಧ ನಿಲುವಾಗಿದ್ದರೆ, ಮಾಧ್ಯಮದ ಹೊಸಹೊಸ ಬೆಳವಣಿಗೆಗಳನ್ನು ಅಭ್ಯಸಿಸುವ, ಅಂತಹ ಪ್ರಯೋಗಗಳಲ್ಲಿ ತೊಡಗಿಕೊಳ್ಳಲು ಬಯಸುವ ಹೊಸ ಪೀಳಿಗೆಗಳನ್ನು ಹಲವು ದೇಶಗಳಲ್ಲಿ ಉತ್ತೇಜಿಸುತ್ತಿರುವಂತೆ ವೈಜ್ಞಾನಿಕವಾಗಿ ಉತ್ತೇಜಿಸಬೇಕು. ಹೊಸ ಬಂಡವಾಳ, ಉದ್ಯಮಶೀಲತೆ ಮತ್ತು ಪ್ರತಿಭೆಗೆ ಇಲ್ಲಿ ಸಮಾನ ಅವಕಾಶ ಇರುವ ಮುಕ್ತ ಸಾಮಾಜಿಕ, ವ್ಯಾವಹಾರಿಕ ವಾತಾವರಣವನ್ನು ಸೃಷ್ಟಿಸಬೇಕು. ಆ ದಿಸೆಯಲ್ಲಿ ನಮ್ಮಲ್ಲಿರುವ ಚಲನಚಿತ್ರ ನೀತಿ, ಸಹಾಯಧನ ನೀತಿ ಮತ್ತು ಪ್ರದರ್ಶನ ನೀತಿಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರಬೇಕು.

ಇವು ದಶಕಗಳಿಂದಲೂ ಹೊಸ ಪ್ರತಿಭೆಗಳು ಆಗ್ರಹಿಸುತ್ತಿರುವ ಬೇಡಿಕೆಗಳು. ಚಲನಚಿತ್ರ ಮಾಧ್ಯಮದಲ್ಲಿ ಕ್ರಿಯಾಶೀಲತೆ ಹೆಚ್ಚಿದಷ್ಟೂ ಚಿತ್ರೋದ್ಯಮವು ವಾಣಿಜ್ಯ ಆಯಾಮದಿಂದಷ್ಟೇ ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಆಯಾಮಗಳಲ್ಲೂ ಪ್ರಗತಿ ಸಾಧಿಸುತ್ತದೆ. ಮರಾಠಿ, ಮಲಯಾಳಂ ಚಿತ್ರರಂಗಗಳಲ್ಲಿ ಇಂದು ಆಗಿರುವ ಬದಲಾವಣೆಗಳನ್ನು ನಾವು ಗಮನಿಸಿದರೂ ಸಾಕು, ಮಾಧ್ಯಮದ ದೃಷ್ಟಿಯಿಂದ ನಾವೆಷ್ಟು ಹಿಂದುಳಿದಿದ್ದೇವೆ ಎಂದು ಅರ್ಥವಾಗುತ್ತದೆ. ಅದಕ್ಕೆ ಇಲ್ಲಿನ ನಿರುತ್ತೇಜಕ ವಾತಾವರಣ ಮತ್ತು ಸರ್ಕಾರದ ಮಟ್ಟದಲ್ಲೂ ಏಕಸ್ವಾಮ್ಯ ಸಾಧಿಸಿರುವ ಪಟ್ಟಭದ್ರ ಚಿತ್ರೋದ್ಯಮಿಗಳು ಕಾರಣ. ಅದನ್ನು ತೊಡೆದುಹಾಕುವ ದೊಡ್ಡ ಆಶ್ವಾಸನೆಯನ್ನು ಸಿದ್ದರಾಮಯ್ಯ ಅವರ ಹೇಳಿಕೆ ನೀಡುತ್ತಿದೆ. ಅದನ್ನು ಒಣಗಲು ಬಿಡದೆ, ಆದಷ್ಟು ಬೇಗ ಆಗುವಂತೆ ಮಾಡುವುದು ಅವರ ಜವಾಬ್ದಾರಿಯಾಗಿದೆ.

ಲೇಖಕ: ಚಲನಚಿತ್ರ ನಿರ್ದೇಶಕ ಮತ್ತು ನಿರ್ಮಾಪಕ

ಚುರುಮುರಿ

'ಕೌ ಭಾಗ್ಯ'ದ ಶುಕ್ರದೆಸೆ

• ನಾರಾಯಣ ರಾಯಚೂರ್

'ನೀನಾರಿಗಾದೆಯೋ... ಎಲೆ ಮಾನವಾ... ಹರಿ, ಹರಿ ಗೋವು ನಾನು'.

'ಏನ್ರೀ? ನಾಲ್ಕನೇ ಕ್ಲಾಸಿನಲ್ಲಿ ಓದಿದ ಪದ್ಯ ಈಗ್ಯಾಕೆ ಗುನುಗುನಿಸ್ತಾ ಇದ್ದೀರಿ?'

'ಇಲ್ ನೋಡಮ್ಮ, ವಿದೇಶಗಳಲ್ಲಿ ಹಸುವನ್ನು ತಬ್ಬಿಕೊಳ್ಳಲು ಕ್ಯೂ!'

'ಎಲ್ಲಿ?'

'ಮನುಷ್ಯ ಸ್ವಲ್ಪ ಸಮಯ ಪ್ರಾಣಿಗಳೊಂದಿಗೆ ಆತ್ಮೀಯವಾಗಿ, ಸಲಿಗೆಯಿಂದ ಕಳೆಯುವುದರಿಂದ ಅವನ ಮಾನಸಿಕ ಒತ್ತಡ ಕಡಿಮೆಯಾಗುತ್ತೆ. ಲಾಸ್ ಏಂಜಲೀಸ್‌ನ ಪ್ರಾಣಿಪ್ರಿಯೆ ಎಲ್ಲಿ-ಲೇಕ್ಸ್ ಗೋವುಗಳೊಂದಿಗೆ ಸಮಯ ಕಳೆಯುತ್ತಾ ಮಾನಸಿಕ ಒತ್ತಡ ಪರಿಹಾರಕ್ಕಾಗಿ ಒಂದು ಕೇಂದ್ರವನ್ನೇ ತೆರೆದಿದ್ದಾಳಂತೆ'.

'ಅಂತೂ ಹಸುಗಳಿಗೀಗ ಶುಕ್ರದೆಸೆ'.

'ಒಂದು ಗಂಟೆ ಹಸುವಿನ ಜೊತೆ ಕಾಲಕಳೆಯೋಕೆ ಇನ್ನೂರು ಡಾಲರ್ ಕೊಡಬೇಕಂತೆ! ಈಗ ಅಲ್ಲಿ ಹಸುಗಳಿಗೆ ತುಂಬಾ ಬೇಡಿಕೆಯಂತೆ'.

'ಅಷ್ಟೇ ಅಲ್ಲರೀ, ಹೆಂಗಸರೇ ಹೆಚ್ಚಿನ ಸಂಖ್ಯೆಯಲ್ಲಿ ಇಂಥ ಕೇಂದ್ರಗಳಿಗೆ ಬರ್ತಿದಾರಂತೆ. ಮುಂದಿನ ವರ್ಷದ ಜುಲೈವರೆಗೂ ಬುಕಿಂಗ್ ಫುಲ್ ಅಂತೆ. ನ್ಯೂಯಾರ್ಕ್‌ನ ಪ್ರಸಿದ್ಧ ಮೌಂಟನ್ ಹೌಸ್ ಫಾರ್ಮ್‌ಗೆ ಈಗ ಭಾರೀ ಡಿಮ್ಯಾಂಡ್, ಹಸುಗಳಿಗೆ ಎಲ್ಲಿಲ್ಲದ ಬೇಡಿಕೆ'.

'ಇಂಥಾ ಕೇಂದ್ರ ನಡೆಸೋರಿಗೆ ಹಸು ನಿಜವಾದ ಕಾಮಧೇನುವೇ ಸರಿ. ಬಂಪರ್ ದುಡ್ಡು, ಭರ್ಜರಿ ಆದಾಯ. ನಮ್ಮ ದೇಶದ ಹಸುಗಳಿಗೂ ಈ ಭಾಗ್ಯ ಬೇಗ ಬರಲಿ, ಅವೂ ಇಂಡಿಗೋ ವಿಮಾನ ಏರಿ ಷಿಕ್ಯಾಗೋ, ನ್ಯೂಯಾರ್ಕ್‌ಗೆ ಹಾರಿ, ಡಾಲರ್ ಸಂಪಾದನೆ ಮಾಡಲಿ. ಕೌ ಸಾಕಿದವರಿಗೆ 'ಕೌ ಭಾಗ್ಯ' ಒದಗಿಬರಲಿ!'

'ಪಾಪ, ನಮ್ಮ ಹಸುಗಳು ಮತ್ತು ಹಸುಳೆಗಳು ಬಡಪಾಯಿಗಳು. ಅವುಗಳಿಗೆಲ್ಲಿ ಈ ಭಾಗ್ಯ?!'

'ಹಾಗನ್ನಬೇಡ. ನಮ್ಮ ದೇಶದ ಹಳ್ಳಿಗಳಲ್ಲಿ ಚಿಕ್ಕಂದಿನಲ್ಲೇ ದನ ಕಾಯೋದು, ಮೈತೊಳೆದು ಸವರೋದು, 'ಎಮ್ಮೆ ನಿನಗೆ ಸಾಟಿಯಿಲ್ಲ' ಅಂತ ತಬ್ಬಿಕೊಂಡು ಸವಾರಿ ಮಾಡೋದ್ರಿಂದ ಮಾನಸಿಕ ಒತ್ತಡ ಬಾಲ್ಯದಲ್ಲೇ ಮಾಯವಾಗಿ ಬಿಟ್ಟಿರುತ್ತೆ. ನಮಗೇನು ಇದೆಲ್ಲ ಸಮಸ್ಯೆನೇ ಅಲ್ಲ'.

ಸಂಗತ

ಸಾಮೂಹಿಕ ಊಟ: ಸೊಗಸು, ಸಂಭ್ರಮ

ಕುಟುಂಬದ ಸದಸ್ಯರೆಲ್ಲರೂ ದಿನದಲ್ಲಿ ಒಂದು ಬಾರಿಯಾದರೂ ಕೂಡಿ ಊಟ ಮಾಡುವ ಪದ್ಧತಿ ರೂಢಿಸಿಕೊಳ್ಳುವುದು ಉತ್ತಮ

• ಮಲ್ಲಿಕಾರ್ಜುನ ಹೆಗ್ಗಳಗಿ

ಸ್ನೇಹಿತರೊಬ್ಬರ ಹೊಲಕ್ಕೆ ಹೋಗಿದ್ದೆ. ಕೃಷಿ ಕಾರ್ಮಿಕರು ಹೊಸ ಬೆಳೆಗೆ ಭೂಮಿ ಹದಗೊಳಿಸುತ್ತಿದ್ದರು. ಐವರು ಗಂಡಸರು, ಆರು ಮಂದಿ ಮಹಿಳೆಯರು ಇದ್ದರು. ಊಟದ ಸಮಯವಾದ್ದರಿಂದ ಕಾರ್ಮಿಕರೆಲ್ಲ ಮರದ ನೆರಳಿನಲ್ಲಿ ಕುಳಿತುಕೊಂಡರು. ಒಬ್ಬ ಮಹಿಳೆ ಹೊಲದ ಬದುವಿಗೆ ಹೋಗಿ ಮೆಣಸಿನಕಾಯಿ, ಟೊಮೆಟೊ, ಹತ್ತರಿಕಿ ಸೊಪ್ಪು ಕಿತ್ತು ತಂದು ನೀರಿನಲ್ಲಿ ತೊಳೆದು ಮಧ್ಯದಲ್ಲಿ ಇಟ್ಟಳು. ಮನೆಯಿಂದ ತಂದಿದ್ದ ಬುತ್ತಿ ಬಿಚ್ಚಿ ತಮ್ಮೊಳಗೆ ಹಂಚಿಕೊಂಡು ಹಾಸ್ಯ ಚಟಾಕಿ ಹಾರಿಸುತ್ತಾ, ನಗುನಗುತ್ತಾ ಊಟ ಮಾಡಿದರು. ಅವರ ಮುಖದ ಮೇಲೆ ಊಟ ಮಾಡಿದ ತೃಪ್ತ ಭಾವ ಕಾಣತೊಡಗಿತು. ಅದು ಊಟದಿಂದ ಸಂತುಷ್ಟರಾಗಿದ್ದರ ಸಂಕೇತವಾಗಿತ್ತು.

ಜಾತಿ, ಧರ್ಮ, ಲಿಂಗ, ವಯಸ್ಸು, ಅಂತಸ್ತಿನ ಸಂಕೋಲೆ ಇಲ್ಲದೆ ಉಲ್ಲಾಸದಿಂದ ಊಟ ಮಾಡಿದ್ದನ್ನು ಕಂಡು ಬೆರಗಾದೆ. ಊಟ ಮಾಡುವುದು ಒಂದು ಕ್ರಿಯೆ ಅಲ್ಲ, ಅದೊಂದು ಅಪರೂಪದ ಅನುಭೂತಿ.

ಕೃಷಿ, ಕಟ್ಟಡ ನಿರ್ಮಾಣ, ಕೈಗಾರಿಕೆಗಳಲ್ಲಿ ದುಡಿಯುವವರು, ಸಂಘ– ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಒಂದೆಡೆ ಕುಳಿತು ಬುತ್ತಿ ಹಂಚಿಕೊಂಡು ಸಂತೋಷದಿಂದ ಊಟ ಮಾಡುತ್ತಾರೆ. ಸಾಮೂಹಿಕ ಊಟವು ಸಂತೋಷವನ್ನು ಸಮಷ್ಟಿಗೆ ವಿಸ್ತರಿಸುವ ಕ್ರಿಯೆ.

ವಿವಾಹದಂತಹ ಕೌಟುಂಬಿಕ ಸಮಾರಂಭಗಳು, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಜಾತ್ರೆ, ಹಬ್ಬದ ಉತ್ಸವಗಳಲ್ಲಿ ಏರ್ಪಡಿಸುವ ಸಾಮೂಹಿಕ ಊಟದ ಸಮಾರಂಭಗಳಲ್ಲಿ ಸಂಭ್ರಮಕ್ಕೆ ಬದಲಾಗಿ ಗದ್ದಲ, ತಿಕ್ಕಾಟ, ಕಲಹ ಹೆಚ್ಚಾಗುತ್ತಿವೆ. ಅದೇ ರೀತಿ, ಕುಟುಂಬಗಳಲ್ಲಿ ಕೂಡಿ ಊಟ ಮಾಡುವ ಸಂಸ್ಕೃತಿ ಸಹ ಮಾಯವಾಗುತ್ತಿದೆ. ಕುಟುಂಬದವರು ಕೂಡಿ ಊಟ ಮಾಡುವುದು ಭಾವ ಬಾಂಧವ್ಯದ ಬೆಸುಗೆ. ಆದರೆ ಊಟ ಈಗ ಹೊಟ್ಟೆಗೆ ಹಾಕಿಕೊಳ್ಳುವ ಕ್ರಿಯೆಯಷ್ಟೇ ಆಗುತ್ತಿರುವುದು ನೋವಿನ ಸಂಗತಿ.

ಪೌಷ್ಟಿಕತೆ, ಗುಣಮಟ್ಟದ ಆಹಾರದ ಬಗ್ಗೆ ಬಹಳಷ್ಟು ಮಾತುಗಳು ಕೇಳಿಬರುತ್ತವೆ. ಆದರೆ ಸಮಾಧಾನದಿಂದ ಎಲ್ಲರೂ ಕೂಡಿ ಕುಳಿತು ನೆಮ್ಮದಿಯಿಂದ ಊಟ ಸವಿಯುವ ಸಂಭ್ರಮದ ಬಗ್ಗೆ ಹೆಚ್ಚು ಗಮನ ಕೊಡುವುದಿಲ್ಲ. ಅದು ತೀರಾ ಅವಶ್ಯ ಎಂಬುದರ ಅರಿವು ಎಲ್ಲರಲ್ಲೂ ಮೂಡಬೇಕು.

ಉದ್ಯಮಿಯೊಬ್ಬರು ಈಚೆಗೆ ಮಗಳ ಮದುವೆ ಮಾಡಿದರು. ಊಟದಲ್ಲಿ 32 ಬಗೆಯ ಖಾದ್ಯಗಳಿದ್ದವು. ಊಟದ ತಟ್ಟೆ ಪಡೆಯುವುದಕ್ಕೆ ದೊಡ್ಡ ಗಲಾಟೆ ನಡೆಯಿತು. ಪ್ರೀತಿಯ ಭೋಜನಕ್ಕಿಂತ ಶ್ರೀಮಂತಿಕೆಯ ವಿಪರೀತ ಪ್ರದರ್ಶನ ಮುಜುಗರವನ್ನು ಉಂಟುಮಾಡುತ್ತಿತ್ತು. ಅನೇಕರ ತಟ್ಟೆಗಳಲ್ಲಿ ಬಹಳಷ್ಟು ಖಾದ್ಯಗಳು ತಿನ್ನದೇ ಉಳಿದಿದ್ದವು. ಸಮಾರಂಭಗಳಲ್ಲಿ ಆಹಾರ ಪೋಲಾಗುವುದು ಒಂದು ದೊಡ್ಡ ಸಮಸ್ಯೆ. ಇದನ್ನು ವಿಶೇಷ ಕಾಳಜಿ ಮತ್ತು ದಕ್ಷತೆಯಿಂದ ತಡೆಯಬೇಕು.

ನಮ್ಮ ಸಂಸ್ಥೆಯಲ್ಲಿ ಚಾಲಕನಾಗಿ ಕೆಲಸ ಮಾಡುವ ಯುವಕ ನಮ್ಮೊಂದಿಗೆ ಊಟ ಮಾಡುತ್ತಿರಲಿಲ್ಲ. ಕಾರಣ ಕೇಳಿದರೆ, 'ಸರ್ ನಾನು, ನನ್ನ ಹೆಂಡತಿ ಮತ್ತು ತಾಯಿ ಮೂವರೂ ಕೂಡಿ ಊಟ ಮಾಡುತ್ತೇವೆ. ನಾನು ಎಷ್ಟೇ ತಡಮಾಡಿ ಹೋದರೂ ಅವರಿಬ್ಬರೂ ಊಟ ಮಾಡದೆ ನನಗಾಗಿ ಕಾಯುತ್ತಿರುತ್ತಾರೆ' ಎಂದು ಹೇಳಿದ. ಇಂಥ ಪ್ರೀತಿಯ ಬಂಧನ ಕುಟುಂಬದಲ್ಲಿ ಬೆಳೆಯಬೇಕು. ಇದರಿಂದ ಸಂಬಂಧಗಳು ಗಟ್ಟಿಯಾಗುತ್ತವೆ ಮಾತ್ರವಲ್ಲ ಮಾನಸಿಕ ಆರೋಗ್ಯ ಕೂಡ ವೃದ್ಧಿಸುತ್ತದೆ. ಬಹಳಷ್ಟು ಕುಟುಂಬಗಳಲ್ಲಿ ಅವಸರದಲ್ಲಿ ಒಬ್ಬರೇ ಊಟ ಅಥವಾ ಉಪಾಹಾರ ಸೇವಿಸಿ ಕೆಲಸಕ್ಕೆ ಧಾವಿಸುತ್ತಾರೆ. ಇವರು ಮಾಡುವ ಗಡಿಬಿಡಿ ಮತ್ತು ಅವರು ಮೌನದಲ್ಲಿ ಒಳಗೆ ತುಂಬಿಕೊಂಡ ಸಿಟ್ಟು ಕುಟುಂಬದ ಸದಸ್ಯರ ನೆಮ್ಮದಿಯನ್ನು ಹಾಳು ಮಾಡುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಪ್ರತಿದಿನ ಸಂಜೆ ಕುಟುಂಬದವರೆಲ್ಲ ಸೇರಿ ಪ್ರಾರ್ಥನೆ, ಭಜನೆ ಮಾಡಿ ನಂತರ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವ ಪರಿಪಾಟ ಇತ್ತು. ಅದನ್ನು ಕೆಲವು ಮನೆಗಳಲ್ಲಿ ಈಗಲೂ ಕಾಣಬಹುದು. ಮುಧೋಳದಲ್ಲಿ ಬಂದು ನೆಲೆಸಿರುವ ಮಂಗಳೂರು ಮೂಲದ ಕುಟುಂಬಗಳು ಈ ಪದ್ಧತಿ ಅನುಸರಿಸುವುದನ್ನು ಕಂಡಿದ್ದೇನೆ. 'ನಮ್ಮ ಆರೋಗ್ಯ, ಸಂತೋಷಕ್ಕೆ ಕುಟುಂಬದವರೆಲ್ಲ ಸೇರಿ ಊಟ ಮಾಡುವುದು ಕಾರಣ' ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ.

ರಾಜಸ್ಥಾನದ ಮಾದರಿ ಅತ್ಯಂತ ವಿಶೇಷವಾಗಿದೆ. ಕುಟುಂಬದ ಸದಸ್ಯರೆಲ್ಲ ಒಂದೇ ತಟ್ಟೆಯಲ್ಲಿ ಊಟ ಮಾಡುವ ಸಂಪ್ರದಾಯ ಅಲ್ಲಿ ಇದೆ. ಇಸ್ರೇಲ್‌ನಲ್ಲಿ ಹೊಲಗಳಲ್ಲಿ ನೆಲೆಸಿರುವ ಕೃಷಿ ಕಾರ್ಮಿಕರು ಒಟ್ಟಾಗಿ ಅಡುಗೆ ಮಾಡಿ ಕುಟುಂಬದ ಸದಸ್ಯರನ್ನು ಒಳಗೊಂಡು ಊಟ ಮಾಡುತ್ತಾರೆ. ಇದಕ್ಕೆ ಕಿಬೂತ್ ಎಂದು ಕರೆಯುತ್ತಾರೆ. ಇಸ್ರೇಲ್‌ನ ಮೊದಲ ಪ್ರಧಾನಿ ಡೇವಿಡ್ ಬೆನ್ ಗುರಿಯನ್ ನಿವೃತ್ತಿಯ ಕಾಲದಲ್ಲಿ ಕಿಬೂತ್‌ಗಳಲ್ಲಿ ನೆಲೆಸಿ ಸಾಮೂಹಿಕ ಊಟ, ಸಾಮೂಹಿಕ ಕೃಷಿ, ಸಾಮೂಹಿಕ ಹೈನುಗಾರಿಕೆಯ ಮೂಲಕ ಇಸ್ರೇಲ್ ಸಶಕ್ತವಾಗಿ ಬೆಳೆಯುವಂತೆ ಮಾಡಿದರು. ಅದು ದೇಶದ ಜನರಲ್ಲಿ ಏಕತೆಯ ಪ್ರಜ್ಞೆ ಬೆಳೆಯುವುದಕ್ಕೆ ಕಾರಣವಾಗಿದೆ.

ಈಗ ಕುಟುಂಬಗಳು ಚಿಕ್ಕದಾಗುತ್ತಿವೆ. ಮನೆಯಲ್ಲಿ ಸಾಮಾನ್ಯವಾಗಿ ಇಬ್ಬರು, ಮೂವರು ಮಾತ್ರ ಇರುತ್ತಾರೆ. ದಿನದಲ್ಲಿ ಒಂದು ಬಾರಿಯಾದರೂ ಎಲ್ಲರೂ ಕೂಡಿ ಊಟ ಮಾಡಬೇಕು. ಹೀಗೆ ಕೂಡಿ ಊಟ ಮಾಡುವ ಪದ್ಧತಿ ಅನುಸರಿಸಿಕೊಂಡು ಬಂದಿರುವ ಮನೆಯಲ್ಲಿ ಸಂತಸ ಹರಡಿರುತ್ತದೆ. ಕುಟುಂಬದ ವಿಘಟನೆಗಳನ್ನು ತಡೆಯುವಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ.

ವಾಚಕರ ವಾಣಿ

ಚಿತೆಗೆ ಟೈರ್ ಹಾಕಿದ್ದೇಕೆ?

ಗದಗ ಜಿಲ್ಲೆಯ ಸೂರಣಗಿ ಗ್ರಾಮದಲ್ಲಿ ಚಿತ್ರನಟ ಯಶ್ ಅವರ ಜನ್ಮದಿನಾಚರಣೆ ಪ್ರಯುಕ್ತ ಅವರ ಕಟೌಟ್ ನಿಲ್ಲಿಸಲು ಸಿದ್ಧತೆ ನಡೆಸುತ್ತಿದ್ದಾಗ ವಿದ್ಯುತ್ ಸ್ಪರ್ಶವಾಗಿ ಮೃತಪಟ್ಟ ಮೂವರು ಯುವಕರ ಸಾಮೂಹಿಕ ಅಂತ್ಯಕ್ರಿಯೆ ನಡೆದಿದೆ. ಈ ಸಂದರ್ಭದಲ್ಲಿ ಒಂದೊಂದು ಚಿತೆಯಲ್ಲಿ ಎರಡೆರಡು ದೊಡ್ಡ ಟೈರ್‌ಗಳನ್ನು ಇಟ್ಟಿದ್ದ ದೃಶ್ಯ ಟಿ.ವಿ.ಯಲ್ಲಿ ಕಾಣಿಸಿತು. ಅದನ್ನು ನೋಡಿ ಅಚ್ಚರಿಯಾಯಿತು. ಟೈರ್‌ನ ಸುಟ್ಟ ಕಪ್ಪು ವಿಷವು ಗಾಳಿಯಲ್ಲಿ ಸೇರಿ ನಮ್ಮ ಆರೋಗ್ಯಕ್ಕಷ್ಟೇ ಅಲ್ಲ ಪರಿಸರಕ್ಕೂ ತುಂಬಾ ದೊಡ್ಡ ಮಟ್ಟದ ಹಾನಿ ಉಂಟುಮಾಡುತ್ತದೆ. ಈ ಬಗ್ಗೆ ತಿಳಿವಳಿಕೆ ಮೂಡಿಸಬೇಕಾದುದು ಪ್ರಜ್ಞಾವಂತರ ಜವಾಬ್ದಾರಿ.

ಪ್ರಕಾಶ ವಿ. ಹೆಬ್ಬಳ್ಳಿ, ಬೆಂಗಳೂರು

ತಪ್ಪಿತಸ್ಥರು ಮತ್ತೆ ಬಿಡುಗಡೆ ಆಗದಿರಲಿ

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದಲ್ಲಿ ಗುಜರಾತ್ ಸರ್ಕಾರವು 11 ಮಂದಿ ಅಪರಾಧಿಗಳಿಗೆ ಕ್ಷಮಾದಾನ ನೀಡಿ, ಅವರನ್ನು ಕಾರಾಗೃಹದಿಂದ ಬಿಡುಗಡೆಗೊಳಿಸಿದ ವೇಳೆ, ಕೆಲವು ಮಹಿಳೆಯರು ತಿಲಕವಿಟ್ಟು ಅವರನ್ನು ಸ್ವಾಗತಿಸಿದರೆ, ಇನ್ನು ಕೆಲವರು ಹೂವಿನ ಹಾರ ಹಾಕಿ ಸಿಹಿ ಹಂಚಿದ್ದರು. ಈಗ ಗುಜರಾತ್ ಸರ್ಕಾರ ಹಾಗೂ ಅಪರಾಧಿಗಳಿಗೆ ಸುಪ್ರೀಂ ಕೋರ್ಟ್ ಸಾರ್ವಜನಿಕವಾಗಿ 'ಮಂಗಳಾರತಿ'ಯನ್ನೇ ಎತ್ತಿದೆ. ಈ ತಪ್ಪಿತಸ್ಥರು ಇನ್ನುಮುಂದೆ ಯಾವುದೇ ಕಾರಣಕ್ಕೂ ಬಿಡುಗಡೆ ಆಗಬಾರದು. ಜೀವನಪರ್ಯಂತ ಶಿಕ್ಷೆ ಅನುಭವಿಸುವಂತೆ ಆಗಲಿ.

ಕನ್ನಡತಿ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಪ್ರಕರಣದಲ್ಲಿ ನ್ಯಾಯ ಒದಗಿಸಿ 'ರತ್ನ'ವಾಗಿ ಪ್ರಕಾಶಿಸಿದ್ದಾರೆ. ಈ ಅಪರಾಧಿಗಳಿಗೆ ರಾಜಕೀಯ ಗುರುಗಳಿದ್ದು, ಮುಂದಿನ ದಿನಗಳಲ್ಲಿ ನೆರವು ಪಡೆದು ಅವರು ಮತ್ತೆ ಬಿಡುಗಡೆ ಆಗದಿರಲಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಬಿಲ್ಕಿಸ್ ಪ್ರಕರಣ: ಸರ್ಕಾರದ ನಡೆ ಅಕ್ಷಮ್ಯ

ಎರಡು ದಶಕಗಳಷ್ಟು ಹಳೆಯದಾದ ಬಿಲ್ಕಿಸ್ ಬಾನು ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ತೀರ್ಪಿನಿಂದ ಸಂತ್ರಸ್ತೆಯಲ್ಲಿ ನಿರಾಳಭಾವ ಮೂಡಿರಬಹುದು. ಅನ್ಯಾಯಕ್ಕೊಳಗಾದ ನೊಂದ ಮಹಿಳೆ ಇದುವರೆಗೂ ಅದೆಷ್ಟು ಯಾತನೆಯನ್ನು ಅನುಭವಿಸಿರಬಹುದು. ಈ ಕೃತ್ಯವನ್ನು ಮೃಗೀಯ ವರ್ತನೆ ಎಂದು ಹೇಳಿದರೆ ಬಹುಶಃ ಮೃಗಗಳಿಗೆ ಅವಮಾನ ಮಾಡಿದಂತೆ ಆಗಬಹುದು. ಏಕೆಂದರೆ ಮೃಗಗಳು ಕೂಡ ಈ ರೀತಿ ವರ್ತಿಸುವುದಿಲ್ಲ. ಯೋಚನಾ ಶಕ್ತಿ ಹೊಂದಿರುವ ಮನುಷ್ಯ ಅದಕ್ಕಿಂತಲೂ ಕೀಳಾಗಿ ವರ್ತಿಸಿದ ಇಂತಹ ಅಮಾನವೀಯ ಪ್ರಕರಣವನ್ನು ಖಂಡಿಸುವ ಹೊಸ ಪದದ ಆವಿಷ್ಕಾರ ಆಗಬೇಕೇನೊ.

ಈ ಪ್ರಕರಣದಲ್ಲಿ ಕ್ಷಮಾದಾನ ನೀಡುವ ಮೂಲಕ ಗುಜರಾತ್ ಸರ್ಕಾರವು ಅಪರಾಧದಲ್ಲಿ ಭಾಗಿಯಾದಂತೆ ಆಗಿದೆ. ಕಾನೂನಿನ ಬಗ್ಗೆ ಎಲ್ಲಾ ಸಲಹೆ, ಸೂಚನೆಗಳನ್ನು ಪಡೆಯುವ ವ್ಯವಸ್ಥೆಯನ್ನು ಹೊಂದಿರುವ ಚುನಾಯಿತ ಸರ್ಕಾರವೊಂದು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಪರಾಧಿಗಳಿಗೆ ಕ್ಷಮಾದಾನ ನೀಡಿರುವುದು ಅಕ್ಷಮ್ಯ.

ಕೆ.ಎಂ.ನಾಗರಾಜು, ಮೈಸೂರು

ಖ್ಯಾತನಾಮರು ಮಾದರಿಯಾಗಲಿ

ಸಹಕಾರಿ ಬ್ಯಾಂಕ್‌ಗಳಿಂದ ಪಡೆದಿದ್ದ ಸಾಲವನ್ನು ಮರುಪಾವತಿಸದೆ ವಂಚಿಸಿರುವ ಆರೋಪದ ಮೇಲೆ ಶಾಸಕ ರಮೇಶ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿರುವುದನ್ನು ತಿಳಿದು (ಪ್ರ.ವಾ., ಜ. 8) ಆಶ್ಚರ್ಯವಾಯಿತು. ಸಾರ್ವಜನಿಕ ಸೇವೆಯಲ್ಲಿ ಇರುವ ರಾಜಕೀಯ ಮುಖಂಡರು, ಸಿನಿಮಾ ನಟ– ನಟಿಯರು, ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಖ್ಯಾತನಾಮರು ಸಾಮಾನ್ಯ ಜನರಿಗೆ ಮಾದರಿಯಾಗಿ ಇರಬೇಕೆಂಬ ನಿರೀಕ್ಷೆ ಇರುತ್ತದೆ. ಅವರಿಗೆ ಸಾವಿರಾರು ಸಂಖ್ಯೆಯ ಅಭಿಮಾನಿಗಳು, ಬೆಂಬಲಿಗರು ಇರುತ್ತಾರೆ.

ಮುಖಂಡರಾದವರೇ ಸಹಕಾರ ಬ್ಯಾಂಕ್‌ಗಳ ಹಣವನ್ನು ಸಕಾಲದಲ್ಲಿ ಮರುಪಾವತಿ ಮಾಡದೇಹೋದರೆ ಇನ್ನು ಅವರ ಬೆಂಬಲಿಗರು ಮತ್ತು ಸಾಮಾನ್ಯ ಜನರು ಪಡೆದ ಹಣವನ್ನು ಸಕಾಲದಲ್ಲಿ ಮರುಪಾವತಿ ಮಾಡುತ್ತಾರೆ ಎಂಬ ಖಾತರಿ ಇರದು. ಹೀಗಾದರೆ ಸಹಕಾರಿ ಕ್ಷೇತ್ರದ ಬ್ಯಾಂಕ್‌ಗಳಿಗೆ ಭವಿಷ್ಯವಾದರೂ ಇರಲು ಸಾಧ್ಯವೇ? ನೈತಿಕತೆ ಎಂಬ ಮಾತಿಗೆ ಅರ್ಥವಾದರೂ ಇರುವುದೇ? ಹಣದಿಂದ ಅಧಿಕಾರವನ್ನು ಬೇಕಾದರೆ ಗಳಿಸಬಹುದು, ಆದರೆ ನೈತಿಕತೆಯನ್ನು ಗಳಿಸಲು ಸಾಧ್ಯವಿಲ್ಲ ಎಂಬುದನ್ನು ಮುಖಂಡರು ಅರಿಯಬೇಕಿದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಅರಿಯಬೇಕಿದೆ ಜೀವನದ ಮಹತ್ವ

ಚಿತ್ರನಟ ಯಶ್ ಜನ್ಮದಿನಾಚರಣೆ ಪ್ರಯುಕ್ತ ಬೃಹತ್ ಕಟೌಟ್ ನಿಲ್ಲಿಸುವ ಆತುರದಲ್ಲಿ ವಿದ್ಯುತ್ ಪ್ರವಹಿಸಿ ಮೂವರು ಯುವಕರು ಮೃತಪಟ್ಟಿರುವ ಸುದ್ದಿಯನ್ನು ಓದಿದಾಗ, ಇಷ್ಟೆಲ್ಲಾ ತವಕ, ತರಾತುರಿ, ತೋರಿಕೆ ಬೇಕೆ ಮತ್ತು ಯಾಕೆ ಎಂಬ ಪ್ರಶ್ನೆ ಹುಟ್ಟಿತು. ಇತಿಮಿತಿ, ಸಹಮತಿಯಿಂದ ಮಾಡಿದ್ದಲ್ಲಿ ಇಂತಹ ದುರ್ಘಟನೆಗಳು ಸಂಭವಿಸುವುದಿಲ್ಲ ಅಲ್ಲವೇ? ಮೃತ ಯುವಕರ ಕುಟುಂಬಗಳಿಗೆ ಸರ್ಕಾರ ತಲಾ ₹ 2 ಲಕ್ಷ ಪರಿಹಾರ ಘೋಷಿಸಿರುವುದು ಒಳ್ಳೆಯದು. ಆದರೆ ಇದೇ ಸಂದರ್ಭದಲ್ಲಿ ಸರ್ಕಾರವು ಯುವಜನತೆಗೆ ಸ್ವಾತಂತ್ರ್ಯ ಮತ್ತು ಕ್ರಮಬದ್ಧ ಜೀವನದ ಮಹತ್ವ ಸಾರುವ ಹಿತವಚನದ ಸಂದೇಶ ನೀಡಿದ್ದರೆ ಇನ್ನೂ ಒಳ್ಳೆಯದಿತ್ತು.

ಸಿದ್ರಾಮಪ್ಪ ದಿನ್ನಿ, ಬೆಂಗಳೂರು

ಅರಣ್ಯ ಬೆಳೆಸುವ ಕೈಂಕರ್ಯ...

ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳ ಸ್ಮರಣಾರ್ಥವಾಗಿ ವಿಜಯಪುರ ಜಿಲ್ಲೆಯಲ್ಲಿ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಲು ಸಚಿವರು, ಮಠಾಧೀಶರು ಕೋರಿದ್ದು, ಈ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ಗಮನಾರ್ಹವಾದ ವಿಷಯವಾಗಿದೆ. ಏಕೆಂದರೆ, ಮಳೆ ಕೊರತೆ ಎದ್ದು ಕಾಣುತ್ತಿರುವ ಇಂದಿನ ದಿನಗಳಲ್ಲಿ ಮನುಷ್ಯರು ಮಾತ್ರವಲ್ಲದೆ ಪಶು ಪಕ್ಷಿಗಳೂ ಬಹಳಷ್ಟು ತೊಂದರೆ ಎದುರಿಸಬೇಕಾಗಿದೆ. ಸಿದ್ಧೇಶ್ವರ ಶ್ರೀಗಳು ಪರಿಸರಪ್ರೇಮಿಯಾಗಿದ್ದರು. ಇದನ್ನೆಲ್ಲ ಗಮನದಲ್ಲಿಟ್ಟು, ಅರಣ್ಯ ಬೆಳೆಸಲು ಮುಂದಾಗುವ ಮೂಲಕ ಜಿಲ್ಲೆಯನ್ನು ಬರಗಾಲಮುಕ್ತ ಮಾಡಬೇಕಾಗಿದೆ.

ಎಸ್.ಎಸ್.ಸೊನ್ನಗಿ, ಲೋಣಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಕ್ಷದ್ವೀಪ ಪ್ರವಾಸಕ್ಕೆ ಹೊರಟಿರಾ ಅಲ್ಲಿರುವುದು 176 ಬೆಡ್‌ಗಳು ಮಾತ್ರ

ಪ್ರಜಾವಾಣಿ ವಾರ್ತೆ

ಲಕ್ಷದ್ವೀಪದಲ್ಲಿ ಮಾಲ್ದೀವ್ಸ್‌ಗೆ ಸರಿಸಾಟಿಯಾಗಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕು ಎನ್ನುವುದು ಕೇಂದ್ರ ಸರ್ಕಾರದ ಕೆಲವು ವರ್ಷಗಳ ಗುರಿ. ಇದಕ್ಕಾಗಿ ನೀತಿ ಆಯೋಗವೂ ಸೇರಿದಂತೆ, ಸರ್ಕಾರ ಕೆಲವು ಪ್ರಯತ್ನಗಳನ್ನು ಆರಂಭಿಸಿದೆ. ಲಕ್ಷದ್ವೀಪ ಸ್ಥಿತಿಗತಿಯನ್ನು ಅವಲೋಕಿಸಲು ಸಮಿತಿಗಳನ್ನು ರಚಿಸಿ ವರದಿಯನ್ನೂ ಕೇಂದ್ರ ಸರ್ಕಾರ ಪಡೆದುಕೊಂಡಿದೆ. 'ಕಳೆದ ಹತ್ತು ವರ್ಷಗಳಿಂದ ಕೇಂದ್ರ ಸರ್ಕಾರವು ಈ ಬಗ್ಗೆ ಕಾರ್ಯಪ್ರವೃತ್ತವಾಗಿದೆ' ಎಂದು ನೀತಿ ಆಯೋಗ ಹೇಳುತ್ತದೆ. ಇದೇ ಮಾತನ್ನು ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ರೂಪಿಸಿದ್ದ ತಜ್ಞರ ಸಮಿತಿಯೊಂದು ಕೂಡ ಹೇಳಿದೆ. ಆದರೆ, ಅದೇ ವರದಿಯಲ್ಲಿ, 'ಲಕ್ಷದ್ವೀಪ ಆಡಳಿತವು ಪ್ರವಾಸೋದ್ಯಮ ಅಭಿವೃದ್ಧಿಗೆ ಮೊದಲು ನೀಲನಕ್ಷೆಯೊಂದನ್ನು ಸಿದ್ಧಪಡಿಸಿ' ಎಂದು ಶಿಫಾರಸು ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಲಕ್ಷದ್ವೀಪಕ್ಕೆ ಭೇಟಿ ನೀಡಿದ್ದಾಗಿನ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ದ್ವೀಪದ ಮನೋಹರ ಫೋಟೊಗಳು ಸಾಮಾಜಿಕ ಜಾಲತಾಣಿಗರ ಪ್ರಶಂಸೆಗೆ ಪಾತ್ರವಾಗಿದ್ದವು. ಹಾಗೆಯೆ ಇದು ಮಾಲ್ದೀವ್ಸ್ ಹಾಗೂ ಭಾರತದ ಮಧ್ಯೆ ತಿಕ್ಕಾಟಕ್ಕೂ ಕಾರಣವಾಯಿತು. ಮಾಲ್ದೀವ್ಸ್‌ನ ಸಚಿವರ ಹೇಳಿಕೆ ಹಾಗೂ ಆ ದೇಶದ ಚೀನಾ ಪರ ನಿಲುವು ಭಾರತದಾದ್ಯಂತ ಟೀಕೆಗೆ ಗುರಿಯಾಯಿತು. ಇದೇ ಕಾರಣಕ್ಕಾಗಿ ಸಾಮಾಜಿಕ ಜಾಲತಾಣಗಳಲ್ಲಿ 'ಬಾಯ್ಕಾಟ್‌ಮಾಲ್ದೀವ್ಸ್' ಎಂದೂ 'ನಮ್ಮದೇ ದೇಶದ, ಮಾಲ್ದೀವ್ಸ್‌ನಂತೆಯೇ ಸಮುದ್ರವಿರುವ ಲಕ್ಷದ್ವೀಪಕ್ಕೆ ಭೇಟಿ ನೀಡೋಣ' ಎಂದೂ ಅಭಿಪ್ರಾಯಗಳು ಬರತೊಡಗಿದವು. ಲಕ್ಷದ್ವೀಪಕ್ಕೆ ಹೋಗುವುದೇನೊ ಸರಿ. ಆದರೆ, 'ಇಲ್ಲಿ ಪ್ರವಾಸಿಗರಿಗಾಗಿ ಮೂಲಸೌಕರ್ಯಗಳೇ ಇಲ್ಲ' ಎಂದು ಸ್ವತಃ ಲಕ್ಷದ್ವೀಪ ಆಡಳಿತವೇ ಹೇಳುತ್ತಿದೆ.

ಪ್ರವಾಸೋದ್ಯಮ ಬೆಳೆಯಬೇಕು ಎಂದಾದರೆ ಸಂಪರ್ಕ, ಉಳಿದುಕೊಳ್ಳುವ ವ್ಯವಸ್ಥೆ, ಕುಡಿಯುವ ನೀರು, ಅಂತರ್ಜಾಲ... ಹೀಗೆ ಅನೇಕ ಮೂಲಸೌಕರ್ಯಗಳು ಬೇಕಾಗುತ್ತವೆ. ಆದರೆ, ಲಕ್ಷದ್ವೀಪದಲ್ಲಿ ಈ ಯಾವ ವ್ಯವಸ್ಥೆಯೂ ಇಲ್ಲ. ದಿನವೊಂದರಲ್ಲಿ ಜನರಿಗೆ ಅಗತ್ಯವಾಗಿ ಬೇಕಿರುವ ವಸ್ತುಗಳು, ದಿನಸಿ ಸೇರಿದಂತೆ ಎಲ್ಲ ವಸ್ತುಗಳ ಲಭ್ಯತೆಯು ನಿರಂತರವಾಗಿಲ್ಲ ಎಂದು ಲಕ್ಷದ್ವೀಪ ಆಡಳಿತವು ತಜ್ಞರ ಸಮಿತಿಗೆ ತಿಳಿಸಿದೆ. 'ಪರಿಸರ ಹಾಗೂ ಭೌಗೋಳಿಕ ಕಾರಣಗಳಿಗಾಗಿ ಲಕ್ಷದ್ವೀಪವನ್ನು ಪ್ರವಾಸೋದ್ಯಮ ಕೇಂದ್ರವನ್ನವಾಗಿಸುವುದು ಕಷ್ಟಸಾಧ್ಯ' ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಬರುವ ಪ್ರವಾಸಿಗರು ಉಳಿದುಕೊಳ್ಳಲು ಲಕ್ಷದ್ವೀಪದಲ್ಲಿ ಸೌಲಭ್ಯಗಳಿಲ್ಲ. 'ಇಡೀ ದ್ವೀಪಸಮೂಹದಲ್ಲಿ ಉಳಿದುಕೊಳ್ಳಲು ಒಟ್ಟು 176 ಹಾಸಿಗೆಗಳು ಮಾತ್ರ ಇವೆ. ಇದರಲ್ಲಿ 52 ಬೆಡ್ ಸೌಲಭ್ಯ ಇರುವುದು ಟೆಂಟ್‌ಗಳಲ್ಲಿ' ಎನ್ನುತ್ತದೆ ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ ವರದಿ. ಹಡಗಿನಲ್ಲಿ ಪ್ರವಾಸ ಕೈಗೊಳ್ಳುವ ಪ್ರವಾಸಿಗರು ಬೆಳಿಗ್ಗೆ ದ್ವೀಪಗಳಿಗೆ ಭೇಟಿ ನೀಡಿ ರಾತ್ರಿ ವೇಳೆಗೆ ವಾಪಸು ಬರಬೇಕು.

ಬೀಚ್ ವಿಲ್ಲಾ ಹಾಗೂ ರೆಸಾರ್ಟ್‌ಗಳನ್ನು ನಿರ್ಮಾಣ ಮಾಡುವ ಕುರಿತು ಲಕ್ಷದ್ವೀಪ ಆಡಳಿತವು ಹಲವು ಪ್ರಸ್ತಾವಗಳನ್ನು ಇರಿಸಿದೆ. ಜೊತೆಗೆ, ಇಂಥ ವಿಲ್ಲಾಗಳ ನಿರ್ಮಾಣಕ್ಕಾಗಿ ಬಿಡ್‌ಗಳನ್ನು ಕರೆಯಲಾಗಿದೆ. ಎರಡು ದ್ವೀಪಗಳಲ್ಲಿ ಬೀಚ್ ವಿಲ್ಲಾಗಳನ್ನು ಅಭಿವೃದ್ಧಿಪಡಿಸಿ, ನಡೆಸಲು ಇಎಚ್‌ಸಿಎಲ್ ಕಂಪನಿಗೆ ಗುತ್ತಿಗೆ ದೊರೆತಿದೆ.

ಕುಡಿಯುವ ನೀರಿನ ಸಮಸ್ಯೆಯೂ ಇಲ್ಲಿ ಅಧಿಕವಾಗಿಯೇ ಇದೆ. ಕವರಟ್ಟಿ ದ್ವೀಪದಲ್ಲಿ ಮಾತ್ರವೇ ನೀರು ಸಂಸ್ಕರಣಾ ಘಟಕ ಇದೆ. ಇಲ್ಲಿ ದಿನವೊಂದಕ್ಕೆ ಒಂದು ಲಕ್ಷ ಲೀಟರ್ ನೀರನ್ನು ಶುದ್ಧೀಕರಿಸಲಾಗುತ್ತದೆ. ಲಕ್ಷದ್ವೀಪದ ಜನರಿಗೆ ಮೂರು ದಿನಗಳಿಗೆ ಒಮ್ಮೆ ಇಲ್ಲಿಂದ ನೀರನ್ನು ಪೂರೈಸಲಾಗುತ್ತದೆ. ಬಂಗಾರಂ ದ್ವೀಪದಲ್ಲಿ ಆರ್.ಒ ಘಟಕ ಇದೆ. ಇದು ಇತ್ತೀಚೆಗಷ್ಟೇ ಕಾರ್ಯ ಆರಂಭಿಸಿದೆ. ಇಲ್ಲಿ ಒಂದು ದಿನಕ್ಕೆ 50 ಸಾವಿರ ಲೀಟರ್ ನೀರನ್ನು ಶುದ್ಧೀಕರಿಸಲಾಗುತ್ತದೆ. ಈ ನೀರು ಪ್ರವಾಸಿಗರಿಗೆ ಮಾತ್ರ ಮೀಸಲು.

ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸಬೇಕು ಎಂದಾದರೆ, ಪ್ರವಾಸಿಗರು ಬರುವುದೇ ಬಹಳ ಮುಖ್ಯವಾಗುತ್ತದೆ. ಆದರೆ, ಲಕ್ಷದ್ವೀಪಕ್ಕೆ ಕಳೆದ ಹತ್ತು ವರ್ಷಗಳಲ್ಲಿ ಅಂದರೆ, 2012–13ರಿಂದ 2021–22ರವರೆಗೆ 78,993 ಜನರಷ್ಟೇ ಭೇಟಿ ನೀಡಿದ್ದಾರೆ. ಮಾಲ್ದೀವ್ಸ್‌ಗೆ ವರ್ಷವೊಂದರಲ್ಲಿ ಸರಾಸರಿ 13 ಲಕ್ಷ ಜನರು ಭೇಟಿ ನೀಡುತ್ತಾರೆ.

2014-15ರಲ್ಲಿ 'ಸ್ವದೇಶ್ ದರ್ಶನ್' ಎನ್ನುವ ಯೋಜನೆಯೊಂದನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿತ್ತು. ಪ್ರವಾಸಿತಾಣಗಳ ಮೂಲಸೌಕರ್ಯ ಅಭಿವೃದ್ಧಿ ಸೇರಿ, ಪ್ರದೇಶವೊಂದನ್ನು ಪ್ರವಾಸಿ ಕೇಂದ್ರವಾಗಿಸಲೆಂದೇ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈ ಯೋಜನೆ ಅಡಿಯಲ್ಲಿ ಲಕ್ಷದ್ವೀಪ ಆಡಳಿತವು ಪ್ರಸ್ತಾವವನ್ನು ಸಲ್ಲಿಸಿತ್ತು. ಆದರೆ, ಕೇಂದ್ರ ಸರ್ಕಾರವು ಈ ಪ್ರಸ್ತಾವವನ್ನು ಪರಿಗಣಿಸಿರಲಿಲ್ಲ. ಕೇಂದ್ರ ಸರ್ಕಾರವು 2023ರಲ್ಲಿ 'ಸ್ವದೇಶ್ ದರ್ಶನ್ 2.0' ಯೋಜನೆಯನ್ನು ಜಾರಿಗೆ ತಂದಿದೆ. ರಾಜ್ಯ ಸರ್ಕಾರಗಳಿಂದ ಪ್ರಸ್ತಾವವನ್ನು ಆಹ್ವಾನಿಸಿದೆ. ಲಕ್ಷದ್ವೀಪ ಆಡಳಿತವು ಸಲ್ಲಿಸಿದ್ದ ಪ್ರಸ್ತಾವವನ್ನು ಈ ಯೋಜನೆ ಅಡಿ ಪರಿಗಣಿಸಲಾಗುತ್ತದೆ ಎಂದು ಪ್ರವಾಸೋದ್ಯಮ ಸಚಿವಾಲಯ ಹೇಳಿದೆ.

ಪರಿಸರ ಸೂಕ್ಷ್ಮ ಪ್ರದೇಶ ಮತ್ತು ಸಂರಕ್ಷಿತ ಬುಡಕಟ್ಟು ಎಂದು ಪರಿಗಣಿಸಲಾದ ಜನರ ಸಂರಕ್ಷಣೆಯನ್ನೂ ಒಳಗೊಂಡು ಲಕ್ಷದ್ವೀಪವನ್ನು ಪ್ರವಾಸೋದ್ಯಮ ಕೇಂದ್ರವಾಗಿಸುವ ನೀಲನಕ್ಷೆ ಇಲ್ಲ. ಮತ್ತೊಂದೆಡೆ, ಸ್ವದೇಶ್ ದರ್ಶನ್ 2.0 ಯೋಜನೆ ಅಡಿಯಲ್ಲೂ ಗಣನೀಯ ಪ್ರಗತಿ ಸಾಧ್ಯವಾಗಿಲ್ಲ. ಅಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸುವ ಕ್ರಮಗಳನ್ನೇ ತೆಗೆದುಕೊಂಡಿಲ್ಲ. ಆದರೆ, ಭಾರತೀಯರೆಲ್ಲರೂ ಲಕ್ಷದ್ವೀಪಕ್ಕೆ ಪ್ರವಾಸ ಹೋಗಬೇಕು ಎನ್ನುವ ಅಭಿಯಾನ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿದೆ ಎಂಬುದು ಈ ಹೊತ್ತಿನ ಚರ್ಚೆ.

ಮೂಲಸೌಕರ್ಯ ಅಭಿವೃದ್ಧಿ, ಕುಡಿಯುವ ನೀರಿನ ವ್ಯವಸ್ಥೆ, ವಿಮಾನಯಾನ ಸಂಪರ್ಕವನ್ನು ಹೆಚ್ಚಿಸಬೇಕು. ಜತೆಗೆ ಸಾಮಾಜಿಕ ಜಾಲತಾಣಗಳಲ್ಲಿ ಸ್ಕೂಬಾ ಡೈವಿಂಗ್, ಬೀಚ್ ಚಿತ್ರಗಳನ್ನು ಹಾಕಬೇಕು ಎಂದು ತಜ್ಞರ ಸಮಿತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು. ಈಚೆಗೆ ಲಕ್ಷದ್ವೀಪಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಅಂತಹ ಚಿತ್ರಗಳನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು.



ನಕ್ಷೆ ಕೃಪೆ: ಗೂಗಲ್ ಅರ್ಥ್

ಪುಟ್ಟ ವಿಮಾನ ನಿಲ್ದಾಣದ ವಿಸ್ತರಣೆ ಯಾವಾಗ?

ಲಕ್ಷದ್ವೀಪದಲ್ಲಿ ಪ್ರವಾಸೋದ್ಯಮವು ಬೆಳೆಯದೇ ಇರಲು ಬಹುದೊಡ್ಡ ತೊಡಕು ಸಾರಿಗೆ ಸಂಪರ್ಕ. ದಿನಸಿ ವಸ್ತುಗಳಿಗೂ ಕೇರಳವನ್ನು ಅವಲಂಬಿಸಿರುವ ದ್ವೀಪ ಸಮೂಹವಿದು. ಕೇರಳದ ಕಡಲ ತೀರದಿಂದ 250–300 ಕಿ.ಮೀ. ದೂರದವರೆಗೆ ಈ ದ್ವೀಪಗಳು ಹರಡಿಕೊಂಡಿವೆ. ಕೆಲವು ದ್ವೀಪಗಳ ನಡುವಣ ಅಂತರವೇ 50 ಕಿ.ಮೀ. ದಾಟುತ್ತದೆ. ಹಡಗು ಮತ್ತು ದೋಣಿಗಳ ಮೂಲಕ ಸಂಪರ್ಕ ಸಾಧ್ಯವಿದೆಯಾದರೂ, ಪ್ರವಾಸಿಗರನ್ನು ದೊಡ್ಡಮಟ್ಟದಲ್ಲಿ ಸೆಳೆಯಲು ಅದು ಸಾಕಾಗದು. ಕೊಚ್ಚಿಯಿಂದ ಲಕ್ಷದ್ವೀಪಕ್ಕೆ ವಿಮಾನಯಾನ ಸೇವೆ ಚಾಲ್ತಿಯಲ್ಲಿದೆ. ಅದು ಯಾವುದಕ್ಕೂ ಸಾಲದು ಎನ್ನುತ್ತದೆ ಪ್ರವಾಸೋದ್ಯಮ ಸಚಿವಾಲಯದ ತಜ್ಞರ ಸಮಿತಿಯ ವರದಿ. ದೊಡ್ಡ ವಿಮಾನ ನಿಲ್ದಾಣ ಅಭಿವೃದ್ಧಿಗೆ ಲಕ್ಷದ್ವೀಪದ ಆಡಳಿತವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುತ್ತಲೇ ಬಂದಿದೆ. ಆದರೆ ಕೇಂದ್ರ ಸರ್ಕಾರವು ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.

ಲಕ್ಷದ್ವೀಪ ಸಮೂಹದ ಅಗತ್ತಿ ದ್ವೀಪದಲ್ಲಿ ಸಣ್ಣ ವಿಮಾನ ನಿಲ್ದಾಣವಿದೆ. 1,100 ಮೀಟರ್ ಉದ್ದ ಮತ್ತು ಕೇವಲ 30 ಮೀಟರ್ ಅಗಲವಿರುವ ರನ್‌ವೇಯಲ್ಲಿ ದೊಡ್ಡ ವಿಮಾನಗಳನ್ನು ಇಳಿಸಲು ಸಾಧ್ಯವಿಲ್ಲ. ಈ ವಿಮಾನ ನಿಲ್ದಾಣದಲ್ಲಿ ರಾತ್ರಿ ವೇಳೆ ಲ್ಯಾಂಡಿಂಗ್‌ಗೆ ಅವಕಾಶವಿಲ್ಲ.

ಗೋವಾ, ಮುಂಬೈನಂತಹ ದೂರದ ನಗರಗಳಿಂದ ಅಗತ್ತಿ ವಿಮಾನ ನಿಲ್ದಾಣಕ್ಕೆ ಸಣ್ಣ ವಿಮಾನಗಳನ್ನು ಹಾರಾಟ ನಡೆಸಲು ಸಾಧ್ಯವಿಲ್ಲ. ಅವುಗಳ ಹಾರಾಟದ ವ್ಯಾಪ್ತಿ ಕಡಿಮೆ ಇರುವುದೇ ಇದಕ್ಕೆ ಕಾರಣ. ಹಾಗೆಂದು ದೊಡ್ಡ ವಿಮಾನಗಳನ್ನು ಇಳಿಸುವಷ್ಟು ದೊಡ್ಡ ರನ್‌ವೇ ಅಗತ್ತಿಯಲ್ಲಿ ಇಲ್ಲ. ಅಗತ್ಯವಿದ್ದರೂ, ಈ ದ್ವೀಪದ ಹೆಚ್ಚು ವಿಸ್ತಾರವಾಗಿರುವ ಪ್ರದೇಶದಲ್ಲಿ ದೊಡ್ಡ ರನ್‌ವೇ ನಿರ್ಮಿಸುವ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರವು ಆಸಕ್ತಿ ತೋರಿಸಿಯೇ ಇಲ್ಲ.

2019ರ ಡಿಸೆಂಬರ್‌ನಲ್ಲಿ ಲಕ್ಷದ್ವೀಪ ಸಂಸದ ಮೊಹಮ್ಮದ್ ಫೈಜಲ್ ಈ ಬಗ್ಗೆ ಲೋಕಸಭೆಯಲ್ಲಿ ಮಾಹಿತಿ ಕೇಳಿದ್ದರು. ಅವರ ಪ್ರಶ್ನೆಗೆ ಉತ್ತರಿಸಿದ್ದ ನಾಗರಿಕ ವಿಮಾನಯಾನ ಸಚಿವಾಲಯವು, 'ಅಗತ್ತಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ರನ್‌ವೇ ಅಕ್ಕಪಕ್ಕ ಅಗತ್ಯವಿರುವಷ್ಟು ಜಾಗ ಇಲ್ಲದೇ ಇರುವುದರಿಂದ ರಾತ್ರಿ ಲ್ಯಾಂಡಿಂಗ್‌ಗೆ ಅನುಕೂಲವಾಗುವಂತೆ ರನ್‌ವೇಯನ್ನು ಮೇಲ್ದರ್ಜೆಗೆ ಏರಿಸಲು ಸಾಧ್ಯವಿಲ್ಲ' ಎಂದು ವಿವರಿಸಿತ್ತು.

ಲಕ್ಷದ್ವೀಪದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದ ಸವಾಲುಗಳು ಮತ್ತು ಸಾಧ್ಯತೆಗಳ ಕುರಿತು ಪ್ರವಾಸೋದ್ಯಮ ಸಚಿವಾಲಯವು ವರದಿಯೊಂದನ್ನು ಸಿದ್ಧಪಡಿಸಿತ್ತು. 2023ರ ಮಾರ್ಚ್‌ನಲ್ಲಿ ಲೋಕಸಭೆಗೆ ಆ ವರದಿಯನ್ನು ಸಲ್ಲಿಸಲಾಗಿತ್ತು. 'ಅಗತ್ತಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವುದು ಕಷ್ಟಸಾಧ್ಯ. ಅಂತಹ ಕಾಮಗಾರಿಯನ್ನು ಕೈಗೊಂಡರೂ ಕಾಮಗಾರಿಯ ವೆಚ್ಚಕ್ಕೆ ಹೋಲಿಸಿದರೆ, ಅಲ್ಲಿಂದ ಬರುವ ಆದಾಯ ತೀರಾ ಕಡಿಮೆ. ಹೀಗಾಗಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವುದು ಕಾರ್ಯಸಾಧುವಲ್ಲ' ಎಂದು ಹೇಳಿತ್ತು. ಇದು ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವ ನನೆಗುದಿಗೆ ಬೀಳಲು ಪ್ರಮುಖ ಕಾರಣ.

ಲಕ್ಷದ್ವೀಪ ಸಮೂಹದಲ್ಲೇ ದೊಡ್ಡ ದ್ವೀಪಗಳಲ್ಲಿ ಒಂದಾದ ಮಿನಿಕೊಯ್ ದ್ವೀಪದಲ್ಲಿ ದೊಡ್ಡ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆ ಎಂದು ವರದಿಯಲ್ಲಿ ಹೇಳಲಾಗಿತ್ತು. ರಕ್ಷಣಾ ಸಚಿವಾಲಯವು ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುವುದು ಮತ್ತು ನಾಗರಿಕ ವಿಮಾನಗಳ ಕಾರ್ಯಾಚರಣೆಗೂ ಅವಕಾಶ ಕೊಡುವುದಕ್ಕೆ 2022ರಲ್ಲೇ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ. ಪ್ರಸ್ತಾವ ಈಗ ಯಾವ ಹಂತದಲ್ಲಿ ಇದೆ ಎಂಬ ಮಾಹಿತಿ ಇಲ್ಲ.

ಈಗ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಬಾಯ್ಕಾಟ್ ಮಾಲ್ದೀವ್ಸ್ ಅಭಿಯಾನದ ಭಾಗವಾಗಿ ದೊಡ್ಡಮಟ್ಟದಲ್ಲಿ ಪ್ರವಾಸಿಗರು ಲಕ್ಷದ್ವೀಪಕ್ಕೆ ಹೊರಟರೆ, ವಿಮಾನ ಸಂಪರ್ಕದ ಕೊರತೆ ತೀವ್ರವಾಗಿ ಕಾಡಲಿದೆ.

ಆಧಾರ: ಲೋಕಸಭೆಗೆ ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ನೀಡಿದ ಉತ್ತರಗಳು, ಪ್ರವಾಸೋದ್ಯಮ ಸಚಿವಾಲಯದ 'ಲಕ್ಷದ್ವೀಪದಲ್ಲಿ ಪ್ರವಾಸೋದ್ಯಮ: ಸವಾಲುಗಳು ಮತ್ತು ಸಾಧ್ಯತೆಗಳು' ತಜ್ಞರ ವರದಿ, ಪ್ರಧಾನಿ ನರೇಂದ್ರ ಮೋದಿ ಅವರ 'ಎಕ್ಸ್' ಪೋಸ್ಟ್‌ಗಳು

ರಹದಾರಿ ಇದ್ದರಷ್ಟೇ ಪ್ರವೇಶ

ಲಕ್ಷದ್ವೀಪದ ದ್ವೀಪಗಳು ಸಂರಕ್ಷಿತ ಪ್ರದೇಶಗಳಾಗಿರುವ ಕಾರಣ, ಅಲ್ಲಿನ ನಿವಾಸಿಗಳನ್ನು ಹೊರತುಪಡಿಸಿ ಬೇರೆ ಯಾರೂ ನೇರವಾಗಿ ಅಲ್ಲಿಗೆ ಕಾಲಿಡುವಂತಿಲ್ಲ. ಅತ್ಯಂತ ಸೂಕ್ಷ್ಮವಾದ ಹವಳದ ದಂಡೆಗಳು, ಅಲ್ಲಿಗೇ ಸೀಮಿತವಾದ ಜೀವವೈವಿಧ್ಯ ಮತ್ತು ಅಲ್ಲಿನ ಮೂಲನಿವಾಸಿ ಬುಡಕಟ್ಟು ಜನರ (ಆಧುನಿಕ ಜೀವನವನ್ನು ನಡೆಸುತ್ತಿದ್ದರೂ ಜನಾಂಗೀಯ, ಸಾಂಸ್ಕೃತಿಕ ಕಾರಣಕ್ಕೆ ಇವರನ್ನು ಬುಡಕಟ್ಟು ಜನರು ಎಂದು ವರ್ಗೀಕರಿಸಲಾಗಿದೆ) ಕಾರಣಕ್ಕೆ ಇಂತಹ ನಿರ್ಬಂಧ ಜಾರಿಯಲ್ಲಿದೆ.

ಭಾರತದ್ದೇ ಬೇರೆ ಭಾಗದ ನಿವಾಸಿಗಳು ಲಕ್ಷದ್ವೀಪಕ್ಕೆ ಹೋಗುವ ಮುನ್ನ ಅಲ್ಲಿನ ಆಡಳಿತಾಂಗದಿಂದ ರಹದಾರಿ ಪಡೆಯಬೇಕು. ರಹದಾರಿ ಇದ್ದವರಿಗಷ್ಟೇ ಅಲ್ಲಿಗೆ ಪ್ರವೇಶ. ರಹದಾರಿಯಲ್ಲಿ ನಮೂದಿಸಿರುವ ಅವಧಿಗಷ್ಟೇ ಅವರು ಆ ದ್ವೀಪಗಳಲ್ಲಿ ಇರಬೇಕು. ಯಾವ ದ್ವೀಪಕ್ಕೆ ರಹದಾರಿ ಪಡೆಯಲಾಗಿದೆಯೋ ಅದಕ್ಕಷ್ಟೇ ಭೇಟಿ ನೀಡಬೇಕು. ಅದನ್ನು ಉಲ್ಲಂಘಿಸುವುದು ಶಿಕ್ಷಾರ್ಹ ಅಪರಾಧ.

ಲಕ್ಷದ್ವೀಪ ಸಮೂಹದಲ್ಲಿ 36 ದ್ವೀಪಗಳಿವೆ. ಆದರೆ ಎಲ್ಲದರಲ್ಲೂ ಮನುಷ್ಯರು ವಾಸಿಸುತ್ತಿಲ್ಲ. ಮನುಷ್ಯರ ಆವಾಸವಿಲ್ಲದ ಕೆಲವು ದ್ವೀಪಗಳಿಗೆ ಬೆಳಗಿನ ಹೊತ್ತು ಮಾತ್ರ ಭೇಟಿ ನೀಡಲು ರಹದಾರಿ ನೀಡಲಾಗುತ್ತದೆ. ವಿದೇಶಿ ಪ್ರವಾಸಿಗರಿಗೂ ಈ ರಹದಾರಿ ಪದ್ಧತಿ ಅನ್ವಯವಾಗುತ್ತದೆ. ಅರ್ಜಿ ಸಲ್ಲಿಸಿದ ಎಲ್ಲರಿಗೂ ರಹದಾರಿ ಸಿಕ್ಕೇಸಿಗುತ್ತದೆ ಎಂದು ಹೇಳಲು ಬರುವುದಿಲ್ಲ. ರಾಷ್ಟ್ರೀಯ ಭದ್ರತೆ, ಬುಡಕಟ್ಟು ಸಮುದಾಯಗಳ ಸಂರಕ್ಷಣೆ, ಶಾಂತಿಪಾಲನೆಯ ಕಾರಣಕ್ಕೆ ರಹದಾರಿಯನ್ನು ನಿರಾಕರಿಸಲು ಅವಕಾಶವಿದೆ.

ಸಿನಿ ಬಿಟ್ಸ್

'ಕನಸೊಂದು ಶುರುವಾಗಿದೆ' ಎಂದ ಸಾತ್ವಿಕಾ

ಸಾತ್ವಿಕಾ, ಸಂತೋಷ್

'ಸಹರ' ಸಿನಿಮಾ ಮೂಲಕ ನಿರ್ದೇಶಕರಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ಮಂಜೇಶ್ ಭಾಗವತ್ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ.

ಮಂಜೇಶ್ ನಿರ್ದೇಶನದ ಎರಡನೇ ಸಿನಿಮಾಗೆ 'ಕನಸೊಂದು ಶುರುವಾಗಿದೆ' ಎಂದು ಶೀರ್ಷಿಕೆ ಇಡಲಾಗಿದ್ದು, ಅಶ್ವಿನಿ ಪುನೀತ್ ರಾಜ್‌ಕುಮಾರ್ ಈ ಶೀರ್ಷಿಕೆ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದ್ದಾರೆ. ಈ ಸಿನಿಮಾ ಮೂಲಕ ಸಂತೋಷ್ ಬಿಲ್ವಾ ನಾಯಕನಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದು, ಅವರಿಗೆ ಜೋಡಿಯಾಗಿ ಸಾತ್ವಿಕಾ ಕಾಣಿಸಿಕೊಂಡಿದ್ದಾರೆ. ಥ್ರಿಲ್ಲರ್ ಮಂಜು, ಕುರಿ ಸುನಿಲ್ ತಾರಾಬಳಗದಲ್ಲಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ ಈ ಚಿತ್ರದ ಚಿತ್ರೀಕರಣ ಬೆಂಗಳೂರು, ಕುಂದಾಪುರ, ಕುಣಿಗಲ್ ಸುತ್ತಮುತ್ತ ನಡೆದಿದೆ.

ಕೆಕೆಆರ್ ಮೀಡಿಯಾ ಬ್ಯಾನರ್‌ನಡಿ ಲಕ್ಷ್ಮೀಕಾಂತ್ ರೆಡ್ಡಿ ಎಸ್. ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಲೋಕೇಂದ್ರ ಸೂರ್ಯ ಛಾಯಾಚಿತ್ರಗ್ರಹಣ, ಸೂರಜ್ ಜೋಯಿಸ್ ಸಂಗೀತ, ದೀಪಕ್ ಸಿ. ಎಸ್. ಗೌಡ ಸಂಕಲನ ಚಿತ್ರಕ್ಕಿದೆ. ಶಶಾಂಕ್, ಸಿಂಪಲ್ ಸುನಿ ಹಾಗೂ ಪ್ರಮೋದ್ ಮರವಂತೆ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಸೋನು ನಿಗಮ್, ರಾಜೇಶ್ ಕೃಷ್ಣನ್ ಹಾಗೂ ವಾಸುಕಿ ವೈಭವ್ ಹಾಡುಗಳಿಗೆ ಧ್ವನಿಯಾಗಿದ್ದಾರೆ.

ಹೊಸ ಪ್ರಯತ್ನಕ್ಕೆ ಉತ್ತಮ ಪ್ರಕ್ರಿಯೆ

ಜ.26ರಂದು ತೆರೆಗೆ ಬರಲಿರುವ 'ಹದಿನೇಳೆಂಟು' ಹಾಗೂ 'ಕೋಳಿ ಎಸ್ರು' ಸಿನಿಮಾಗಳು ಒಟ್ಟಾಗಿ ಪ್ರಚಾರಕ್ಕೆ ಇಳಿದಿದ್ದು, ಎರಡೂ ಸಿನಿಮಾಗಳನ್ನು ₹400 ಟಿಕೆಟ್ ಖರೀದಿಸಿ ನೋಡುವ ಪ್ರಯೋಗವನ್ನು ನಿರ್ದೇಶಕಿ ಚಂಪಾ ಶೆಟ್ಟಿ ಹಾಗೂ ನಿರ್ದೇಶಕ ಪೃಥ್ವಿ ಕೊಣನೂರು ಮುಂದಿಟ್ಟಿದ್ದರು.

'ಈ ಪ್ರಯೋಗಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈತನಕ ಟಿಕೆಟ್ ಮಾರಾಟದಿಂದ ₹1.8 ಲಕ್ಷ ಮೊತ್ತ ಸಂಗ್ರಹವಾಗಿದೆ. ಕನಿಷ್ಠ ₹10 ಲಕ್ಷ ಮೌಲ್ಯದ ಟಿಕೆಟ್ ಮಾರಾಟ ಗುರಿಯಿದೆ. ರಾಜ್ಯದ ಎಲ್ಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ' ಎನ್ನುತ್ತಾರೆ 'ಹದಿನೇಳೆಂಟು' ಚಿತ್ರದ ನಿರ್ದೇಶಕ ಪೃಥ್ವಿ ಕೊಣನೂರು.

ಈಗಾಗಲೇ ಎರಡೂ ಚಿತ್ರಗಳು ಸಾಕಷ್ಟು ಚಿತ್ರೋತ್ಸವಗಳಿಗೆ ಆಯ್ಕೆಗೊಂಡು ವಿಮರ್ಶಾ ವಲಯದಿಂದ ಉತ್ತಮ ಪ್ರತಿಕ್ರಿಯೆ ಗಳಿಸಿವೆ. ಜೊತೆಗೆ ಕಳೆದ ವರ್ಷ ಬೆಂಗಳೂರು ಚಿತ್ರೋತ್ಸವದಲ್ಲಿ ಪ್ರಶಸ್ತಿಯನ್ನೂ ಪಡೆದುಕೊಂಡಿದ್ದವು. ಚಿತ್ರದ ಟಿಕೆಟ್‌ಗಳು paraspara.live ವೆಬ್‌ಸೈಟ್‌ನಲ್ಲಿ ಲಭ್ಯ ಇವೆ.

'ಈ ರೀತಿ ಕಲಾತ್ಮಕ ಚಿತ್ರಗಳ ಪ್ರಚಾರಕ್ಕೆ ಖರ್ಚು ಮಾಡುವ ಸ್ಥಿತಿಯಿಲ್ಲ. ನಮ್ಮ ಶ್ರಮವೇ ಬಂಡವಾಳ. ಮಲ್ಟಿಪ್ಲೆಕ್ಸ್‌ಗಳಿರುವ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಹೋಗಿ ಪ್ರಚಾರ ನಡೆಸುತ್ತಿದ್ದೇವೆ. ಉಡುಪಿ, ಮೈಸೂರಿನಲ್ಲಿ ಟಿಕೆಟ್ ಪ್ರತಿಕ್ರಿಯೆ ಉತ್ತಮವಾಗಿದೆ. ಕೆಲವರು ದೇಣಿಗೆ ನೀಡಲು ಮುಂದೆ ಬಂದಿದ್ದಾರೆ. ಎರಡೂ ಸಿನಿಮಾ ತಂಡಗಳು ಒಟ್ಟಾಗಿ ಪ್ರಚಾರಕ್ಕೆ ಇಳಿದಿರುವುದಕ್ಕೆ ಎಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ' ಎನ್ನುತ್ತಾರೆ 'ಕೋಳಿ ಎಸ್ರು' ಚಿತ್ರದ ನಿರ್ದೇಶಕಿ ಚಂಪಾ ಶೆಟ್ಟಿ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಪ್ರೀತಿ ಚೆಲ್ಲಿ ಜಗವ ಗೆಲ್ಲುವ ತವಕ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಒಮ್ಮೆ ಕಾಶಿಯ ರಾಜ ಬ್ರಹ್ಮದತ್ತ ರಥದಲ್ಲಿ ಹೊರಟಿದ್ದ. ಎದುರಿಗೆ ಕೋಸಲದ ದೊರೆ ಮಲ್ಲಿಕನ ರಥವೂ ಅದೇ ಹಾದಿಯಲ್ಲಿ ಎದುರಿಗೆ ಬಂದು ನಿಂತಿತು. ಇಬ್ಬರ ರಥಗಳು ಒಮ್ಮೆಗೇ ಸಾಗಿ ಹೋಗಲಾಗದ ಇಕ್ಕಟ್ಟಾದ ದಾರಿ ಅದಾಗಿತ್ತು. ಯಾರಾದರೊಬ್ಬರು ದಾರಿ ಕೊಡಲೇಬೇಕಿತ್ತು. ಆದರೆ ಎರಡೂ ರಾಜರ ಸಾರಥಿಗಳೂ ರಥವನ್ನು ಹಿಂದಕ್ಕೆ ತೆಗೆಯುವುದಿಲ್ಲ ಎಂದು ಹಟಕ್ಕೆ ಬಿದ್ದರು. ನೀನು ಮೊದಲು ರಥ ತೆಗೆದು ನಮಗೆ ದಾರಿ ಬಿಡಬೇಕು ಯಾಕೆಂದರೆ ನಮ್ಮ ರಾಜ ಶ್ರೇಷ್ಠ ಎಂದು ಪರಸ್ಪರ ಜಗಳಕ್ಕೆ ನಿಂತರು. ವಯಸ್ಸಿನಲ್ಲಿ ಕಿರಿಯನಾದ ರಾಜ ಹಿರಿಯ ವಯೋಮಾನದ ದೊರೆಗೆ ಮೊದಲು ದಾರಿ ಬಿಡುವುದು ಧರ್ಮ ಎಂದು ವಾದಿಸಿದರು.

ನೋಡಿದರೆ ಇಬ್ಬರ ವಯಸ್ಸೂ ಒಂದೇ ಆಗಿತ್ತು. ರಾಜ್ಯದ ವಿಸ್ತೀರ್ಣ, ಮನೆತನ, ವಂಶ, ಪಟ್ಟದ ರಾಣಿಯರ ಸಂಖ್ಯೆ, ನಡೆಸಿರುವ ದಿಗ್ವಿಜಯಗಳು, ದಾನಾದಿಗಳ ವಿವರವೆಲ್ಲಾ ಲೆಕ್ಕ ಹಾಕಿದರೂ ಯಾರಿಗೆ ಯಾರೂ ಕಮ್ಮಿ ಇರಲಿಲ್ಲ.

ಕೊನೆಗೆ ಬ್ರಹ್ಮದತ್ತ ಚಕ್ರವರ್ತಿಯ ಸಾರಥಿ ತಾಳ್ಮೆ ತಂದುಕೊಂಡು ಮಲ್ಲಿಕನ ರಥದ ಚಾಲಕನಿಗೆ 'ಅಯ್ಯಾ ಸಾರಥಿ, ನಿಮ್ಮ ಪ್ರಭುವಿನ ಒಳ್ಳೆಯ ಗುಣಗಳು ಯಾವುವು? ಅದನ್ನು ಮೊದಲು ಹೇಳು. ಗುಣದಲ್ಲಿ ಅಧಿಕನಾದವನಿಗೆ ಗುಣ ಕಡಿಮೆಯಾದವನು ದಾರಿ ಬಿಟ್ಟು ಕೊಡಲಿ ಅದೇ ಸರಿಯಾದ ಮಾರ್ಗ' ಎಂದನು. ಆಗ ಮಲ್ಲಿಕ ಅರಸನ ಕಡೆಯವನು 'ನಮ್ಮ ನೃಪನು ದುಷ್ಟರಿಗೆ ದುಷ್ಟ, ಸಾಧುಗಳಿಗೆ ಸಾಧು. ಒಳ್ಳೆಯವರಿಗೆ ಒಳಿತನ್ನೂ ಕೆಟ್ಟವರಿಗೆ ಕೆಡುಕನ್ನು ಮಾಡುತ್ತಾನೆ. ಈತನಲ್ಲಿ ಲವಲೇಶದ ದೋಷವೂ ಇಲ್ಲ' ಎಂದನು.

ಆಗ ಬ್ರಹ್ಮದತ್ತ ರಾಯನ ಸಾರಥಿ 'ನಮ್ಮ ಬ್ರಹ್ಮದತ್ತನು ಕೋಪಗೊಂಡವರನ್ನು ತನ್ನ ಮೃದುತ್ವದಿಂದ ಗೆಲ್ಲುತ್ತಾನೆ. ಕೆಟ್ಟವರನ್ನು ಒಳ್ಳೆಯತನದಿಂದ ಒಲಿಸಿಕೊಳ್ಳುತ್ತಾನೆ. ಜಿಪುಣನನ್ನು ದಾನದಿಂದ ವಶಪಡಿಸಿಕೊಳ್ಳುತ್ತಾನೆ. ಸುಳ್ಳಾಡುವವರನ್ನು ಸತ್ಯದಿಂದ ಜಯಿಸುತ್ತಾನೆ. ಜಗಳವನ್ನು ಮನುಷ್ಯತ್ವದಿಂದ ಪರಿಹರಿಸುತ್ತಾನೆ. ಎಲ್ಲರ ನೋವನ್ನು ಹೃದಯವಿಟ್ಟು ಆಲಿಸುತ್ತಾನೆ. ಕನಸಲ್ಲಿಯೂ ಯಾರ ಕೆಡಕನ್ನು ಬಯಸದೆ ಪ್ರೀತಿ, ಮಮತೆ ಹಂಚಲು ಚಡಪಡಿಸುತ್ತಾನೆ. ಇವು ನಮ್ಮ ಧಣಿಯ ಗುಣಗಳು. ಹೀಗಾಗಿ ಈಗ ನೀನೇ ರಥವನ್ನು ಹಿಂದಕ್ಕೆ ಒಯ್ಯಬೇಕಾಗುತ್ತದೆ' ಎಂದನು.

ಮಲ್ಲಿಕನ ಸಾರಥಿಗೆ ತಿರುಗಿ ಏನು ಹೇಳುವುದೆಂದು ತೋಚದೆ ಬಾಯಿ ಕಟ್ಟಿ ಹೋಯಿತು. ಆಗ ಈ ಎಲ್ಲಾ ಮಾತುಕಥೆ ಕೇಳುತ್ತಿದ್ದ ಕೋಸಲದ ರಾಜ ಮಲ್ಲಿಕನು ಸ್ವತಃ ರಥದಿಂದ ಕೆಳಗಿಳಿದು ಬಂದು ಬ್ರಹ್ಮದತ್ತ ದೊರೆಯ ಕ್ಷಮೆಯನ್ನು ಕೇಳಿದನು. 'ರಾಜ ನಿನ್ನ ಗುಣಗಾನವನ್ನು ಕೇಳಿ ನನಗೆ ಜ್ಞಾನೋದಯವಾಗಿದೆ. ನನ್ನಲ್ಲಿರುವ ದೋಷಗಳು ಯಾವುದೆಂಬುದು ಅರಿವಾಗಿದೆ. ಒಳಿತಿನಿಂದ ಕೆಡಕನ್ನು, ಸತ್ಯದಿಂದ ಸುಳ್ಳನ್ನು ನಾಶಮಾಡುವ ನಿನ್ನ ಗುಣವೇ ಶ್ರೇಷ್ಠ. ತ್ಯಾಗದಿಂದ ಸಂಬಂಧಗಳನ್ನು, ಸಹನೆಯಿಂದ ನೋವನ್ನು ಜಯಿಸಬೇಕು ಎಂಬ ತಿಳಿವಳಿಕೆ ನನಗೀಗ ಸಿಕ್ಕಿದೆ. ರಥಕ್ಕೊಂದು ಸಣ್ಣ ದಾರಿ ಪಡೆಯಲು ಹೊರಟಿದ್ದ ನನಗೆ ಬದುಕಿನ ಹೊಸ ಹೆದ್ದಾರಿಯೇ ದೊರಕಿದೆ. ನಿನಗೂ ನಿನ್ನ ಸಾರಥಿಗೂ ಧನ್ಯವಾದಗಳು' ಎನ್ನುತ್ತಾನೆ.

ಬದುಕಿನಲ್ಲಿ ಒಳ್ಳೆಯವರು ಎದುರಾಗಿ ಅವರ ಸಜ್ಜನ ಗುಣ ಸ್ವಭಾವಗಳು ತಿಳಿದಾಗ, ನಮ್ಮ ದೋಷಗಳು ನಮಗೆ ಎದ್ದು ಕಾಣಿಸುತ್ತವೆ. ನಮ್ಮ ಮನಸ್ಸಿನ ಹುಳುಕುಗಳ ಹೀಗೆ ತೆರೆದು ತೋರಿಸುವವರು ಸದಾ ನಮ್ಮ ಅಕ್ಕಪಕ್ಕದಲ್ಲೇ ಇರುತ್ತಾರೆ. ನಾವು ಕಣ್ತೆರೆದು ನೋಡಬೇಕು ಅಷ್ಟೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜನವರಿ 10, 2024

ಶ್ರೀ ಶೋಭಕೃತ್ ನಾಮಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ದಶಿ ಗಂ. 20-11 ನಕ್ಷತ್ರ: ಮೂಲಾ ಗಂ. 19-40 ಯೋಗ: ಧ್ರುವ ಗಂ. 21-17 ಕರಣ: ವಿಷ್ಟಿ ಗಂ. 09-23, ಧನು ಮಾಸದ 25 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 4.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 07-00 ಸೂರ್ಯಾಸ್ತ : 06-16
ಮುಸ್ಲಿಂ ದಿನಾಂಕ : 27 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 9, 2

ಮೇಷ: ದೇವರ ಆಶೀರ್ವಾದ ನಿಮ್ಮ ಮೇಲಿರುವುದರಿಂದ ಇಂದಿನ ಪ್ರಯಾಣ ಅನುಕೂಲಕರವಾಗಿ, ಅನಾಯಾಸವಾಗಿ ಇರುತ್ತದೆ. ಜೀವನಶೈಲಿಗೆ ವಿರುದ್ಧವಾದ ಘಟನೆ ಈ ದಿನ ನಡೆಯಬಹುದು.

ವೃಷಭ: ಜಮೀನಿನ ಕೆಲಸ ಕಾರ್ಯಗಳು ಮನಸ್ಸಿನಲ್ಲಿ ತೀರ್ಮಾನಿಸಿದಂತೆ ನಡೆಯುವುದು ಕಷ್ಟವಾಗಲಿದೆ. ಬಂಧುಗಳಲ್ಲಿ ನಿಷ್ಠುರ ವರ್ತನೆಗೆ ಆಸ್ಪದ ನೀಡುವುದು ಸರಿಯಲ್ಲ. ಮಗಳ ಶಿಕ್ಷಣ ಮುಂದುವರಿಸುವ ಬಗ್ಗೆ ತೀರ್ಮಾನಿಸಿ.

ಮಿಥುನ: ಕಾನೂನು ವಿದ್ಯಾರ್ಥಿಗಳಿಗೆ ಅಥವಾ ನ್ಯಾಯಾಂಗ ಇಲಾಖೆಯವರಿಗೆ ಗೊಂದಲದ ವಾತಾವರಣ ಎದುರಾಗುವುದು. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು.

ಕರ್ಕಾಟಕ: ಗೆಳೆಯನ ಅನಿರೀಕ್ಷಿತ ಆಗಮನ ಸಮಯವನ್ನು ವ್ಯರ್ಥ ಮಾಡಿಸಿದರೂ ಮನಸ್ಸಿಗೆ ಸಂತೋಷ ಉಂಟಾಗುವುದು. ಮನೆಯವರೊಂದಿಗೆ ಮನರಂಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಸಿಂಹ: ವಿದೇಶದಲ್ಲಿ ಉದ್ಯೋಗದ ಸಂಪಾದನೆಗೆ ಪ್ರಯತ್ನ ಮಾಡಬಹುದು. ಪರಿಣತರ ಸಲಹೆ, ಸೂಚನೆಗಳೊಂದಿಗೆ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ. ಹೆಂಡತಿಯ ಆರೋಗ್ಯದ ಬಗ್ಗೆ ಭೀತಿ ಅಗತ್ಯವಿಲ್ಲ.

ಕನ್ಯಾ: ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳುವುದರಿಂದ ವೈಯಕ್ತಿಕ ಜೀವನದಲ್ಲಿ ವಿಷಾದ, ದುಃಖ ಆವರಿಸುವ ಲಕ್ಷಣಗಳು ಗೋಚರಿಸುತ್ತಿರುವುದನ್ನು ಸರಿಪಡಿಸಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಸಾಧನೆಗೆ ಪೂರಕ ದಿನ.

ತುಲಾ: ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ಕೆಲಸವು ನಿಮ್ಮ ದಾಯಾದಿಗಳಿಂದ ನಡೆಯಬಹುದು. ಸಮಸ್ಯೆಗೆ ಸಿಲುಕಿರುವ ನೀವು ನ್ಯಾಯ ಹೊಂದಲು ಕಷ್ಟ ಪಡಬೇಕಾಗಲಿದೆ. ಮೆಕ್ಯಾನಿಕ್‌ಗಳಿಗೆ ಆದಾಯ ತರುವ ದಿನ.

ವೃಶ್ಚಿಕ: ಸಾಕಷ್ಟು ಸಮಸ್ಯೆಗಳು ಆತ್ಮವಿಶ್ವಾಸಕ್ಕೆ ಅಡ್ಡಿಯನ್ನು ಉಂಟುಮಾಡಲಿದೆ. ಪರಿಸ್ಥಿತಿಯ ಲಾಭ ಪಡೆಯಲು ವಿಫಲರಾಗಬೇಡಿ. ಸಂದರ್ಭಗಳನ್ನು ಬಳಸಿಕೊಳ್ಳುವ ಜಾಣತನವನ್ನು ಅಭ್ಯಸಿಸಿಕೊಳ್ಳಿರಿ.

ಧನು: ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು. ಬೇರೆಯವರ ಸಹಾಯ ಅಪೇಕ್ಷಿಸದೆ ವಿಶ್ವಾಸದಿಂದ ಕಾರ್ಯೋನ್ಮುಖರಾಗಿ. ಜಯ ನಿಮ್ಮ ಪಾಲಿಗೆ ಒದಗುತ್ತದೆ.

ಮಕರ: ಅಭಿವೃದ್ಧಿಯ ಅಥವಾ ಕ್ರೋಢೀಕರಣದ ಬಗ್ಗೆ ಪ್ರಮುಖ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸರಿ ಸಮಯ. ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇಬೇಕಾದ ಪರಿಸ್ಥಿತಿ ತೋರಲಿದೆ. ಮದುವೆ ವಿಷಯ ಪ್ರಸ್ತಾಪವಾಗಲಿದೆ.

ಕುಂಭ: ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಹೊಸ ಯೋಜನೆಗಳನ್ನು ರೂಢಿಸಿಕೊಳ್ಳಬಹುದು. ಮಕ್ಕಳ ಬೆಳವಣಿಗೆ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸಲಿದೆ.

ಮೀನ: ಸಮಸ್ಯೆಗಳಿಗೆ ಕಾರಣವಾಗಿರುವ ಜನ, ಪರಿಸ್ಥಿತಿ ಬಗ್ಗೆ ನಿಮಗೆ ಮಾಹಿತಿ ಇಲ್ಲದಿದ್ದರೆ ತೊಂದರೆ ಉಲ್ಬಣಿಸುವ ಸಾಧ್ಯತೆಗಳಿವೆ. ಶ್ರಮಕ್ಕೆ ಮನೆಯವರ ಸಂಪೂರ್ಣ ಸಹಾಯ ಸಹಕಾರಗಳು ಒದಗಲಿದೆ.

ಪದಬಂಧ 5556

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೀರಸವಾದ ವಿದ್ಯೆ (5)
3.ಆನೆಯ ಮರಿ ಇಲ್ಲಿದೆ (3)
5.ಕುಳ್ಳ ಇಲ್ಲಿದ್ದಾನಲ್ಲಾ! (3)
8.ಜವಾನನ ಸುತ್ತ ನೆರೆದಿರುವ ಮಂದಿ (2)
9.ಎಣ್ಣೆಯನ್ನು ಶುದ್ಧೀಕರಿಸುವ ಕಾರ್ಖಾನೆ (7)
12.ಬೀಜ ಬಿತ್ತಲು ಮಾಡಿರುವ ಮಡಿ (2)
13.ತೆಳುವಾದ ಸೀರೆಯಿಲ್ಲಿ ತಿರುವುಮುರುವಾಗಿದೆ (3)
15.ಮನಸ್ಸಿನ ಅಸ್ವಾಸ್ಥ್ಯತೆ (3)
16.ಕಿವಿಯನ್ನು ಹೀಗೂ ಹೇಳುವರು (5)

ಮೇಲಿಂದ ಕೆಳಕ್ಕೆ
1.ಒಳ್ಳೆಯ ಸುದ್ದಿ (4)
2.ನ್ಯಾಯಾಲಯದ ತೀರ್ಪು (2)
4.ವನದ ಕೊನೆಗೆ ಕಟ್ಟಿರುವ ಮನೆ (3)
6.ಮುಂಗುಸಿ ಇಲ್ಲಿದೆ (3)
7.ಹೃದಯದಿಂದ ದೇಹದ ಇತರೆ ಭಾಗಕ್ಕೆ ರಕ್ತವನ್ನು ಸಾಗಿಸುವ ರಕ್ತನಾಳ (5)
8.ಉದರ ಅಥವಾ ಹೊಟ್ಟೆ (3)
9. ಊಳಿಗಕ್ಕೆ ಇರುವವನು (3)
10.ಈತ ಗ್ರಾಮ ಪ್ರದೇಶದವನು (3)
11.ಕೊನೆಗೆ ಜಯವಿದ್ದರೂ ಇದು ಸೋಲು! (4)
12.ಹಣವನ್ನು ಸಂದಾಯ ಮಾಡುವುದು (3)
14.ವರನಿಗೆ ಕೇಳಿದ ಧ್ವನಿ (2)



5555ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕೊತವಾಲ 3.ಕರ್ನಾಟಕ
5.ವಲ್ಲರಿ 6.ಗಡುಸು
8.ಕೊರಳು 9.ವಿಚಾರ
10.ರುಜಿನ 12.ಮೊಳಕೆ
14.ಹರತಾಳ 15.ರತ್ನಾಕರ

ಮೇಲಿಂದ ಕೆಳಕ್ಕೆ :
1.ಕೊಳಗ 2.ಲವ 3.ಕರಿ
4.ಕರುಳು 7.ಸುಲಿಗೆಗಾರ
8.ಕೊನೆಯುಸಿರು
9.ವಿವಾಹ 11.ನಗರ
12.ಮೊಳ 13.ಕೆರ

ಸುಡೊಕು 5941

				4		8		7
4		8					9	
	9	1		7		6		4
	5		7				6	
				9			5	
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5940 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

‘ಇಂಡಿಯಾ’ ಒಗ್ಗಟ್ಟಾಗಿದೆ: ಖರ್ಗೆ

ಕಲಬುರಗಿ: ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ವಿಚಾರಕ್ಕೆ ಬುಧವಾರ ದೆಹಲಿಯಲ್ಲಿ ವಿವಿಧ ಪಕ್ಷಗಳ ಸಭೆ ಆಯೋಜಿಸಲಾಗಿದೆ. ಯಾವ ಕ್ಷೇತ್ರಕ್ಕೆ ಯಾವ ಅಭ್ಯರ್ಥಿ ಹಾಕಬೇಕು ಎಂಬ ಬಗ್ಗೆ ಚರ್ಚಿಸಲಾಗುವುದು. ಚುನಾವಣೆ ಗೆಲ್ಲಲು ‘ಇಂಡಿಯಾ’ ಒಕ್ಕೂಟ ಒಗ್ಗಟ್ಟಾಗಿ ಹೋಗುವ ನಿರ್ಣಯ ಕೈಗೊಂಡಿದ್ದೇವೆ. ಅದೇ ರೀತಿ ಒಂದಾಗಿ ಕೆಲಸ ನಿರ್ವಹಿಸುತ್ತೇವೆ. ಎಲ್ಲಾ ಮತಕ್ಷೇತ್ರಗಳಿಗೆ ಈಗಾಗಲೇ ವೀಕ್ಷಕರನ್ನು ನೇಮಕ ಮಾಡಿದ್ದೇವೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನಗರದಲ್ಲಿ ಮಂಗಳವಾರ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆಯಲ್ಲಿ ನಿರುದ್ಯೋಗ, ಬೆಲೆ ಏರಿಕೆ, ರೂಪಾಯಿ ಮೌಲ್ಯ ಕುಸಿತದಂತಹ ಸಮಸ್ಯೆಗಳಿಗೆ ಪರಿಹಾರವನ್ನು ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಿದ್ದೇವೆ. ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ರೂಪಿಸಿದ ಆಹಾರ ಭದ್ರತಾ ಕಾಯ್ದೆ, ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಯನ್ನು ನಮ್ಮ ಸರ್ಕಾರ ಬಂದ ಬಳಿಕ ಮಾಡಲಿದ್ದೇವೆ’ ಎಂದರು.

ಶಿವಸೇನಾ ಬಣಗಳ ಅರ್ಜಿ ಕುರಿತ ತೀರ್ಮಾನ ಹೇಳಲಿರುವ ಸ್ಪೀಕರ್ ರಾಹುಲ್ ನಾರ್ವೇಕರ್

ಶಾಸಕರ ಅನರ್ಹತೆ ಆದೇಶ ಇಂದು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಬಣಗಳು ಪರಸ್ಪರರ ವಿರುದ್ಧ ಸಲ್ಲಿಸಿರುವ ಶಾಸಕರ ಅನರ್ಹತೆ ಕುರಿತ ಅರ್ಜಿಗಳಿಗೆ ಸಂಬಂಧಿಸಿದ ಆದೇಶವನ್ನು ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ಬುಧವಾರ ಪ್ರಕಟಿಸುವ ನಿರೀಕ್ಷೆ ಇದೆ.

ನಾರ್ವೇಕರ್ ಅವರಿಗೆ ಆದೇಶ ಪ್ರಕಟಿಸುವುದಕ್ಕೆ ಸುಪ್ರೀಂ ಕೋರ್ಟ್ ಜನವರಿ 10ರ ಗಡುವು ನೀಡಿದೆ. ಆದೇಶವು ತಮಗೆ ವಿರುದ್ಧವಾಗಿ ಬಂದರೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಎರಡೂ ಬಣಗಳು ಸಜ್ಜಾಗಿವೆ. ನಾರ್ವೇಕರ್ ಅವರು 34 ಅರ್ಜಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ್ದಾರೆ. ಎರಡೂ ಬಣಗಳು ಒಟ್ಟು 2.5 ಲಕ್ಷ ಪುಟಗಳಷ್ಟು

> **ನಮಗೆ ಸ್ಪೀಕರ್ ಅವರಿಂದ ನ್ಯಾಯ ಸಿಗುವ ವಿಶ್ವಾಸ ಇದೆ. ನಮ್ಮ ಸರ್ಕಾರವು ನಿನ್ನೆಯೂ ಸ್ಥಿರವಾಗಿ ಇತ್ತು, ನಾಳೆಯೂ ಸ್ಥಿರವಾಗಿ ಇರಲಿದೆ**
> **ದೇವೇಂದ್ರ ಫಡಣವೀಸ್,** ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ

ದಾಖಲೆಗಳನ್ನು ಸಲ್ಲಿಸಿವೆ.

ಆದೇಶ ನೀಡುವ ಮೊದಲು ನಾರ್ವೇಕರ್ ಅವರು ಮುಖ್ಯಮಂತ್ರಿ ಶಿಂದೆ ಅವರನ್ನು ಭೇಟಿ ಮಾಡಿದ್ದು ಎಷ್ಟು ಸರಿ ಎಂದು ಉದ್ಧವ್ ಠಾಕ್ರೆ ಪ್ರಶ್ನಿಸಿದ್ದಾರೆ. ‘ನಾವು ಯಾವ ನ್ಯಾಯ ನಿರೀಕ್ಷಿಸಬಹುದು. ಸ್ಪೀಕರ್ ಅವರು ಮುಖ್ಯಮಂತ್ರಿ ಜೊತೆ ಎರಡು ಭಾರಿ ಸಭೆ ನಡೆಸಿದ್ದಾರೆ. ನಾನೂ ಮುಖ್ಯಮಂತ್ರಿ ಆಗಿದ್ದೆ. ಭೇಟಿಯಾಗಬೇಕು ಎಂದಿದ್ದರೆ, ಸ್ಪೀಕರ್ ಬಳಿ ಮುಖ್ಯಮಂತ್ರಿ ಹೋಗಬೇಕೇ ವಿನಾ ಮುಖ್ಯಮಂತ್ರಿ ಇದ್ದಲ್ಲಿ ಸ್ಪೀಕರ್ ಹೋಗಬಾರದು. ಆದರೆ ಇಲ್ಲಿ ಸ್ಪೀಕರ್ ಅವರೇ ಮುಖ್ಯಮಂತ್ರಿ ಇದ್ದಲ್ಲಿಗೆ ತೆರಳಿ ಸಭೆ ನಡೆಸುತ್ತಾರೆ’ ಎಂದು ಠಾಕ್ರೆ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

ನಾರ್ವೇಕರ್ ಅವರು ಶಿಂದೆ ಅವರನ್ನು ಭೇಟಿ ಮಾಡುವುದು ‘ನ್ಯಾಯಾಧೀಶರೊಬ್ಬರು ಕ್ರಿಮಿನಲ್ ಅಪರಾಧ ಎಸಗಿದವನನ್ನು ಭೇಟಿಯಾಗುವುದಕ್ಕೆ ಸಮ’ ಎಂದು ಠಾಕ್ರೆ ಹೇಳಿದರು.

‘ಸ್ಪೀಕರ್ ಅವರು ನ್ಯಾಯಮಂಡಳಿ ಮುಖ್ಯಸ್ಥ ಇದ್ದಂತೆ... ನ್ಯಾಯಾಧೀಶನ ಸ್ಥಾನದಲ್ಲಿ ಇರುವವರು ಆದೇಶಕ್ಕೆ ಮೊದಲು ಅರ್ಜಿದಾರರೊಬ್ಬರನ್ನು ಭೇಟಿ ಮಾಡುವುದು ಎಷ್ಟು ಸರಿ... ಸಂವಿಧಾನದ ಹತ್ತನೆಯ ಪರಿಚ್ಛೇದದ ಅಡಿಯಲ್ಲಿ ನ್ಯಾಯ ನಿರ್ಣಯದ ಕೆಲಸ ಮಾಡುವ ಸ್ಪೀಕರ್ ನಿಷ್ಪಕ್ಷಪಾತದಿಂದ, ನ್ಯಾಯಸಮ್ಮತವಾಗಿ ನಡೆದುಕೊಳ್ಳಬೇಕು ಎಂದು’ ಎಂದು ಶಿವಸೇನಾ (ಯುಬಿಟಿ) ಶಾಸಕ ಅನಿಲ್ ಪರಬ್ ಹೇಳಿದರು.

ಶಿಂದೆ ಮತ್ತು ಇತರ ಶಾಸಕರ ಬಂಡಾಯದ ನಂತರ ಮಹಾರಾಷ್ಟ್ರದ ಮಹಾ ವಿಕಾಸ ಅಘಾಡಿ ಮೈತ್ರಿಕೂಟ ಸರ್ಕಾರವು ಉರುಳಿತ್ತು. ನಂತರ ಬಿಜೆಪಿ ಬೆಂಬಲದೊಂದಿಗೆ ಶಿಂದೆ ನೇತೃತ್ವದಲ್ಲಿ ಸರ್ಕಾರ ರಚನೆ ಆಯಿತು.

ಸುಪ್ರೀಂ ಕೋರ್ಟ್‌ಗೆ ಅರ್ಜಿ

ಮುಂಬೈ (ಪಿಟಿಐ): ಅರ್ಹತೆ ಕುರಿತ ಆದೇಶ ನೀಡುವುದಕ್ಕೂ ಮೊದಲು ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಸ್ಪೀಕರ್ ರಾಹುಲ್ ನಾರ್ವೇಕರ್ ಭೇಟಿಗೆ ಆಕ್ಷೇಪ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ ಸೋಮವಾರ ಅರ್ಜಿ ಸಲ್ಲಿಸಲಾಗಿದೆ ಎಂದು ಉದ್ಧವ್ ಠಾಕ್ರೆ ತಿಳಿಸಿದರು. ನಾರ್ವೇಕರ್ ಅವರು ಶಿಂದೆ ಅವರನ್ನು ಭಾನುವಾರ ಭೇಟಿ ಮಾಡಿದ್ದರು.

ಸ್ಪೀಕರ್ ಅವರ ನಡೆಯು ವಿಶ್ವಾಸ ಮೂಡಿಸುವಂತೆ ಇರಬೇಕು, ಅವರ ಮೇಲೆ ಇರಿಸಿರುವ ನಂಬಿಕೆಗೆ ಚ್ಯುತಿ ತರದಂತೆಯೂ ಇರಬೇಕು ಎಂದು ಶಿವಸೇನಾ (ಯುಬಿಟಿ) ನಾಯಕ ಸುನೀಲ್ ಪ್ರಭು ಸಲ್ಲಿಸಿರುವ ಅರ್ಜಿಯಲ್ಲಿ ಹೇಳಲಾಗಿದೆ.

‘ಆದರೆ, ಸ್ಪೀಕರ್ ಅವರ ಈಗಿನ ನಡೆಯು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯು ಎಷ್ಟರಮಟ್ಟಿಗೆ ನ್ಯಾಯಸಮ್ಮತವಾಗಿತ್ತು, ಎಷ್ಟರಮಟ್ಟಿಗೆ ನಿಷ್ಪಕ್ಷಪಾತವಾಗಿ ಇತ್ತು ಎಂಬ ಪ್ರಶ್ನೆಯನ್ನು ಮೂಡಿಸುತ್ತಿದೆ’ ಎಂದು ಅದರಲ್ಲಿ ಹೇಳಲಾಗಿದೆ.

ಸುದ್ದಿ 2 ನಿಮಿಷ

‘ಆಯುರ್ವೇದ, ಅಲೋಪತಿ ವಿದ್ಯಾರ್ಥಿಗಳಿಗೆ ಸಮಾನ ಭತ್ಯೆ ಇಲ್ಲ’

ನವದೆಹಲಿ: ಸ್ನಾತಕೋತ್ತರ ಅಲೋಪತಿ ವಿದ್ಯಾರ್ಥಿಗಳಿಗೆ ನೀಡುವಷ್ಟೇ ಮೊತ್ತದ ತರಬೇತಿ ಭತ್ಯೆಯನ್ನು (ಸ್ಟೈಪೆಂಡ್) ಸ್ನಾತಕೋತ್ತರ ಆಯುರ್ವೇದ ವಿದ್ಯಾರ್ಥಿಗಳಿಗೆ ನೀಡಲು ಸಾಧ್ಯವಿಲ್ಲ, ಎರಡೂ ಕೋರ್ಸ್‌ಗಳ ವಿದ್ಯಾರ್ಥಿಗಳು ಮಾಡುವ ಕೆಲಸ ಒಂದೇ ರೀತಿಯದ್ದಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ನ್ಯಾಯಪೀಠವು ಮಧ್ಯಪ್ರದೇಶ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿದೆ. ಸ್ನಾತಕೋತ್ತರ ಆಯುರ್ವೇದ ಹಾಗೂ ಸ್ನಾತಕೋತ್ತರ ಅಲೋಪತಿ ವಿದ್ಯಾರ್ಥಿಗಳು ಮಾಡುವ ಕೆಲಸವು ಒಂದೇ ಸ್ವರೂಪದ್ದಲ್ಲ ಎಂದು ಗುಜರಾತ್ ಸರ್ಕಾರ ಹಾಗೂ ಡಾ.ಪಿ.ಎ. ಭಟ್ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ ಎಂದು ಮಧ್ಯಪ್ರದೇಶ ಸರ್ಕಾರದ ಪರವಾಗಿ ವಾದಿಸಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸೌರಭ್ ಮಿಶ್ರಾ ತಿಳಿಸಿದರು.

‘ವಾಸ್ತವ ಏನೆಂದರೆ, ತರಬೇತಿ ಭತ್ಯೆಯ ಮೊತ್ತವನ್ನು ಪರಿಷ್ಕರಿಸಲಾಗಿದೆ. ಈಗ ಈ ಎರಡೂ ವಿಭಾಗಗಳ ವಿದ್ಯಾರ್ಥಿಗಳಿಗೆ ನೀಡುವ ಭತ್ಯೆಯಲ್ಲಿ ದೊಡ್ಡ ವ್ಯತ್ಯಾಸ ಇಲ್ಲ’ ಎಂದು ಅವರು ವಿವರಿಸಿದರು. ಸ್ನಾತಕೋತ್ತರ ಅಲೋಪತಿ ವಿದ್ಯಾರ್ಥಿಗಳು ನಿಭಾಯಿಸುವ ಕೆಲಸಗಳನ್ನು ತಾವು ಮಾಡುತ್ತಿದ್ದರೂ, ಭತ್ಯೆ ವಿಚಾರದಲ್ಲಿ ತಮಗೆ ತಾರತಮ್ಯ ಎಸಗಲಾಗುತ್ತಿದೆ ಎಂದು ಸ್ನಾತಕೋತ್ತರ ಆಯುರ್ವೇದ ವಿದ್ಯಾರ್ಥಿಗಳು ವಾದಿಸಿದ್ದರು.

2023 ಅತಿ ಹೆಚ್ಚಿನ ತಾಪಮಾನದ ವರ್ಷ

ನವದೆಹಲಿ: 2023ನೆಯ ಇಸವಿಯು ವಿಶ್ವ ಕಂಡ ಅತ್ಯಂತ ಹೆಚ್ಚಿನ ತಾಪಮಾನದ ವರ್ಷ ಎಂಬುದನ್ನು ಯುರೋಪಿನ ವಿಜ್ಞಾನಿಗಳು ಖಚಿತಪಡಿಸಿದ್ದಾರೆ.

2023ನೆಯ ಇಸವಿಯಲ್ಲಿ ವಿಶ್ವದ ಸರಾಸರಿ ತಾಪಮಾನವು 14.98 ಡಿಗ್ರಿ ಸೆಲ್ಸಿಯಸ್ ಆಗಿತ್ತು. ಇದು 1991ರಿಂದ 2020ರವರೆಗಿನ ಸರಾಸರಿ ತಾಪಮಾನಕ್ಕಿಂತ 0.6 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು. ಹಾಗೂ ಈ ಹಿಂದಿನ ಅತ್ಯಂತ ಹೆಚ್ಚಿನ ತಾಪಮಾನದ ವರ್ಷ ಎಂದು ಪರಿಗಣಿತವಾಗಿದ್ದ 2016ನೆಯ ಇಸವಿಯ ಸರಾಸರಿ ತಾಪಮಾನಕ್ಕಿಂತ 0.17 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು.

ಖೇದದ ಸಂಗತಿಯೆಂದರೆ, 2023ರಲ್ಲಿ ಪ್ರತಿದಿನದ ಸರಾಸರಿ ತಾಪಮಾನವು ಕೈಗಾರಿಕಾ ಕ್ರಾಂತಿಗೂ ಮೊದಲಿನ ಕಾಲಘಟ್ಟದ ತಾಪಮಾನಕ್ಕಿಂತ 1 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿತ್ತು. ನವೆಂಬರ್‌ನಲ್ಲಿ ಎರಡು ದಿನ ತಾಪಮಾನವು ಎರಡು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿತ್ತು.

‘2023ರಲ್ಲಿ ತಾಪಮಾನವು ಕಳೆದ ಒಂದು ಲಕ್ಷ ವರ್ಷಗಳ ಯಾವುದೇ ಕಾಲಘಟ್ಟದ ತಾಪಮಾನಕ್ಕಿಂತ ಹೆಚ್ಚಾಗಿದ್ದ ಸಾಧ್ಯತೆ ಇದೆ’ ಎಂದು ಐರೋಪ್ಯ ಮಧ್ಯಮ ಅವಧಿ ಹವಾಮಾನ ಮುನ್ಸೂಚನೆ ಕೇಂದ್ರದ ಕೋಪರ್ನಿಕಸ್ ಹವಾಮಾನ ಬದಲಾವಣೆ ಸೇವೆ ವಿಭಾಗದ ಉಪ ಮುಖ್ಯಸ್ಥೆ ಸಮಂತಾ ಬರ್ಗೆಸ್ ಹೇಳಿದ್ದಾರೆ.

2023ರಲ್ಲಿ ಯುರೋಪ್, ಅಮೆರಿಕ ಮತ್ತು ಚೀನಾದಲ್ಲಿ ಹಿಂದೆಂದೂ ಕಾಣದಂತಹ ಬಿಸಿಗಾಳಿ ಸೃಷ್ಟಿಯಾಗಿತ್ತು, ಆಸ್ಟ್ರೇಲಿಯಾ ಹಾಗೂ ದಕ್ಷಿಣ ಅಮೆರಿಕದಲ್ಲಿ ಚಳಿಗಾಲದಲ್ಲಿ ತಾಪಮಾನವು ದಾಖಲೆಯ ಮಟ್ಟಕ್ಕೆ ಹೆಚ್ಚಾಗಿತ್ತು.

ಸೀಟು ಹಂಚಿಕೆ: ಮಿತ್ರ ಪಕ್ಷಗಳ ಜತೆ ಕಾಂಗ್ರೆಸ್ ಮಾತುಕತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷ, ಮಂಗಳವಾರ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ಜತೆ ಮಾತುಕತೆ ನಡೆಸಿತು.

ಕಾಂಗ್ರೆಸ್‌ನ ‘ರಾಷ್ಟ್ರೀಯ ಮೈತ್ರಿ ಸಮಿತಿ’ಯು ಮಹಾರಾಷ್ಟ್ರದಲ್ಲಿ ಎನ್‌ಸಿಪಿ ಮತ್ತು ಶಿವಸೇನಾ (ಯುಬಿಟಿ) ಜತೆಯೂ, ಉತ್ತರ ಪ್ರದೇಶದಲ್ಲಿ ಎಸ್‌ಪಿ ಜತೆಯೂ ಮಾತುಕತೆ ನಡೆಸಿದೆ.

ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ್ ಬಹುಜನ ಆಘಾಡಿ ಪಕ್ಷವನ್ನು (ವಿಬಿಎ) ಮಹಾರಾಷ್ಟ್ರ ವಿಕಾಸ ಆಘಾಡಿ (ಎಂವಿಎ) ಹಾಗೂ ‘ಇಂಡಿಯಾ’ ಮೈತ್ರಿಕೂಟದ ಜತೆ ಸೇರಿಸಲು ಕಾಂಗ್ರೆಸ್ ಒಪ್ಪಿಗೆ ಸೂಚಿಸಿದೆ ಎಂದು ಮೂಲಗಳು ಹೇಳಿವೆ. ವಿಬಿಎ ಪಕ್ಷವನ್ನು ಮೈತ್ರಿಕೂಟದಲ್ಲಿ ಸೇರಿಸಿಕೊಳ್ಳುವಂತೆ ಎನ್‌ಸಿಪಿ ಮತ್ತು ಶಿವಸೇನಾ ಒತ್ತಾಯ ಮಾಡುತ್ತಲೇ ಬಂದಿದ್ದವು.

‘ಪ್ರತಿಯೊಂದು ಲೋಕಸಭಾ ಕ್ಷೇತ್ರದ ಬಗ್ಗೆಯೂ ಚರ್ಚೆ ನಡೆಯಿತು’ ಎಂದು ಸುಮಾರು ಎರಡೂವರೆ ಗಂಟೆಯ ಸಭೆಯ ಬಳಿಕ ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವತ್ ಸುದ್ದಿಗಾರರಿಗೆ ತಿಳಿಸಿದರು. ಆದರೆ ಯಾವ ಪಕ್ಷ ಎಷ್ಟು ಸ್ಥಾನಗಳಿಗೆ ಬೇಡಿಕೆಯಿಟ್ಟಿವೆ ಎಂಬ ಮಾಹಿತಿಯನ್ನು ಅವರು ಬಹಿರಂಗಪಡಿಸಲಿಲ್ಲ.

> **ನಾವು ಲೋಕಸಭಾ ಚುನಾವಣೆಯನ್ನು ಒಟ್ಟಾಗಿ ಎದುರಿಸುತ್ತೇವೆ. ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಯಾವುದೇ ಗೊಂದಲ ಇಲ್ಲ**
> **ಸಂಜಯ್ ರಾವುತ್** ಶಿವಸೇನಾ (ಯುಬಿಟಿ) ಮುಖಂಡ

ಮಹಾರಾಷ್ಟ್ರದಲ್ಲಿ ಒಟ್ಟು 48 ಲೋಕಸಭಾ ಕ್ಷೇತ್ರಗಳಿದ್ದು, ಕಾಂಗ್ರೆಸ್ 26 ಕಡೆಗಳಲ್ಲಿ ಸ್ಪರ್ಧಿಸಲು ಬಯಸಿದೆ. ಶಿವಸೇನಾ (ಯುಬಿಟಿ) 23 ಕ್ಷೇತ್ರಗಳಿಗೆ ಬೇಡಿಕೆಯಿಟ್ಟಿದೆ ಎನ್ನಲಾಗಿದೆ. ಎನ್‌ಸಿಪಿ ತನ್ನ ಬೇಡಿಕೆ ಎಷ್ಟು ಎಂಬುದನ್ನು ಇದುವರೆಗೆ ತಿಳಿಸಿಲ್ಲ.

ಉತ್ತರ ಪ್ರದೇಶದಲ್ಲಿ ಸೀಟು ಹಂಚಿಕೆಗೆ ಸಂಬಂಧಿಸಿದ ಮಾತುಕತೆ ಸುಮಾರು ಒಂದು ಗಂಟೆ ಕಾಲ ನಡೆಯಿತು ಎಂದು ಮೂಲಗಳು ಹೇಳಿವೆ. ಕಾಂಗ್ರೆಸ್‌ನ ಮುಕುಲ್ ವಾಸ್ನಿಕ್, ಅಶೋಕ್ ಗೆಹಲೋತ್, ಮೋಹನ್ ಪ್ರಕಾಶ್ ಹಾಗೂ ಎಸ್‌ಪಿಯ ರಾಮಗೋಪಾಲ್ ಯಾದವ್ ಹಾಗೂ ಜಾವೆದ್ ಅಲಿ ಖಾನ್ ಪಾಲ್ಗೊಂಡಿದ್ದರು. ಎರಡನೇ ಸುತ್ತಿನ ಸಭೆಯನ್ನು ಶುಕ್ರವಾರ ನಡೆಸಲು ತೀರ್ಮಾನಿಸಲಾಯಿತು.

ಚೀನಾಕ್ಕೆ ಮನವಿ ಮಾಡಿದ ಅಧ್ಯಕ್ಷ ಮೊಹಮ್ಮದ್ ಮುಯಿಜು

ಮಾಲ್ದೀವ್ಸ್‌ಗೆ ಹೆಚ್ಚು ಪ್ರವಾಸಿಗರ ಕಳುಹಿಸಿ

ಬೀಜಿಂಗ್ (ಪಿಟಿಐ): ಭಾರತದ ಪ್ರವಾಸಿಗರನ್ನು ಕಳೆದುಕೊಳ್ಳುವ ಆತಂಕದಲ್ಲಿರುವ ಮಾಲ್ದೀವ್ಸ್, ಚೀನಾ ಪ್ರವಾಸಿಗರನ್ನು ಸೆಳೆಯಲು ಮುಂದಾಗಿದೆ.

ತಮ್ಮ ದೇಶಕ್ಕೆ ಹೆಚ್ಚಿನ ಪ್ರವಾಸಿಗರನ್ನು ಕಳುಹಿಸುವಂತೆ ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಮಂಗಳವಾರ ಚೀನಾವನ್ನು ಕೋರಿದ್ದಾರೆ.

‘ಚೀನಾವು ನಮ್ಮ ಮಿತ್ರರಾಷ್ಟ್ರ ಮತ್ತು ಅಭಿವೃದ್ಧಿಯ ಪಾಲುದಾರ ಆಗಿದೆ. ಕೋವಿಡ್‌ಗೆ ಮುಂಚೆ ಮಾಲ್ದೀವ್ಸ್‌ಗೆ ಭೇಟಿ ನೀಡುವ ಪ್ರವಾಸಿಗರಲ್ಲಿ ಚೀನಾದವರು ಮೊದಲ ಸ್ಥಾನದಲ್ಲಿದ್ದರು. ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಿ ಅಗ್ರಸ್ಥಾನವನ್ನು ಮರಳಿ ಪಡೆಯಬೇಕು’ ಎಂದು ಫುಜಿಯಾನ್ ಪ್ರಾಂತ್ಯದಲ್ಲಿ ಮಂಗಳವಾರ ಮಾಲ್ದೀವ್ಸ್ ವಾಣಿಜ್ಯ ವೇದಿಕೆಯ ಕಾರ್ಯಕ್ರಮದಲ್ಲಿ ಹೇಳಿದರು.

ಖಂಡನೆ (ಮಾಲೆ ವರದಿ): ಮಾಲ್ದೀವ್ಸ್‌ನ ಉಪಸಚಿವರುಗಳು ಭಾರತದ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಅವಮಾನಕರ ಮಾತು ಆಡಿರುವುದನ್ನು ಅಲ್ಲಿನ ಪ್ರವಾಸೋದ್ಯಮ ಒಕ್ಕೂಟ ‘ಮಾಲ್ದೀವ್ಸ್ ಅಸೋಸಿಯೇಷನ್ ಆಫ್ ಟೂರಿಸಂ ಇಂಡಸ್ಟ್ರಿ’ (ಎಂಎಐಟಿ) ಖಂಡಿಸಿದೆ.

ವಿವಾದವು ಉಭಯ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾದ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಎಂಎಐಟಿ, ಪ್ರವಾಸೋದ್ಯಮಕ್ಕೆ ಹಿನ್ನಡೆ ಆಗದಂತೆ ‘ಹಾನಿ ತಡೆಯುವ’ ಪ್ರಯತ್ನ ನಡೆಸಿದೆ.

ಮೂವರು ಉಪಸಚಿವರು ಆಡಿದ ಮಾತುಗಳಿಗೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಮಾಲ್ದೀವ್ಸ್‌ಗೆ ಪ್ರವಾಸ ಕೈಗೊಳ್ಳುವುದನ್ನು ನಿಲ್ಲಿಸಬೇಕು ಎಂಬ ಅಭಿಯಾನ ಆರಂಭಿಸಲಾಗಿತ್ತು. ಮಾಲ್ದೀವ್ಸ್ ಬದಲು ಬೇರೆ ಪ್ರವಾಸಿ ತಾಣಗಳ ಕಡೆಗೆ ಗಮನ ಹರಿಸಬೇಕು ಎಂದು ಹಲವು ಸೆಲೆಬ್ರಿಟಿಗಳು ಕರೆ ನೀಡಿದ್ದರು.

‘ಮಾಲ್ದೀವ್ಸ್‌ನ ಕೆಲವು ಉಪಸಚಿವರುಗಳು ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅವಮಾನಕರ ಹೇಳಿಕೆಗಳನ್ನು ಪೋಸ್ಟ್ ಮಾಡಿರುವುದನ್ನು ಎಂಎಐಟಿ ಬಲವಾಗಿ ಖಂಡಿಸುತ್ತದೆ’ ಎಂದು ಸಂಸ್ಥೆಯು ಸೋಮವಾರ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

‘ಉಭಯ ದೇಶಗಳ ನಡುವಣ ನಿಕಟ ಸಂಬಂಧವು ಮುಂಬರುವ ತಲೆಮಾರುಗಳಿಗೂ ಮುಂದುವರಿಯಲಿದೆ ಎಂದು ಎಂಎಐಟಿ ಆಶಿಸುತ್ತದೆ. ನಮ್ಮ ಉತ್ತಮ ಸಂಬಂಧದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಎಲ್ಲ ರೀತಿಯ ಹೇಳಿಕೆಗಳಿಂದ ನಾವು ದೂರವೇ ಉಳಿಯುತ್ತೇವೆ’ ಎಂದಿದೆ.

ಮಾಲ್ದೀವ್ಸ್ ಟೂರ್ ಪ್ಯಾಕೇಜ್‌ಗಳನ್ನು ನಿಲ್ಲಿಸದಂತೆ ಮಾಲ್ದೀವ್ಸ್ ಅಸೋಸಿಯೇಷನ್ ಆಫ್ ಟ್ರಾವೆಲ್ ಅಂಡ್ ಟೂರ್ ಆಪರೇಟರ್ಸ್ (ಎಂಎಟಿಎಟಿಒ) ಸಂಸ್ಥೆಯು ಭಾರತದ ಟ್ರಾವೆಲ್ ಮತ್ತು ಟೂರ್ ಏಜೆನ್ಸಿಗಳನ್ನು ಕೇಳಿಕೊಂಡಿದೆ.

ಭಾರತದ ಪ್ರವಾಸಿಗರು ನಂ.1

ಮಾಲ್ದೀವ್ಸ್‌ಗೆ ಭೇಟಿ ನೀಡುವ ವಿದೇಶಿಯರಲ್ಲಿ ಅತಿಹೆಚ್ಚು ಪ್ರವಾಸಿಗರು ಭಾರತದವರೇ ಆಗಿದ್ದಾರೆ. ಮಾಲ್ದೀವ್ಸ್ ಪ್ರವಾಸೋದ್ಯಮ ಇಲಾಖೆಯ ಮಾಹಿತಿ ಪ್ರಕಾರ 2023 ರಲ್ಲಿ ಈ ದ್ವೀಪರಾಷ್ಟ್ರಕ್ಕೆ 17 ಲಕ್ಷಕ್ಕೂ ಅಧಿಕ ವಿದೇಶಿ ಪ್ರವಾಸಿಗರು ಭೇಟಿ ಕೊಟ್ಟಿದ್ದಾರೆ. ಅದರಲ್ಲಿ 2,09,198 ಪ್ರವಾಸಿಗರು ಭಾರತದವರು. ಬಳಿಕದ ಸ್ಥಾನಗಳಲ್ಲಿ ರಷ್ಯಾ (2,09,146) ಮತ್ತು ಚೀನಾದ (1.87 ಲಕ್ಷ) ಪ್ರವಾಸಿಗರು ಇದ್ದಾರೆ.

2021 ಮತ್ತು 2022 ರಲ್ಲಿ ಕ್ರಮವಾಗಿ 2.11 ಲಕ್ಷ ಹಾಗೂ 2.40 ಲಕ್ಷಕ್ಕೂ ಅಧಿಕ ಭಾರತೀಯ ಪ್ರವಾಸಿಗರು ಮಾಲ್ದೀವ್ಸ್‌ಗೆ ಭೇಟಿ ನೀಡಿದ್ದಾರೆ. ಆದರೆ ಕೋವಿಡ್‌ಗೆ ಮುನ್ನ ಚೀನಾ ಪ್ರವಾಸಿಗರು (2.80 ಲಕ್ಷ) ಅಗ್ರಸ್ಥಾನದಲ್ಲಿದ್ದರು.

2 ಸಾವಿರ ಪ್ರವಾಸಿಗರ ಆಗಮನ

ಮಾಲೆ: ಮಾಲ್ದೀವ್ಸ್ ಪ್ರವಾಸ ಬಹಿಷ್ಕರಿಸಬೇಕು ಎಂಬ ಕೂಗು ಎದ್ದಿರುವ ನಡುವೆಯೇ 2,000 ಪ್ರವಾಸಿಗರಿದ್ದ ಕ್ರೂಸ್ ಹಡಗು ಕೊಚ್ಚಿಯಿಂದ ಸೋಮವಾರ ಇಲ್ಲಿಗೆ ಬಂದಿದೆ. ಇದು ಈ ವರ್ಷ ಮಾಲ್ದೀವ್ಸ್‌ಗೆ ಬಂದ ಮೊದಲ ಕ್ರೂಸ್ ಹಡಗು ಎಂದು ಸರ್ಕಾರಿ ಸ್ವಾಮ್ಯದ ಪಿಎಸ್‌ಎಂ ನ್ಯೂಸ್ ವರದಿ ಮಾಡಿದೆ.

ನೀಟ್: ಜು. 7ಕ್ಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯ (ನೀಟ್–ಪಿ.ಜಿ) ದಿನಾಂಕವನ್ನು ಜುಲೈ 7ಕ್ಕೆ ಮರುನಿಗದಿಪಡಿಸಲಾಗಿದೆ ಎಂದು ರಾಷ್ಟ್ರೀಯ ವೈದ್ಯಕೀಯ ವಿಜ್ಞಾನ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್) ಹೇಳಿದೆ. ಆಗಸ್ಟ್ 15 ಕಟ್ ಆಫ್ ದಿನಾಂಕವಾಗಿದೆ ಎಂದೂ ತಿಳಿಸಿದೆ.

ರಾಬ್ಡಿದೇವಿ ವಿರುದ್ಧ ಆರೋಪ ಪಟ್ಟಿ

ನವದೆಹಲಿ (ಪಿಟಿಐ): ರೈಲ್ವೆ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ‘ನೌಕರಿಗಾಗಿ ಭೂಮಿ’ ಹಗರಣದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ, ಅವರ ಪುತ್ರಿಯಾದ ಸಂಸದೆ ಮಿಸಾ ಭಾರ್ತಿ ವಿರುದ್ಧ ಜಾರಿ ನಿರ್ದೇಶನಾಲಯವು ಮಂಗಳವಾರ ಮೊದಲ ಆರೋಪಪಟ್ಟಿ ಪಟ್ಟಿ ಸಲ್ಲಿಸಿದೆ.

ರಾಮರಥ ಗುಜರಾತ್‌ನ ವಡ್‌ನಗರದಿಂದ ಉತ್ತರ ಪ್ರದೇಶದ ಆಯೋಧ್ಯೆಗೆ ಭಕ್ತರು ಕೈಗೊಂಡ ಪಾದಯಾತ್ರೆಯು ಮಂಗಳವಾರ ಲಖನೌ ತಲುಪಿತು —ಪಿಟಿಐ ಚಿತ್ರ

ಹೃದಯದಿಂದ ಹಾಡುತ್ತಿದ್ದ ಉಸ್ತಾದ್

• ಪಂ.ರವೀಂದ್ರ ಯಾವಗಲ್

ನುಡಿ ನಮನ



ವಿಶಿಷ್ಟ, ವಿಭಿನ್ನ ಗಾಯನ ಶಕ್ತಿಯ ಮೂಲಕ ವಿಶ್ವದ ಮನಗೆದ್ದಿದ್ದ ಉಸ್ತಾದ್ ರಾಶಿದ್ ಖಾನ್ ಅವರು 25–30ನೇ ವಯಸ್ಸಿಗೆಲ್ಲಾ ಅಸಾಧಾರಣ ಸಾಧನೆ ಮೆರೆದಿದ್ದರು. ರಾಮಪುರ–ಸಹಸ್ವಾನ್ ಘರಾಣೆಯನ್ನು ಬಲು ಎತ್ತರಕ್ಕೆ ಕೊಂಡೊಯ್ದಿದ್ದ ಅವರು ತಮ್ಮ ಮಧುರ ಧ್ವನಿಯಿಂದ ಕೋಟ್ಯಂತರ ಜನರ ಹೃದಯ ಗೆದ್ದಿದ್ದರು. ತಲೆಮಾರುಗಳ ಯುವಜನರಿಗೆ ಸ್ಫೂರ್ತಿಯಾಗಿದ್ದ ಅವರು ವೇದಿಕೆ ಹತ್ತಿದರೆಂದರೆ ಆ ಕಣ್ಣುಗಳ ಹೊಳಪು ರಸಿಕರ ಎದೆಯಲ್ಲಿ ಬೆಳಕು ಸೃಷ್ಟಿಸುತ್ತಿತ್ತು.

ಶಾಂತ ಸಾಗರದಂತಹ ಆಲಾಪ್, ಅತಿ ವೇಗದ ತಾನ್, ತುಮರಿಯ ಸೊಗಸು, ಮನಸೂರೆಗೊಳ್ಳುವ ಘಜಲ್‌ಗಳ ರಸಾನುಭವ ಸೃಷ್ಟಿಸುತ್ತಿದ್ದರು. ಗಾಯನದೊಳಗೆ ಕಿರಾಣಾ ಶೈಲಿ ಸೇರಿದಂತೆ ಹಲವು ಘರಾಣೆಗಳು ದರ್ಶನವಾಗುತ್ತಿದ್ದವು. ಬಹಳ ಸಣ್ಣ ವಯಸ್ಸಿನಲ್ಲೇ ಭೀಮಸೇನ ಜೋಶಿ ಅವರಿಂದ ‘ಮುಂದಿನ ತಲೆಮಾರಿನ ಭಾರತೀಯ ಸಂಗೀತದ ಭರವಸೆ’ ಎನಿಸಿಕೊಂಡಿದ್ದ ರಾಶಿದ್ ಖಾನ್ ಅದ್ಭುತ ಪ್ರತಿಭೆಯಾಗಿದ್ದರು.

ಉತ್ತರ ಪ್ರದೇಶದ ಸಹಸ್ವಾನ್ ಎಂಬ ಹಳ್ಳಿಯಲ್ಲಿ ತಾತ ಹಿನಾಯತ್ ಹುಸೇನ್ ಖಾನ್ ಹುಟ್ಟುಹಾಕಿದ ಘರಾಣೆಯ ಅಡಿಪಾಯದ ಮೇಲೆ ರಾಶಿದ್ ಖಾನ್ ದೊಡ್ಡ ಗಾಯನ ಸೌಧವನ್ನೇ ನಿರ್ಮಾಣ ಮಾಡಿದರು. ಅವರ ಒಂದೇ ಒಂದು ಹಾಡು ಕೇಳಿದರೂ ಅದು ಬಹಳ ವರ್ಷಗಳ ಕಾಲ ನೆನಪಿನಲ್ಲಿ ಉಳಿಯುತ್ತಿತ್ತು, ಏಕೆಂದರೆ ಅವರು ಹೃದಯದಿಂದ ಹಾಡುತ್ತಿದ್ದರು. ರಾಶಿದ್ ಖಾನ್ ಹೆಚ್ಚೆಚ್ಚು ಕಛೇರಿ ಮಾಡುವ ಮೊದಲೇ ಅವರು ಹಾಡಿದ ಕೆಸೆಟ್‌ಗಳು ದೇಶದಾದ್ಯಂತ ಪ್ರಸಿದ್ಧಿ ಪಡೆದಿದ್ದವು.

ಅತೀ ವೇಗವಾಗಿ ಸಾಧನೆ ಶಿಖರವೇರಿದರು, ಸಿನಿಮಾಗಳಲ್ಲೂ ಹಾಡಿ ಸೈ ಎನಿಸಿಕೊಂಡರು. ಅವರ ಗಾಯನ ಕೇಳಿಯೇ ಸಾಕಷ್ಟು ಯುವಜನರು ಸಂಗೀತ ಕ್ಷೇತ್ರವನ್ನು ಬದುಕಾಗಿಸಿಕೊಂಡರು ಎಂದರೂ ತಪ್ಪಲ್ಲ.

ತಾಯಿಯ ತಂದೆ ಉ.ನಿಸಾರ್ ಹುಸೇನ್ ಖಾನ್ ಅವರ ಬಳಿ ಸಂಗೀತ ಕಲಿಕೆ ಆರಂಭಿಸಿದ್ದ ಅವರು ಕೋಲ್ಕತ್ತಾದ ಸಂಗೀತ ಸಂಶೋಧನಾ ಅಕಾಡೆಮಿಯಲ್ಲಿ ಕಲಿಕೆ ಮುಂದುವರಿಸಿದರು. ನಂತರ ಅಲ್ಲಿಯೇ ಗುರು ಸ್ಥಾನಕ್ಕೇರಿದರು. ಹೊರಗೆ ಹಾಡಲು ಅಕಾಡೆಮಿಯವರು ಅವಕಾಶ ನೀಡದಿದ್ದಾಗ ಭೀಮಸೇನ ಜೋಶಿ ಅವರು ಅಕಾಡೆಮಿಗೆ ಕರೆ ಮಾಡಿ ಪುಣೆಯ ಸವಾಯಿ ಗಂಧರ್ವ ಉತ್ಸವಕ್ಕೆ ಕರೆಸುತ್ತಿದ್ದರು. ಹಿಂದೊಮ್ಮೆ ನಡೆದ ಜೋಶಿ– ರಾಶಿದ್ ಒಂದು ಜುಗಲ್‌ಬಂದಿ ಈಗಲೂ ಜನರು ಹೃದಯಲ್ಲುಳಿದಿದೆ.

ಮೊದಲು ಅವರು ಅಕಾಡೆಮಿಯಲ್ಲಿ ನಡೆಯುತ್ತಿದ್ದ ಕಛೇರಿಗಳಲ್ಲಿ ತಂಬೂರ ನುಡಿಸುತ್ತಿದ್ದಂತೆ. ಈ ಬಗ್ಗೆ ಸಾಕಷ್ಟು ಕುತೂಹಲಗಳಿವೆ, ‘ತಂಬೂರಿ ಹಿಡಿದು ಅಮಾಯಕನ ರೀತಿಯಲ್ಲಿ ಹಿಂದೆ ಕುಳಿತಿರುವ ಆ ಹುಡುಗನನ್ನು ಮುಂದೆ ಕೂರಿಸಿದರೆ ಅದ್ಭುತವನ್ನೇ ಸೃಷ್ಟಿಸುತ್ತಾನೆ’ ಎಂದು ಹಲವರು ಹೇಳುತ್ತಿದ್ದ ಮಾತುಗಳನ್ನು ನಾನು ಕೇಳಿದ್ದೇನೆ.

ನನ್ನ ತಬಲಾ ಕೈಕೊಟ್ಟಾಗ...

ಕರ್ನಾಟಕದ ಜೊತೆಗೆ ಅವರಿಗೆ ಸಾಕಷ್ಟು ಒಡನಾಟವಿದ್ದೂ ಇಲ್ಲಿಯ ಕಲಾವಿದರು ಅವರೊಂದಿಗೆ ಹೆಚ್ಚು ಹಾಡಿಲ್ಲ, ನುಡಿಸಿಲ್ಲ. ಆದರೆ ಅವರೊಂದಿಗೆ ತಬಲಾ ಸಾಥಿಯಾಗುವ ಒಂದು ಅವಕಾಶ 15 ವರ್ಷಗಳ ಹಿಂದೆ ನನಗೆ ದೊರಕಿತ್ತು. ಅಂದು ವಿಚಿತ್ರವೊಂದು ನಡೆಯಿತು, ನನ್ನ ದುರದೃಷ್ಟ ಅಂದು ನನ್ನ ತಬಲಾ ಕೈಕೊಟ್ಟಿತ್ತು. ನಾನು ಹಲವು ಬಾರಿ ಶ್ರುತಿ ಮಾಡಿಕೊಳ್ಳುತ್ತಿದ್ದ ಕಾರಣ ರಾಶಿದ್ ಖಾನ್ ಅವರಿಗೆ ಕಿರಿಕಿರಿಯಾಯಿತು. ಆ ಬೇಸರ ಅವರ ಮೊಗದಲ್ಲಿ ಕಾಣುತ್ತಿತ್ತು.

ಅದಾದ ನಂತರ ಅವರನ್ನು ಕಾಣಲು ನನಗೆ ಮುಜುಗರವಾಗುತ್ತಿತ್ತು, ಅವರ ಬಂದಾಗ ಭೇಟಿ ಮಾಡುವುದನ್ನು ತಪ್ಪಿಸಿಕೊಳ್ಳುತ್ತಿದ್ದೆ. ಆದರೆ 2 ವರ್ಷದ ಕೆಳಗೆ ಪುಣೆಯಲ್ಲಿ ಅವರೇ ಗುರುತು ಹಿಡಿದು ನನ್ನನ್ನು ಮಾತನಾಡಿಸಿದರು, ಹಿಂದಿನ ಕಛೇರಿಯನ್ನು ನೆನಪಿಸಿದರು. ನನಗೆ ಆಶ್ಚರ್ಯ, ಅವರ ಅಗಾಧ ನೆನಪಿನ ಶಕ್ತಿಗೆ ಶರಣು ಶರಣಾರ್ಥಿ.

ಲೇಖಕ: ತಬಲಾ ವಾದಕ
ನಿರೂಪಣೆ: ಎಂ.ಎನ್.ಯೋಗೇಶ್

ಸಂಗೀತ ಮಾಂತ್ರಿಕ ಉಸ್ತಾದ್ ರಾಶಿದ್ ಖಾನ್ ನಿಧನ

ಒಂದನೇ ಪುಟದಿಂದ

ಮೃತರ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ 9.30ರ ನಂತರ ರವೀಂದ್ರ ಸದನಕ್ಕೆ ಒಯ್ದು ಇಡಲಿದ್ದು, ಅಲ್ಲಿ ಅವರ ಶಿಷ್ಯರು, ಅಭಿಮಾನಿಗಳು ಅಂತಿಮ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗುವುದು. ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ.

ಉತ್ತರ ಪ್ರದೇಶದ ಬದಾಯುನ್‌ನಲ್ಲಿ 1968ರಲ್ಲಿ ಜನಿಸಿದ್ದ ರಾಶಿದ್ ಖಾನ್ 10ನೇ ವಯಸ್ಸಿನಲ್ಲಿ ಕೋಲ್ಕತ್ತಕ್ಕೆ ಬಂದರು. 11ನೇ ವಯಸ್ಸಿನಲ್ಲಿ ಮೊದಲ ಸಂಗೀತ ಕಛೇರಿ ನೀಡಿದ್ದರು. ಪದ್ಮಶ್ರೀ (2006), ಪದ್ಮವಿಭೂಷಣ (2022) ಪ್ರಶಸ್ತಿಗೆ ಪಾತ್ರರಾಗಿದ್ದರು.

ರಾಶಿದ್ ಖಾನ್ ಸಾವಿಗೆ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ‘ಖಾನ್ ಇನ್ನಿಲ್ಲ ಎಂದು ನಂಬಲಾಗುತ್ತಿಲ್ಲ. ಕುಟುಂಬದ ದುಃಖದಲ್ಲಿ ತಾವು ಭಾಗಿ’ ಎಂದಿದ್ದಾರೆ. ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ತಿಳಿಸಿದ್ದಾರೆ.

₹100 ಕೋಟಿ ಮೌಲ್ಯದ ಡ್ರಗ್ಸ್ ವಶ

ಗುವಾಹಟಿ (ಪಿಟಿಐ): ಅಸ್ಸಾಂನ ಕರೀಮ್‌ಗಂಜ್ ಜಿಲ್ಲೆಯಲ್ಲಿ ₹100 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಸ್ಸಾಂ ಪೊಲೀಸರ ವಿಶೇಷ ಕಾರ್ಯಪಡೆ ಮತ್ತು ಜಿಲ್ಲಾ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ದಂಧೆಕೋರರನ್ನು ಸೆರೆ ಹಿಡಿದಿದ್ದಾರೆ.

‘ಮಿಜೋರಾಮ್‌ನಿಂದ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ಆಗುತ್ತಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆ ಕಾರ್ಯಾಚರಣೆ ನಡೆಸಿ ಸುಪ್ರಕಂಡಿ ಬಳಿ ಕಾರೊಂದನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಎಸ್‌ಟಿಎಫ್‌ನ ಡೆಪ್ಯುಟಿ ಐಜಿ ಪಾರ್ಥಸಾರಥಿ ಮಾಹಿತಿ ನೀಡಿದ್ದಾರೆ.

ಸೆಂಥಿಲ್ ಬಾಲಾಜಿ ಜಾಮೀನು ಅರ್ಜಿ: ಜ.12ಕ್ಕೆ ಆದೇಶ

ಚೆನ್ನೈ (ಪಿಟಿಐ): ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರು ಸಲ್ಲಿಸಿರುವ ಜಾಮೀನು ಅರ್ಜಿ ಕುರಿತ ಆದೇಶವನ್ನು ಇಲ್ಲಿನ ಸೆಷನ್ಸ್ ನ್ಯಾಯಾಲಯವು ಇದೇ 12ರಂದು ಪ್ರಕಟಿಸಲಿದೆ.

ವಾದ–ಪ್ರತಿವಾದಿಗಳನ್ನು ಮಂಗಳವಾರ ಆಲಿಸಿದ ಸೆಷನ್ಸ್ ನ್ಯಾಯಾಧೀಶ ಎಸ್. ಅಲ್ಲಿ ಅವರು, ಜನವರಿ 12ಕ್ಕೆ ಆದೇಶ ಕಾಯ್ದಿರಿಸಿದ್ದಾಗಿ ಪ್ರಕಟಿಸಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಕಳೆದ ವರ್ಷ ಜೂನ್ 14ರಂದು ಬಂಧಿಸಿತ್ತು.

ವಸ್ತು ಪ್ರದರ್ಶನಕ್ಕೆ ಪ್ರಧಾನಿ ಮೋದಿ ಚಾಲನೆ; 20 ರಾಷ್ಟ್ರಗಳು ಭಾಗಿ

‘ವೈಬ್ರಂಟ್ ಗುಜರಾತ್’ ಶೃಂಗಸಭೆ ಇಂದಿನಿಂದ

ಗಾಂಧಿನಗರ (ಪಿಟಿಐ): ‘ವೈಬ್ರಂಟ್ ಗುಜರಾತ್’ ಜಾಗತಿಕ ಶೃಂಗಸಭೆ ಅಂಗವಾಗಿ ಏರ್ಪಡಿಸಿರುವ ಜಾಗತಿಕ ವಸ್ತು ಪ್ರದರ್ಶನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಚಾಲನೆ ನೀಡಿದರು.

ಹೆಲಿಪ್ಯಾಡ್ ಗ್ರೌಂಡ್ ವಸ್ತು ಪ್ರದರ್ಶನ ಕೇಂದ್ರದಲ್ಲಿ ಸುಮಾರು 2 ಲಕ್ಷ ಚದರ ಮೀ. ವಿಸ್ತೀರ್ಣದಷ್ಟು ವಿಶಾಲ ಜಾಗದಲ್ಲಿ ಮಳಿಗೆಗಳನ್ನು ಸ್ಥಾಪಿಸಲಾಗಿದೆ. ‘ವೈಬ್ರಂಟ್ ಗುಜರಾತ್’ ಶೃಂಗಸಭೆಯನ್ನು ಪ್ರಧಾನಿ ಅವರು ಬುಧವಾರ ಉದ್ಘಾಟಿಸಲಿದ್ದಾರೆ. ಜ.12ರ ವರೆಗೆ ನಡೆಯಲಿರುವ ಶೃಂಗಸಭೆಯಲ್ಲಿ 20 ರಾಷ್ಟ್ರಗಳು ಪಾಲ್ಗೊಳ್ಳಲಿವೆ.

ಮಧ್ಯಾಹ್ನ 3ಕ್ಕೆ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಜತೆ ಮಳಿಗೆಗಳಿಗೆ ಭೇಟಿ ನೀಡಿದರು. ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಪ್ರಧಾನಿ ಹಾಗೂ ಇತರ ಗಣ್ಯರಿಗೆ ಸ್ವಾಗತ ಕೋರಿದರು.

ಆಸ್ಟ್ರೇಲಿಯಾ, ತಾಂಜಾನಿಯ, ಮೊರೊಕ್ಕೊ, ಮೊಜಾಂಬಿಕ್, ದಕ್ಷಿಣ ಕೊರಿಯಾ, ಥಾಯ್ಲೆಂಡ್, ಎಸ್ಟೋನಿಯ, ಬಾಂಗ್ಲಾದೇಶ, ಸಿಂಗಪುರ, ಯುಎಇ, ಯುಕೆ, ಜರ್ಮನಿ, ನಾರ್ವೆ, ಫಿನ್ಲೆಂಡ್, ನೆದರ್ಲೆಂಡ್ಸ್, ರಷ್ಯಾ, ರುವಾಂಡ, ಜಪಾನ್, ಇಂಡೊನೇಷ್ಯಾ ಮತ್ತು ವಿಯೆಟ್ನಾಂ ದೇಶಗಳು ತಮ್ಮಲ್ಲಿನ ಹೊಸ ತಂತ್ರಜ್ಞಾನ ಹಾಗೂ ಕೈಗಾರಿಕೆಗಳ ಕುರಿತ ಮಾಹಿತಿಯನ್ನು ಈ ವಸ್ತು ಪ್ರದರ್ಶನದ ಮೂಲಕ ಪ್ರಸ್ತುತಪಡಿಸುತ್ತಿವೆ.

ಈ ದೇಶಗಳ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ 1,000 ಕಂಪನಿಗಳು ಪಾಲ್ಗೊಂಡಿವೆ. ವಸ್ತು ಪ್ರದರ್ಶನದಲ್ಲಿ ಮಹಿಳಾ ಸಬಲೀಕರಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ (ಎಂಎಸ್‌ಎಂಇ) ಅಭಿವೃದ್ಧಿ, ಹೊಸ ತಂತ್ರಜ್ಞಾನ, ಹಸಿರು ಮತ್ತು ಸ್ಮಾರ್ಟ್ ಮೂಲಸೌಕರ್ಯ ಹಾಗೂ ಸುಸ್ಥಿರ ಇಂಧನ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡಲಾಗಿದೆ.

ಮೂರು ದಿನ ನಡೆಯಲಿರುವ ಶೃಂಗಸಭೆ ವೇಳೆ ಪ್ರಧಾನಿ ಅವರು ವಿಶ್ವದ ವಿವಿಧ ನಾಯಕರು, ಪ್ರಮುಖ ಜಾಗತಿಕ ಕಂಪನಿಗಳ ಸಿಇಒಗಳ ಜೊತೆಗೆ ಮಾತುಕತೆ ನಡೆಸಲಿದ್ದಾರೆ.

ಪ್ರಧಾನಿ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯಿದ್ ಅಲ್ ನಹ್ಯಾನ್ ಅವರನ್ನು ಮಂಗಳವಾರ ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು —ಪಿಟಿಐ ಚಿತ್ರ

ಮೋದಿ–ಯುಎಇ ಅಧ್ಯಕ್ಷರ ರೋಡ್ ಶೋ

ಅಹಮದಾಬಾದ್ (ಪಿಟಿಐ): ‘ವೈಬ್ರಂಟ್ ಗುಜರಾತ್’ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಮಂಗಳವಾರ ಇಲ್ಲಿನ ಸರ್ದಾರ್ ವಲ್ಲಭಭಾಯಿ ಪಟೇಲ್ ವಿಮಾನ ನಿಲ್ದಾಣಕ್ಕೆ ಬಂದ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯಿದ್ ಅಲ್ ನಹ್ಯಾನ್ ಅವರನ್ನು ಪ್ರಧಾನಿ ಮೋದಿ ಬರಮಾಡಿಕೊಂಡರು. ಆ ಬಳಿಕ ಇಬ್ಬರೂ ರೋಡ್ ಶೋದಲ್ಲಿ ಪಾಲ್ಗೊಂಡರು.

ವಿಮಾನ ನಿಲ್ದಾಣದಿಂದ ಆರಂಭವಾದ ರೋಡ್ ಶೋ ಅಹಮದಾಬಾದ್ ಮತ್ತು ಗಾಂಧಿನಗರ ನಗರಕ್ಕೆ ಸಂಪರ್ಕ ಕಲ್ಪಿಸುವ ಇಂಡಿಯಾ ಬ್ರಿಡ್ಜ್‌ವರೆಗೆ ಸುಮಾರು 3 ಕಿ.ಮೀ ದೂರ ನಡೆಯಿತು. ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ರಾಜ್ಯ ಸರ್ಕಾರದ ವರದಿ ಕೇಳಿದ ಕೇಂದ್ರ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ಗುಂಪೊಂದು ದಾಳಿ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿ ವರದಿ ನೀಡಲು ಕೇಂದ್ರ ಗೃಹ ಸಚಿವಾಲಯವು ರಾಜ್ಯ ಸರ್ಕಾರಕ್ಕೆ ಹೇಳಿದೆ.

ಪಡಿತರ ವಿತರಣೆ ಹಗರಣಕ್ಕೆ ಸಂಬಂಧಿಸಿ ಆಡಳಿತಾರೂಢ ಟಿಎಂಸಿ ನಾಯಕ ಶಹಜಹಾನ್ ಶೇಖ್ ನಿವಾಸದಲ್ಲಿ ಇ.ಡಿ ಅಧಿಕಾರಿಗಳು ಜನವರಿ 5ರಂದು ಶೋಧ ಕೈಗೊಂಡಿದ್ದರು. ಆ ವೇಳೆ ಶೇಖ್ ಬೆಂಬಲಿಗರು ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು. ದಾಳಿಯಲ್ಲಿ ಮೂವರು ಅಧಿಕಾರಿಗಳು ಗಾಯಗೊಂಡರು.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಕೇಂದ್ರ ಸಚಿವಾಲಯ, ಎಂತಹ ಸನ್ನಿವೇಶದಲ್ಲಿ ಇ.ಡಿ ಅಧಿಕಾರಿಗಳ ಮೇಲೆ ದಾಳಿ ನಡೆದಿದೆ ಮತ್ತು ದಾಳಿ ಬಳಿಕ ರಾಜ್ಯ ಸರ್ಕಾರ ಯಾವೆಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂಬ ಕುರಿತು ವಿವರವಾದ ವರದಿ ನೀಡಿ ಎಂದು ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ, ಜಾರಿ ನಿರ್ದೇಶನಾಲಯದ (ಇ.ಡಿ) ಉಸ್ತುವಾರಿ ನಿರ್ದೇಶಕ ರಾಹುಲ್ ನವೀನ್ ಸೋಮವಾರ ರಾತ್ರಿ ಕೋಲ್ಕತ್ತಕ್ಕೆ ಆಗಮಿಸಿದ್ದಾರೆ. ಮಂಗಳವಾರ ಇ.ಡಿ ಕಚೇರಿಗೆ ಭೇಟಿ ನೀಡಿ ಅಧಿಕಾರಿಗಳ ಜೊತೆ ಅವರು ಸಭೆ ನಡೆಸಿದ್ದಾರೆ.

‘ಜನರ ಆಕ್ರೋಶದ ಫಲ’

ಕೋಲ್ಕತ್ತ (ಪಿಟಿಐ): ‘ಉತ್ತರ 24 ಪರಗಣ ಜಿಲ್ಲೆಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳ ಮೇಲೆ ನಡೆದ ದಾಳಿಯು ಸಾರ್ವಜನಿಕರ ಅಸಮಾಧಾನ ಆಸ್ಫೋಟಗೊಂಡಿದ್ದರ ಫಲ’ ಎಂದು ಪಶ್ಚಿಮ ಬಂಗಾಳದ ಕೃಷಿ ಸಚಿವ ಸೋವನ್‌ದೇವ್ ಚಟ್ಟೋಪಾಧ್ಯಾಯ ಅವರು ಮಂಗಳವಾರ ಹೇಳಿದ್ದಾರೆ. ಈ ಹೇಳಿಕೆಯು ವಿವಾದದ ಕಿಡಿ ಹೊತ್ತಿಸಿದೆ.

‘ಸಾರ್ವಜನಿಕರ ಆಕ್ರೋಶ ಕಟ್ಟೆಯೊಡೆದ ಘಟನೆಯನ್ನು ನಾವು ರಾಜ್ಯದಲ್ಲಿ ನೋಡಿದೆವು. ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ದೇಶದ ಇತರ ಭಾಗಗಳಲ್ಲೂ ನಡೆಯುತ್ತವೆ’ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದರು.

‘ಈ ರೀತಿಯ ಹೇಳಿಕೆಗಳ ಮೂಲಕ ಸೋವನ್‌ದೇವ್ ಅವರು ರಾಜಕೀಯ ಲಾಭ ಗಳಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಸಿಪಿಎಂ ನಾಯಕ ಸೌಜನ್ ಚಕ್ರವರ್ತಿ ಹೇಳಿದ್ದಾರೆ.

‘ಉಗ್ರಂ’ ರೈಫಲ್ ಅನಾವರಣ

ಪುಣೆ(ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಖಾಸಗಿ ಕಂಪನಿಯ ಜೊತೆ ಸೇರಿ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಅಸಾಲ್ಟ್ ರೈಫಲ್ ‘ಉಗ್ರಂ’ನ ಅನ್ನು ಸೋಮವಾರ ಅನಾವರಣಗೊಳಿಸಲಾಯಿತು.

ಡಿಆರ್‌ಡಿಒದ ಪುಣೆಯಲ್ಲಿರುವ ಪ್ರಯೋಗಾಲಯದಲ್ಲಿ ಈ ರೈಫಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಎ ಆ್ಯಂಡ್ ಸಿ ಎಂಜಿನಿಯರಿಂಗ್ ಕ್ಲಸ್ಟರ್‌ನ ಮಹಾನಿರ್ದೇಶಕ ಡಾ.ಎಸ್.ವಿ.ಗಾಡೆ ಅವರು ರೈಫಲ್ ಅನಾವರಣಗೊಳಿಸಿದರು.

‘ಅಂತರರಾಷ್ಟ್ರೀಯ ಗುಣಮಟ್ಟ ಮಾನದಂಡಗಳಿಗೆ ಅನುಸಾರವಾಗಿ ಈ ರೈಫಲ್ ಅನ್ನು ದೇಶೀಯವಾಗಿ ನಿರ್ಮಿಸಲಾಗಿದೆ’ ಎಂದು ಶಸ್ತ್ರಾಸ್ತ್ರ ಸಂಶೋಧನೆ ಮತ್ತು ಅಭಿವೃದ್ಧಿ ಘಟಕದ(ಎಆರ್‌ಡಿಇ) ನಿರ್ದೇಶಕ ಎ.ರಾಜು ತಿಳಿಸಿದ್ದಾರೆ.

‘ಹಿಂದೂ ಧರ್ಮಗ್ರಂಥಗಳಲ್ಲಿನ ಹೆಸರಿಡಿ’

ಲಖನೌ (ಪಿಟಿಐ): ‘ಮಕ್ಕಳಿಗೆ ನಾಮಕರಣ ಮಾಡುವಾಗ ಹಿಂದೂ ಧರ್ಮಗ್ರಂಥಗಳಲ್ಲಿರುವ ಹೆಸರುಗಳನ್ನೇ ಇಡಿ. ಈ ಮೂಲಕ ನಮ್ಮ ಸಂಸ್ಕೃತಿ ಉಳಿಸಿ’ ಎಂದು ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಹೊಣೆ ಹೊತ್ತಿರುವ ಟ್ರಸ್ಟ್‌ನ ಹಿರಿಯ ಸದಸ್ಯ, ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಕರೆ ನೀಡಿದ್ದಾರೆ.

‘ಶತಮಾನಗಳಿಂದ ಕಂಡ ಕನಸು ನನಸಾಗುತ್ತಿದೆ. ಹಾಗಂತ ನಮ್ಮ ಕರ್ತವ್ಯ ಮುಗಿದಿಲ್ಲ. ನಾವು ಯಾರೂ ಅಜರಾಮರ ಅಲ್ಲ. ಹೀಗಾಗಿ ನಮ್ಮ ಮಕ್ಕಳ ಮೂಲಕ ಹಿಂದೂ ಧರ್ಮ ಮತ್ತು ಸನಾತನ ಧರ್ಮದ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ದಾಟಿಸಬೇಕು’ ಎಂದು ಹೇಳಿದರು.

‘ವೇದ, ಪುರಾಣ, ರಾಮಾಯಣ ಮತ್ತು ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ಹೆಸರುಗಳನ್ನು ಮಕ್ಕಳಿಗೆ ಇಡಬೇಕು. ಇದರಿಂದ ಯಾವ ಸಂಸ್ಕೃತಿಗೆ ಸೇರಿದವರು ಎಂದು ಮಕ್ಕಳಿಗೆ ತಿಳಿಯುತ್ತದೆ’ ಎಂದು ಹೇಳಿದರು.

‘ಜನರ ಹೆಸರುಗಳ ಮರುನಾಮಕರಣ ಆಂದೋಲನ ಆರಂಭವಾಗಬೇಕು. ಸಾರ್ವಜನಿಕವಾಗಿ ದೇಗುಲಗಳಲ್ಲಿಯೇ ಅದು ನಡೆಯಬೇಕು. ಮತಾಂತರ ಕೊನೆಯಾಗಬೇಕು. ಸಂಸ್ಕೃತಿ ಉಳಿಸುವ ಕೆಲಸ ಆರಂಭವಾಗಬೇಕು’ ಎಂದು ಹೇಳಿದರು. ಇದೇ ವೇಳೆ, ‘ದೇಗುಲಗಳನ್ನು ಕಟ್ಟುವುದಕ್ಕಿಂತ ಅವುಗಳನ್ನು ಉಳಿಸಿಕೊಳ್ಳುವುದೇ ಅತಿ ದೊಡ್ಡ ಸವಾಲು’ ಎಂದು ಹೇಳಿದರು.

ವೃದ್ಧೆಯ 30 ವರ್ಷಗಳ ಮೌನ ವ್ರತ ಅಂತ್ಯ

ಧನ್‌ಬಾದ್ (ಜಾರ್ಖಂಡ್) (ಪಿಟಿಐ): ಸರಸ್ವತಿ ದೇವಿ ಎಂಬವರು ರಾಮ ಮಂದಿರಕ್ಕಾಗಿ ಪ್ರಾರ್ಥಿಸಿ ಕಳೆದ 30 ವರ್ಷಗಳಿಂದ ಮೌನ ವ್ರತ ಆಚರಿಸುತ್ತಿದ್ದು, ಜ.22 ರಂದು ಅಯೋಧ್ಯೆಯಲ್ಲಿ ಪ್ರಾಣ-ಪ್ರತಿಷ್ಠಾಪನೆಯಾದ ನಂತರ ‘ವ್ರತ’ ಕೈಬಿಡಲಿದ್ದಾರೆ.

ದೇವಿ (85) ಅವರು 1992ರಲ್ಲಿ ಬಾಬರಿ ಮಸೀದಿ ಧ್ವಂಸಗೊಳಿಸಿದ ದಿನದಿಂದಲೇ ವ್ರತ ಆರಂಭಿಸಿದ್ದರು. ರಾಮ ಮಂದಿರ ಉದ್ಘಾಟನೆಗೊಂಡ ನಂತರವೇ ವ್ರತ ನಿಲ್ಲಿಸುವುದಾಗಿ ಶಪಥ ಮಾಡಿದ್ದರು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

‘2020ರವರೆಗೂ ಮಧ್ಯಾಹ್ನದ ನಂತರ ಒಂದು ಗಂಟೆ ಮಾತನಾಡುತ್ತಿದ್ದರು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ರಾಮ ಮಂದಿರ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದ ನಂತರ ಸಂಪೂರ್ಣವಾಗಿ ಮೌನವಾಗಿದ್ದರು’ ಎಂದಿದ್ದಾರೆ.ಅಯೋಧ್ಯೆಯಲ್ಲಿ ‘ಮೌನ ಮಾತಾ’ ಎಂದು ಪ್ರಸಿದ್ಧರಾಗಿದ್ದರು. ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸರಸ್ವತಿ ಅವರು ಧನ್‌ಬಾದ್‌ನಿಂದ ಉತ್ತರ ಪ್ರದೇಶಕ್ಕೆ ಪ್ರಯಾಣ ಬೆಳೆಸಿದ್ದಾರೆ.

22ರಂದು ಶಾಲಾ–ಕಾಲೇಜು ರಜೆ



ಯೋಗಿ ಆದಿತ್ಯನಾಥ

ಲಖನೌ (ಪಿಟಿಐ): ಅಯೋಧ್ಯೆಯಲ್ಲಿ ರಾಮಮಂದಿರದಲ್ಲಿ ರಾಮ ಲಲ್ಲಾ ಮೂರ್ತಿ ಪ್ರತಿಷ್ಠಾಪನೆ ನೆರವೇರಲಿರುವ ಇದೇ 22ರಂದು ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಿ ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ.

‘ರಾಮ ಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯು ರಾಷ್ಟ್ರೀಯ ಹಬ್ಬ’ ಎಂದು ಬಣ್ಣಿಸಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ಆ ದಿನ ರಾಜ್ಯದಾದ್ಯಂತ ಮದ್ಯದ ಅಂಗಡಿಗಳನ್ನು ಮುಚ್ಚಬೇಕು ಎಂದು ಸೂಚಿಸಿದ್ದಾರೆ.

ಮೆರವಣಿಗೆ ಮೇಲೆ ಕಲ್ಲು ತೂರಾಟ

ಶಾಜಾಪುರ (ಪಿಟಿಐ): ಧಾರ್ಮಿಕ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರ ಮೇಲೆ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿದ ಕಾರಣ ಮಧ್ಯ-ಪ್ರದೇಶದ ಶಾಜಾಪುರ ನಗರದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ಹಲವೆಡೆ ಸೆಕ್ಷನ್ 144 ಹೇರಲಾಗಿದೆ.

ಶಾಜಾಪುರದ ಮಗರಿಯಾ ಪ್ರದೇಶದಲ್ಲಿ ಸೋಮವಾರ ಸಂಜೆ ಮೆರವಣಿಗೆಯಲ್ಲಿ ತೆರಳುತ್ತಿದ್ದವರ ಮೇಲೆ ಕಲ್ಲು ತೂರಾಟ ನಡೆದಿದ್ದು, ಒಬ್ಬರು ಗಾಯಗೊಂಡಿದ್ದಾರೆ. ಈ ಸಂಬಂಧ ಎಫ್‌ಐಆರ್ ದಾಖಲಾಗಿದ್ದು, ಸ್ಥಳದಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಯೋಧ್ಯೆಯ ರಾಮಮಂದಿರ ಉದ್ಘಾಟನೆಯ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಗೆ ಗುಂಪೊಂದು ತಡೆಯೊಡ್ಡಿದೆ ಮತ್ತು ಕಟ್ಟಡಗಳ ಮಹಡಿ ಮೇಲಿನಿಂದ ಕೆಲವರು ಕಲ್ಲು ತೂರಾಟ ನಡೆಸಿದ್ದಾರೆ ಎಂದು ದೂರಲಾಗಿದೆ.

ಅಮೆರಿಕದ ಹಿಂದೂಗಳಿಂದ ಕಾರ್ ರ‍್ಯಾಲಿ

ಹ್ಯೂಸ್ಟನ್ (ಪಿಟಿಐ): ರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಅಮೆರಿಕದ ಹಿಂದೂ ಸಮುದಾಯವು ಇಲ್ಲಿ ಬೃಹತ್ ಕಾರ್ ರ‍್ಯಾಲಿ ನಡೆಸಿತು.

ಈ ಸಂದರ್ಭದಲ್ಲಿ 11 ದೇಗುಲಗಳ ಎದುರು ಕಾರುಗಳನ್ನು ನಿಲ್ಲಿಸಿ ಸದಸ್ಯರು ಭಜನೆ ಮಾಡಿ, ‘ಜೈ ಶ್ರೀರಾಮ್’ ಘೋಷಣೆ ಕೂಗಿದರು. ಜ.22ರಂದು ಅಯೋಧ್ಯೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಅಮೆರಿಕದ ವಿಶ್ವ ಹಿಂದೂ ಪರಿಷತ್, ದೇಗುಲಗಳ ಅಧಿಕಾರಿಗಳಿಗೆ ಆಹ್ವಾನ ನೀಡಿತು.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 39, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ, ಬೆಂಗಳೂರು-01. ದೂ: 080-71204445/6,
ಇ-ಮೇಲ್: md@cauveryhandicrafts.net

ಸಂಖ್ಯೆ: ಕೆಎಸ್‌ಹೆಚ್‌ಡಿಸಿ/ಎಫ್‌ಡಿ/1253/2023–24 ದಿನಾಂಕ: 05.01.2024

ಸಂಕ್ಷಿಪ್ತ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಹೆಚ್‌ಡಿಸಿಎಲ್)ವು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: www.kppp.karnataka.gov.in ಮೂಲಕ ನಿಶ್ಚಿತ ಠೇವಣಿಯಲ್ಲಿ ಕೆಎಸ್‌ಹೆಚ್‌ಡಿಸಿಎಲ್‌ನ ಹೆಚ್ಚುವರಿ ನಿಧಿಯ ಹೂಡಿಕೆಗೆ ಸ್ಪರ್ಧಾತ್ಮಕ ಬಡ್ಡಿದರವನ್ನು ಉಲ್ಲೇಖಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸುತ್ತದೆ. ಇ–ಪೋರ್ಟಲ್ ಪ್ರವೇಶಕ್ಕೆ ಪ್ರಾರಂಭದ **ದಿನಾಂಕ 06.01.2024,** ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ 20.01.2024 ಮಧ್ಯಾಹ್ನ 3.00 ರವರೆಗೆ.** ಸಂಪರ್ಕಿಸಬೇಕಾದ ಅಧಿಕಾರಿ ಪ್ರಧಾನ ವ್ಯವಸ್ಥಾಪಕರು (ಹಣಕಾಸು), #39, ಯುನೈಟೆಡ್ ಮ್ಯಾನ್ಷನ್, 2ನೇ ಮಹಡಿ, ಎಂ.ಜಿ.ರಸ್ತೆ, ಬೆಂಗಳೂರು – 560 001.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ
ಸಂಖ್ಯೆ: 116, 8ನೇ ಅಡ್ಡರಸ್ತೆ, ರೈಲ್ವೆ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020. ದೂರವಾಣಿ : 080-23568200

ಸಂಖ್ಯೆ : KSBDB/2023-24/SE 0001 ದಿನಾಂಕ : 09.01.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯಲ್ಲಿ **ಕಛೇರಿ ಕೆಲಸ ನಿರ್ವಹಣೆಗೆ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು** ಟೆಂಡರ್‌ಗಳನ್ನು ಕರೆಯಲಾಗಿದೆ. ಇಚ್ಛೆಯುಳ್ಳ ಅಧಿಕೃತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮುಖಾಂತರ ಭಾಗವಹಿಸಬಹುದು. ಟೆಂಡರ್ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದು. ಇ–ಟೆಂಡರ್ ಡೌನ್‌ಲೋಡ್ ಪ್ರಾರಂಭ ದಿನಾಂಕ: **10.01.2024.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24.01.2024, ಸಂಜೆ 05:00 ಗಂಟೆಯವರೆಗೆ.**

DIPR/CP/YC/2957/2023-24 ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ & ಗು.ಆ)
9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಸಂಖ್ಯೆ:ಬೆಂಜಮಂ/ಮುಅ(ವಿ&ಗು.ಆ)/ಅಮುಅ(ಎಂ.ಐ.ಎಸ್–ಐ.ಟಿ)/ತಾಂಸ/1802/2023–24 ದಿ:09.01.2024

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ ಮಂಡಳಿಯ ದೂರು ನಿರ್ವಹಣಾ ಕೇಂದ್ರ (24 x 7) & ಜಾಲತಾಣವನ್ನು 3 ವರ್ಷಗಳ ಅವಧಿಗೆ ಸಮಗ್ರ ಕಾರ್ಯಾಚರಣೆ & ನಿರ್ವಹಣಾ ಕಾಮಗಾರಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟ ಮೊತ್ತ ರೂ.1,79,98,022/– **ಇಎಂಡಿ: ರೂ.2,70,000/–**

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **24.01.2024 ರಂದು ಮಧ್ಯಾಹ್ನ 02:00 ಗಂಟೆಯವರೆಗೆ** ಮತ್ತು ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ **ದಿನಾಂಕ 25.01.2024 ಮಧ್ಯಾಹ್ನ 03:00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
DIPR/CP/KAVITA/2962/2023-24 ಮುಖ್ಯ ಅಭಿಯಂತರರು (ವಿನ್ಯಾಸ & ಗು.ಆ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
ಕರ್ನಾಟಕ ಸರ್ಕಾರ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

ಸಂಖ್ಯೆ: KREIS/EDN/32/2023-EDU-Part(2) ದಿನಾಂಕ: 08.01.2024

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ **ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ KCET/NEET/JEE ಸ್ಪರ್ಧಾತ್ಮಕ ಪರೀಕ್ಷೆಗಳಿಗೆ Offline ಮೂಲಕ ತರಬೇತಿಯನ್ನು ನೀಡಲು** ಅರ್ಹ ಏಜೆನ್ಸಿಯನ್ನು ನೇಮಿಸಲು ಇ–ಪೋರ್ಟಲ್ ಮುಖಾಂತರ **ದಿನಾಂಕ: 08.01.2024** ರಂದು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 23.01.2024** ರಂದು ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ನೋಡಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು
DIPR/CP/YC/2952/2023-24 ಕ.ವ.ಶಿ.ಸಂ.ಸಂಘ, ಬೆಂಗಳೂರು

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.
e-mail: bic3@ksiidc.com/info@ksiidc.com Ph.: 080-22258131.

ಸಲಹಾ ಸೇವೆಗಳಿಗಾಗಿ ಟೆಂಡರ್
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
“ಯೋಜನಾ ನಿರ್ವಹಣೆ ಸಲಹೆಗಾಗಿ ಸಲಹೆಗಾರರ ಆಯ್ಕೆ (ಪಿಎಂಸಿ)”

ಕಾಮಗಾರಿ: ಕೆಪಿಡಬ್ಲ್ಯೂಡಿ **“ರಾಯಚೂರು ವಿಮಾನ ನಿಲ್ದಾಣ ನಿರ್ಮಾಣ”** ಅಭಿವೃದ್ಧಿ ಪಡಿಸುತ್ತಿದೆ. ಈ ವಿಮಾನ ನಿಲ್ದಾಣವು ಯೆಂಗನೂರು ಗ್ರಾಮ, ರಾಯಚೂರು ಇಲ್ಲಿರುವುದು. ಸದರಿ ಯೋಜನೆಗೆ ಯೋಜನಾ ನಿರ್ವಹಣೆ ಸಲಹೆಗಾರಿಕೆಗಾಗಿ ಅರ್ಹ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

ಬಿಡ್ಡಿಂಗ್ ಪ್ರಕ್ರಿಯೆ: ಕ್ಯುಸಿಬಿಎಸ್ ಆಯ್ಕೆ ಪದ್ಧತಿ ಮೂಲಕ ಅರ್ಹತೆ ಹೊಂದಿರುವ ಸಲಹೆಗಾರನ ಆಯ್ಕೆಗೆ ಏಕ ಹಂತದ (ಎರಡು ಲಕೋಟೆ) ಬಿಡ್ಡಿಂಗ್ ಪ್ರಕ್ರಿಯೆ. ಆರ್‌ಇಪಿ ದಸ್ತಾವೇಜು ಯಾವುದೇ ಇತರೆ ಸಕಾಲಿಕವಾದ ಹೆಚ್ಚಿನ ವಿಚಾರಗಳನ್ನು **ದಿನಾಂಕ 10.01.2024** ರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in/portal-home)** ಮೂಲಕ ಮಾತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಪ್ರಮುಖ ದಿನಾಂಕಗಳು: ಬಿಡ್ ಪೂರ್ವ ಸಭೆ: **19.01.2024;** ಪ್ರಸ್ತಾವನೆ ಸಲ್ಲಿಸುವ ಕಡೆಯ ದಿನಾಂಕ: **12.02.2024.** ಯಾವುದೇ ಕಾರಣ ನೀಡದೆ ಆರ್‌ಇಪಿಯ ನಿಯಮಗಳನ್ನು ಬದಲಾಯಿಸುವ ಮತ್ತು ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕೆಎಸ್‌ಐಐಡಿಸಿ ಕಾಯ್ದಿರಿಸಿಕೊಂಡಿದೆ.

ಯಾವುದೇ ವಿಚಾರಣೆ/ ಸ್ಪಷ್ಟನೆಗಳು ಇದ್ದರೆ ದಯವಿಟ್ಟು ಸಂಪರ್ಕಿಸಿ: ಶ್ರೀ ಹರ್ಷಿ ಎಲ್.ಎಸ್, ಸಹಾಯಕ ಪ್ರಧಾನ ವ್ಯವಸ್ಥಾಪಕರು (ಐಪಿಡಿ–1); ಇ–ಮೇಲ್: bic3@ksiidc.com/ info@ksiidc.com ದೂರವಾಣಿ: 080–22258131

ಸಹಿ/– ಪ್ರಧಾನ ವ್ಯವಸ್ಥಾಪಕರು (ಪ್ರಭಾರ), ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಟೆಂ–07/ತಾಂಶಾ/2023–24 ದಿನಾಂಕ: 09.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 07/2023–24 (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದಡಿ ಅನುಮೋದನೆಯಾದ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 18–01–2024 ಸಂಜೆ 4.30 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
DIPR/CP/2950/SPAN/2023-24 ಬೆಂಗಳೂರು ಗ್ರಾಮಾಂತರ, ಬೆಂಗಳೂರು

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2023–24 ದಿನಾಂಕ: 09–01–2024

ಕಾಲಾವಕಾಶ ವಿಸ್ತರಣೆಗಾಗಿ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬಾಗಲಕೋಟೆ ಜಿಲ್ಲೆ, **ಹುನಗುಂದ ತಾಲ್ಲೂಕು, ಚಿಕ್ಕಬಾದವಾಡಗಿ, ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅನಂತನಹಳ್ಳಿ, ಮೆಳಕಟ್ಟೆ, ಬಳ್ಳಾರಿ ಜಿಲ್ಲೆ, ಎನ್.ಜಿ.ಓ (ಮುಂಡ್ರಿಗಿ) & ಹಲಕುಂದಿ, ವಿಜಯಪುರ ಜಿಲ್ಲೆ, ಬಬಲೇಶ್ವರ, ವಿಜಯಪುರ ಜಿಲ್ಲೆ, ಮುದ್ದೇಬಿಹಾಳ 2ನೇ ಹಂತ, ಬಡಾವಣೆಗಳಲ್ಲಿ** ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಹಂಚಿಕೆ ನಂತರ ಉಳಿದಿರುವ ನಿವೇಶನಗಳನ್ನು ವಿಲೇವಾರಿ ಮಾಡಲು ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ **ದಿನಾಂಕ: 23–11–2023ರ** ಪ್ರಜಾವಾಣಿ ಮತ್ತು ವಿಜಯವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–01–2024 ರವರಗೆ ವಿಸ್ತರಿಸಲಾಗಿತ್ತು.** ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕವನ್ನು 31–01–2024 ರವರೆಗೆ ಮರು ವಿಸ್ತರಿಸಲಾಗಿದೆ.** ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅಂತರಜಾಲ https://www.khb.karnataka.gov.in ಅನ್ನು ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
DIPR/CP/AAPL/RO2960/23-24 ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ–ಕೇಂದ್ರೀಯ–4 ವಿಭಾಗ, ಎನ್.ಆರ್. ಚೌಕ, ಬೆಂಗಳೂರು–560001.

ಸಂ: ಕಾಪಾಅ/ಯೋ–ಕೇಂ–4/ಟೆಂಡ್/02/2023–24 ದಿನಾಂಕ: 08.01.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ಕೇಂದ್ರೀಯ–4 ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ)
1	ಹಲಸೂರು ರೆಫರಲ್ ಆಸ್ಪತ್ರೆ ಮತ್ತು ಆಸ್ಟಿನ್ ಟೌನ್ ಹೆರಿಗೆ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳಿಗಾಗಿ ಹೊಸ ಕ್ವಾರ್ಟರ್ಸ್ ಕಟ್ಟಡದ ನಿರ್ಮಾಣ ಕಾಮಗಾರಿ.	508.30	ರೂ. 7.625 ಲಕ್ಷಗಳು (ರೂ. 1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ. ಉಳಿದ ಮೊತ್ತ ಬಿಡ್ ದಸ್ತಾವೇಜಿನಲ್ಲಿ ಸೂಚಿಸಿದಂತೆ.

1) ಟೆಂಡರ್ ಡಾಕ್ಯುಮೆಂಟ್‌ಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)ಪೂರ್ವಭಾವಿ ಸಭೆ ದಿನಾಂಕ : **18.01.2024 ಅಪರಾಹ್ನ 3.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.01.2024 ರ ಸಂಜೆ 5.30 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25.01.2024 ರ ಬೆಳಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–46010000 ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ಕೇಂದ್ರೀಯ–4 ವಿಭಾಗ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾರಸುದಾರರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಗುವಿನ ಭಾವಚಿತ್ರ

ಮಗುವಿನ ವಿವರ: ಕ್ರ.ಸಂ.1)ಹೆಸರು: ಕೃತಿ (ಸಂಸ್ಥೆಯವರು ಇಟ್ಟಿರುವ ಹೆಸರು) 2)ವಯಸ್ಸು: ಅಂದಾಜು 30 ದಿನಗಳು 3)ಲಿಂಗ: ಹೆಣ್ಣು 5)ಬಣ್ಣ: ಗೋದಿ ಬಣ್ಣ 6)ಪತ್ತೆಯಾದ ವರ್ಷ: 27.12.20237)ಪತ್ತೆಯಾದ ಸ್ಥಳ: ಸರ್ಕಾರಿ ಆಸ್ಪತ್ರೆ ಮಕ್ಕಳ ವಿಭಾಗ 8)ಪೊಲೀಸ್ ಠಾಣೆ: ಹಾಸನ ಗ್ರಾಮಾಂತರ. ಮೇಲೆ ತಿಳಿಸಿದಂತಹ ಬಾಲಕಿಯ ವಾರಸುದಾರರು ಇದ್ದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾಸಾಸಂಇ/ಹಿಸನಿ/ಹಾಸನ/633/ಕೆಎಸ್‌ಎಂಸಿಎ/639/2023–24

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ಕರ್ನಾಟಕ ಸರಕಾರ

ಸಂ:ಕಾಇಂ/ಗ್ರಾಕುನೀ&ನೈವಿ/ಟೆಂಡರ್ ಪ್ರಕಟಣೆ ನಂ.18/2023–24/JE-1/1311 ದಿನಾಂಕ: 09.01.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಂದ “ಜಲ್ ಜೀವನ್ ಮಿಷನ್” ಯೋಜನೆಯಡಿಯಲ್ಲಿ ಗ್ರಾಮಗಳ ಕ್ರಿಯಾ ಯೋಜನೆಗಳನ್ನು (VAP), ಮಾಹಿತಿ ಹಾಗೂ ಸಂವಹನ ಚಟುವಟಿಕೆಗಳು (IEC), ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳನ್ನು (HRD) ಸಮಗ್ರವಾಗಿ ಅನುಷ್ಠಾನ ಮಾಡಲು ನುರಿತ ಅನುಭವಿ ಅನುಷ್ಠಾನ ಬೆಂಬಲ ಸಂಸ್ಥೆಗಳನ್ನು (ISAs) ನೇಮಿಸುವ ಸಲುವಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ ಮೆಂಟ್ ಪದ್ಧತಿಯಲ್ಲಿ ನಿಭಂದನೆಗೊಳಪಟ್ಟಂತೆ ಟೆಂಡರುಗಳನ್ನು ಅಹ್ವಾನಿಸಲಾಗಿದ್ದು, ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು **Government of Karnataka KPP portal WEB site https:// www.kppp.karnataka.gov.in** ಆನ್ ಲೈನ್ ಮುಖಾಂತರ ಸ್ವೀಕರಿಸಲಾಗುವುದು.

(1) ಟೆಂಡರ್ ಗಳನ್ನು ಸಲ್ಲಿಸಲು ನಿಗದಿ ಪಡಿಸಿದ **ದಿನಾಂಕ: 09.01.2024** ರಿಂದ **16.01.2024 ರ 4.00 PM** ವರೆಗೆ. (2) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 17.01.2024 4.30 PM.** (3) ಆರ್ಥಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 18.01.2024 11.00 AM.**

ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ https:// www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ.

KPP portal helpdesk: 080-22371090/22373788
Hphelpdesk.blr@intarvo.com

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ವಾಸಾಇ/ಸನಿಉ/ಕೆಎಸ್‌ಎಂಸಿಎ/625/23–24 ದಿ: 09.01.2024 ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಂಕ 03.01.2024 ರಂದು ಪ್ರಕಟಗೊಂಡ ಬೆವಿಕಂನ providing Consultancy Servcies for Cyber Security ಟೆಂಡರ್ ಪ್ರಕಟಣೆಯ ಜಾಹೀರಾತನ್ನು ದಯವಿಟ್ಟು ಉಲ್ಲೇಖಿಸುವುದು. ಕೆಳಗಿನ ತಿದ್ದುಪಡಿಯನ್ನು ದಯವಿಟ್ಟು ಗಮನಿಸತಕ್ಕದ್ದು.

Sl. No	Tender enquiry no. as per paper notification dated: 03.01.2024	To be read as
1	BESCOM/2023-24/SE0077	BESCOM/2023-24/ SE0090

ಬಿಡ್ ದಸ್ತಾವೇಜುಗಳ ಲಭ್ಯತೆ: 10.01.2024 ರಂದು ಅಥವಾ ನಂತರ
ಬಿಡ್ ಸ್ವೀಕೃತಿಯ ಕೊನೆಯ ದಿನಾಂಕ: 25.01.2024, 15:00 ಗಂಟೆಯವರೆಗೆ.
ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು: https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿರಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಡಾಸ್), ಬೆವಿಕಂ BICC-1, 23ನೇ ಮೈನ್, 17ನೇ ಕ್ರಾಸ್, 2ನೇ ಸೆಕ್ಟರ್, HSR ಲೇಔಟ್, ಬೆಂಗಳೂರು–560102.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ — ಕೃಷಿ ಇಲಾಖೆ
ಕೃಷಿ ಆಯುಕ್ತಾಲಯ ಶೇಷಾದ್ರಿ ರಸ್ತೆ, ಬೆಂಗಳೂರು–560001

ಸಂ. SFS-5/Seed RfP/Kharif 2024/2023-24 ದಿನಾಂಕ: 04.01.2024

Request for Proposal ಅಧಿಸೂಚನೆ

2024ರ ಮುಂಗಾರು ಹಂಗಾಮಿಗೆ ಇಲಾಖಾ ಕಾಯಕಮಗಳಿಗೆ ಅವಶ್ಯವಿರುವ ಭತ್ತ, ರಾಗಿ, ಸಜ್ಜೆ, ಜೋಳ, ಮೆಕ್ಕೆಜೋಳ, ತೃಣ ಧಾನ್ಯಗಳು, ತೊಗರಿ, ಹೆಸರು, ಉದ್ದು, ಅಲಸಂದೆ, ಶೇಂಗಾ, ಸೋಯಾಅವರೆ, ಹರಳು, ಹತ್ತಿ ಮತ್ತು ಸೂರ್ಯಕಾಂತಿ ಬೆಳೆಗಳ ಪ್ರಮಾಣಿತ/ನಿಜಚೀಟಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಬಿತ್ತನೆ ಬೀಜ ಉತ್ಪಾದನಾ ಸಂಸ್ಥೆಗಳಿಂದ ಕನ್‌ಸೈನ್‌ಮೆಂಟ್ **Request for Proposal** ಆಹ್ವಾನಿಸಲಾಗಿದೆ. ಸದರಿ **Request for Proposal** ಕನ್‌ಸೈನ್‌ಮೆಂಟ್ **(Consignment)** ಆಧಾರದ ಮೇಲೆ ಬೇಡಿಕೆ ಇರುವ ಬಿತ್ತನೆ ಬೀಜಗಳ ಮೂಲವನ್ನು ಗುರುತಿಸಲು ಕರೆಯಲಾಗಿದೆ.

ಇಚ್ಛೆಯುಳ್ಳ ಸರಬರಾಜುದಾರರು **Request for Proposal** ಅರ್ಜಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಅಂತರ್‌ಜಾಲದಿಂದ ಉಚಿತವಾಗಿ ಪಡೆಯಬಹುದಾಗಿದೆ. ಸದರಿ **Request for Proposal** ನಲ್ಲಿ ಭಾಗವಹಿಸಲಿಚ್ಛಿಸುವ ಬೀಜ ಸರಬರಾಜುದಾರರು ಇ–ಆಡಳಿತ ಕೇಂದ, ನಾಲ್ಕನೇ ಮಹಡಿ, ಶ್ರೀ ಅರವಿಂದ ಭವನ, ಮೈಥಿಕ್ ಸೊಸೈಟಿ ಕಾಂಪೌಂಡ್, ನೃಪತುಂಗ ರಸ್ತೆ, ಬೆಂಗಳೂರು–560001 ರವರಲ್ಲಿ ನೊಂದಣಿ ಮಾಡಿಸಿ **DSC Key** ಅಥವಾ ಇ–ಟೋಕನ್ ಪಡೆಯಬೇಕಾಗಿದೆ. **Request for Proposal** ಅರ್ಜಿಗಳು ಇ–ಪ್ರೊಕ್ಯುರ್‌ಮೆಂಟ್ ಅಂತರ್ಜಾಲ: **https://kppp.karnataka.gov.in**ನಲ್ಲಿ ದಿನಾಂಕ : 03–01–2024 ರಿಂದ ಲಭ್ಯವಾಗುತ್ತದೆ. **Request for Proposal** ಸಂಖ್ಯೆ. **AD/2023-24/IND0020.** ಸದರಿ **Request for Proposal** ನ್ನು ಅಂತರ್ ಜಾಲದ **(online)** ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : 02–02–2024, ಸಮಯ : ಸಂಜೆ 5.00 ಗಂಟೆ. ತಾಂತಿಕ ಬಿಡ್‌ಗಳನ್ನು ದಿನಾಂಕ: 05–02–2024 ರಂದು ಬೆಳಿಗ್ಗೆ : 11.00 ಗಂಟೆಗೆ ಸಂಭ್ರಮ ಸಭಾಂಗಣ, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು.

ಸಹಿ/–
DIPR/CP/2955/Zen/2023-24 ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ — ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560 001
ದೂರವಾಣಿ: 080–22213129, ಇ–ಮೇಲ್: jdpevkin@gmail.com

ಸಂಖ್ಯೆ: ಪಿಇ/ಎಫ್‌ಡಿ/47/2015–16/2023–24 ದಿನಾಂಕ: 08.01.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು–01, ಇ–ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮೂಲಕ ಸ್ಥಿರ ಠೇವಣಿಯಲ್ಲಿ ಹೆಚ್ಚುವರಿ ನಿಧಿಯಾಗಿರುವ ವಿದ್ಯಾರ್ಥಿಗಳ ಕ್ರೀಡಾ ಶುಲ್ಕದ ಹೂಡಿಕೆಗೆ ಸ್ಪರ್ಧಾತ್ಮಕ ಬಡ್ಡಿದರವನ್ನು ಉಲ್ಲೇಖಿಸಲು ಪ್ರತಿಷ್ಠಿತ ಸಾರ್ವಜನಿಕ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸುತ್ತದೆ. ಟೆಂಡರ್‌ಗಳು ಎಲೆಕ್ಟ್ರಾನಿಕ್ ಮೋಡ್‌ನಲ್ಲಿರಬೇಕು ಮತ್ತು ಅನುಮೋದಿತ ತಾಂತ್ರಿಕ ಬಿಡ್‌ಗಳಿಗೆ ಮಾತ್ರ ಹಣಕಾಸಿನ ಬಿಡ್ ತೆರೆಯಲಾಗುತ್ತದೆ.

ಪೂರ್ವ ಬಿಡ್ ಸಭೆ ನಡೆಸುವ **ದಿನಾಂಕ: 16.01.2024 ರಂದು ಬೆಳಿಗ್ಗೆ 11.00 ಗಂಟೆಗೆ.** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಮೌಲ್ಯದ 2.5% ರಷ್ಟು ಇಎಂಡಿಯೊಂದಿಗೆ ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **20.01.2024 ರಂದು ಸಂಜೆ 5.00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 22.01.2024 ರಂದು ಬೆಳಗ್ಗೆ 11.00 ಗಂಟೆಗೆ** ಮತ್ತು ಹಣಕಾಸು ಬಿಡ್‌ಗಳನ್ನು ತೆರೆಯುವ **ದಿನಾಂಕ: 24.01.2024 ಅಥವಾ 25.01.2024 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ತೆರೆಯುವ ಸ್ಥಳ: ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, 1ನೇ ಮಹಡಿ, ನ್ಯೂ ಪಬ್ಲಿಕ್ ಆಫೀಸಸ್, ನೃಪತುಂಗ ರಸ್ತೆ, ಬೆಂಗಳೂರು–560001. ಹೆಚ್ಚಿನ ವಿವರಗಳನ್ನು ಕೆಳಗೆ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ವೈಯಕ್ತಿಕವಾಗಿ ಭೇಟಿಮಾಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್ – 9611237631ಗೆ ಕರೆಮಾಡಿ ಪಡೆಯಬಹುದು.

ಸಹಿ/– ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಕೆರೆಗಳು–ಯಲಹಂಕ), ರೂಂ. ನಂ. 308, 3ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ(ಯಲಹಂಕ–ಕೆರೆಗಳು)/ಟೆಂಡರ್–04/2023–24 ದಿನಾಂಕ: 09.01.2024

ಟೆಂಡರ್ ಪ್ರಕಟಣೆ
(ದ್ವಿ ಲಕೋಟೆ ಪದ್ಧತಿ – ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಳ ಸಹಿದಾರರು, ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ಕೇಂದ್ರ / ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	ವೆಂಕಟೇಶಪುರ ಕೆರೆಗೆ ಚೈನ್‌ಲಿಂಕ್ ಫೆನ್ಸಿಂಗ್ ಒದಗಿಸುವುದು.	100.00	2.00
2	ಸಿಂಗಾಪುರ ಕೆರೆಗೆ ಚೈನ್‌ಲಿಂಕ್ ಫೆನ್ಸಿಂಗ್ ಒದಗಿಸುವುದು.	100.00	2.00
3	ಶ್ರೀನಿವಾಸಪುರ ಕೆರೆಗೆ ಚೈನ್‌ಲಿಂಕ್ ಫೆನ್ಸಿಂಗ್ ಒದಗಿಸುವುದು.	50.00	1.00
4	ವೀರಸಾಗರ ಕೆರೆಗೆ ಚೈನ್‌ಲಿಂಕ್ ಫೆನ್ಸಿಂಗ್ ಒದಗಿಸುವುದು.	50.00	1.00

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಸ್ತಾವೇಜುಗಳ ಲಭ್ಯತೆ: **11.01.2024ರ ಬೆಳಿಗ್ಗೆ 10:00 ಗಂಟೆಯ** ನಂತರ. (3) ಪೂರ್ವಭಾವಿ ಸಭೆ: **19.01.2024ರ ಸಂಜೆ 4:00 ಗಂಟೆಗೆ.** (4) ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **25.01.2024ರ ಸಂಜೆ 4:00 ಗಂಟೆವರೆಗೆ.** (5) ತಾಂತ್ರಿಕ ಬಿಡ್‌ಗಳ ತೆರೆಯುವಿಕೆ: **29.01.2024ರ ಸಂಜೆ 4:30ಕ್ಕೆ.** (6) ಆರ್ಥಿಕ ಬಿಡ್‌ಗಳ ತೆರೆಯುವಿಕೆ: ನಂತರ ತಿಳಿಸಲಾಗುವುದು (ತಾಂತ್ರಿಕ ಬಿಡ್ ಅನುಮೋದನೆಯ ನಂತರ). ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆರೆಗಳು–ಯಲಹಂಕ, ಬಿಬಿಎಂಪಿ

ನಗರಸಭಾ ಕಾರ್ಯಾಲಯ ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ–562114
ದೂ: 080–27931221 ಸಹಾಯವಾಣಿ: 080–27931759
ಇ–ಮೇಲ್: itstaff_ulb_hosakote@yahoo.com ವೆಬ್‌ಸೈಟ್: www.hosakotecity.mrc.gov.in

ಸಂ: ನಸಹೊ/ಆ.ಶಾ/ಘವನಿ/ಸಿಆರ್/ಟೆಂಡರ್–5/2023–24 ದಿನಾಂಕ: 08.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಸ್ವಚ್ಛಭಾರತ್ ಮಿಷನ್–1, 15ನೇ ಹಣಕಾಸು ಮುಕ್ತ ನಿಧಿ 2023–24 ರ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರು ಹಾಗೂ ಸರಬರಾಜುದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರಮ. ಸಂ.	ಇಂಡೆಂಟ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)
1	DMA/2023-24/IND1229	98.80	1,98,000/–
2	DMA/2023-24/OW/WORK_INDENT9900	5.00	12,500/–

ಟೆಂಡರ್ ಸಲ್ಲಿಸುವ ವಿವರಗಳು:– (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. (2) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: **17.01.2024 ರ ಸಂಜೆ 5:00 ಘಂಟೆಯವರೆಗೆ.** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **19.01.2024 ಸಮಯ ಬೆಳಿಗ್ಗೆ 11.00 ಗಂಟೆಗೆ** ನಿಗಧಿಪಡಿಸಲಾಗಿರುತ್ತದೆ. (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **22.01.2024 ಸಮಯ ಬೆಳಿಗ್ಗೆ 11.00 ಗಂಟೆಗೆ.** (5) ಹೆಚ್ಚಿನ ವಿವರಗಳನ್ನು ಕಛೇರಿಯ ತಾಂತ್ರಿಕ ಶಾಖೆಯಿಂದ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ–ಪೋರ್ಟಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಹೊಸಕೋಟೆ
ಸಹಿ/– ಆಡಳಿತಾಧಿಕಾರಿಗಳು ನಗರಸಭೆ, ಹೊಸಕೋಟೆ
ವಾಸಾಸಂಇ/ವಾಪ್ರಾ/2964/ಸ್ಪ್ಯಾನ್/2023–24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029.
ಫೋನ್: 26096832/26096910 E-mail: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–593/2023–24 ದಿನಾಂಕ: 10.01.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್ ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Item Description	Qty.	EMD (Rs.)
Providing Comprehensive Market Development support service as a single project for a period of two years.	As detailed in tender document	10,00,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ 11.01.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ 25.01.2024 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 09.02.2024ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ 12.02.2024 ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತು ವಾಣಿಜ್ಯ ಟೆಂಡರ್ ತೆರಯುವ ದಿನಾಂಕ ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029.
ಫೋನ್: 26096832/26096910 E-mail: purchase@kmf.coop

ಟೆಂಡರ್ ಪ್ರಕಟಣೆಗಳು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Item Description	IFT No.	EMD (Rs.)
Production and Supply of Packaged Drinking Water Under the Brand Name “Nandini” for a period of one year (Bangalore Zone)	KMF/PUR/ Tender-604/ 2023-24	6,12,000/-
Production and Supply of Packaged Drinking Water Under the Brand Name “Nandini” for a period of one year (Dharawada Zone)	KMF/PUR/ Tender-605/ 2023-24	1,60,000/-
Production and Supply of Packaged Drinking Water Under the Brand Name “Nandini” for a period of one year (Mangalore Zone)	KMF/PUR/ Tender-606/ 2023-24	1,62,000/-
Production and Supply of Packaged Drinking Water Under the Brand Name “Nandini” for a period of one year (Ballary Zone)	KMF/PUR/ Tender-607/ 2023-24	1,68,000/-

ವಲಯವಾರು ಪರಿಮಾಣವನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು. ಟೆಂಡರ್ ಪ್ರಾರಂಭವಾಗುವ ದಿನಾಂಕ 12.01.2024 ರಿಂದ, ಟೆಂಡರ್ ಪೂರ್ವಭಾವಿ ಸಭೆ ದಿನಾಂಕ 19.01.2024 ರಂದು ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 29.01.2024 ರ ಸಂಜೆ 5.00 ಗಂಟೆ ಒಳಗಾಗಿ, ತಾಂತ್ರಿಕ ಟೆಂಡರ್ ತೆರಯುವ ದಿನಾಂಕ 31.01.2024 ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತು ವಾಣಿಜ್ಯ ಟೆಂಡರ್ ತೆರಯುವ ದಿನಾಂಕ ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ವಿನಿಮಯ ದರ

$ ಡಾಲರ್	83.13
£ ಪೌಂಡ್	105.92
€ ಯುರೊ	91.05
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9570
ತಿಪಟೂರು	₹8500-10500

ಷೇರುಪೇಟೆ ವಹಿವಾಟು 31



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,513
ಇಂದಿನ ಅಂತ್ಯ	21,544
▲	31
ದಿನದ ಗರಿಷ್ಠ	21,724

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹575

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹885 (885)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹830 (825)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹250-468
ದ್ವಿತಳಿ (ಬಿ.ವಿ)	₹301-593

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹131.50

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form



1st Death Anniversary

Dr H Chandrashekhar
DOB. 06-Feb-1939
DOD. 10-Jan-2023
H.Vanajaskhi Shekhar (Wife)

ನಿಧನ

ಸದಾ ನಮ್ಮೆಲ್ಲರ ಹೃನ್ಮನಗಳಲ್ಲಿ ನೆಲೆಸಿರುವ ಸರ್ವ ಸದಸ್ಯರ ಏಳ್ಗೆಗೆ ಪರಿಶ್ರಮಿಸಿ ಪಾಲಿಸಿ ಪೋಷಿಸಿ ಆಲದ ಮರದಂತೆ ಆಧಾರ ಸ್ತಂಭವಾಗಿದ್ದ ಕರುಣಾಮಯಿ ಮಾತೃವಾತ್ಸಲ್ಯ ಪೂರಿತೆ
ಶ್ರೀಮತಿ ಇಂದಿರಮ್ಮನವರು
ದಿನಾಂಕ: 08/01/24. ನಮ್ಮೆಲ್ಲರನ್ನು ಅಗಲಿ ಭಗವಂತನಲ್ಲಿ ಲೀನರಾದರು.

5ನೇ ವರ್ಷದ ಸ್ಮರಣೆ

ಆರ್. ಕೃಷ್ಣಪ್ಪ
3-3-1930 - 10-01-2019
ಈಗ ನೀವು ನಮ್ಮೊಂದಿಗೆ ಇಲ್ಲವಾದರೂ, ನಿಮ್ಮ ನಡೆ ನುಡಿ, ಪ್ರೀತಿ ವಾತ್ಸಲ್ಯ, ಮಮಕಾರ ಮತ್ತು ಸತ್ಕಾರ್ಯಗಳ ಸವಿನೆನಪು ಸದಾಕಾಲ ನಮ್ಮೊಂದಿಗಿವೆ. ನೀವು ಅನುದಿನ ಅನುಕ್ಷಣವೂ ನಮ್ಮ ಹೃದಯ ಮತ್ತು ಮನಸ್ಸುಗಳಲ್ಲಿ ಅಜರಾಮರವಾಗಿದ್ದೀರಿ.

ಸದಾ ನಿಮ್ಮನ್ನು ಸ್ಮರಿಸುವ: ಶ್ರೀಮತಿ ಅಕ್ಕಯ್ಯಮ್ಮ (ಹೆಂಡತಿ)
ಕೆ. ರಾಮಚಂದ್ರಪ್ಪ ಮತ್ತು ಕುಟುಂಬದವರು
ಕೆ. ರಾಮದಾಸ್ ಮತ್ತು ಕುಟುಂಬದವರು
ಕೆ. ನರಸಿಂಹ ಮತ್ತು ಕುಟುಂಬದವರು
ಕುಟುಂಬದ ಸದಸ್ಯರು ಮತ್ತು ಬಂಧುಗಳು
ದ್ವಾರಕನಗರ, ಬನಶಂಕರಿ 3ನೇ ಹಂತ, ಬೆಂಗಳೂರು-560 085

26ನೇ ವರ್ಷದ ಪುಣ್ಯ ತಿಥಿ

ಶ್ರೀಮತಿ ಸಾಕಮ್ಮ
ನಿಧನ: 30.4.2011

ಪಟೇಲ್ ಆರ್. ಕೃಷ್ಣಾರೆಡ್ಡಿ
ನಿಧನ: 10.1.1998

ನೀವು ನಮ್ಮನ್ನು ಅಗಲಿ ಇಂದಿಗೆ 26 ವರ್ಷಗಳು ಸಂದರೂ ಸದಾ ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ

ಇಂತಿ: ಶ್ರೀ ಕೆ. ಪುರುಷೋತ್ತಮ ರೆಡ್ಡಿ ಮತ್ತು ಕುಟುಂಬದವರು
ಎಸ್.ಕೆ.ಆರ್. ಕನ್‌ವೆನ್‌ಷನ್ ಹಾಲ್,
ಮಾರತ್ತಹಳ್ಳಿ, ಬೆಂಗಳೂರು-37

ಚೆನ್ನೈನಲ್ಲಿ ಇತ್ತೀಚೆಗೆ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರಾಮ್‌ರಾಜ್ ಕಾಟನ್ ಸಂಸ್ಥೆಯ ಸಂಸ್ಥಾಪಕ ನಾಗರಾಜನ್ ಅವರು, ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು

ರಾಮ್‌ರಾಜ್ ಕಾಟನ್‌ನಿಂದ ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನಲ್ಲಿ ಮುಂದಿನ ಐದು ವರ್ಷಗಳಲ್ಲಿ ₹1 ಸಾವಿರ ಕೋಟಿ ಹೂಡಿಕೆಗೆ ರಾಮ್‌ರಾಜ್ ಕಾಟನ್ ಸಂಸ್ಥೆ ಮುಂದಾಗಿದೆ.

ಚೆನ್ನೈನಲ್ಲಿ ಇತ್ತೀಚೆಗೆ ನಡೆದ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಸಂಸ್ಥೆಯ ಸಂಸ್ಥಾಪಕ ನಾಗರಾಜನ್ ಅವರು, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಈ ಕುರಿತ ಒಪ್ಪಂದಕ್ಕೆ ಸಹಿ ಹಾಕಿದರು.

ನೂಲುವ ಹಾಗೂ ನೇಯ್ಗೆ ಸಂಸ್ಕರಣಾ ಘಟಕ ಸ್ಥಾಪನೆಗಾಗಿ ಬಂಡವಾಳವನ್ನು ವಿನಿಯೋಗಿಸಲಾಗುತ್ತಿದೆ. ಇದರಿಂದ 5 ಸಾವಿರ ಉದ್ಯೋಗ ಸೃಷ್ಟಿಯಾಗಲಿವೆ ಎಂದು ಸಂಸ್ಥೆ ತಿಳಿಸಿದೆ.

‘ಈ ಬಂಡವಾಳ ಹೂಡಿಕೆಯಿಂದಾಗಿ ಸಾವಿರಾರು ನೇಕಾರರಿಗೆ ಉದ್ಯೋಗ ದೊರೆಯಲಿದೆ. ಕೈಗಾರಿಕಾ ಅಭಿವೃದ್ಧಿಯ ನೆಲೆಗಟ್ಟಿನಲ್ಲಿ ತಮಿಳುನಾಡು ಪ್ರಗತಿ ಪಥದಲ್ಲಿ ಸಾಗಲು ಸಮಾವೇಶವು ಸಹಕಾರಿಯಾಗಿದೆ’ ಎಂದು ನಾಗರಾಜನ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-37000
ಹಳತು	42000-44500
ಕಾರ್ಕಳ	
ಹೊಸತು	25000-37000
ಹಳತು	30000-44000
ಸಾಗರ	
ಬಿಳಿಗೋಟು	32199-32199
ಚಾಲಿ	35689-38199
ಕೋಕ	34199-34199
ಕೆಂಪುಗೋಟು	36099-37699
ರಾಶಿ	45499-48609
ಸಿಪ್ಪೆಗೋಟು	16290-20799
ಶಿವಮೊಗ್ಗ	
ಬೆಟ್ಟೆ	42200-54599
ಗೊರಬಲು	16119-38909
ಹೊಸತು	45368-48899
ರಾಶಿ	31011-49599
ಸರಕು	46010-78499
ಕುಂದಾಪುರ	
ಹಳೆಚಾಲಿ	39000-55000
ಹೊಸಚಾಲಿ	37000-45000
ಹೊನ್ನಾವರ	
ಹಳೆಚಾಲಿ	35000-39200
ಸಿದ್ದಾಪುರ	
ಬಿಳಿಗೋಟು	31989-34609
ಚಾಲಿ	37009-40059
ಕೋಕ	31599-33389
ಹೊಸಚಾಲಿ	31299-34809
ಕೆಂಪುಗೋಟು	31999-33319
ರಾಶಿ	45069-48809
ತಟ್ಟಿಬೆಟ್ಟೆ	40699-48489
ಶಿರಸಿ	
ಬೆಟ್ಟೆ	38989-45909
ಬಿಳಿಗೋಟು	26299-34922
ಚಾಲಿ	38499-40799
ಕೆಂಪುಗೋಟು	31699-34500
ರಾಶಿ	43199-48599
ಯಲ್ಲಾಪುರ	
ಅಪಿ	58009-58600
ಬಿಳಿಗೋಟು	24899-35600
ಚಾಲಿ	36811-40611
ಕೋಕ	18109-30599
ಕೆಂಪುಗೋಟು	24899-36405
ರಾಶಿ	46000-55499
ತಟ್ಟಿಬೆಟ್ಟೆ	37499-45800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13750	13800	-	181.40
ಎಸಿ	7840	7800	-	
ಆರ್‌ಪಿ	11000	11500	-	ಲಂಡನ್
ಆರ್‌ಸಿ	6970	7000	-	2885 ಡಾಲರ್ಸ್

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಯಲಗೂರೇಶ ಗೌಡ್ರ, ಊರು ತಿಳಿಸಿಲ್ಲ.

● ಪ್ರಶ್ನೆ: ಲಾಂಗ್ ಟರ್ಮ್ ಹೂಡಿಕೆ ಮತ್ತು ಶಾರ್ಟ್ ಟರ್ಮ್ ಹೂಡಿಕೆಯಲ್ಲಿನ ವ್ಯತ್ಯಾಸಗಳೇನು? ಕಂಪನಿಯು ಕಡಿಮೆ ಲಾಭದಲ್ಲಿ ಸಾಗುತ್ತಿರುವಾಗ ನಾವು ಷೇರು ಮಾರಾಟ ಮಾಡಿ ಮಾರುಕಟ್ಟೆಯಿಂದ ಹಣ ತೆಗೆದುಕೊಂಡು ಮತ್ತೆ ಜಾಸ್ತಿಯಾಗುತ್ತಿರುವಾಗ ಹೂಡಿಕೆ ಮಾಡಿದರೆ ಲಾಂಗ್ ಟರ್ಮ್ ಪ್ರಾಫಿಟ್ ನಮಗೂ ಸಿಗುತ್ತದೆಯೇ? ಇದು ಲಾಂಗ್ ಟರ್ಮ್ ಅನಿಸಿಕೊಳ್ಳುತ್ತದೆಯೇ ಎಂಬ ಬಗ್ಗೆ ತಿಳಿಸಿ.

ಉತ್ತರ: ದೀರ್ಘಾವಧಿ ಹಾಗೂ ಅಲ್ಪಾವಧಿ ಹೂಡಿಕೆಯನ್ನು ಆದಾಯ ತೆರಿಗೆ ನಿಯಮ ಹಾಗೂ ಷೇರು ಮಾರುಕಟ್ಟೆಯ ಸಾಮಾನ್ಯ ವ್ಯವಹಾರ ಪದ್ಧತಿಯ ಆಧಾರದ ಮೇಲೆ ಅರ್ಥೈಸಿಕೊಳ್ಳಬಹುದು. ಆದಾಯ ತೆರಿಗೆ ನಿಯಮದ ಅನ್ವಯ ತೆರಿಗೆ ದರದ ನಿರ್ಣಯಕ್ಕೆ ಷೇರು ಹೂಡಿಕೆಗಳನ್ನು ದೀರ್ಘಾವಧಿ ಹಾಗೂ ಅಲ್ಪಾವಧಿ ಹೂಡಿಕೆಯಾಗಿ ವಿಂಗಡಿಸಲಾಗಿದೆ. ಇದು ಷೇರುಗಳನ್ನು ಕೊಂಡುಕೊಂಡ ದಿನಾಂಕದಿಂದ ಮಾರಾಟ ದಿನಾಂಕದ ಅವಧಿಯನ್ನು ಪರಿಗಣಿಸಿ ನಿರ್ಣಯಿಸಲಾಗುತ್ತದೆ. ನಮ್ಮ ದೇಶದಲ್ಲಿ ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಮಾರಾಟವಾಗುವ ಷೇರುಗಳೆಲ್ಲವೂ ಅಲ್ಪಾವಧಿ ಹೂಡಿಕೆಗಳೇ. ಇದಕ್ಕಿಂತ ಅಧಿಕ ಅವಧಿಯ ಡಿಮ್ಯಾಟ್ ಖಾತೆಯಲ್ಲಿ ಹೊಂದಿದ್ದರೆ ಅವು ತೆರಿಗೆ ಲೆಕ್ಕಾಚಾರದ ವಿಚಾರಕ್ಕೆ ಸಂಬಂಧಿಸಿ ದೀರ್ಘಾವಧಿ ಹೂಡಿಕೆಗಳಾಗಿವೆ.

ಆದರೆ, ಹೂಡಿಕೆ ವಿಚಾರವಾಗಿ ನೀಡುವ ಸಲಹೆ, ಸೂಚನೆಗೆ ಸಂಬಂಧಿಸಿ ಹೇಳುವುದಾದರೆ, ಅಷ್ಟೊಂದು ನಿಖರ ಸಮಯಾವಧಿಯನ್ನು ಪರಿಗಣಿಸಲಾಗುವುದಿಲ್ಲ. ಸಾಮಾನ್ಯವಾಗಿ 5 ವರ್ಷಕ್ಕಿಂತ ಅಧಿಕ ಅವಧಿಯ ಹೂಡಿಕೆಯಾಗಿದ್ದರಷ್ಟೇ ದೀರ್ಘಾವಧಿ ಎಂದು ಊಹಿಸಲಾಗುತ್ತದೆ. ಪ್ರಮುಖವಾಗಿ ನಾವು ಕೆಲವು ನಿರ್ದಿಷ್ಟ ಉದ್ದೇಶಕ್ಕಾಗಿ ಹೂಡಿಕೆ ಮಾಡುವಾಗ ಈ ವಿಚಾರವನ್ನು ಉಲ್ಲೇಖಿಸಲಾಗುತ್ತದೆ.

ಉದಾಹರಣೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ, ನಿವೃತ್ತಿ ಆದಾಯಕ್ಕಾಗಿ, ಮನೆ, ವಾಹನ ಇತ್ಯಾದಿ ಖರೀದಿಗಾಗಿ ಸಾಕಷ್ಟು ಸಮಯದಿಂದ ಉಳಿತಾಯ ಮಾಡಬೇಕಾಗುವ ಕಾರಣ ಈ ಅವಧಿಯನ್ನು ಉಲ್ಲೇಖಿಸಲಾಗಿದೆ. ಈ ಉಲ್ಲೇಖದಂತೆ ಒಂದೆರಡು ವರ್ಷದ ಅವಧಿಯನ್ನು ಅಲ್ಪಾವಧಿ ಹಾಗೂ ಮೂರರಿಂದ ಐದು ವರ್ಷದ ಕಾಲಾವಧಿಯನ್ನು ಮಧ್ಯಮಾವಧಿ ಎಂದೂ ಪರಿಗಣಿಸುತ್ತಾರೆ. ಪ್ರಮುಖವಾಗಿ ಇವು ನಮ್ಮ ಹೂಡಿಕೆ ಸಲಹೆ, ನಿರ್ಣಯ ಕೈಗೊಳ್ಳಲು ನೆರವಾಗುತ್ತವೆ. ಇನ್ನು ಕಂಪನಿಯ ಲಾಭ, ನಷ್ಟ ಅಥವಾ ಅನಿರೀಕ್ಷಿತ ಲಾಭ ಇತ್ಯಾದಿ ಏನೇ ಇದ್ದರೂ ಷೇರು ಮೌಲ್ಯದಲ್ಲಿ ಏರುಪೇರು ಕಾಣಲು ಕಾರಣವಾಗುತ್ತದೆ. ಲಾಭ ಇದ್ದಾಗ ಅಲ್ಪ ಪ್ರಮಾಣದಲ್ಲಿ ಡಿವಿಡೆಂಟ್ ನೀಡುವ ಹೂಡಿಕೆದಾರರಿಗೆ ಲಾಭ ಹಂಚಲಾಗುತ್ತದೆ. ಎಲ್ಲದಕ್ಕಿಂತ ಮುಖ್ಯವಾಗಿ ನೀವು ಊಹಿಸಿದಂತೆ ಕಂಪನಿಯು ವರ್ಷದಿಂದ ವರ್ಷಕ್ಕೆ ಲಾಭ ಮಾಡುತ್ತಿರುವಾಗ ಸಹಜವಾಗಿ ಪ್ರತಿ ಷೇರಿನ ಲಾಭ ವೃದ್ಧಿಸುತ್ತದೆ. ತತ್ಪರಿಣಾಮ ಮಾರುಕಟ್ಟೆ ಬೆಲೆಯೂ ಏರುತ್ತದೆ. ಆದರೆ, ಇದಕ್ಕೆ ಕೆಲವು ತಿಂಗಳು ಕಾಯಬೇಕು ಹಾಗೂ ಲಾಭದ ಗತಿಯು ನಿರಂತರವಾಗಿ ವೃದ್ಧಿಸಿದಾಗ ಮಾತ್ರ ಇದನ್ನು ನಿರೀಕ್ಷಿಸಬಹುದು.

ಡಾ.ಅರುಣಕುಮಾರ್, ದಾವಣಗೆರೆ.

● ಪ್ರಶ್ನೆ: ನಾನು ಮತ್ತು ನನ್ನ ಹೆಂಡತಿ ಇಬ್ಬರೂ 40 ವರ್ಷ ವಯಸ್ಸಿನ ಖಾಸಗಿ ವೈದ್ಯರಾಗಿದ್ದು, ಖರ್ಚು ತೆಗೆದು ತಿಂಗಳಿಗೆ ಅಂದಾಜು ₹30 ಸಾವಿರದಿಂದ ₹35 ಸಾವಿರ ಉಳಿತಾಯ ಮಾಡುತ್ತೇವೆ. ಒಂದು 30*40 ಸೈಟ್ ಹೊಂದಿದ್ದು ಸದ್ಯ ದಾವಣಗೆರೆಯಲ್ಲಿ ಬಾಡಿಗೆ ಮನೆಯಲ್ಲಿದ್ದೇವೆ. ನನ್ನ ಇಬ್ಬರು ಅವಳಿ ಮಕ್ಕಳು 6 ವರ್ಷದವರಾಗಿದ್ದು ಅವರು ಪಿಯುಸಿ ಮುಗಿಸಿದ ಮೇಲೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು ಮತ್ತು ನಮಗೆ 60 ವರ್ಷದ ನಂತರ ಮಾಸಿಕ ಪಿಂಚಣಿ ಪಡೆಯಲು ಷೇರು ಮಾರುಕಟ್ಟೆಯಂತಹ ರಿಸ್ಕ್ ಹೂಡಿಕೆಯನ್ನು ಹೊರತುಪಡಿಸಿ ಅನುಕೂಲವಾಗುವ ಒಳ್ಳೆಯ ಹೂಡಿಕೆಗಳ ಬಗ್ಗೆ ತಿಳಿಸಿ ಕೊಡಿ.

ಉತ್ತರ: ಹೂಡಿಕೆಯಲ್ಲಿ ಅನೇಕ ಪ್ರಕಾರದ ಅವಕಾಶಗಳಿವೆ ಎನ್ನುವುದು ಈಗಾಗಲೇ ತಮಗೆ ಗೊತ್ತಿರಬಹುದುದು. ನಮ್ಮ ಆದ್ಯತೆ, ಸಮಯದ ಪರಿಧಿ ಹಾಗೂ ಹೂಡಿಕೆಗೆ ಅಗತ್ಯವಿರುವ ಮೊತ್ತದ ಖಚಿತತೆ ಇದ್ದಾಗ ನಿರ್ಧಾರ ತುಸು ಸುಲಭ. ಈಗಾಗಲೇ, ಮನೆ ಕಟ್ಟಲು ನಿವೇಶನ ಕೊಂಡಿದ್ದೀರಿ. ಇದು ಹೂಡಿಕೆಯಾಗಿದ್ದರೂ ಮುಂದೆ ಹಣದ ನಗದೀಕರಣದ ದೃಷ್ಟಿಯಿಂದ ಮಾಡಿರುವ ಹೂಡಿಕೆಯಾಗಿರಲಾರದು. ಹೀಗಾಗಿ ಮುಂದಿನ ಹೂಡಿಕೆಯು ಭವಿಷ್ಯದಲ್ಲಿ ಸೂಕ್ತ ಲಾಭ ನೀಡುವ ದೃಷ್ಟಿಯಿಂದಷ್ಟೇ ಎಂದು ಊಹಿಸಿ ನಿಮ್ಮ ಪ್ರಶ್ನೆಗೆ ಉತ್ತರಿಸಲಾಗಿದೆ.

ಈಗಾಗಲೇ, ನೀವು ನೇರ ಷೇರು ಮಾರುಕಟ್ಟೆ ಬಿಟ್ಟು ಉಳಿದ ಹೂಡಿಕೆಗೆ ಮಾನಸಿಕವಾಗಿ ಸಿದ್ಧತೆ ನಡೆಸಿರುವುದರಿಂದ ಅದಕ್ಕೆ ಬದಲಾಗಿ ಮಧ್ಯಮ ದರದ ಲಾಭ ನೀಡುವ ಮ್ಯೂಚುವಲ್ ಫಂಡ್‌ಗಳನ್ನೂ ನಿಮ್ಮ ಉದ್ದೇಶಕ್ಕೆ ಆಯ್ಕೆ ಮಾಡಿಕೊಳ್ಳಬಹುದು. ನಿಮ್ಮ ಅವಳಿ ಮಕ್ಕಳ ಪ್ರಸ್ತುತ ವಯಸ್ಸು 6 ವರ್ಷ ಹಾಗೂ ನಿಮ್ಮ ವಯಸ್ಸು 40 ವರ್ಷ. ಪಿಯುಸಿ ಕಳೆದಂತೆ ಮಕ್ಕಳ ಮುಂದಿನ ಉನ್ನತ ವಿದ್ಯಾಭ್ಯಾಸಕ್ಕೆ ಇನ್ನು 10 ವರ್ಷದ ಸಮಯಾವಕಾಶ ಇದೆ. ಅದೇ ರೀತಿ ನಿಮ್ಮ ನಿವೃತ್ತಿಗೆ ಇನ್ನು 20 ವರ್ಷದ ಸಮಯವಿದೆ. ಈ ಅವಧಿಯಲ್ಲಿ ನೀವು ಪ್ರತಿವರ್ಷ ಮಾಡುವ ₹3.60 ಲಕ್ಷ ನಿರಂತರ ಹೂಡಿಕೆಯು ಹತ್ತು ವರ್ಷದ ಕೊನೆಗೆ ಅಸಲು ₹36 ಲಕ್ಷವಾಗುತ್ತದೆ ಹಾಗೂ 20 ವರ್ಷದ ಕೊನೆಗೆ ನಿಮ್ಮ ಹೂಡಿಕೆಯ ಅಸಲು ₹72 ಲಕ್ಷ ಆಗಿರುತ್ತದೆ.

ಮಧ್ಯಮ ಬೆಳವಣಿಗೆ ದರ (8-10) ಅನ್ವಯಿಸಿ ನಾವು ಲೆಕ್ಕ ಹಾಕಿದರೂ ಹತ್ತು ವರ್ಷದ ಕೊನೆಗೆ ₹36 ಲಕ್ಷವು ಸುಮಾರಾಗಿ ₹56 ಲಕ್ಷದಿಂದ ₹63 ಲಕ್ಷ ಆಗುತ್ತದೆ. ಈ ಮೊತ್ತ ನಗದೀಕರಿಸದೆ ಮುಂದುವರಿಸಿದರೆ ಅದೇ ಬೆಳವಣಿಗೆ ದರದಲ್ಲಿ ₹1.78 ಕೋಟಿಯಿಂದ ₹2.26 ಕೋಟಿ ಮೊತ್ತವಾಗುತ್ತದೆ. ಪ್ರತಿವರ್ಷ ನೀವು ನಿಮ್ಮ ಹೂಡಿಕೆ ಮೊತ್ತವನ್ನು ಹಿಂದಿನ ವರ್ಷಕ್ಕಿಂತ ಶೇ 5ರಷ್ಟು ವೃದ್ಧಿಸುತ್ತಾ ಹೋದರೆ ಹತ್ತು ವರ್ಷದ ಕೊನೆಗೆ ₹45.28 ಲಕ್ಷವು ಸುಮಾರಾಗಿ ₹69 ಲಕ್ಷದಿಂದ ₹76 ಲಕ್ಷ ಆಗುತ್ತದೆ. ಇದೇ ಹೆಚ್ಚುವರಿ ಹೂಡಿಕೆ ಮೊತ್ತ ನಗದೀಕರಿಸದೆ ಮುಂದುವರಿಸಿದರೆ 20 ವರ್ಷದಲ್ಲಿ ₹2.60 ಕೋಟಿಯಿಂದ ₹3.22 ಕೋಟಿ ಮೊತ್ತವಾಗುತ್ತದೆ.

ಈ ಹೂಡಿಕೆ ಒಮ್ಮೆಗೆ ನೋಡಿದರೆ ಅಚ್ಚರಿಯಾಗಬಹುದು. ಇದಕ್ಕಾಗಿ ಪ್ರತಿ ತಿಂಗಳು ಮ್ಯೂಚುವಲ್ ಫಂಡ್ ಹೂಡಿಕೆಯೇ ಸೂಕ್ತ. ನಿಮ್ಮ ಹೂಡಿಕೆಯ ಶೇ 25ರಷ್ಟನ್ನು ಇಕ್ವಿಟಿ ವಿಭಾಗಕ್ಕೆ ಹೂಡಿಕೆ ಮಾಡುವ ಕನ್ಸರ್ವೇಟಿವ್ ಹೈಬ್ರಿಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ ದೀರ್ಘಾವಧಿಯಲ್ಲಿ ಈ ಲಾಭ ನಿರೀಕ್ಷಿಸಬಹುದು. ಉಳಿದ ಮೊತ್ತ ಭದ್ರತೆ ಇರುವ ಸರ್ಕಾರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಇತರ ಯಾವುದೇ ಇಕ್ವಿಟಿ ಹೂಡಿಕೆಗಳಲ್ಲಿ ಈ ಪ್ರಮಾಣದಲ್ಲಿ ವ್ಯತ್ಯಾಸವಿರುವ ಕಾರಣ ಮಾರುಕಟ್ಟೆ ಅಪಾಯ ತುಸು ಅಧಿಕ. ಆದರೆ, ದೀರ್ಘಾವಧಿಯಲ್ಲಿ ಈ ರಿಸ್ಕ್ ಗೌಣ ಎನ್ನುವುದು ಗಮನದಲ್ಲಿರಲಿ. ಇನ್ನೂ ಒಂದು ಆಯ್ಕೆಯಾಗಿ ವರ್ಷಕ್ಕೆ ₹50 ಸಾವಿರ ಎನ್‌ಪಿಎಸ್‌ನಲ್ಲೂ ಹೂಡಿಕೆ ಮಾಡಬಹುದು. 60 ವಯಸ್ಸಿನ ನಂತರ ಪಿಂಚಣಿ ಹಾಗೂ ಅಂದಿನ ಮೊತ್ತ ನಗದೀಕರಿಸುವ ಅವಕಾಶವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್:businessdesk@prajavani.co.in

ಮುಂಬೈ ಧಾರಣೆ

ಶೇಂಗಾ

09-01-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11300-11400
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	845 (845)
ಪಾಮ್ ವಾರದ ಡೆಲಿವರಿ	828 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	835 (835)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,100 (62,000)
ಬೆಳ್ಳಿ ಕೆ.ಜಿ 71,800 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬೆಂಗಳೂರಿನಲ್ಲಿ ಶೇ 23ರಷ್ಟು ಇಳಿಕೆ: ವರದಿ ಬಿಡುಗಡೆ

ಹೊಸ ನೇಮಕಾತಿ ಕುಸಿತ

ಮುಂಬೈ (ಪಿಟಿಐ): 2023ರ ಡಿಸೆಂಬರ್‌ನಲ್ಲಿ ಬಿಪಿಒ ಮತ್ತು ಐ.ಟಿ ಆಧಾರಿತ ಸೇವಾ ಕಂಪನಿಗಳು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನೇಮಕಾತಿಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 16ರಷ್ಟು ಕುಸಿದಿದೆ ಎಂದು ನೌಕರಿಡಾಟ್‌ಕಾಂ ವರದಿ ಹೇಳಿದೆ.

ಬಿಪಿಒ ಶೇ 17, ಶಿಕ್ಷಣ ಶೇ 11, ರೀಟೆಲ್ ಶೇ 11 ಮತ್ತು ಆರೋಗ್ಯ ಕ್ಷೇತ್ರದಲ್ಲಿ ಶೇ 10ರಷ್ಟು ನೇಮಕಾತಿ ಕುಸಿದಿದೆ. ಐ.ಟಿ ವಲಯದಲ್ಲಿ ಶೇ 21ರಷ್ಟು ಇಳಿಕೆ ಆಗಿದ್ದು, ಉದ್ಯೋಗಾಕಾಂಕ್ಷಿಗಳಲ್ಲಿ ನಿರಾಶೆ ಮೂಡಿಸಿದೆ ಎಂದು ತಿಳಿಸಿದೆ.

ಆದರೆ ದತ್ತಾಂಶ ನಿರ್ವಹಣೆ ವಿಭಾಗ, ಐ.ಟಿ ಇನ್ಫ್ರಾಸ್ಟ್ರಕ್ಚರ್ ಎಂಜಿನಿಯರಿಂಗ್ ಮತ್ತು ಆಟೊಮೇಷನ್ ಎಂಜಿನಿಯರಿಂಗ್ ವಿಭಾಗದಲ್ಲಿನ ನೇಮಕಾತಿಗೆ ಧಕ್ಕೆಯಾಗಿಲ್ಲ.

ಹಿಂದಿನ ವರ್ಷದ ಡಿಸೆಂಬರ್‌ಗೆ ಹೋಲಿಸಿದರೆ ಆತಿಥ್ಯ ವಲಯದಲ್ಲಿ ಶೇ 4 ಹಾಗೂ ಫಾರ್ಮಾ ಕ್ಷೇತ್ರದಲ್ಲಿ ಶೇ 2ರಷ್ಟು ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ. ಈ ಹೊಸ ಉದ್ಯೋಗಗಳ ಕೊಡುಗೆಯಲ್ಲಿ ಅಹಮದಾಬಾದ್, ವಡೋದರಾ ಮತ್ತು ಮುಂಬೈನ ಪಾಲು ದೊಡ್ಡದಿದೆ ಎಂದು ತಿಳಿಸಿದೆ.

ಡಿಸೆಂಬರ್‌ನಲ್ಲಿ ಐ.ಟಿಯೇತರ ವಲಯದಲ್ಲಿನ ನೇಮಕಾತಿಯು ಶೇ 2ರಷ್ಟು ಬೆಳವಣಿಗೆ ದಾಖಲಿಸಿದೆ. ಐ.ಟಿ ವಲಯದಲ್ಲಿನ ನೇಮಕಾತಿಯ ಚೇತರಿಕೆಗೆ ಕೆಲ ಸಮಯ ಹಿಡಿಯಲಿದೆ

ಪವನ್ ಗೋಯಲ್, ಮುಖ್ಯ ವ್ಯವಹಾರ ಅಧಿಕಾರಿ, ನೌಕರಿಡಾಟ್‌ಕಾಂ

ಬೆಂಗಳೂರಿನಲ್ಲಿ ಕುಸಿತ: ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಹೊಸ ನೇಮಕಾತಿಯು ಶೇ23ರಷ್ಟು ಕುಸಿದಿದೆ. ಉಳಿದಂತೆ ಚೆನ್ನೈ ಶೇ24, ಹೈದರಾಬಾದ್ ಶೇ23, ಪುಣೆ ಶೇ17 ಮತ್ತು ಕೋಲ್ಕತ್ತದಲ್ಲಿ ಶೇ16ರಷ್ಟು ಇಳಿಕೆಯಾಗಿದೆ ಎಂದು ನೌಕರಿ ಡಾಟ್‌ಕಾಂ ತಿಳಿಸಿದೆ.

ಪ್ರೆಸ್ಟೀಜ್ ಗ್ರೂಪ್ ದಾಖಲೆ ವಹಿವಾಟು

ನವದೆಹಲಿ (ಪಿಟಿಐ): 2023-24ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ (ಅಕ್ಟೋಬರ್-ಡಿಸೆಂಬರ್) ಮನೆಗಳ ಮಾರಾಟ ಮತ್ತು ಬುಕಿಂಗ್‌ನಲ್ಲಿ ₹5,326.1 ಕೋಟಿ ವಹಿವಾಟು ನಡೆಸಿರುವುದಾಗಿ ಬೆಂಗಳೂರು ಮೂಲದ ರಿಯಲ್ ಎಸ್ಟೇಟ್ ಸಂಸ್ಥೆ ಪ್ರೆಸ್ಟೀಜ್ ಗ್ರೂಪ್ ಹೇಳಿದೆ.

ಹಿಂದಿನ ಹಣಕಾಸು ವರ್ಷದ ಅಕ್ಟೋಬರ್-ಡಿಸೆಂಬರ್ ಅವಧಿಗೆ ಹೋಲಿಸಿದರೆ ಮನೆಗಳ ಬುಕಿಂಗ್‌ನಲ್ಲಿ ಶೇ 111ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಈ ತ್ರೈಮಾಸಿಕದಲ್ಲಿ 54.6 ಲಕ್ಷ ಚದರ ಅಡಿ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರತಿ ಚದರ ಅಡಿಗೆ ಸರಾಸರಿ ₹9,762 ದರ ಪಡೆಯಲಾಗಿದೆ (ಅಪಾರ್ಟ್‌ಮೆಂಟ್ ಮತ್ತು ವಿಲ್ಲಾ) ಎಂದು ತಿಳಿಸಿದೆ.

2023ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಪ್ರೆಸ್ಟೀಜ್ ಎಸ್ಟೇಟ್ಸ್ ಮನೆಗಳ ಮಾರಾಟ ಮತ್ತು ಬುಕಿಂಗ್‌ನಲ್ಲಿ ₹16,333.4 ಕೋಟಿಯಷ್ಟು ವಹಿವಾಟು ನಡೆದಿದೆ. 2022ಕ್ಕೆ ಹೋಲಿಸಿದರೆ ಈ ಒಂಬತ್ತು ತಿಂಗಳಲ್ಲಿ ಮಾರಾಟವು ಶೇ 81ರಷ್ಟು ಏರಿಕೆಯಾಗಿದೆ. ಒಟ್ಟು 8,402 ಮನೆಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಸಾವಿರ ಹೊಸ ಮಳಿಗೆ ಸ್ಥಾಪನೆಗೆ ಟಾಟಾ ಸ್ಟಾರ್‌ಬಕ್ಸ್ ನಿರ್ಧಾರ

ಮುಂಬೈ (ಪಿಟಿಐ): ದೇಶದಲ್ಲಿ ಮೂರು ದಿನಗಳಲ್ಲಿ ಒಂದು ಹೊಸ ಮಳಿಗೆ ಆರಂಭಿಸಲು ಕಾಫಿ ಉತ್ಪನ್ನ ಮಾರಾಟ ಮಾಡುವ ಟಾಟಾ ಸ್ಟಾರ್‌ಬಕ್ಸ್ ನಿರ್ಧರಿಸಿದೆ.

ಪ್ರಸ್ತುತ ವಿವಿಧೆಡೆ 390 ಮಳಿಗೆ ಇವೆ. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಇವುಗಳ ಸಂಖ್ಯೆಯನ್ನು ಒಂದು ಸಾವಿರಕ್ಕೆ ವಿಸ್ತರಿಸಲಾಗುವುದು. ಇದಕ್ಕಾಗಿ ಉದ್ಯೋಗಿಗಳ ಸಂಖ್ಯೆಯನ್ನು 8,600ಕ್ಕೆ ಹೆಚ್ಚಿಸಲಾಗುವುದು ಎಂದು ಕಂಪನಿ ತಿಳಿಸಿದೆ.

50 ಸಾವಿರದಿಂದ 1 ಲಕ್ಷ ಜನಸಂಖ್ಯೆ ಇರುವ ನಗರಗಳು (ಟೈರ್ 2) ಮತ್ತು 20 ಸಾವಿರದಿಂದ 50 ಸಾವಿರ ಜನಸಂಖ್ಯೆ ಇರುವ ಪಟ್ಟಣಗಳಲ್ಲಿ (ಟೈರ್-3)ಹೊಸ ಮಳಿಗೆಗಳನ್ನು ತೆರೆಯಲಾ ಗುತ್ತದೆ ಎಂದು ಹೇಳಿದೆ.

ಸ್ಟಾರ್‌ಬಕ್ಸ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಲಕ್ಷ್ಮಣ್ ನರಸಿಂಹನ್ ಅವರು ಭಾರತಕ್ಕೆ ಭೇಟಿ ನೀಡಿರುವ ಸಂದರ್ಭದಲ್ಲಿಯೇ ಕಂಪನಿಯಿಂದ ಈ ಘೋಷಣೆ ಹೊರಬಿದ್ದಿದೆ. 2023ರಲ್ಲಿ ಕಂಪನಿಯ ಉತ್ಪನ್ನಗಳ ಮಾರಾಟವು ಶೇ 71ರಷ್ಟು ಹೆಚ್ಚಾಗಿದ್ದು, ಒಟ್ಟು ₹1,087 ಕೋಟಿ ಲಾಭಗಳಿಸಿದೆ.

ಮ್ಯಾಟ್ರಿಮೋನಿಗೆ ನಕಲಿ ಖಾತೆದಾರರ ಕಾಟ

ಚೆನ್ನೈ (ಪಿಟಿಐ): ವಧು-ವರ ಆಯ್ಕೆಯ ಆನ್‌ಲೈನ್ ತಾಣವಾಗಿರುವ ‘ಮ್ಯಾಟ್ರಿಮೋನಿಡಾಟ್‌ಕಾಂ’ನಲ್ಲಿ ನಕಲಿ ಖಾತೆದಾರರ ಹಾವಳಿ ಹೆಚ್ಚಿದೆ. ಇದರಿಂದ ನೈಜ ಚಂದಾದಾರರು ಆನ್‌ಲೈನ್ ವಂಚಕರ ಜಾಲಕ್ಕೆ ಸಿಲುಕದಂತೆ ತಡೆಯಲು ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಮ್ಯಾಟ್ರಿಮೋನಿ ಕಂಪನಿ ತಿಳಿಸಿದೆ.

ಹಣ ಪಾವತಿಸುವಂತೆ ಬೇಡಿಕೆ, ಉತ್ಪನ್ನವು ಕೈಗೆ ಸಿಕ್ಕಿದ ನಂತರ ಹಣ ಪಾವತಿಸುವ ಆಯ್ಕೆಯ (ಕ್ಯಾಶ್ ಆನ್ ಡೆಲಿವರಿ) ವಿಧಾನದ ಮೂಲಕ ವಂಚಿಸುತ್ತಿರುವ ಪ್ರಕರಣ ಬೆಳಕಿಗೆ ಬಂದಿವೆ. ಕೆಲವು ನಕಲಿ ಖಾತೆದಾರರು ವಂಚನೆಯಲ್ಲಿ ತೊಡಗಿದ್ದಾರೆ. ಈ ಕೃತ್ಯದ ನಿಯಂತ್ರಣಕ್ಕೆ ಕ್ರಮವಹಿಸಲಾಗಿದೆ ಎಂದು ಕಂಪನಿಯ ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮುರುಗವೇಲ್ ಜಾನಕಿರಾಮನ್ ತಿಳಿಸಿದ್ದಾರೆ.

ವಂಚನೆಯ ಜಾಲಕ್ಕೆ ಬೀಳದಂತೆ ಬಾಲಿವುಡ್ ನಟಿ ವಿದ್ಯಾ ಬಾಲನ್ ಅವರ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.ಈ ಬಗ್ಗೆ ವಿಡಿಯೊ ಚಿತ್ರೀಕರಿಸಿ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

15 ಲಕ್ಷ ಎಲೆಕ್ಟ್ರಿಕ್ ವಾಹನ ಮಾರಾಟ

ಮುಂಬೈ (ಪಿಟಿಐ): 2023ನೇ ಸಾಲಿನಡಿ ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರಾಟದಲ್ಲಿ ಶೇ 49.25ರಷ್ಟು ಏರಿಕೆಯಾಗಿದೆ ಎಂದು ಫೆಡರೇಷನ್ ಆಫ್ ಆಟೊಮೊಬೈಲ್ ಡೀಲರ್ಸ್ ಅಸೋಸಿಯೇಷನ್ (ಎಫ್‌ಎಡಿಎ) ತಿಳಿಸಿದೆ.

ಒಟ್ಟು 15,29,947 ವಾಹನಗಳು ಮಾರಾಟವಾಗಿವೆ. ಈ ಪೈಕಿ 8,59,376 ದ್ವಿಚಕ್ರವಾಹನಗಳಿವೆ. 2022ರಲ್ಲಿ ಒಟ್ಟು 10,25,063 ಎಲೆಕ್ಟ್ರಿಕ್ ವಾಹನಗಳು ಮಾರಾಟವಾಗಿದ್ದು, ಈ ಪೈಕಿ 6,31,464 ದ್ವಿಚಕ್ರವಾಹನಗಳಿವೆ ಎಂದು ತಿಳಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಚೇರಿ, ಕಟ್ಟಡ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 11.
ಸಂಖ್ಯೆ:ಕಾಪಾಅ(ದ)/ಇ-ಪೋರ್ಟಲ್/ಕೆಪಿಪಿಪಿ/16/2023-24/2ನೇ ಕರೆ ದಿ:09.01.2024

ಟೆಂಡರ್ ಪ್ರಕಟಣೆ (ಐಎಫ್‌ಬಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಅರ್ಹ ಟೆಂಡರುದಾರರಿಂದ ಈ ಕೆಳಕಂಡಂತೆ ಕ್ಯಾಟರಿಂಗ್ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (₹.ಗಳಲ್ಲಿ)	ಇಎಂಡಿ (₹.ಗಳಲ್ಲಿ)
2 ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಬೃ.ಬೆಂ.ಮ.ಪಾಲಿಕೆ ದಕ್ಷಿಣ ವಲಯದಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಕ್ಯಾಟರಿಂಗ್ ಸೇವೆಗಳನ್ನು ಒದಗಿಸುವುದು.	29,23,53,120/-	ರೂ 29,23,550.00 (ರೂ. 1,00,000/- ಇ-ಪೋರ್ಟಲ್ ಮೂಲಕ ಮತ್ತು ರೂ. 28,23,550/- ಬಿಜಿ ಮೂಲಕ)

ಟೆಂಡರ್ ವೇಳಾಪಟ್ಟಿ: (1). ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **17.01.2024**ರ ಸಂಜೆ **4:00** ಗಂಟೆಯವರೆಗೆ. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **17.01.2024**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **18.01.2024**ರ ಸಂಜೆ **5:00** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ತೆರಯುವುದನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ. ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಡ್ರೈವರ್ ಬೇಕಾಗಿದ್ದಾರೆ ಹಳದಿ ಬ್ಯಾಡ್ಜ್ ಹೊಂದಿರುವ ಹಾಗೂ ಉತ್ತಮ ಅನುಭವವಿರುವವರು ಬಸವನಗುಡಿ, ಬೆಂಗಳೂರಿನ ಆಫೀಸಿಗೆ ಬೇಕಾಗಿದ್ದರೆ. ಕೂಡಲೇ ಸಂಪರ್ಕಿಸಿ: 9019282328

General

ಉಚಿತ ಕೆಲಸ.ಯಾವುದೇ ಶುಲ್ಕವಿಲ್ಲ.8th ರಿಂದ SSLC,PUC ಪಾಸಾದ ಫೇಲಾದ 18ರಿಂದ 35 ವರ್ಷದ ಯುವಕರಿಗೆ ಬೆಂಗಳೂರಿನ ಪ್ರಸಿದ್ಧ ಕಂಪನಿಯಲ್ಲಿ ಕೆಲಸಗಳು ಖಾಲಿ ಇವೆ. ಊಟ ಮತ್ತು ವಸತಿಯೊಂದಿಗೆ ತಿಂಗಳಿಗೆ 13000ದಿಂದ 24600 ವರೆಗೆ ವೇತನವಿದೆ. ಆಸಕ್ತಿಯುಳ್ಳವರು ಕೂಡಲೇ ಸಂಪರ್ಕಿಸಿ:9141632106/ 9632660308

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಪುತ್ತೂರು, ಬೆಳ್ತಂಗಡಿಯಲ್ಲಿ ಹೊಸದಾಗಿ ಆರಂಭಗೊಂಡಿರುವ ಕಂಪೆನಿಗೆ 25 ಯುವಕ-ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ ಉಚಿತ. ವೇತನ 10,000-15,000/-. 8147171827, 9663571827

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555/ 9035492999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted

WANTED TELECALLER, GENERAL MANAGER, DRIVER-CUM-EXECUTIVES,Experience in Real Estate Filed, OFFICE BOY.Contact: 9902558144, 9845890939 MKNANDI DEVELOPERS & PROMOTERS, Vijaynagar,Bangalore.

ವ್ಯಾಪಾರ

Business to Business

Business

ದೀಪಶ್ರೀ ಸಿಲ್ಕ್ ಮತ್ತು ಸ್ಯಾರೀಸ್, ಒಂದು ಸೀರೆ ತೆಗೆದುಕೊಂಡಲ್ಲಿ, ಒಂದು ಸೀರೆ ಉಚಿತ, ಸಾಲ ಸೌಲಭ್ಯವು ದೊರೆಯುತ್ತದೆ: 8892501007/ 9606701007

ಪ್ರವಾಸ

Pilgrimage Tours

★ವಿಮಾನದಲ್ಲಿ★ 14.02.2024, 10.03.2024 6ದಿನಗಳು ಕಾಶಿ,ಪ್ರಯಾಗ, ಗಯಾ ಅಯೋಧ್ಯೆ. 10.04.2024 16ದಿನಗಳು ನೇಪಾಳ, ಮುಕ್ತಿನಾಥ,ಜನಕಪುರಿ. ಆರ್.ಗಾಂಧಿ ಟೂರ್ಸ್. 9945445809/ 9902433500

CONNECT

Mind without Fear
Mind without Hesitation
Mind without Expectation
SUCCEEDS !!
Sadhgurushri Rama

ಮನೋಶಕ್ತಿ
ಯಾ ಮತಿಸ್ಸಾ ಗತಿರ್ಭವೇತ
ಅಧ್ಯಾತ್ಮ ಸಾಧನೆಯ ರಹಸ್ಯ ಭಾವನೆ ಧೃಡವಾದಂತೆ ಬದುಕು ಸುಂದರ. ಬಯಸಿದ್ದನ್ನು ಪಡೆಯುವ ಸುಪ್ತ ಮನೋಶಕ್ತಿಯ ಪವಾಡ ಅರಿಯೋಣ ಬನ್ನಿ........
ದಿನಾಂಕ : ಫೆಬ್ರವರಿ 7 ರಿಂದ 10, 2024
ಸಮಯ : ಸಂಜೆ 7:00 ರಿಂದ 8:15
ಸ್ಥಳ : zoom meeting
9482346950
9482330850
ಈಗಲೇ ನೋಂದಾಯಿಸಿ https://rzp.io/l/febmanoshakti

Travel

18 ದಿನಗಳ ಯುಕೆ ಮತ್ತು ಯುರೋಪ್, 7 ದಿನಗಳ ಜಪಾನ್, 10 ದಿನಗಳ ಕಾಂಬೋಡಿಯಾ ಮತ್ತು ವಿಯಟ್ನಾಂ 7 ದಿನಗಳ ಶ್ರೀಲಂಕಾ, 7/11 ದಿನಗಳ ಸಿಂಗಪುರ, ಮಲೇಷ್ಯಾ ಮತ್ತು ಥೈಲ್ಯಾಂಡ್, 6 ದಿನಗಳ ಬಾಲಿ 9 ದಿನಗಳ ಭೂತಾನ್, 5 ದಿನಗಳ ಬಾಕು. ಭಟ್ ಟ್ರಾವೆಲ್ಸ್: 9844037295

01/02/2024 ಅಯೋಧ್ಯ, ಕಾಶಿ, 8 ಸೀಟುಗಳು ಖಾಲಿ ಇದೆ. 20/02/2024 ಅಯೋಧ್ಯ, ಕಾಶಿ, ಅಮೃತ್ಸರ 18 ಸೀಟುಗಳು ಖಾಲಿ ಇದೆ. 20/03/2024 ಅಯೋಧ್ಯ,11 ದಿನಗಳ ಪ್ರವಾಸ ನೇಪಾಳ ಮತ್ತು ಮುಕ್ತಿನಾಥ. ಟ್ವೈಟ್ ಹಾಲಿಡೇಸ್ ಸಂಪರ್ಕಿಸಿ: 9611801143/ 8088559962

27.01.2024 12.03.2024 12.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು . 05.02.2024 25.03.2024 02.04.2024 ಶ್ರೀಲಂಕಾ 6 ದಿನಗಳು. 02.03.2024 03.04.2024 02.06.2024 ಅಸ್ಸಾಂ,ಮೇಘಾಲಯ 9 ದಿನಗಳು. 17.01.2024 27.02.2024 09.03.2024 ಗುಜರಾತ್ 8 ದಿನಗಳು. 10.02.2024 15.03.2024 ರಾಜಸ್ಥಾನ್ 10 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. 12.04.2024 06.05.2024 05.06.2024 ಕಾಶ್ಮೀರ್ 6 ದಿನಗಳು. 05.04.2024 25.04.2024 21.05.2024 ಶಿಮ್ಲಾ,ಕುಲುಮನಾಲಿ 8 ದಿನಗಳು. 15.02.2024 26.03.2024 ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಟಿ20 ಕ್ರಿಕೆಟ್: ಹೀಲಿ, ಮೂನಿ ಅಮೋಘ ಬ್ಯಾಟಿಂಗ್; ಪೂಜಾಗೆ 2 ವಿಕೆಟ್

ಆಸ್ಟ್ರೇಲಿಯಾ ಮಡಿಲಿಗೆ ಸರಣಿ

ನವೀ ಮುಂಬೈ (ಪಿಟಿಐ): ಆರಂಭಿಕ ಜೋಡಿ ಅಲಿಸಾ ಹೀಲಿ ಮತ್ತು ಬೆತ್ ಮೂನಿ ಅವರ ಸೊಗಸಾದ ಅರ್ಧಶತಕಗಳ ಬಲದಿಂದ ಆಸ್ಟ್ರೇಲಿಯಾ ತಂಡವು ಭಾರತದ ಎದುರಿನ ಟಿ20 ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಜಯಿಸಿತು.

ಇದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು 2–1 ರಿಂದ ತನ್ನದಾಗಿಸಿಕೊಂಡಿತು. ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಅನಾಬೆಲ್ ಸದರ್ಲೆಂಡ್ ಮತ್ತು ವೇರ್‌ಹ್ಯಾಮ್ ಅವರ ದಾಳಿಯ ಮುಂದೆ ಭಾರತ ತಂಡಕ್ಕೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 147 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಅದಕ್ಕುತ್ತರವಾಗಿ ಆಸ್ಟ್ರೇಲಿಯಾ ತಂಡವು 18.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 149 ರನ್ ಗಳಿಸಿ ಜಯಿಸಿತು. ಹೀಲಿ (55; 38ಎ, 4X9, 6X1) ಮತ್ತು ಮೂನಿ (52; 45ಎ, 4X5) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು.

ಈ ಜೊತೆಯಾಟಕ್ಕೆ ತಡೆಯೊಡ್ಡುವಲ್ಲಿ ಆತಿಥೇಯ ತಂಡದ ಬೌಲರ್‌ಗಳು ವಿಫಲರಾದರು. ಹತ್ತನೇ ಓವರ್‌ನಲ್ಲಿ ಹೀಲಿ ಅವರ ವಿಕೆಟ್ ಗಳಿಸಿದ ದೀಪ್ತಿ ಶರ್ಮಾ ಜೊತೆಯಾಟವನ್ನು ಮುರಿದರು.

ಆಸ್ಟ್ರೇಲಿಯಾದ ಅಲಿಸಾ ಹೀಲಿ ಮತ್ತು ಬೆತ್ ಮೂನಿ –ಪಿಟಿಐ ಚಿತ್ರ

ಆದರೆ ಮೂನಿ ಮಾತ್ರ ದಿಟ್ಟತನದಿಂದ ಆಟ ಮುಂದುವರಿಸಿದರು.

16ನೇ ಓವರ್ ಒಂದರಲ್ಲಿಯೇ ತಹಿಲಿಯಾ ಮೆಕ್‌ಗ್ರಾ (20 ರನ್) ಮತ್ತು ಎಲಿಸ್ ಪೆರಿ ಅವರ ವಿಕೆಟ್‌ಗಳನ್ನು ಕಬಳಿಸಿದ ಪೂಜಾ ವಸ್ತ್ರಾಕರ್ ಭಾರತದ ಪಾಳೆಯದಲ್ಲಿ ಗೆಲುವಿನ ಆಸೆ ಚಿಗುರಿಸಿದರು. ಆದರೆ ಮೂನಿ ಜೊತೆಗೂಡಿದ ಫೊಯೆಬಿ ಲಿಚ್‌ಫೀಲ್ಡ್ (ಔಟಾಗದೆ 17) ತಂಡವನ್ನು ಗೆಲುವಿನ ದಡ ಸೇರಿಸಿದರು.

ರಿಚಾ ಘೋಷ್ ಉತ್ತಮ ಬ್ಯಾಟಿಂಗ್: ನಾಯಕಿ ಹರ್ಮನ್ ಪ್ರೀತ್ ಕೌರ್ ಮತ್ತು ಜಿಮಿಮಾ ರಾಡ್ರಿಗಸ್ ಅವರ ವೈಫಲ್ಯದಿಂದಾಗಿ ಭಾರತ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ ರಿಚಾ ಘೋಷ್ (34; 38ಎ, 4X2, 6X3) ಕೊನೆಯಲ್ಲಿ ಇನಿಂಗ್ಸ್‌ಗೆ ಜೀವ ತುಂಬಿದರು.

ತಂಡಕ್ಕೆ ಶಫಾಲಿ ವರ್ಮಾ (26; 17ಎ, 4X6) ಮತ್ತು ಸ್ಮೃತಿ ಮಂದಾನ (29; 28ಎ, 4X2, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 39 ರನ್ ಸೇರಿಸಿ ಉತ್ತಮ ಆರಂಭವನ್ನು ನೀಡಿದ್ದರು. ಆಸ್ಟ್ರೇಲಿಯಾ ತಂಡವು ಈ ಪ್ರವಾಸದಲ್ಲಿ ಆಡಿದ್ದ ಏಕೈಕ ಟೆಸ್ಟ್‌ನಲ್ಲಿ ಸೋತಿತ್ತು. ನಂತರ ಏಕದಿನ ಸರಣಿ ಜಯಿಸಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 147 (ಶಫಾಲಿ ವರ್ಮಾ 26, ಸ್ಮೃತಿ ಮಂದಾನ 29, ರಿಚಾ ಘೋಷ್ 34, ಅಮನ್‌ಜೋತ್ ಕೌರ್ ಔಟಾಗದೆ 17, ಅನಾಬೆಲ್ ಸದರ್ಲೆಂಡ್ 12ಕ್ಕೆ2, ವೇರ್‌ಹ್ಯಾಮ್ 24ಕ್ಕೆ2) **ಆಸ್ಟ್ರೇಲಿಯಾ:** 18.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 149 (ಅಲಿಸಾ ಹೀಲಿ 55, ಬೆತ್ ಮೂನಿ ಔಟಾಗದೆ 52, ತಹಿಲಾ ಮೆಕ್‌ಗ್ರಾ 20, ಫೊಯೆಬಿ ಲಿಚ್‌ಫೀಲ್ಡ್ ಔಟಾಗದೆ 17, ಪೂಜಾ ವಸ್ತ್ರಾಕರ್ 25ಕ್ಕೆ2, ದೀಪ್ತಿ ಶರ್ಮಾ 32ಕ್ಕೆ1) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 7 ವಿಕೆಟ್‌ಗಳ ಜಯ ಹಾಗೂ 2–1ರಿಂದ ಸರಣಿ ಗೆಲುವು.

ಪಂದ್ಯದ ಆಟಗಾರ್ತಿ: ಅನಾಬೆಲ್ ಸದರ್ಲೆಂಡ್. **ಸರಣಿಯ ಆಟಗಾರ್ತಿ:** ಅಲಿಸಾ ಹೀಲಿ

ಹಾಕಿ: ಹೈಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಹರ್ಮನ್ ಕ್ರೂಸ್

ಹರ್ಮನ್ ಕ್ರೂಸ್

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡಗಳಿಗೆ ನೆದರ್ಲೆಂಡ್ಸ್‌ನ ಹರ್ಮನ್ ಕ್ರೂಸ್ ಅವರನ್ನು ಹೈಪರ್ಫಾರ್ಮೆನ್ಸ್ ನಿರ್ದೇಶಕರನ್ನಾಗಿ ಮಂಗಳವಾರ ನೇಮಕ ಮಾಡಲಾಗಿದೆ. ಅವರ ಅಧಿಕಾರಾವಧಿ ಸೆಪ್ಟೆಂಬರ್ ವರೆಗೆ ಇರಲಿದೆ.

ತರಬೇತುದಾರರಿಗೆ ಮಾರ್ಗದರ್ಶನ ಸೇರಿದಂತೆ ಹಾಕಿ ಇಂಡಿಯಾದ ರಾಷ್ಟ್ರೀಯ ಜೂನಿಯರ್ ಮತ್ತು ಸೀನಿಯರ್ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ಅವರು ನೋಡಿಕೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕ್ರೂಸ್ ಅವರು ಎರಡು ದಶಕಗಳ ಕೋಚಿಂಗ್ ಅನುಭವ ಹೊಂದಿದ್ದಾರೆ. ಈ ಹಿಂದೆ ಕ್ರಮವಾಗಿ ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್ ಮತ್ತು ಎಫ್‌ಐಎಚ್ ಮಹಿಳಾ ಜೂನಿಯರ್ ವಿಶ್ವಕಪ್‌ಗೆ ಸಿದ್ಧತೆಗಳ ಮೇಲ್ವಿಚಾರಣೆಗಾಗಿ ಭಾರತ ಪುರುಷರ ಮತ್ತು ಜೂನಿಯರ್ ಮಹಿಳಾ ತಂಡಗಳ ತರಬೇತುದಾರರಾಗಿ ನೇಮಕಗೊಂಡಿದ್ದರು.

ನೆದರ್ಲೆಂಡ್ಸ್ ಮೂಲದ ಡೆನ್ ಬಾಷ್ ಲೇಡೀಸ್ ಕ್ಲಬ್‌ಗೆ ಮುಖ್ಯ ತರಬೇತುದಾರರಾಗಿ ಕೆಲಸ ಮಾಡಿದ್ದಾರೆ ಮತ್ತು ಅವರ ಅಧಿಕಾರಾವಧಿಯಲ್ಲಿ ತಂಡವು ಸತತ ಎಂಟು ಬಾರಿ ಯುರೋಪಿಯನ್ ಕಪ್ ಗೆದ್ದಿದೆ.

ಕ್ರೂಸ್, ಪ್ರಮಾಣೀಕೃತ ಎಫ್‌ಐಎಚ್ ತರಬೇತುದಾರ-ಶಿಕ್ಷಣತಜ್ಞರಾಗಿದ್ದಾರೆ.

ವಾರಿಯರ್ಸ್‌ಗೆ ಸುಲಭ ಗೆಲುವು

ಪ್ರೊ ಕಬಡ್ಡಿ: ಮುಂದುವರಿದ ಟೈಟನ್ಸ್ ಸೋಲಿನ ಸರಣಿ

ಮುಂಬೈ: ಅನುಭವಿ ರೇಡರ್ ನಿತಿನ್ ಕುಮಾರ್ ಮತ್ತು ವಿಶ್ವಾಸ್ ಅವರ ದಾಳಿಯ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಮಂಗಳವಾರ ತೆಲುಗು ಟೈಟನ್ಸ್ ತಂಡವನ್ನು 20 ಪಾಯಿಂಟ್‌ಗಳಿಂದ ಸುಲಭವಾಗಿ ಸೋಲಿಸಿತು. ತನ್ಮೂಲಕ ಟೈಟನ್ಸ್ ಸೋಲಿನ ಸರಣಿ ಮುಂದುವರಿದಿದೆ.

ಸರ್ದಾರ್ ವಲ್ಲಭಭಾಯಿ ಪಟೇಲ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಾರಿಯರ್ಸ್ 46–26 ರಿಂದ ಟೈಟನ್ಸ್ ವಿರುದ್ಧ ಜಯಿಸಿತು.

ಲೀಗ್‌ನಲ್ಲಿ ಆಡಿರುವ ಹನ್ನೊಂದು ಪಂದ್ಯಗಳ ಪೈಕಿ ನಾಲ್ಕು ಪಂದ್ಯದಲ್ಲಿ ಗೆದ್ದು, ಐದು ಪಂದ್ಯ ಸೋತು, ಎರಡು ಪಂದ್ಯದಲ್ಲಿ ಡ್ರಾ ಸಾಧಿಸುವುದರೊಂದಿಗೆ ವಾರಿಯರ್ಸ್ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ (28 ಅಂಕ) ಒಂಬತ್ತನೇ ಸ್ಥಾನದಲ್ಲಿದೆ. ಟೈಟನ್ಸ್ ತಂಡವು ಹನ್ನೊಂದು ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದು, ಹತ್ತರಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ಕೊನೆ ಸ್ಥಾನದಲ್ಲಿದೆ.

ಮೊದಲಾರ್ಧದಲ್ಲಿ 27–10ರಲ್ಲಿ ಮುಂದಿದ್ದ ವಾರಿಯರ್ಸ್ ಪರ ದಾಳಿಯಲ್ಲಿ ವೈಭವ್ ಭಾವುಸಾಹೇಬ್ ಗರ್ಜೆ (9 ಪಾಯಿಂಟ್), ನಿತಿನ್ ಕುಮಾರ್ (9), ವಿಶ್ವಾಸ (8) ಮಿಂಚಿದರು. ಸಹ ಆಟಗಾರ ಶುಭಂ ಶಿಂಧೆ ಟ್ಯಾಕಲ್‌ನಲ್ಲಿ ಆರು ಅಂಕ ಗಳಿಸಿದರು.

ವಾರಿಯರ್ಸ್ ತಂಡವು ರೈಡಿಂಗ್‌ನಿಂದ 20 ಅಂಕ ಗಳಿಸಿದರೆ, ಟ್ಯಾಕಲ್‌ನಿಂದ 19 ಪಾಯಿಂಟ್ಸ್ ಸಂಪಾದಿಸಿತು. ಅಲ್ಲದೆ, ಮೂರು ಬಾರಿ ಎದುರಾಳಿ ತಂಡವನ್ನು ಆಲೌಟ್ ಮಾಡಿ ಗಮನ ಸೆಳೆಯಿತು. ತೆಲುಗು ಟೈಟನ್ಸ್ ಪರ ಪವನ್ ಶೆರಾವತ್ 'ಸೂಪರ್ ಟೆನ್' (11 ಪಾಯಿಂಟ್) ಸಾಧನೆ ಮಾಡಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಸಂದೀಪ್ ಧುಲ್ (4) ಅಂಕ ಗಳಿಸಿದರು.

ಪ್ರೊ ಕಬಡ್ಡಿ ಲೀಗ್‌ನಲ್ಲಿ ಬೆಂಗಾಲ್ ವಾರಿಯರ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳ ನಡುವಿನ ಹಣಾಹಣಿ

ಇಂದಿನ ಪಂದ್ಯಗಳು

ಯು.ಪಿ.ಯೋಧಾಸ್–ತಮಿಳ್ ತಲೈವಾಸ್ (ರಾತ್ರಿ 8)

ಯು. ಮುಂಬಾ–ಹರಿಯಾಣ ಸ್ಟೀಲರ್ಸ್ (ರಾತ್ರಿ 9)

ರುದ್ರಾಂಕ್ಷ್–ಮೆಹುಲಿಗೆ ಚಿನ್ನ

ಜಕಾರ್ತ (ಪಿಟಿಐ): ಭಾರತದ ರುದ್ರಾಂಕ್ಷ್ ಪಾಟೀಲ ಮತ್ತು ಮೆಹುಲಿ ಘೋಷ್ ಜೋಡಿ ಮಂಗಳವಾರ ಇಲ್ಲಿ ನಡೆದ ಏಷ್ಯಾ ಒಲಿಂಪಿಕ್ ಕ್ವಾಲಿಫೈಯರ್‌ನ 10 ಮೀಟರ್ ಏರ್ ರೈಫಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾರತಕ್ಕೆ ಐದನೇ ಚಿನ್ನದ ಪದಕವನ್ನು ತಂದುಕೊಟ್ಟಿದೆ.

ಫೈನಲ್‌ನಲ್ಲಿ ಚೀನಾದ ಶೆನ್ ಯುಫಾನ್ ಮತ್ತು ಝು ಮಿಂಗ್ಯುವೈ ವಿರುದ್ಧ 16-10 ಅಂತರದಲ್ಲಿ ಭಾರತದ ಜೋಡಿ ಜಯ ಸಾಧಿಸಿತು.

10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಅರ್ಜುನ್ ಚೀಮಾ ಮತ್ತು ರಿದಮ್ ಸಾಂಗ್ವಾನ್ ಜೋಡಿ ವಿಯೆಟ್ನಾಂನ ಥು ವಿನ್ಹ್ ಟ್ರಿನ್ ಮತ್ತು ಕ್ವಾಂಗ್ ಹುಯ್ ಫಾಮ್ ಅವರ ಎದುರು ಸೋತು ಎರಡನೇ ಸ್ಥಾನ ಪಡೆದು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿತು.

ರಿದಮ್ ಮತ್ತು ಅರ್ಜುನ್ ಅವರ ತಂಡವು ಅರ್ಹತಾ ಸುತ್ತಿನಲ್ಲಿ ಒಟ್ಟು 582 ಅಂಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. ವಿಯೆಟ್ನಾಂನ 2ನೇ ಸ್ಥಾನದಲ್ಲಿರುವ ಜೋಡಿ (580) ಗಿಂತ ಮುಂದಿತ್ತು.

ಏಷ್ಯನ್ ಬ್ಯಾಡ್ಮಿಂಟನ್‌ಗೆ ಸಿಂಧು

ಪಿ.ವಿ.ಸಿಂಧು

ನವದೆಹಲಿ (ಪಿಟಿಐ): ಮೊಣಕಾಲಿನ ಗಾಯದಿಂದ ಚೇತರಿಸಿಕೊಂಡಿರುವ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಏಷ್ಯನ್ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಮಲೇಷ್ಯಾದ ಶಾ ಆಲಮ್‌ನಲ್ಲಿ ಫೆ. 13 ರಿಂದ 19ರವರೆಗೆ ಈ ಟೂರ್ನಿ ನಡೆಯಲಿದೆ. ವಿಶ್ವದ 8ನೇ ಕ್ರಮಾಂಕದ ಆಟಗಾರ ಎಚ್.ಎಸ್.ಪ್ರಣಯ್ ತಂಡದ ನಾಯಕತ್ವ ವಹಿಸುವರು. ಕಳೆದ ವರ್ಷ ಫ್ರೆಂಚ್ ಓಪನ್ ಟೂರ್ನಿಯ ವೇಳೆ ಸಿಂಧು ಗಾಯಾಳಾಗಿದ್ದರು. ನಂತರ ಯಾವುದೇ ಟೂರ್ನಿಯಲ್ಲಿ ಆಡಿರಲಿಲ್ಲ.

ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆಗೆ ಅಮೂಲ್ಯ ಕ್ವಾಲಿಫಿಕೇಷನ್ ಪಾಯಿಂಟ್‌ಗಳನ್ನು ಪಡೆಯುವ ದೃಷ್ಟಿಯಿಂದ ಭಾರತದ ಬ್ಯಾಡ್ಮಿಂಟನ್ ಪಟುಗಳಿಗೆ ಈ ಟೂರ್ನಿ ಮಹತ್ವದ್ದು.

ಸಿಂಧು ಅಲ್ಲದೇ, ಸೀನಿಯರ್ ರಾಷ್ಟ್ರೀಯ ಚಾಂಪಿಯನ್ ಆಗಿರುವ 16ರ ಹರೆಯದ ಅನ್ಮೋಲ್ ಖಾರ್ಬ್, ಏಷ್ಯ ಜೂನಿಯರ್ ಚಾಂಪಿಯನ್‌ಷಿಪ್‌ನ ಪದಕ ವಿಜೇತೆ ತನ್ವಿ ಶರ್ಮಾ, ಅಶ್ಮಿತಾ ಚಾಲಿಹಾ ಅವರೂ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅವಕಾಶ ಪಡೆದಿದ್ದಾರೆ.

ತಂಡದಲ್ಲಿ ಸೇನ್ ಸೋದರರು: ಪುರುಷರ ತಂಡದಲ್ಲಿರುವ ಅಂತರ ರಾಷ್ಟ್ರೀಯ ಆಟಗಾರ ಲಕ್ಷ್ಯ ಅವರ ಸಂತಸ ಹೆಚ್ಚಿದೆ. ಅವರ ಅಣ್ಣ ಚಿರಾಗ್ ಸೇನ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಚಿರಾಗ್ ಕಳೆದ ತಿಂಗಳು ಗುವಾಹಟಿಯಲ್ಲಿ ನಡೆದ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು.

ತಂಡ ಇಂತಿದೆ: ಪುರುಷರು: ಎಚ್.ಎಸ್.ಪ್ರಣಯ್, ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಚಿರಾಗ್ ಸೇನ್, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಧ್ರುವ್ ಕಪಿಲ, ಎಂ.ಆರ್.ಅರ್ಜುನ್, ಸೂರಜ್ ಗಾವ್ಗೊಲ, ಪ್ರಥ್ವಿ ರಾಯ್.

ಮಹಿಳೆಯರು: ಪಿ.ವಿ.ಸಿಂಧು, ಅನ್ಮೋಲ್ ಖಾರ್ಬ್, ತನ್ವಿ ಶರ್ಮಾ, ಅಶ್ಮಿತಾ ಚಾಲಿಹಾ, ಟ್ರೀಸಾ ಜೋಳಿ, ಗಾಯತ್ರಿ ಗೋಪಿಚಂದ್, ಅಶ್ವಿನಿ ಪೊನ್ನಪ್ಪ, ತನಿಶಾ ಕ್ರಾಸ್ಟೊ, ಪ್ರಿಯಾ ದೇವಿ ಕೊಂಜೆಂಗ್‌ಬಮ್, ಶ್ರುತಿ ಮಿಶ್ರಾ.

ನ್ಯೂಲ್ಯಾಂಡ್ಸ್ ಪಿಚ್ ಅತೃಪ್ತಿಕರ: ರೇಟಿಂಗ್ ನೀಡಿದ ಐಸಿಸಿ

ದುಬೈ (ಪಿಟಿಐ): ಕೇಪ್‌ಟೌನ್‌ನಲ್ಲಿ ಈಚೆಗೆ ಭಾರತ ಮತ್ತು ದಕ್ಷಿಣ ಆಫ್ರಿಕಾದ ನಡುವಣ 'ಅತಿ ಕಡಿಮೆ ಅವಧಿ' ಟೆಸ್ಟ್ ಪಂದ್ಯ ನಡೆದ ನ್ಯೂಲ್ಯಾಂಡ್ಸ್ ಕ್ರೀಡಾಂಗಣದ ಪಿಚ್ 'ಅತೃಪ್ತಿಕರ' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರೇಟಿಂಗ್ ನೀಡಿದೆ. ಈ ಕ್ರೀಡಾಂಗಣಕ್ಕೆ ಒಂದು ಡಿಮೆರಿಟ್ ಅಂಕವನ್ನು ನೀಡಲಾಗಿದೆ.

ಕೇವಲ ಒಂದೂವರೆ ದಿನದಲ್ಲಿ ನಡೆದ ಆ ಪಂದ್ಯದಲ್ಲಿ ಭಾರತ ತಂಡವು ಜಯಿಸಿತ್ತು. ಎರಡು ಪಂದ್ಯಗಳ ಸರಣಿ ಯಲ್ಲಿ 1–1ರ ಸಮಬಲ ಸಾಧಿಸಿತ್ತು.

'ನ್ಯೂಲ್ಯಾಂಡ್ಸ್ ಪಿಚ್‌ನಲ್ಲಿ ಬ್ಯಾಟಿಂಗ್ ಮಾಡುವುದು ಬಹಳ ಕಷ್ಟದಾಯಕವಾಗಿತ್ತು. ಚೆಂಡು ನಿರೀಕ್ಷೆಗಿಂತಲೂ ಹೆಚ್ಚು ಚುರುಕಾಗಿ ಬೌನ್ಸ್ ಆಗುತ್ತಿತ್ತು. ಕೆಲವೊಮ್ಮೆ ಅಪಾಯಕಾರಿ ಮಟ್ಟದಲ್ಲಿ ಪುಟಿಯುತ್ತಿತ್ತು. ಇದರಿಂದಾಗಿ ಹೊಡೆತಗಳನ್ನು ಪ್ರಯೋಗಿಸುವುದು ಬ್ಯಾಟರ್‌ಗಳಿಗೆ ಕಷ್ಟವಾಗಿತ್ತು' ಎಂದು ಪಂದ್ಯ ರೆಫರಿ ಕ್ರಿಸ್ ಬ್ರಾಡ್ ಅವರು ಐಸಿಸಿಗೆ ವರದಿ ಸಲ್ಲಿಸಿದ್ದರು.

'ಕೆಲವು ಬ್ಯಾಟರ್‌ಗಳ ಕೈಗವಸುಗಳಿಗೆ ಚೆಂಡು ಬಡಿಯಿತು. ಇನ್ನೂ ಕೆಲವು ಬ್ಯಾಟರ್‌ಗಳು ಅನಿರೀಕ್ಷಿತ ಹಾಗೂ ವಿಚಿತ್ರ ಬೌನ್ಸರ್‌ಗಳಿಗೆ ಔಟಾದರು' ಎಂದೂ ಬ್ರಾಡ್ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಯಾವುದೇ ಕ್ರೀಡಾಂಗಣದ ಪಿಚ್ ಅತೃಪ್ತಿಕರವಾಗಿದ್ದರೆ ಡಿಮೆರಿಟ್ ಅಂಕಗಳನ್ನು ನೀಡಲಾಗುತ್ತದೆ. ಒಂದೊಮ್ಮೆ ಆರು ಅಂಕಗಳನ್ನು ತೆಗೆದುಕೊಂಡ ಕ್ರೀಡಾಂಗಣಗಳಲ್ಲಿ 12 ತಿಂಗಳು ಪಂದ್ಯಗಳನ್ನು ಆಯೋಜಿಸುವುದನ್ನು ನಿರ್ಬಂಧಿಸಲಾಗುತ್ತದೆ.12 ಡಿಮೆರಿಟ್ ಅಂಕಗಳಾದರೆ 24 ತಿಂಗಳು ನಿರ್ಬಂಧಿಸಲಾಗುತ್ತದೆ.

ನ್ಯೂಲ್ಯಾಂಡ್ಸ್ ಕ್ರೀಡಾಂಗಣದ ಪಿಚ್ ಬಗ್ಗೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ದಕ್ಷಿಣ ಆಫ್ರಿಕಾ ತಂಡದ ಮುಖ್ಯ ಕೋಚ್ ಶುಕ್ರಿ ಕಾನ್ರಾಡ್ ಅವರೂ ಅಸಮಾಧಾನ ವ್ಯಕ್ತಪಡಿಸಿದ್ದರು.

ರಣಜಿ: ಮುಂಬೈ ತಂಡಕ್ಕೆ ಮರಳಿದ ಶ್ರೇಯಸ್ ಅಯ್ಯರ್



ಶ್ರೇಯಸ್ ಅಯ್ಯರ್

ಮುಂಬೈ (ಪಿಟಿಐ): ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿರುವ ಮುಂಬೈ ಕ್ರಿಕೆಟ್ ತಂಡಕ್ಕೆ ಅನುಭವಿ ಆಟಗಾರ ಶ್ರೇಯಸ್ ಅಯ್ಯರ್ ಮರಳಿದ್ದಾರೆ.

ಇದೇ 12 ರಿಂದ 15ರವರೆಗೆ ಮುಂಬೈ ತಂಡವು ಆಂಧ್ರ ವಿರುದ್ಧ ಆಡಲಿದೆ. ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಿದ್ದ ಶ್ರೇಯಸ್ ತವರಿಗೆ ಮರಳಿದ್ದಾರೆ. ಅವರು ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು.

ಮುಂಬರುವ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೂ ಮುನ್ನ ಅವರು ದೀರ್ಘ ಮಾದರಿಯ ಕ್ರಿಕೆಟ್ ಪೂರ್ವಾಭ್ಯಾಸಕ್ಕೆ ಒತ್ತು ನೀಡಲಿದ್ದಾರೆ. ಆದ್ದರಿಂದ ರಣಜಿ ಪಂದ್ಯದಲ್ಲಿ ಆಡಲಿದ್ದಾರೆ.

ಪ್ರಸಕ್ತ ದೇಶಿ ಟೂರ್ನಿಯಲ್ಲಿ ಮುಂಬೈ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಿಹಾರ ವಿರುದ್ಧ ಜಯಿಸಿತ್ತು.

ದೆಹಲಿ ತಂಡದ ನಾಯಕತ್ವ ಕಳೆದುಕೊಂಡ ಯಶ್ ಧುಲ್

ಯಶ್ ಧುಲ್

ನವದೆಹಲಿ (ಪಿಟಿಐ): ಪುದುಚೇರಿ ಎದುರು ರಣಜಿ ಟ್ರೋಫಿ ಮೊದಲ ಪಂದ್ಯದಲ್ಲೇ ದೆಹಲಿ ತಂಡ 9 ವಿಕೆಟ್‌ಗಳ ಹೀನಾಯ ಸೋಲನುಭವಿಸಿದ ಕೆಲವೇ ಗಂಟೆಗಳಲ್ಲಿ ಯಶ್ ಧುಲ್ ಅವರು ನಾಯಕ ಸ್ಥಾನ ಕಳೆದುಕೊಂಡಿದ್ದಾರೆ. ಅವರ ಸ್ಥಾನಕ್ಕೆ ಅನುಭವಿ ಬ್ಯಾಟರ್ ಹಿಮ್ಮತ್ ಸಿಂಗ್ ಆಯ್ಕೆಯಾಗಿದ್ದಾರೆ.

ದೆಹಲಿ ತನ್ನ ಮುಂದಿನ ಪಂದ್ಯವನ್ನು ಜ.12ರಿಂದ ಜಮ್ಮು ಮತ್ತು ಕಾಶ್ಮೀರದ ವಿರುದ್ಧ ಜಮ್ಮುವಿನಲ್ಲಿ ಆಡಲಿದೆ.

19 ವರ್ಷದೊಳಗಿನವರ ವಿಶ್ವಕಪ್ ಗೆದ್ದ ಭಾರತ ತಂಡದ ನೇತೃತ್ವ ವಹಿಸಿದ್ದ ಧುಲ್ 2022ರ ಡಿಸೆಂಬರ್‌ನಿಂದ ದೆಹಲಿ ತಂಡದ ನಾಯಕರಾಗಿದ್ದರು. ಅವರು 43.88 ಸರಾಸರಿಯಲ್ಲಿ 1,185 ರನ್ ಗಳಿಸಿದ್ದಾರೆ. 21 ವರ್ಷದ ಆಟಗಾರ, ಪುದುಚೇರಿ ವಿರುದ್ಧ ತವರಿನಲ್ಲಿ ನಡೆದ ಪಂದ್ಯದ ಎರಡು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 2 ಮತ್ತು 23 ರನ್ ಗಳಿಸಿದ್ದರು.

'ಯಶ್ ಪ್ರತಿಭಾನ್ವಿತ ಆಟಗಾರ. ಆದರೆ ಫಾರ್ಮಿನಲ್ಲಿಲ್ಲ. ಅವರು ಬ್ಯಾಟರ್ ಆಗಿ ಚೆನ್ನಾಗಿ ಆಡಬೇಕೆಂದು ನಮ್ಮ ಬಯಕೆ. ಅದಕ್ಕಾಗಿ ಅವರ ಮೇಲಿದ್ದ ನಾಯಕತ್ವದ ಹೊಣೆ ಇಳಿಸಲಾಗಿದೆ. ಹಿಮ್ಮತ್ ಸೀನಿಯರ್ ಆಟಗಾರನಾಗಿದ್ದು, ತಂಡದ ಪರ ಉತ್ತಮ ಆಟವಾಡಿದ್ದಾರೆ. ಅವರು ನಾಯಕತ್ವ ವಹಿಸಲಿದ್ದಾರೆ' ಎಂದು ಡೆಲ್ಲಿ ಡಿಸ್ಟ್ರಿಕ್ಟ್ ಕ್ರಿಕೆಟ್ ಸಂಸ್ಥೆ (ಡಿಡಿಸಿಎ) ಜಂಟಿ ಕಾರ್ಯದರ್ಶಿ ರಾಜನ್ ಮನ್‌ಚಂದಾ ಸುದ್ದಿಸಂಸ್ಥೆಗೆ ತಿಳಿಸಿದರು.

ಏಳು ಬಾರಿ ರಣಜಿ ಚಾಂಪಿಯನ್ ಆಗಿರುವ ದೆಹಲಿ ತಂಡ ಬೇಡದ ಕಾರಣಗಳಿಂದ ಸುದ್ದಿಯಲ್ಲಿ ಇರುತ್ತಿದೆ. ಕಳೆದ ಋತುವಿನಲ್ಲಿ ಹಿರಿಯ ಆಟಗಾರರಾದ ನಿತೀಶ್ ರಾಣಾ ಮತ್ತು ಧ್ರುವ್ ಶೋರೆ ತಂಡ ತೊರೆದು ಕ್ರಮವಾಗಿ ಉತ್ತರ ಪ್ರದೇಶ ಮತ್ತು ವಿದರ್ಭಕ್ಕೆ ವಲಸೆ ಹೋಗಿದ್ದರು.

ಈ ಬಾರಿ ವೇಗದ ಬೌಲರ್ ಇಶಾಂತ್ ಶರ್ಮಾ ತವರಿನ ಪಂದ್ಯಗಳಿಗೆ ಮಾತ್ರ ಲಭ್ಯರಿರುತ್ತಾರೆ ಎಂದು ಹೇಳಲಾಗಿದೆ. ನವದೀಪ್ ಸೈನಿ ಅವರು ಭಾರತ 'ಎ' ತಂಡಕ್ಕೆ ಆಯ್ಕೆಯಾಗಿದ್ದು, ದೆಹಲಿಯ ಮುಂದಿನ ಪಂದ್ಯಕ್ಕೆ ಲಭ್ಯರಿಲ್ಲ.

ತಿದ್ದುಪಡಿ

2022ರ ನವೆಂಬರ್‌ನಲ್ಲಿ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಭಾರತ ಮುಖಭಂಗ ಅನುಭವಿಸಿದ ಸುಮಾರು 14 ತಿಂಗಳ ನಂತರ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಭಾರತ ತಂಡಕ್ಕೆ ಮರಳಿದ್ದಾರೆ. ಮಂಗಳವಾರದ (9-1-2024) ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು.

ಇಸ್ರೇಲ್–ಹಮಾಸ್ ಯುದ್ಧ • ಗಾಜಾದ ಆರೋಗ್ಯ ಸಚಿವಾಲಯ ಮಾಹಿತಿ

'23 ಸಾವಿರ ಪ್ಯಾಲೆಸ್ಟೀನಿಯರ ಸಾವು'

ಗಾಜಾ ನಗರ (ಎಎಫ್‌ಪಿ/ರಾಯಿಟರ್ಸ್): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವೆ ಅಕ್ಟೋಬರ್ 7ರಂದು ಯುದ್ಧ ಆರಂಭವಾದಂದಿನಿಂದ ಈವರೆಗೆ ಪ್ಯಾಲೆಸ್ಟೀನ್ ಪ್ರದೇಶದಲ್ಲಿ 23,210 ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಮಂಗಳವಾರ ಹೇಳಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ 126 ಮಂದಿ ಮೃತಪಟ್ಟಿದ್ದಾರೆ. ಗಾಜಾ ಪಟ್ಟಿಯಲ್ಲಿ ಇದುವರೆಗೆ 59,167 ಮಂದಿ ಗಾಯಗೊಂಡಿದ್ದಾರೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಮೂವರು ಪ್ಯಾಲೆಸ್ಟೀನಿಯರ ಹತ್ಯೆ: ಇಸ್ರೇಲ್‌ನ ಅಧೀನದಲ್ಲಿರುವ ವೆಸ್ಟ್ ಬ್ಯಾಂಕ್ ನಗರದ ತುಲ್ಕರ್ಮ್‌ನಲ್ಲಿ ಇಸ್ರೇಲ್ ಯೋಧರು ಮೂವರು ಪ್ಯಾಲೆಸ್ಟೀನಿಯರನ್ನು ಗುಂಡಿಟ್ಟು ಹತ್ಯೆ ಮಾಡಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಸಚಿವಾಲಯ ಹೇಳಿದೆ.

'ಗಾಜಾ, ವೆಸ್ಟ್ ಬ್ಯಾಂಕ್ ಪ್ಯಾಲೆಸ್ಟೀನ್‌ಗೆ ಸೇರಿದ್ದು': ಗಾಜಾ ಮತ್ತು ವೆಸ್ಟ್ ಬ್ಯಾಂಕ್, ಪ್ಯಾಲೆಸ್ಟೀನ್‌ಗೆ ಸೇರಿದ ಪ್ರದೇಶವೆಂದು ಈಜಿಪ್ಟ್ ಮತ್ತು ಜರ್ಮನಿ ಒಪ್ಪಿಕೊಂಡಿರುವುದಾಗಿ ಜರ್ಮನಿಯ ವಿದೇಶಾಂಗ ಸಚಿವೆ ಅನ್ನಾಲೆನಾ ಬೇರ್ಬಾಕ್ ಅವರು ತಿಳಿಸಿದ್ದಾರೆ. ಈಜಿಪ್ಟ್‌ನ ಕೈರೊಗೆ ಭೇಟಿ ನೀಡಿರುವ ಅವರು ಈ ಹೇಳಿಕೆ ನೀಡಿದ್ದಾರೆ.

ಡ್ರೋನ್ ದಾಳಿ: ಕಮಾಂಡರ್ ವಿಸ್ಸಾಂ ತಾವಿಲ್ ಅವರ ಹತ್ಯೆಗೆ ಪ್ರತೀಕಾರವಾಗಿ ಉತ್ತರ ಇಸ್ರೇಲ್‌ನ ಸೇನಾ ಪಡೆಯ ಪ್ರಧಾನ ಕಚೇರಿಯನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿರುವುದಾಗಿ ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆ ಹೇಳಿದೆ.

ಇಸ್ರೇಲ್ ಪಡೆಗಳು ಮಂಗಳವಾರ ನಡೆಸಿದ ವಾಯುದಾಳಿಗೆ ವೆಸ್ಟ್ ಬ್ಯಾಂಕ್‌ನ ನಿರಾಶ್ರಿತರ ಶಿಬಿರದ ಬಳಿ ಕಾರೊಂದು ನಜ್ಜುಗುಜ್ಜಾಗಿದೆ – ಎಎಫ್‌ಪಿ ಚಿತ್ರ

ಭೂ ಮಾಫಿಯಾ: ಇ.ಡಿ ಶೋಧ

ಲಖನೌ (ಪಿಟಿಐ): ಉತ್ತರ ಪ್ರದೇಶದ ಬುಲಂದ್‌ಶಹರ್ ನಗರದ ಹತ್ತು ಕಡೆಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಸುಧೀರ್ ಕುಮಾರ್ ಗೋಯಲ್ ಮತ್ತು ಅವರಿಗೆ ಸಂಬಂಧಿಸಿದ ಸಂಸ್ಥೆಗಳ ವಿರುದ್ಧದ ಭೂ ಮಾಫಿಯಾ ತನಿಖೆ ಭಾಗವಾಗಿ ಈ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಭೂ ಮಾಫಿಯಾದಲ್ಲಿ ತೊಡಗಿದ್ದಾರೆ ಎಂಬ ಆರೋಪ ಎದುರಿಸುತ್ತಿರುವ ಗೋಯಲ್ ನಕಲಿ ದಾಖಲೆಗಳಿರುವ ನಿವೇಶನಗಳನ್ನು ಮಾರಾಟ ಮಾಡಿ ಹೂಡಿಕೆದಾರರಿಗೆ ₹100 ಕೋಟಿಗಿಂತ ಹೆಚ್ಚು ವಂಚನೆ ಮಾಡಿದ್ದಾರೆ ಎಂಬ ಗಂಭೀರ ಆರೋಪ ಎದುರಿಸುತ್ತಿದ್ದಾರೆ.

ಸುಧೀರ್ ಗೋಯಲ್ ಮತ್ತು ಅವರ ಆಪ್ತರ ವಿರುದ್ಧ ಇದೇ ವರ್ಷದ ಜನವರಿಯಲ್ಲಿ ಇ.ಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದರು.

ಉಗ್ರ ಸಂಘಟನೆ: ಇಬ್ಬರು ವಶಕ್ಕೆ

ಲಖನೌ (ಪಿಟಿಐ): 'ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ (ಎಎಂಯು) ಐಎಸ್ ಪ್ರೇರಿತ ಉಗ್ರ ಸಂಘಟನೆ ಸ್ಥಾಪನೆಗೆ ಮುಂದಾಗಿದ್ದ ಆರೋಪದಡಿ ಇಬ್ಬರು ಯುವಕರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಉತ್ತರಪ್ರದೇಶದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ತಿಳಿಸಿದೆ.

ಎಎಂಯುನ ಹಳೆಯ ವಿದ್ಯಾರ್ಥಿ, ಪ್ರಯಾಗ್‌ರಾಜ್ ಮೂಲದ ಅಮಾಸ್ ಅಹ್ಮದ್ ಅಲಿಯಾಸ್ ಫರಾಜ್ ಅಹ್ಮದ್ ಎಂಬುವರನ್ನು ಎಟಿಎಸ್ ಅಧಿಕಾರಿಗಳು ಸೋಮವಾರ ಬಂಧಿಸಿದ್ದರು. ವಿ.ವಿಯಲ್ಲಿ ಸಮಾಜಕಾರ್ಯ (ಎಂಎಸ್‌ಡಬ್ಲ್ಯು) ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿರುವ ಸಂಭಾಲ್ ಮೂಲದ ಅಬ್ದುಲ್ ಸಮದ್ ಮಲಿಕ್ ನ್ಯಾಯಾಲಯದಲ್ಲಿ ಶರಣಾಗಿದ್ದಾನೆ.

'ಇಬ್ಬರೂ ಐಎಸ್ ಸಿದ್ಧಾಂತದಿಂದ ಪ್ರಭಾವಿತರಾಗಿ ದೇಶದಲ್ಲಿ ದೇಶವಿರೋಧಿ ಚಟುವಟಿಕೆಗಳನ್ನು ನಡೆಸಲು ಯೋಜಿಸಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಟ್ಟ ಮಂಜು

ಅಮೆರಿಕದ ಅಯೋವಾ ರಾಜಧಾನಿ ಡೆಸ್ ಮೊಯಿನೆಸ್‌ನಲ್ಲಿ ತನ್ನ ಕಾರನ್ನು ಆವರಿಸಿದ್ದ ದಟ್ಟ ಮಂಜನ್ನು ವ್ಯಕ್ತಿಯೊಬ್ಬರು ಮಂಗಳವಾರ ತೆರವುಗೊಳಿಸಿದರು –ಎಎಫ್‌ಪಿ ಚಿತ್ರ

ಶೆಲ್ ದಾಳಿ ತಡೆಗೆ ಕ್ರಮ: ರಷ್ಯಾ

ಮಾಸ್ಕೊ(ಎಎಫ್‌ಪಿ): ಗಡಿ ನಗರವಾದ ಬೆಲ್ಗೊರೊಡ್ ಮೇಲೆ ಉಕ್ರೇನ್ ಪಡೆಗಳು ನಡೆಸುತ್ತಿರುವ ಶೆಲ್ ದಾಳಿಯನ್ನು ತಡೆಯಲು ಸೇನಾ ಪಡೆಗಳು ಅಗತ್ಯ ಕ್ರಮ ಕೈಗೊಳ್ಳಲಿವೆ ಎಂದು ರಷ್ಯಾ ಮಂಗಳವಾರ ತಿಳಿಸಿದೆ. ಈ ನಗರದ ಮೇಲೆ ಉಕ್ರೇನ್‌ನ ಪಡೆಗಳು ಕೆಲವು ವಾರಗಳಿಂದ ಶೆಲ್ ದಾಳಿ ತೀವ್ರಗೊಳಿಸಿದ್ದು, ಇಲ್ಲಿನ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ ಐರೋಪ್ಯ ದೇಶಗಳು ಪೂರೈಕೆ ಮಾಡಿರುವ ಶಸ್ತ್ರಾಸ್ತ್ರಗಳನ್ನು ಬಳಸಿ ಉಕ್ರೇನ್‌ನ ಸೇನಾ ಪಡೆಗಳು ರಷ್ಯಾದ ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸುತ್ತಿವೆ ಎಂದು ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೋವ್ ಆರೋಪಿಸಿದ್ದಾರೆ.

ಬ್ರಿಗೇಡಿಯರ್ ಬೆಹ್ಲ್ ನಿಧನ

ನವದೆಹಲಿ (ಪಿಟಿಐ): '1962ರ ಭಾರತ– ಚೀನಾ ಯುದ್ಧದಲ್ಲಿ ಶೌರ್ಯದಿಂದ ಹೋರಾಡಿದ್ದ ಬ್ರಿಗೇಡಿಯರ್ (ನಿವೃತ್ತ) ಎಜೆಎಸ್ ಬೆಹ್ಲ್ (82) ಅವರು ನಿಧನರಾಗಿದ್ದಾರೆ' ಎಂದು ಕುಟುಂಬ ಸದಸ್ಯರು ಮಂಗಳವಾರ ತಿಳಿಸಿದ್ದಾರೆ.

'ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಬೆಹ್ಲ್ ಅವರು, ಹರಿಯಾಣದ ಚಂಡಿಮಂದಿರಲ್ಲಿರುವ ಕಮಾಂಡ್ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು. ಅಂತ್ಯಕ್ರಿಯೆಯನ್ನು ಚಂಡೀಗಢದಲ್ಲಿ ಬುಧವಾರ ನೆರವೇರಿಸಲಾಗುವುದು' ಎಂದು ಹೇಳಿದ್ದಾರೆ.

'1941ರಲ್ಲಿ ಜನಿಸಿದ್ದ ಬೆಹ್ಲ್ ಅವರು 1961ರಲ್ಲಿ ಭಾರತೀಯ ಸೇನೆಗೆ ಸೇರಿದ್ದರು. 17 ಪ್ಯಾರಾ ಫೀಲ್ಡ್ ರೆಜಿಮೆಂಟ್‌ನಲ್ಲಿ ಫಿರಂಗಿ ದಳದ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. 1962, 1965 ಹಾಗೂ 1971ರಲ್ಲಿ ನಡೆದ ಯುದ್ಧಗಳಲ್ಲಿ ಹೋರಾಡಿದ್ದರು.'

'1962ರ ಅಕ್ಟೋಬರ್‌ನಲ್ಲಿ 7 ಇನ್‌ಫ್ಯಾಂಟ್ರಿ ಬ್ರಿಗೇಡ್‌ನಲ್ಲಿ ನಮ್ಕಾ ಚು ಪ್ರದೇಶದಲ್ಲಿ ಚೀನಾದ ವಿರುದ್ಧ ಹೋರಾಡುತ್ತಿದ್ದಾಗ ತಮ್ಮ ಸಹೋದ್ಯೋಗಿಗಳೊಂದಿಗೆ ಚೀನಾ ಸೇನೆಗೆ ಸೆರೆಸಿಕ್ಕಿ ಯುದ್ಧಬಂಧಿಯಾದರು. 1963ರಲ್ಲಿ ಅವರನ್ನು ಬಿಡುಗಡೆ ಮಾಡಲಾಯಿತು' ಎಂದು ಮಾಹಿತಿ ನೀಡಿದ್ದಾರೆ.

'1962: ದಿ ವಾರ್ ದಟ್ಸ್ ವಾಸ್ ನಾಟ್' ಕೃತಿಯಲ್ಲಿ ಯುದ್ಧದಲ್ಲಿ ಬೆಹ್ಲ್ ವಹಿಸಿದ್ದ ಪಾತ್ರದ ಕುರಿತು ನಮೂದಿಸಲಾಗಿದೆ.

ಸರ್ಕಾರ ರಚನೆ: ಪಿಡಿಪಿ ಸಿದ್ಧ

ಥಿಂಪು (ಎ.ಪಿ): ಭೂತಾನ್‌ನ ಸಂಸತ್ತಿಗೆ ಮಂಗಳವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ 30 ಸ್ಥಾನಗಳನ್ನು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಗೆದ್ದುಗೊಂಡಿದ್ದು, ಸರ್ಕಾರ ರಚನೆಗೆ ಸಿದ್ಧವಾಗಿದೆ.

ಭೂತಾನ್ ಪ್ರಸಾರ ಸೇವೆಯ ಮಾಹಿತಿಗಳ ಪ್ರಕಾರ, ಸಂಸತ್ತಿನ ಒಟ್ಟು ಸದಸ್ಯ ಬಲ 47 ಸ್ಥಾನಗಳು. ಪಿಡಿಪಿ 30 ಸ್ಥಾನ ಗೆದ್ದುಕೊಂಡರೆ, ಕಣದಲ್ಲಿದ್ದ ಮತ್ತೊಂದು ಪಕ್ಷ ಭೂತಾನ್ ಟೆಂಡ್ರೆಲ್ ಪಾರ್ಟಿ 17 ಸ್ಥಾನ ಗೆದ್ದುಕೊಂಡಿತು.

ಅಂತಿಮ ಫಲಿತಾಂಶ ಬುಧವಾರ ಪ್ರಕಟವಾಗಲಿದೆ.

ಇಮ್ರಾನ್ ಖಾನ್ ಬಂಧನ

ಇಸ್ಲಾಮಾಬಾದ್ (ಪಿಟಿಐ): ರಾವಲ್ಪಿಂಡಿಯ ಸೇನಾ ಕೇಂದ್ರ ಕಚೇರಿಯ ಮೇಲೆ ನಡೆದಿದ್ದ ದಾಳಿ ಪ್ರಕರಣಕ್ಕೆ ಸಂಬಂಧಿಸಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಮಂಗಳವಾರ ಬಂಧಿಸಲಾಗಿದೆ.

ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಆರೋಪ ಕುರಿತ ಪ್ರಕರಣದಲ್ಲಿ (ಸೈಫರ್) ಇಮ್ರಾನ್ ಅವರ ಬಿಡುಗಡೆಗೆ ವಾರಂಟ್ ಜಾರಿಯಾದ ಕೂಡಲೇ ಜೈಲಿನಲ್ಲಿದ್ದ ಅವರನ್ನು ಈ ಪ್ರಕರಣದಲ್ಲಿ ಬಂಧಿಸಲಾಗಿದೆ.

ಮೇ 9ರಂದು ನಡೆದಿದ್ದ ದಾಳಿ ಪ್ರಕರಣಕ್ಕೆ ಸಂಬಂಧಿಸಿ ಭಯೋತ್ಪಾದಕ ನಿಗ್ರಹ ನ್ಯಾಯಾಲಯವು (ಎಟಿಸಿ) ಇಮ್ರಾನ್ ಅವರಿಗೆ ಸಮನ್ಸ್ ಜಾರಿ ಮಾಡಿತ್ತು. ಈ ಪ್ರಕರಣದ ವಿಚಾರಣೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಅವರು ಹಾಜರಾಗಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ಇಮ್ರಾನ್ ಅವರನ್ನು ವಶಕ್ಕೆ ನೀಡಬೇಕೆಂದು ಪೊಲೀಸರು ನ್ಯಾಯಾಲಯವನ್ನು ಕೋರಿದ್ದರು. ಆದರೆ ನ್ಯಾಯಾಲಯವು ಈ ಕೋರಿಕೆಯನ್ನು ನಿರಾಕರಿಸಿದೆ.

ಉದ್ಯೋಗ ವಾಣಿ

Sri Siddhivinayaka Residential School

(Managed by Sri Siddhi Shaikshanika Pratistana (R), Hattiangadi)

Kanyana, Hattiangadi-576382, Kundapura Taluk, Udupi District

Mobile: 7090591591, 7026195591

Email: office.ssrs@gmail.com, Website: www.ssrshattiangadi.in

STAFF RECRUITMENT

- **Teachers for High School:** Post- Graduation with B Ed
  - a) **Languages:** English, Hindi, Sanskrit, Kannada
  - b) **Arts:** History & Civics, Geography
  - c) **Science:** Physics, Chemistry, Biology, Mathematics
- **Teachers for Primary School** : Graduation with B Ed
  -English -Hindi -Sanskrit -Kannada
  -Science -Mathematics -Social Science
- **Nursery School Teachers:** PUC/B A/B Sc, NTT/PPTT
- **Student Counselor:** M Sc/M A in Psychology & Counseling
- **Physical Education Teacher (Male/Female):** B P Ed / M P Ed
- **Public Relations Officer (PRO)** : Master Degree in PR
- **HR Manager** : Master Degree in HR
- **Computer Teacher:** BCA/B Sc (Comp)/MCA
- **Asst. warden (Male / Female):** Any Graduate
- **Supervisor for House Keeping (Male/Female):** Any Graduate
- **Attender (Male/Female):** SSLC / PUC
- **Drivers:** with badge, license and 5 years of experience
  - Good expression in English is essential.
  - Food and hostel accommodation will be provided on demand.
  - Salary as per efficiency and experience.

Send your application, passport size photo, bio-data, copy of marks cards and certificates to 'The Secretary' on or before 28-01-2024.

SANDUR RESIDENTIAL SCHOOL, SANDUR

Established in 1959 and Affiliated to the CISCE, New Delhi

As our student intake continues to increase, we are actively seeking to recruit and retain the best professionals to align with the SRS mission. The quality of our educational programme can only be as high as the quality of our staff. Discover our vacancies below and see if your next move could be to SRS!

Teaching

S. No	Current Openings	Qualification	Min. Exp
1	English Teacher for Primary School	BA, D.Ed. / B.Ed.	3 Years
2	English Teacher for High School	MA, B.Ed.	7 Years
3	Hindi Teacher for Higher Primary School	BA, B.Ed.	5 Years
4	Hindi Teacher for High School	MA, B.Ed.	7 Years
5	Mathematics Teacher for High School	M.Sc. (Maths).B.Ed.	7 Years
6	Physics Teachers for High School	M.Sc.(Physics), B.Ed.	7 Years
7	Biology Teacher for High School	M.Sc.(CBZ), B.Ed.	7 Years
8	Environmental Applications Teacher for High School	M.Sc.(CBZ), B.Ed.	5 Years
9	History and Civics Teacher for High School	MA, B.Ed.	5 Years
10	Lab Assistant	B.Sc. (CBZ)	5 Years
11	Dance Teacher		5 Years
12	Art & Craft Teacher		5 Years

Non - Teaching

S.No	Current Openings	Qualification	Min. Exp
13	Accounts Officer	M.Com	7 Years
14	Stores In charge	M.Com	5 Years
15	Accounts Assistant	B.Com	5 Years
16	HR Officer	MBA or MSW	5 Years

Salary will be commensurate with qualifications and experience. Preference will be given to teachers with experience in teaching the ICSE syllabus.

Contact us - Email: hr@sandurschool.com

Website: sandurschool.edu.in | Address: SRS Campus, Shivapur, Palace Road, Sandur 583119, Bellary District, Karnataka.

ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ಸ್ವೀಕರಿಸಿದ ಕ್ರೀಡಾ ಸಾಧಕರೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಕ್ರೀಡಾ ಖಾತೆ ರಾಜ್ಯ ಸಚಿವ್ ನಿಶಿತ್ ಪ್ರಮಾಣಿಕ್ ಹಾಜರಿದ್ದರು –ಪಿಟಿಐ ಚಿತ್ರ

ಗಾಲಿಕುರ್ಚಿಯಲ್ಲಿದ್ದ ಪ್ರಾಚಿಗೆ ವೇದಿಕೆಯಿಂದ ಇಳಿದು ಪ್ರಶಸ್ತಿ ಪ್ರದಾನ ಮಾಡಿದ ರಾಷ್ಟ್ರಪತಿ

ಕ್ರಿಕೆಟಿಗ ಶಮಿ, ಶೀತಲ್‌ಗೆ ಅರ್ಜುನ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಿದ ಭಾರತದ ಅಥ್ಲೀಟ್‌ಗಳಿಗೆ ಮಂಗಳವಾರ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ಯಾರಾ ಆರ್ಚರಿಪಟು ಶೀತಲ್ ದೇವಿ ಮತ್ತು ಕ್ರಿಕೆಟಿಗ ಮೊಹಮ್ಮದ್ ಶಮಿ ಅವರು ಸೇರಿದಂತೆ 26 ಅಥ್ಲೀಟ್‌ಗಳಿಗೆ ಅರ್ಜುನ ಪ್ರಶಸ್ತಿ ನೀಡಲಾಯಿತು. ಗಾಲಿಕುರ್ಚಿಯಲ್ಲಿದ್ದ ಪ್ಯಾರಾ ಅಥ್ಲೀಟ್ ಪ್ರಾಚಿ ಯಾದವ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೇ ವೇದಿಕೆಯಿಂದ ಇಳಿದು ಬಂದು ಪ್ರಶಸ್ತಿ ನೀಡಿದರು. ಭವನದಲ್ಲಿ ಚಪ್ಪಾಳೆಯ ಸದ್ದು ಪ್ರತಿಧ್ವನಿಸಿತು. ಹ್ಯಾಂಗ್‌ಝೌ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಪ್ರಾಚಿ (ಕೆನೋಯಿಂಗ್) ಚಿನ್ನ ಜಯಿಸಿದ್ದರು.

ಬ್ಯಾಡ್ಮಿಂಟನ್ ಡಬಲ್ಸ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರಿಗೆ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದು ದಾಖಲೆ ಬರೆದಿದ್ದರು. ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ಇಂಡೋನೇಷ್ಯಾ ಓಪನ್ ಸೂಪರ್ 1000 ಪ್ರಶಸ್ತಿ ಕೂಡ ಗಳಿಸಿದ್ದರು. ಸದ್ಯ ಚಿರಾಗ್ –ಸಾತ್ವಿಕ್ ಮಲೇಷ್ಯಾ ಓಪನ್ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಆದ್ದರಿಂದ ಅವರು ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಹಾಜರಾಗಲಿಲ್ಲ.

ಪ್ಯಾರಾ ಆರ್ಚರಿಪಟು ಶೀತಲ್ ದೇವಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅರ್ಜುನ ಪ್ರಶಸ್ತಿ ಪ್ರದಾನ ಮಾಡಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- 26 ಅಥ್ಲೀಟ್‌ಗಳಿಗೆ ಅರ್ಜುನ ಪ್ರಶಸ್ತಿ ಪ್ರದಾನ
- ಅರ್ಜುನ್ ಮತ್ತು ದ್ರೋಣಾಚಾರ್ಯ ಪುರಸ್ಕೃತರಿಗೆ ತಲಾ ₹ 15 ಲಕ್ಷ

ಶೂಟಿಂಗ್ ಕ್ರೀಡಾಪಟು ಇಶಾ ಸಿಂಗ್ ಅವರು ಕಾರ್ಯಕ್ರಮಕ್ಕೆ ಗೈರುಹಾಜರಾದರು. ಅವರು ಜಕಾರ್ತದಲ್ಲಿ ನಡೆಯುತ್ತಿರುವ ಏಷ್ಯಾ ಒಲಿಂಪಿಕ್ ಕ್ವಾಲಿಫೈಯರ್ ಶೂಟಿಂಗ್‌ನಲ್ಲಿ ಸ್ಪರ್ಧಿಸಿದ್ದಾರೆ.

ಪ್ರತಿಬಾರಿಯೂ ಈ ಸಮಾರಂಭವು ಮೇಜರ್ ಧ್ಯಾನಚಂದ್ ಜನ್ಮದಿನ ಮತ್ತು ಕ್ರೀಡಾ ದಿನವಾದ ಆಗಸ್ಟ್ 29ರಂದು ಆಯೋಜಿಸಲಾಗುತ್ತದೆ. ಆದರೆ ಹೋದ ವರ್ಷ ಏಷ್ಯನ್ ಕ್ರೀಡಾಕೂಟವು ಸೆಪ್ಟೆಂಬರ್ –ಅಕ್ಟೋಬರ್‌ನಲ್ಲಿ ನಡೆದಿದ್ದರಿಂದ ಪ್ರಶಸ್ತಿ ಪ್ರದಾನ ಸಮಾರಂಭದ ದಿನಾಂಕ ಬದಲಿಸಲಾಗಿದೆ.

ಚೆಸ್ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ, ಕುಸ್ತಿಪಟು ಅಂತಿಮ್ ಪಂಘಾಲ್, ಬಾಕ್ಸರ್ ಮೊಹಮ್ಮದ್ ಹುಸಾಮುದ್ದೀನ್, ಅಥ್ಲೀಟ್ ಪಾರುಲ್ ಚೌಧರಿ ಅವರೂ ಅರ್ಜುನ ಗೌರವಕ್ಕೆ ಪಾತ್ರರಾದರು.

ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಅವರ ಕೋಚ್ ಆರ್.ಬಿ. ರಮೇಶ್ ಅವರು ದ್ರೋಣಾಚಾರ್ಯ ಗೌರವಕ್ಕೆ ಪಾತ್ರರಾದರು.

ಖೇಲ್ ರತ್ನ ಪ್ರಶಸ್ತಿ ವಿಜೇತರಿಗೆ ₹ 25 ಲಕ್ಷ, ಅರ್ಜುನ್ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹ 15 ಲಕ್ಷ ನೀಡಲಾಯಿತು.

ಗಾಲ್ಫ್: ಅವನಿಗೆ ಐದನೇ ಸ್ಥಾನ

ಮೆಲ್ಬರ್ನ್ (ಪಿಟಿಐ): ಬೆಂಗಳೂರಿನ ಅವನಿ ಪ್ರಶಾಂತ್ ಅವರು ಆಸ್ಟ್ರೇಲಿಯಾ ಮಾಸ್ಟರ್ಸ್ ಆಫ್ ಅಮೆಚೂರ್ಸ್ ಗಾಲ್ಫ್ ಟೂರ್ನಿಯ ಮೊದಲ ಸುತ್ತಿನಲ್ಲಿ ಐದನೇ ಸ್ಥಾನದಲ್ಲಿದ್ದಾರೆ.

ವಿಶ್ವ ರ್‍ಯಾಂಕಿಂಗ್‌ನಲ್ಲಿ 50ನೇ ಸ್ಥಾನದಲ್ಲಿರುವ ಅವನಿ 71 ಅಂಕಗಳೊಂದಿಗೆ ಸುತ್ತು ಕೊನೆಗೊಳಿಸಿದರು.

ವೈಬ್ರೆಂಟ್ ಗುಜರಾತ್ ಶೃಂಗಸಭೆಯ 20 ವರ್ಷಗಳ ಸಂಭ್ರಮ!

ಪಿಇಟಿ ಐಟಿಎಫ್ ಮಂಡ್ಯ ಓಪನ್ ಪುರುಷರ ಟೂರ್ನಿ

ಮೈಸೂರಿನ ಮನೀಷ್‌ಗೆ ಜಯ

ಪ್ರಜಾವಾಣಿ ವಾರ್ತೆ

ಮಂಡ್ಯ: ಮೈಸೂರು ಹುಡುಗ ಮನೀಷ್ ಗಣೇಶ್, ಮಂಡ್ಯ ಪಿಇಟಿ ಐಟಿಎಫ್ ಮಂಡ್ಯ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ನೀರಜ್ ಯಶಪಾಲ್ ಮೇಲೆ ನೇರ ಸೆಟ್‌ಗಳ ಗೆಲುವಿನೊಡನೆ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ಇಲ್ಲಿನ ಪಿಇಟಿ ಟೆನಿಸ್ ಅಂಕಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮನೀಷ್ 6-1, 6-1 ರಿಂದ ಸುಲಭವಾಗಿ ಜಯ ಗಳಿಸಿದರು. ಒಂದು ಎಟಿಪಿ ಪಾಯಿಂಟ್ ಕೂಡ ಅವರಿಗೆ ಖಾತೆಗೆ ಸೇರಿತು. ದಿನದ ಇನ್ನೊಂದು ಸಿಂಗಲ್ಸ್ ಪಂದ್ಯದಲ್ಲಿ ಸಿದ್ಧಾರ್ಥ ವಿಶ್ವಕರ್ಮ 6-3, 6-1 ನೇರ ಸೆಟ್‌ಗಳಿಂದ ಆದಿಲ್ ಕಲ್ಯಾಣಪುರ ಅವರನ್ನು ಪರಾಭವ ಗೊಳಿಸಿ 16ರ ಸುತ್ತಿಗೆ ಕಾಲಿಟ್ಟರು.

ಇತ್ತೀಚೆಗಷ್ಟೇ ಭಾರತ ಡೇವಿಸ್ ಕಪ್ ತಂಡಕ್ಕೆ ಆಯ್ಕೆಯಾದ ಮೈಸೂರಿನ ಮತ್ತೊಬ್ಬ ಆಟಗಾರ ಎಸ್.ಡಿ. ಪ್ರಜ್ವಲ್ ದೇವ್ ಡಬಲ್ಸ್‌ನಲ್ಲಿ ನಿರಾಸೆ ಅನುಭವಿಸಬೇಕಾಯಿತು. ನಿತಿನ್ ಕುಮಾರ ಸಿನ್ಹಾ ಜೊತೆಗೂಡಿ ಕಣಕ್ಕಿಳಿದ ಅವರು ಕೊರಿಯಾದ ವೊಬಿನ್ ಶಿನ್ ಹಾಗೂ ಭಾರತದ ಕರಣ್ ಸಿಂಗ್ ಜೋಡಿ ಎದುರು ಸೋಲು ಕಂಡರು.

ಮೊದಲ ಸೆಟ್‌ನಲ್ಲಿ ಪ್ರಜ್ವಲ್– ನಿತಿನ್ ಜೋಡಿ 5-4 ರಿಂದ ಮುಂದಿದ್ದಾಗ ನಿತಿನ್ ಕುಮಾರ್ ಅವರಿಗೆ ಹೊಟ್ಟೆಯ ಸ್ನಾಯು ಸೆಳೆತ ಕಾಣಿಸಿಕೊಂಡ ಕಾರಣ ಎದುರಾಳಿಗಳಿಗೆ ಪಂದ್ಯ ಬಿಟ್ಟು ಕೊಡಬೇಕಾಯಿತು.

ಬುಧವಾರ ನಡೆಯುವ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಪ್ರಜ್ವಲ್ ದೇವ್, ಕೊರಿಯಾದ ಯುನ್‌ಸಿಯೊಕ್ ಜಾಂಗ್ ಅವರನ್ನು ಎದುರಿಸಲಿದ್ದಾರೆ.

ಮನೀಷ್ ಗಣೇಶ್ ಚೆಂಡನ್ನು ಫೋರ್‌ಹ್ಯಾಂಡ್ ಹೊಡೆತಕ್ಕೆ ಮುಂದಾದರು.

ಡಬಲ್ಸ್ ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ನಾಲ್ಕನೇ ಶ್ರೇಯಾಂಕದ ಪರೀಕ್ಷಿತ್ ಸೊಮಾನಿ/ ಮನಿಷ್ ಸುರೇಶ್ ಕುಮಾರ್ ಜೋಡಿ 6–4, 6–3 ರಿಂದ ಸಿದ್ಧಾರ್ಥ ಬಂಥಿಯಾ/ ಗೈಲ್ಸ್ ಹಸ್ಸಿ (ಜರ್ಮನಿ) ಅವರನ್ನು; ಸಾಯಿ ಕಾರ್ತಿಕ್‌ರೆಡ್ಡಿ ಗಂಟಾ/ ವಿಷ್ಣುವರ್ಧನ್ ಜೋಡಿ 6–4, 7–6 (8) ರಿಂದ ಇಶಾಖ್ ಇಕ್ಬಾಲ್/ ಫೈಸಲ್ ಖಮರ್ ಜೋಡಿಯನ್ನು; ತಿಮಿನ್ ಲೂಫ್ (ನೆದರ್ಲೆಂಡ್ಸ್)/ ಜೆಲ್ಲೆ ಸೆಲ್ಸ್ ಜೋಡಿ 6–4, 7–5 ರಿಂದ ಮೂರನೇ ಶ್ರೇಯಾಂಕದ ತ್ಸುಂಗ್ ಹಾವೊ ಹುವಾಂಗ್ (ತೈಪೆ)/ ಕ್ರಿಸ್ ವಾನ್ ವಿಕ್ (ದಕ್ಷಿಣ ಆಫ್ರಿಕ) ಅವರನ್ನು ಸೋಲಿಸಿತು.

ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್

9ನೇ ಬಾರಿ ಚಿನ್ನ ಗೆದ್ದ ನವೀನ್ ಜಾನ್

• ಬಸವರಾಜ್ ಸಂಪಳ್ಳಿ

ವಿಜಯಪುರ: ‘ಟೈಮ್ ಟ್ರೈಲ್ ಕಿಂಗ್’ ಎಂದೇ ಪ್ರಸಿದ್ಧರಾದ ಬೆಂಗಳೂರಿನ ಸೈಕ್ಲಿಸ್ಟ್ ನವೀನ್ ಜಾನ್ ಇಲ್ಲಿ ಮಂಗಳವಾರ ಆರಂಭವಾದ 28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದಾರೆ.

ಈವರೆಗೆ ಸತತವಾಗಿ 8 ಚಿನ್ನದ ಪದಕ ಗಳಿಸಿದ್ದ ನವೀನ್ ಜಾನ್ ಪುರುಷರ 40 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 49 ನಿಮಿಷ 51:977 ಸೆಕೆಂಡ್ಸ್‌ಗಳಲ್ಲಿ ಗುರಿ ತಲುಪಿ ಸಾಧನೆ ಮೆರೆದಿದ್ದಾರೆ. ಮೊದಲ ದಿನ ನಡೆದ ವಿವಿಧ ವಿಭಾಗಗಳಲ್ಲಿ ರಾಜಸ್ಥಾನದ ಸೈಕ್ಲಿಸ್ಟ್‌ಗಳು ಪಾರಮ್ಯ ಮೆರೆದಿದ್ದಾರೆ. ಫಲಿತಾಂಶಗಳು ಇಂತಿದೆ.

18 ವರ್ಷದೊಳಗಿನ ಬಾಲಕಿಯರ 20 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್: ಹರ್ಷಿತಾ ಜಕಾರ (ರಾಜಸ್ಥಾನ, 29 ನಿ.27.210ಸೆ.)–1, ನಂದಾ ಚಿಚಖಂಡಿ (ಕರ್ನಾಟಕ, 30:18.029)–2, ಅನುಪಮಾ ಗುಳೇದ (ಕರ್ನಾಟಕ, 30:49.649)–3

16 ವರ್ಷದೊಳಗಿನ ಬಾಲಕರ 20 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್: ಶೌರ್ಯ ಶೆರೋನ್ (ರಾಜಸ್ಥಾನ, 26:24.126)–1, ರಾಧಾಕಿಶನ್ ಹೂಡ (ರಾಜಸ್ಥಾನ, 26:51.184)–2, ಯಲ್ಲೇಶ ಹುಡೇದ (ಕರ್ನಾಟಕ, 27:06.420)–3.

ವಿಜಯಪುರದಲ್ಲಿ ಮಂಗಳವಾರ ಆರಂಭವಾದ 28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗುರಿಯತ್ತ ತಲುಪಿದ ಬೆಂಗಳೂರಿನ ಸೈಕ್ಲಿಸ್ಟ್ ನವೀನ್ ಜಾನ್

23 ವರ್ಷದೊಳಗಿನ ಪುರುಷರ 40 ಕಿ.ಮೀ ವೈಯಕ್ತಿಕ ಟೈಮ್ ಟ್ರಯಲ್: ಮಾನವ್ ಸರ್ದಾ (ರಾಜಸ್ಥಾನ, 52ನಿ.47.356 ಸೆ.)–1, ದುಷ್ಯಂತ ಬೇನಿವಾಲ್ (ಚಂಡೀಗಡ, 53:09.840)–2, ಸಾಹಿಲ್ (ಹರಿಯಾಣ, 53:59.070)–3.

ಪುರುಷರ 40 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್: ನವೀನ್ ಜಾನ್ (ಕರ್ನಾಟಕ 49ನಿ.51.977 ಸೆ.)–1, ದಿನೇಶಕುಮಾರ್ (ಸರ್ವಿಸಸ್, 51:08.756)–2, ಜೋಯಲ್ ಸಂತೋಷ ಸುಂದರಂ ಎಸ್. (ತಮಿಳುನಾಡು, 51:28.293)–3.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್:

ಕ್ರಿಸ್ಟಿಗೆ ಆಘಾತ ನೀಡಿದ ಶ್ರೀಕಾಂತ್

ಕ್ವಾಲಾಲಂಪುರ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಕಿದಂಬಿ ಶ್ರೀಕಾಂತ್, ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಶ್ವ ಐದನೇ ಕ್ರಮಾಂಕದ ಆಟಗಾರ ಜೊನಾಥನ್ ಕ್ರಿಸ್ಟಿ ಅವರ ಮೇಲೆ ಅಚ್ಚರಿಯ ಜಯಗಳಿಸಿ ಎರಡನೇ ಸುತ್ತನ್ನು ಪ್ರವೇಶಿಸಿದರು.

ಆಂಧ್ರ ಪ್ರದೇಶದ ಗುಂಟೂರಿನ 30 ವರ್ಷದ ಶ್ರೀಕಾಂತ್ ಕಳೆದ ಕೆಲ ಸಮಯದಿಂದ ಉತ್ತಮ ಪ್ರದರ್ಶನ ನೀಡಲು ವಿಫಲರಾಗಿದ್ದರು. ಆದರೆ ಈ ಟೂರ್ನಿಯಲ್ಲಿ ಇಂಡೊನೇಷ್ಯಾದ ಕ್ರಿಸ್ಟಿ ಅವರ ಮೇಲೆ 12–21, 21–18, 21–16 ರಿಂದ 65 ನಿಮಿಷಗಳಲ್ಲಿ ಗೆದ್ದು ಗಮನಸೆಳೆದರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರನಾದ ಶ್ರೀಕಾಂತ್ ಎರಡನೇ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಎನ್ಜಿ ಕಾ ಲಾಂಗ್ ಆ್ಯಂಗಸ್ ಅವರನ್ನು ಎದುರಿಸಲಿದ್ದಾರೆ.

ಆದರೆ ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಚೀನಾದ ಝಾಂಗ್ ಯಿ ಮನ್ 21–15, 21–15 ರಿಂದ ಭಾರತದ ಆಕರ್ಷಿ ಕಶ್ಯಪ್ ಅವರನ್ನು ಮಣಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿ 21–13, 21–16 ರಿಂದ ಅಮೆರಿಕದ ಫ್ರಾನ್ಸೆಸ್ಕಾ ಕಾರ್ಬೆಟ್ ಮತ್ತು ಅಲಿಸನ್ ಲೀ ಜೋಡಿಯನ್ನು ಸೋಲಿಸಿತು. ಆದರೆ ಪುರುಷರ ಡಬಲ್ಸ್‌ನಲ್ಲಿ ಚೀನಾ ತೈಪೆಯ ಫಾಂಗ್ ಚಿ ಲೀ– ಫಾಂಗ್ ಜೆನ್ ಲೀ ಜೋಡಿ 21–16, 21–19 ರಿಂದ ಭಾರತದ ಎಂ.ಆರ್.ಅರ್ಜುನ್– ಧ್ರುವ್ ಕಪಿಲ ಜೋಡಿಯನ್ನು 44 ನಿಮಿಷಗಳಲ್ಲಿ ಸೋಲಿಸಿತು.



ಕಿದಂಬಿ ಶ್ರೀಕಾಂತ್

ವಿದೇಶಿ ಕೋಚ್‌ಗಳಿಗೆ ಕೊಕ್ ನೀಡಿದ ಪಿಸಿಬಿ

ಕರಾಚಿ (ಪಿಟಿಐ): ವಿಶ್ವಕಪ್ ಸೇರಿದಂತೆ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ತಂಡದ ಕಳಪೆ ಸಾಧನೆ ಹಿನ್ನೆಲೆಯಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತನ್ನ ಮುಖ್ಯ ಕೋಚ್ ಮಿಕಿ ಆರ್ಥರ್ ಹಾಗೂ ನೆರವು ಸಿಬ್ಬಂದಿ ಗ್ರಾಂಟ್ ಬ್ರಾಡ್ಬರ್ನ್ ಮತ್ತು ಆಂಡ್ರ್ಯೂ ಪುಟ್ಟಿಕ್ ಅವರ ಕಾರ್ಯಾವಧಿ ಮುಕ್ತಾಯಗೊಳಿಸಲು ನಿರ್ಧರಿಸಿದೆ.

ಪಿಸಿಬಿ ಅಧ್ಯಕ್ಷ ಝಕಾ ಅಶ್ರಫ್ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಲ್ಮಾನ್ ನಸೀರ್ ಈ ಮೂವರೊಂದಿಗೆ ಅಂತಿಮ ಮಾತುಕತೆ ನಡೆಸಲಿದ್ದಾರೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಏಷ್ಯಾ ಕಪ್ ಮತ್ತು ವಿಶ್ವಕಪ್ ಸಮಯದಲ್ಲಿ ಪಾಕ್ ತಂಡದ ನಿರ್ವಹಣೆಯ ಭಾಗವಾಗಿದ್ದ ಈ ಮೂವರು, ಭಾರತದಿಂದ ಲಾಹೋರ್‌ಗೆ ಮರಳಿದ ನಂತರ ರಜೆ ಪಡೆದಿದ್ದರು. ಮಂಡಳಿಯು ಈ ಮೂವರಿಗೆ ಪರಿಹಾರವಾಗಿ ಕೆಲವು ತಿಂಗಳ ವೇತನ ಪಾವತಿಸಲಿದೆ.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಸಿ.ಎಂ. ವರ್ಮಾ ಮತ್ತು ಬಿ.ಎಂ. ವರ್ಮಾ ಸ್ಮಾರಕ ಮಿಲಿಯನ್ ಟ್ರೋಫಿಯನ್ನು ಪ್ರಾಯೋಜಕರಾದ ಚೆರಿ ಸ್ಪೋರ್ಟ್ಸ್‌ನ ಚೆರಿಯನ್ ಅಬ್ರಹಾಂ (ಎಡ) ಮತ್ತು ಬಿಟಿಸಿಯ ಸ್ಟಿವಾರ್ಡ್ ಸತೀಶ್ ಎನ್. ಗೌಡ ಅವರು ಅನಾವರಣಗೊಳಿಸಿದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್ ಬಿಡ್: 6 ಕ್ರೀಡಾ ಸಂಕೀರ್ಣಕ್ಕೆ ₹6 ಸಾವಿರ ಕೋಟಿ

ಗಾಂಧಿನಗರ (ಪಿಟಿಐ): 2036ರ ಬೇಸಿಗೆ ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತವು ಬಿಡ್ ಸಲ್ಲಿಸಿರುವ ಹಿನ್ನೆಲೆಯಲ್ಲಿ ಸುಸಜ್ಜಿತ ಆರು ಕ್ರೀಡಾ ಸಂಕೀರ್ಣಗಳನ್ನು ನಿರ್ಮಿಸಲು ₹ 6,000 ಕೋಟಿ ಅನುದಾನವನ್ನು ಗುಜರಾತ್ ಸರ್ಕಾರ ನಿಗದಿಪಡಿಸಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

‘ಒಲಿಂಪಿಕ್ಸ್ ಆಯೋಜನೆಯ ನಿಟ್ಟಿನಲ್ಲಿ ಸರ್ಕಾರವು ‘ಗುಜರಾತ್ ಒಲಿಂಪಿಕ್ ಪ್ಲಾನಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಕಾರ್ಪೊರೇಷನ್ ಲಿಮಿಟೆಡ್’ ಎಂಬ ಪ್ರತ್ಯೇಕ ಕಂಪೆನಿಯನ್ನು 3 ತಿಂಗಳ ಹಿಂದೆಯೇ ರಚಿಸಿದೆ. ಮುಕ್ತ ಬಿಡ್ ಮೂಲಕ 350 ಎಕರೆ ಪ್ರದೇಶದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲಾಗುತ್ತದೆ’ ಎಂದು ಹೇಳಿದ್ದಾರೆ.

ಹೈದರಾಬಾದ್‌ಗೆ ಅಲ್ಪ ಮುನ್ನಡೆ

ಮೈಸೂರು: ಕೆ.ವಿ. ಅನೀಶ್ (131) ಅವರ ಶತಕದ ಹೊರತಾಗಿಯೂ, ಕರ್ನಾಟಕ ತಂಡ ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ.ಕೆ. ನಾಯ್ಡು ಟ್ರೋಫಿ ಟೂರ್ನಿಯಲ್ಲಿ ಹೈದರಾಬಾದ್ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ 13 ರನ್‌ಗಳ ಅಲ್ಪ ಹಿನ್ನಡೆ ಅನುಭವಿಸಿತು.

3ನೇ ದಿನವಾದ ಮಂಗಳವಾರ 3 ವಿಕೆಟ್‌ಗೆ 182 ರನ್‌ಗಳೊಡನೆ ಮೊದಲ ಇನಿಂಗ್ಸ್ ಮುಂದುವರಿಸಿದ ಕರ್ನಾಟಕ ತಂಡ 281 ರನ್‌ಗಳಿಗೆ ಆಲೌಟ್ ಆಯಿತು. ದಿನದಾಟ ಕೊನೆಗೊಂಡಾಗ ಹೈದರಾಬಾದ್ ಎರಡನೇ ಇನ್ನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 102 ರನ್ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಹೈದರಾಬಾದ್: 294 ಕರ್ನಾಟಕ: 88.1 ಓವರ್‌ಗಳಲ್ಲಿ 281 (ಕೆ.ವಿ.ಅನೀಶ್ 131, ಅನೀಶ್ವರ್ ಗೌತಮ್ 80; ಸಾಯಿ ಯಾದವ್ 67ಕ್ಕೆ6); 2ನೇ ಇನ್ನಿಂಗ್ಸ್: ಹೈದರಾಬಾದ್: 33 ಓವರ್‌ಗಳಲ್ಲಿ 103ಕ್ಕೆ 2 (ಅಮನ್ ರಾವ್ ಬ್ಯಾಟಿಂಗ್ 63, ಹಿಮತೇಜ ಬ್ಯಾಟಿಂಗ್ 20; ಯಶೋವರ್ಧನ್ 3ಕ್ಕೆ1)